ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

ಹೊಸಬರಿಗೆ ಪ್ರೋತ್ಸಾಹ ಧನಂಜಯ ಉತ್ಸಾಹ ತಮ್ಮ ಸಿನಿಪಯಣದ ಕುರಿತು ಮಾತನಾಡಿರುವ ನಟ ಡಾಲಿ ಧನಂಜಯ

ಆಳ-ಅಗಲ ಅಮೆರಿಕದ ಕಟಕಟೆಯಲ್ಲಿ ಅದಾನಿ

ಮುಖ್ಯವಾಹಿನಿಗೆ ಬಂದವರಿಗೆ ಜೋಪಡಿ ಜೀವನ 6

'ಬಿಪಿಎಲ್ ಪಡಿತರ ಚೀಟಿ ಪರಿಷ್ಕರಣೆ ಸ್ಥಗಿತ' 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
77,155	23,349	₹80,280 (ಬೆಂಗಳೂರು)	₹96,200 (ಬೆಂಗಳೂರು)	84.50

ಭಾರತೀಯ ಅಧಿಕಾರಿಗಳಿಗೆ ಲಂಚ ● ಅಮೆರಿಕ ಕೋರ್ಟ್‌ನಲ್ಲಿ ದೋಷಾರೋಪ ಪಟ್ಟಿ ಸಲ್ಲಿಕೆ

ಅದಾನಿ ಬಂಧನಕ್ಕೆ ವಾರಂಟ್

ನ್ಯೂಯಾರ್ಕ್/ನವದೆಹಲಿ (ಪಿಟಿಐ/ಎಪಿ/ರಾಯಿಟರ್ಸ್): ಭಾರತದಲ್ಲಿ ಸೌರಶಕ್ತಿಯಿಂದ ವಿದ್ಯುತ್ ಉತ್ಪಾದಿಸುವ ಯೋಜನೆಗಳ ಗುತ್ತಿಗೆಯನ್ನು ಸುಲಭವಾಗಿ ಪಡೆಯಲು ಅಧಿಕಾರಿಗಳಿಗೆ 25 ಕೋಟಿ ಡಾಲರ್‌ಗಳಷ್ಟು (ಅಂದಾಜು ₹2,100 ಕೋಟಿ) ಲಂಚ ನೀಡಿದ್ದಾರೆ ಇಲ್ಲವೆ ನೀಡಲು ಮುಂದಾಗಿದ್ದಾರೆ ಎಂದು ಗೌತಮ್ ಅದಾನಿ ಹಾಗೂ ಅವರ ಅಣ್ಣನ ಮಗ ಸಾಗರ್ ಅದಾನಿ ವಿರುದ್ಧ ಅಮೆರಿಕದ ಕೋರ್ಟ್‌ಗೆ ಆರೋಪಪಟ್ಟಿ ಸಲ್ಲಿಸಲಾಗಿದೆ. ಇದರ ಬೆನ್ನಲ್ಲೇ, ಅವರ ಬಂಧನಕ್ಕೆ ಕೋರ್ಟ್ ವಾರಂಟ್ ಹೊರಡಿಸಿದೆ.

ಅದಾನಿ ಸಮೂಹವು ಈ ಆರೋಪಗಳನ್ನು ತಳ್ಳಿಹಾಕಿದ್ದು, ಇವು ನಿರಾಧಾರ ಎಂದು ಹೇಳಿದೆ. ಈ ಕುರಿತು ಪ್ರಕಟಣೆ ನೀಡಿರುವ ಸಮೂಹ, 'ಈ ಸಂಬಂಧ ಸಾಧ್ಯವಿರುವ ಎಲ್ಲ ರೀತಿಯ ಕಾನೂನು ಹೋರಾಟ ಕೈಗೊಳ್ಳಲಾಗುವುದು' ಎಂದು ಸ್ಪಷ್ಟಪಡಿಸಿದೆ.

ಕಳೆದ ವರ್ಷ, ಶಾರ್ಟ್ ಸೆಲ್ಲರ್ ಸಂಸ್ಥೆ 'ಹಿಂಡನ್‌ಬರ್ಗ್ ರಿಸರ್ಚ್' ಮಾಡಿದ ಆರೋಪಗಳಿಂದಾಗಿ ಅದಾನಿ ಸಮೂಹ ಭಾರಿ ಹಿನ್ನಡೆ ಅನುಭವಿಸಿತ್ತು.

13ನೇ ಪುಟ ನೋಡಿ

ಆರೋಪಗಳೇನು?

- ಗೌತಮ್ ಅದಾನಿ ಅವರೇ ಖುದ್ದಾಗಿ ಭಾರತದ ಅಧಿಕಾರಿಯನ್ನು ಹಲವು ಬಾರಿ ಭೇಟಿ ಮಾಡಿ, ಲಂಚ ನೀಡುವ ಕುರಿತು ಮಾತುಕತೆ ನಡೆಸಿದ್ದರು. ಇತರ ಆರೋಪಿಗಳು ಸಭೆಗಳನ್ನು ನಡೆಸಿ, ಲಂಚ ನೀಡುವ ಯೋಜನೆಯನ್ನು ಯಾವ ರೀತಿ ಕಾರ್ಯಗತಗೊಳಿಸಬೇಕು ಎಂಬ ಬಗ್ಗೆ ಚರ್ಚಿಸಿದ್ದರು
- ಆರೋಪಗಳ ಕುರಿತ ತನಿಖೆಗೆ ಅಡ್ಡಿಪಡಿಸಲು ಆರೋಪಿಗಳು ಪ್ರಯತ್ನಿಸಿದ್ದರು
- ವಿನೀತ್ ಜೈನ್ ಸಾಲ ಮತ್ತು ಬಾಂಡ್‌ಗಳ ರೂಪದಲ್ಲಿ 300 ಕೋಟಿ ಡಾಲರ್‌ಗೂ ಅಧಿಕ ಹಣ ಸಂಗ್ರಹಿಸಿದ್ದಾರೆ. ಆದರೆ, ತಾವು ಮಾಡಿದ ಭ್ರಷ್ಟಾಚಾರವನ್ನು ಸಾಲ ನೀಡಿದವರು ಹಾಗೂ ಹೂಡಿಕೆದಾರರಿಂದ ಮುಚ್ಚಿಟ್ಟಿದ್ದಾರೆ
- ಆಂಧ್ರ ಪ್ರದೇಶ ಹಾಗೂ ಇತರ ಕೆಲ ರಾಜ್ಯಗಳ ಅಧಿಕಾರಿಗಳಿಗೆ ಸಾಗರ್ ಅದಾನಿ ಲಂಚ ನೀಡಿದ್ದಾರೆ

ಗೌತಮ್ ಅದಾನಿ, ಸಾಗರ್ ಅದಾನಿ ವಿರುದ್ಧ ಅಮೆರಿಕದ ಕೋರ್ಟ್ ಬಂಧನ ವಾರಂಟ್ ಜಾರಿ ಮಾಡಿದೆ. ಅಮೆರಿಕದ ಅಧಿಕಾರಿಗಳು ಭಾರತ ಸರ್ಕಾರವನ್ನು ಸಂಪರ್ಕಿಸಬೇಕು. ಆರೋಪಿಗಳ ಹಸ್ತಾಂತರಕ್ಕೆ ಸಂಬಂಧಿಸಿ ಅಮೆರಿಕ ಮತ್ತು ಭಾರತದ ನಡುವೆ ಈಗಾಗಲೇ ಒಪ್ಪಂದ ಇದೆ

ದೇವಪ್ರಿಯ ಮೌಲಿಕ್, ಕ್ರಿಮಿನಲ್ ವಕೀಲ, ದೆಹಲಿ

ಪರಿಣಾಮಗಳೇನು?

- ಭಾರತದ ಷೇರು ಮಾರುಕಟ್ಟೆಯಲ್ಲಿ ನೋಂದಣಿ ಆಗಿರುವ ಅದಾನಿ ಸಮೂಹದ 10 ಕಂಪನಿ ಷೇರುಗಳ ಮೌಲ್ಯದಲ್ಲಿ ಗುರುವಾರ ಭಾರಿ ಕುಸಿತ ಕಂಡುಬಂತು. ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯ ಅಂದಾಜು ₹2.19 ಲಕ್ಷ ಕೋಟಿ ನಷ್ಟ
- 60 ಕೋಟಿ ಡಾಲರ್ ಮೌಲ್ಯದ ಬಾಂಡ್‌ಗಳ ಪ್ರಸ್ತಾವಿತ ಮಾರಾಟವನ್ನು ಸ್ಥಗಿತಗೊಳಿಸಲು ನಿರ್ಧರಿಸಲಾಗಿದೆ ಎಂದು ಅದಾನಿ ಗ್ರೀನ್ ಎನರ್ಜಿ ತಿಳಿಸಿದೆ
- ಅದಾನಿ ಸಮೂಹದ ಜೊತೆ ಇಂಧನ ಸಚಿವಾಲಯವು ಮಾಡಿಕೊಂಡಿರುವ 70 ಕೋಟಿ ಡಾಲರ್ ಮೊತ್ತದ ಒಪ್ಪಂದವನ್ನು ರದ್ದುಗೊಳಿಸಲು ನಿರ್ದೇಶನ ನೀಡಿದ್ದಾಗಿ ಕೆನ್ಯಾ ಅಧ್ಯಕ್ಷ ವಿಲಿಯಮ್ ರುಟೊ ಹೇಳಿದ್ದಾರೆ
- ದೇಶದ ಪ್ರಮುಖ ವಿಮಾನನಿಲ್ದಾಣದ ವಿಸ್ತರಣೆಗೆ ಸಂಬಂಧಿಸಿ ಅದಾನಿ ಸಮೂಹಕ್ಕೆ ಗುತ್ತಿಗೆ ನೀಡಲು ಸಿದ್ಧಪಡಿಸಿರುವ ಪ್ರಸ್ತಾವವನ್ನು ರದ್ದುಪಡಿಸಲು ಕೂಡ ವಿಲಿಯಮ್ ರುಟೊ ಆದೇಶಿಸಿದ್ದಾರೆ

ಭಾರತವು ಅದಾನಿ ಹಿಡಿತದಲ್ಲಿದೆ. ಅದಾನಿ ಭಾರತವನ್ನು ನಿಯಂತ್ರಿಸುತ್ತಿದ್ದಾರೆ... ಅದಾನಿ ಅವರನ್ನು ತಕ್ಷಣವೇ ಬಂಧಿಸಬೇಕು. ಪ್ರಧಾನಿಯವರು ಅದಾನಿ ಅವರನ್ನು ರಕ್ಷಿಸುತ್ತಿರುವುದು ಸ್ಪಷ್ಟ. ಈ ವಿಷಯ ಪ್ರಸ್ತಾಪಿಸುವುದು ನನ್ನ ಹೊಣೆ

ರಾಹುಲ್ ಗಾಂಧಿ, ವಿರೋಧ ಪಕ್ಷದ ನಾಯಕ

ಕೋಟಿ ಕುಳಗಳಿಗೆ 'ಲೋಕಾ' ಬಲೆ

ನಾಲ್ವರು ಅಧಿಕಾರಿಗಳ ಬಳಿ ₹26.66 ಕೋಟಿ ಆಸ್ತಿ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಮಹತ್ವದ ಹುದ್ದೆಗಳಲ್ಲಿ ಇರುವ ನಾಲ್ವರು ಅಧಿಕಾರಿಗಳ ಮನೆ ಮತ್ತು ಇತರ ಸ್ವತ್ತುಗಳ ಶೋಧ ನಡೆಸಿರುವ ಲೋಕಾಯುಕ್ತ ಪೊಲೀಸರು, ಘೋಷಿತ ಆದಾಯಕ್ಕಿಂತ ₹26.66 ಕೋಟಿಯಷ್ಟು ಹೆಚ್ಚುವರಿ ಸ್ವತ್ತುಗಳನ್ನು ಗುರುವಾರ ಪತ್ತೆ ಮಾಡಿದ್ದಾರೆ.

ಬೆಂಗಳೂರು ನಗರ, ಚಿಕ್ಕಬಳ್ಳಾಪುರ ಮತ್ತು ಮಂಡ್ಯದಲ್ಲಿ ಅಧಿಕಾರಿಗಳು ಮತ್ತು ಸಂಬಂಧಿಗಳ ಮನೆಗಳು ಸೇರಿ ಒಟ್ಟು 25 ಸ್ಥಳಗಳಲ್ಲಿ ಲೋಕಾಯುಕ್ತ ಪೊಲೀಸರು ಏಕಕಾಲಕ್ಕೆ ಶೋಧ ಕಾರ್ಯ ನಡೆಸಿದರು. ನಾಲ್ವರೂ ಅಧಿಕಾರಿಗಳಿಗೆ ಸಂಬಂಧಿಸಿದ ಒಟ್ಟಾರೆ ₹26.66 ಕೋಟಿ ಸ್ವತ್ತಿನಲ್ಲಿ ಸ್ಥಿರಾಸ್ತಿಗಳ ಮೌಲ್ಯವೇ ₹20.09 ಕೋಟಿ ದಾಟುತ್ತದೆ.

ನಿವೇಶನಗಳು, ಜಮೀನು, ವಾಣಿಜ್ಯ ಸಂಕೀರ್ಣಗಳು, ಅಪಾರ ಪ್ರಮಾಣದ ಚಿನ್ನಾಭರಣ, ಬೆಳ್ಳಿಯ ವಸ್ತುಗಳು, ಕೋಟ್ಯಂತರ ಮೌಲ್ಯದ ವಾಹನಗಳು ಪತ್ತೆಯಾಗಿವೆ. ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಇನ್ನಷ್ಟು ಸುದ್ದಿಗಳು 7

ನಗರ ಯೋಜನೆ ನಿರ್ದೇಶಕ ಎನ್‌.ಕೆ.ತಿಪ್ಪೇಸ್ವಾಮಿ ಮನೆಯಲ್ಲಿ ಪತ್ತೆಯಾದ ಚಿನ್ನಾಭರಣ, ಬೆಳ್ಳಿಯ ವಸ್ತುಗಳು ಮತ್ತು ನಗದು

ಶೋಧಕ್ಕೆ ಒಳಗಾದವರು

1. **ಎನ್‌.ಕೆ.ತಿಪ್ಪೇಸ್ವಾಮಿ,** ನಿರ್ದೇಶಕ, ನಗರ ಯೋಜನೆ, ಬೆಂಗಳೂರು
2. **ಕೆ. ಮೋಹನ್,** ಸೂಪರಿಂಟೆಂಡೆಂಟ್, ಅಬಕಾರಿ ಜಂಟಿ ಆಯುಕ್ತರ ಕಚೇರಿ, ಬೆಂಗಳೂರು ದಕ್ಷಿಣ
3. **ಮಹೇಶ್,** ವ್ಯವಸ್ಥಾಪಕ ನಿರ್ದೇಶಕ, ಕಾವೇರಿ ನೀರಾವರಿ ನಿಗಮ, ಬೆಂಗಳೂರು
4. **ಎಂ.ಸಿ.ಕೃಷ್ಣವೇಣಿ,** ಹಿರಿಯ ಭೂವಿಜ್ಞಾನಿ, ಮಂಗಳೂರು

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಆರೋಪಿ ಪವನ್ ಮೊಬೈಲ್‌ನಲ್ಲಿದ್ದ ಫೋಟೊ ಮರು ಸಂಗ್ರಹ

ರೇಣುಕ ಶವದ ಎದುರು ದರ್ಶನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ನಡೆದ ಸ್ಥಳದಲ್ಲಿಯೇ, ಮೃತದೇಹದ ಎದುರು ನಟ ದರ್ಶನ್ ಇತರ ಆರೋಪಿಗಳ ಜತೆ ನಿಂತಿರುವ ಫೋಟೊವನ್ನು ಆರೋಪಿ ಪವನ್ ಮೊಬೈಲ್‌ನಿಂದ ತನಿಖಾ ತಂಡ ಮರು ಸಂಗ್ರಹಿಸಿದೆ.

ಘಟನೆ ನಡೆದ ದಿನದಂದು ಕೊಲೆ ನಡೆದ ಪಟ್ಟಣಗೆರೆ ಶೆಡ್‌ನಲ್ಲಿ ಆರೋಪಿಗಳ ಪೈಕಿ ಪವನ್ ಎಂಬಾತ ತನ್ನ ಮೊಬೈಲ್‌ನಿಂದ ಎರಡು ಫೋಟೊವನ್ನು ತೆಗೆದಿದ್ದರು. ಬಳಿಕ ಬಂಧನದ ಭಯದಿಂದ ಫೋಟೊವನ್ನು ಅಳಿಸಿಹಾಕಿದ್ದರು. ತನಿಖೆ ಹಂತದಲ್ಲಿ ಲಭಿಸಿದ ಎಲ್ಲ ಸಾಕ್ಷ್ಯಾಧಾರಗಳನ್ನು ತನಿಖಾಧಿಕಾರಿಗಳು ಬೆಂಗಳೂರು ಹಾಗೂ ಹೈದರಾಬಾದ್ ವಿಧಿ ವಿಜ್ಞಾನ ಪ್ರಯೋಗಾಲಯಗಳಿಗೆ ರವಾನಿಸಿದ್ದರು.

ದರ್ಶನ್

'ಹೈದರಾಬಾದ್ ಪ್ರಯೋಗಾಲಯದ ವರದಿ ಮಾತ್ರ ಬಂದಿರಲಿಲ್ಲ. ಈಗ ಹೈದರಾಬಾದ್ ಎಫ್‌ಎಸ್‌ಎಲ್ ವರದಿಯು ಬಂದಿದ್ದು, ಮೊಬೈಲ್‌ನಿಂದ ಫೋಟೊವನ್ನು ಮರು ಸಂಗ್ರಹಿಸಲಾಗಿದೆ. ಆರೋಪಿಗಳ ಜತೆ ದರ್ಶನ್ ಅವರು ನೀಲಿ ಟಿ ಶರ್ಟ್ ಮತ್ತು ಕಪ್ಪು ಬಣ್ಣದ ಪ್ಯಾಂಟ್ ಧರಿಸಿ ನಿಂತಿರುವ ದೃಶ್ಯ ಫೋಟೊದಲ್ಲಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಟ ದರ್ಶನ್ ಮತ್ತು ಇತರರ ವಿರುದ್ಧ ಒಂದು ಸಾವಿರ ಪುಟದ ಹೆಚ್ಚುವರಿ ದೋಷಾರೋಪ ಪಟ್ಟಿಯನ್ನು ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು 57ನೇ ಸಿಸಿಎಚ್ ನ್ಯಾಯಾಲಯಕ್ಕೆ ಶುಕ್ರವಾರ ಸಲ್ಲಿಸಲಿದ್ದಾರೆ.

6 ನೇ ಪುಟ ನೋಡಿ

ಕೃಷಿ ಸಾಲ ಮೊತ್ತ ಕಡಿತ: ಕೈಚೆಲ್ಲಿದ ಕೇಂದ್ರ

ಮುಖ್ಯಮಂತ್ರಿ ನೇತೃತ್ವದ ನಿಯೋಗಕ್ಕೆ ನಿರ್ಮಲಾ ಸೀತಾರಾಮನ್ ಸ್ಪಷ್ಟೋಕ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: 'ನಬಾರ್ಡ್‌ನಿಂದ ರಿಯಾಯಿತಿ ಬಡ್ಡಿದರದಲ್ಲಿ ನೀಡಲಾಗುವ ಅಲ್ಪಾವಧಿ ಕೃಷಿ ಸಾಲದ ಮಿತಿಯನ್ನು ಹೆಚ್ಚಿಸಲು ಸಾಧ್ಯವಿಲ್ಲ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸ್ಪಷ್ಟಪಡಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯದ ನಿಯೋಗವು ಗುರುವಾರ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡಿ, ಕೃಷಿಗೆ ನೆರವು ನೀಡುವ ಉದ್ದೇಶಕ್ಕಾಗಿ ಸಹಕಾರಿ ಸಂಸ್ಥೆಗಳಿಗೆ ನೀಡುವ ಸಾಲದ ಮೊತ್ತವನ್ನು ನಬಾರ್ಡ್ ಕಡಿತಗೊಳಿಸಿದ್ದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿತು. ಸಾಲದ ಮೊತ್ತವನ್ನು ಹೆಚ್ಚಿಸುವಂತೆಯೂ ಮನವಿ ಸಲ್ಲಿಸಿತು.

'ರಾಷ್ಟ್ರೀಕೃತ ಬ್ಯಾಂಕ್‌ಗಳು ಜನರಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ ನೀಡುತ್ತಿವೆ. ಹೀಗಾಗಿ, ನಬಾರ್ಡ್ ಮೂಲಕ ನೀಡುತ್ತಿರುವ ಕೃಷಿ ಸಾಲದ ಮೊತ್ತವನ್ನು ಕಡಿತಗೊಳಿಸಲಾಗಿದೆ. ಜತೆಗೆ, ಎಲ್ಲ ರಾಜ್ಯಗಳ ಮೊತ್ತವನ್ನು ಕಡಿತಗೊಳಿಸಲಾಗಿದೆ. ಕರ್ನಾಟಕದ ಮೊತ್ತ ಮಾತ್ರ ಕಡಿತವಾಗಿದ್ದಲ್ಲ' ಎಂದು ನಿರ್ಮಲಾ ಸಮಜಾಯಿಷಿ ನೀಡಿದರು.

ನಬಾರ್ಡ್ ಮೊತ್ತ ಕಡಿತ ಮಾಡಿದ್ದರಿಂದ ರೈತರಿಗೆ ರಿಯಾಯಿತಿ ದರದಲ್ಲಿ ಸಾಲ ನೀಡಲು ಸಮಸ್ಯೆಯಾಗಿದೆ ಎಂದು ಸಿದ್ದರಾಮಯ್ಯ ಹೇಳಿದರು. 'ಕರ್ನಾಟಕಕ್ಕೆ ಪ್ರತ್ಯೇಕ ನೀತಿ ರೂಪಿಸಲು ಸಾಧ್ಯವಿಲ್ಲ' ಎಂದು ನಿರ್ಮಲಾ ಸೀತಾರಾಮನ್ ಸ್ಪಷ್ಟಪಡಿಸಿದರು. ಸಾಲ ವಿತರಣೆಯಲ್ಲಿ ಆಗಿರುವ ಸಮಸ್ಯೆಗಳ ಬಗ್ಗೆ ನಿಯೋಗವು ಸಚಿವರಿಗೆ ಮನವರಿಕೆ ಮಾಡಿಕೊಟ್ಟಿತು. ಆಗ ಕೇಂದ್ರ ಸಚಿವರು, 'ಈ ಸಂಬಂಧ ಆರ್‌ಬಿಐ ಗವರ್ನರ್ ಜತೆಗೆ ಸಮಾಲೋಚನೆ ನಡೆಸುತ್ತೇನೆ' ಎಂದು ಭರವಸೆ ನೀಡಿದರು.

ರಾಜ್ಯದ ಮನವಿಯೇನು?: 2024-25ನೇ ಸಾಲಿನಲ್ಲಿ ಕರ್ನಾಟಕ ಸರ್ಕಾರವು 35 ಲಕ್ಷ ರೈತರಿಗೆ ₹25 ಸಾವಿರ ಕೋಟಿ ಅಲ್ಪಾವಧಿ ಕೃಷಿ ಸಾಲ ವಿತರಿಸುವ ಗುರಿ ಹೊಂದಿದೆ. 2023-24ನೇ ಹಣಕಾಸು ವರ್ಷದಲ್ಲಿ ಅಲ್ಪಾವಧಿ ಸಹಕಾರಿ ಸಾಲ ವ್ಯವಸ್ಥೆಯಡಿ ರಾಜ್ಯದಲ್ಲಿ ₹22,902 ಕೋಟಿ ಅಲ್ಪಾವಧಿ ಕೃಷಿ ಸಾಲ ವಿತರಿಸಲಾಗಿದೆ.

6ನೇ ಪುಟ ನೋಡಿ

ತಂತ್ರಜ್ಞಾನ ಶೃಂಗಕ್ಕೆ ಸಂಭ್ರಮದ ತೆರೆ

● ಜಯಸಿಂಹ ಆರ್.

ಬೆಂಗಳೂರು: ತಂತ್ರಜ್ಞಾನ ದೈತ್ಯರು-ನವೋದ್ಯಮಗಳು, ಅನ್ವೇಷಕರು-ಹೂಡಿಕೆದಾರರು, ದೇಶೀಯ ಉದ್ದಿಮೆಗಳು ಮತ್ತು ಜಾಗತಿಕ ಉದ್ಯಮಗಳನ್ನು ಒಂದೆಡೆ ಸೇರಿಸಿ ವಿಚಾರ ವಿನಿಮಯ, ಹೂಡಿಕೆ ಸಂಬಂಧದ ಚರ್ಚೆಗೆ ಅವಕಾಶ ಕಲ್ಪಿಸಿದ 27ನೇ ಆವೃತ್ತಿಯ 'ಬೆಂಗಳೂರು ತಂತ್ರಜ್ಞಾನ ಶೃಂಗ'ಕ್ಕೆ ಗುರುವಾರ ತೆರೆಬಿತ್ತು.

ಬೆಂಗಳೂರು ಅರಮನೆ ಆವರಣದಲ್ಲಿ ಆಯೋಜಿಸಲಾಗಿದ್ದ ಮೂರು ದಿನಗಳ ಶೃಂಗದ ಸಮಾರೋಪ ಸಮಾರಂಭ ಗುರುವಾರ ನಡೆಯಿತು. ಶೃಂಗದ ಆಕರ್ಷಣೆಗಳಲ್ಲಿ ಒಂದಾಗಿದ್ದ ವಸ್ತು ಪ್ರದರ್ಶನದಲ್ಲಿ ಭಾಗಿಯಾದ, ವಿವಿಧ ಕಾರ್ಯಗಳಲ್ಲಿ ಸಹಭಾಗಿತ್ವ ತೋರಿದ, ಬೆಂಗಳೂರು ನಗರದ 'ಟೆಕ್' ವಲಯವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸಿದ ಕಂಪನಿಗಳು ಮತ್ತು ವ್ಯಕ್ತಿಗಳನ್ನು ಗೌರವಿಸುವ ಮೂಲಕ ಶೃಂಗ ಸಮಾರೋಪಗೊಂಡಿತು.

ಶೃಂಗದ ಭಾಗವಾಗಿ ಆಯೋಜಿಸಲಾಗಿದ್ದ 'ಬ್ಯುಸಿನೆಸ್ ಟು ಬ್ಯುಸಿನೆಸ್-ಬಿ2ಬಿ' ಸಭೆಯಲ್ಲಿ ವಿಚಾರ ವಿನಿಮಯ, ಹೂಡಿಕೆ ಸಂಬಂಧ ಮಾಡಿಕೊಂಡ ಒಪ್ಪಂದ, ತಂತ್ರಜ್ಞಾನ ವಿನಿಮಯಕ್ಕೆ ಸಂಬಂಧಿಸಿದ ಒಪ್ಪಂದ ಮತ್ತು ತಿಳಿವಳಿಕೆ ಪತ್ರಗಳನ್ನು ಪರಸ್ಪರ ಹಂಚಿಕೊಂಡರು.

ಆನ್‌ಲೈನ್ ಮೂಲಕ ನಡೆದ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಕುರಿತ ರಸಪ್ರಶ್ನೆ ಸ್ಪರ್ಧೆಗಳಲ್ಲಿ ಪ್ರಾಥಮಿಕ ಹಂತದಲ್ಲೇ ದೇಶದ ಎಲ್ಲ ರಾಜ್ಯಗಳಿಂದ 5.5 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗಿಯಾಗಿದ್ದರು. ಸ್ಪರ್ಧೆಯಲ್ಲಿ ಕ್ರಮವಾಗಿ ಮೊದಲ ಮತ್ತು ಎರಡನೇ ಸ್ಥಾನ ಪಡೆದ ಛತ್ತೀಸಗಡದ ತಾನಿಶ್ ಮತ್ತು ರಾಜಸ್ಥಾನದ ಏಕಲವ್ಯ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಜಾಗತಿಕ ಮಟ್ಟದ ಹೂಡಿಕೆದಾರರಿಗೆ ತಮ್ಮ ಪರಿಕಲ್ಪನೆಗಳು ಮತ್ತು ಉತ್ಪನ್ನಗಳನ್ನು ವಿವರಿಸಿದ ನವೋದ್ಯಮಿಗಳು, ಹೂಡಿಕೆ ಸಂಬಂಧ ಒಪ್ಪಂದಗಳಿಗೆ ಸಹಿ ಹಾಕಿದರು. ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ ಸಹಯೋಗದಲ್ಲಿ ಅಭಿವೃದ್ಧಿಪಡಿಸಿ, ಬಿಡುಗಡೆ ಮಾಡಲಾದ ನವೋದ್ಯಮ ಉತ್ಪನ್ನಗಳನ್ನು ಪ್ರದರ್ಶಿಸಲಾಯಿತು.

ಮತ್ತಷ್ಟು ಹೊಸ ವಿಚಾರಗಳೊಂದಿಗೆ, ಇನ್ನಷ್ಟು ದೊಡ್ಡ ಪ್ರಮಾಣದಲ್ಲಿ 28ನೇ ಆವೃತ್ತಿಯ ತಂತ್ರಜ್ಞಾನ ಶೃಂಗವನ್ನು ನಡೆಸುವ ಗುರಿಯೊಂದಿಗೆ ಮೂರು ದಿನಗಳ ಕಾ ರ್ಯಕ್ರಮಕ್ಕೆ ತೆರೆ ಎಳೆಯಲಾಯಿತು.

ಬೆಂಗಳೂರು ತಂತ್ರಜ್ಞಾನ ಶೃಂಗದಲ್ಲಿ ಭಾಗಿಯಾಗಿದ್ದ ತಂತ್ರಜ್ಞಾನ ಆಸಕ್ತರು ಪ್ರಜಾವಾಣಿ ಚಿತ್ರ: ರಂಜು ಪಿ

ಅತ್ಯಂತ ದೊಡ್ಡ ತಂತ್ರಜ್ಞಾನ ಶೃಂಗ: ಪ್ರಿಯಾಂಕ್ ಖರ್ಗೆ

'ಇದು ಅತ್ಯಂತ ದೊಡ್ಡ ತಂತ್ರಜ್ಞಾನ ಶೃಂಗ' ಎಂದು ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಶೃಂಗದ ಮಾಹಿತಿಗಳನ್ನು ಹಂಚಿಕೊಳ್ಳಲು ಆಯೋಜಿಸಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಅವರು, 'ವಿಶ್ವದ ಬೇರೆ ಭಾಗಗಳಲ್ಲಿ ನಡೆದ ತಂತ್ರಜ್ಞಾನ ಶೃಂಗಗಳಲ್ಲಿ ಭಾಗಿಯಾಗಿದ್ದಕ್ಕಿಂತ ಹೆಚ್ಚಿನ ಜಾಗತಿಕ ಮಟ್ಟದ ನಿಯೋಗದ ಸದಸ್ಯರು ಈ ಶೃಂಗದಲ್ಲಿ ಭಾಗಿಯಾದರು' ಎಂದರು.

'ನಿಪುಣ ಕರ್ನಾಟಕ ಕಾರ್ಯಕ್ರಮಕ್ಕೆ ಚಾಲನೆ ಮತ್ತು ಅದರ ಅಡಿಯಲ್ಲಿ ಪ್ರತಿ ವರ್ಷ 1 ಲಕ್ಷ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಉದ್ಯಮಗಳೇ ತರಬೇತಿ ನೀಡುವ ಸಂಬಂಧ ಮಾಡಿಕೊಳ್ಳಲಾದ ಒಪ್ಪಂದಗಳು ಈ ಶೃಂಗದ ಬಹುದೊಡ್ಡ ಯಶಸ್ಸುಗಳಲ್ಲಿ ಒಂದು. ಮುಂದಿನ ವರ್ಷಗಳಲ್ಲಿ, ಜಗತ್ತಿನಲ್ಲಿ ಸಿದ್ಧವಾಗುವ ಪ್ರತಿ ತಂತ್ರಾಂಶದಲ್ಲೂ ಕನ್ನಡಿಗ ಬರೆದ ಕೋಡಿಂಗ್ ಇರಬೇಕು ಎಂಬುದು ನಮ್ಮ ಗುರಿ. ಅದನ್ನು ಸಾಧಿಸುವಲ್ಲಿ, ಈ ಶೃಂಗ ಮಹತ್ವದ ಪಾತ್ರ ವಹಿಸಲಿದೆ' ಎಂದರು.

ಅಂಕಿ ಅಂಶ

- **51** ಶೃಂಗದಲ್ಲಿ ಭಾಗಿಯಾದ ದೇಶಗಳು
- **521** ಸಂಪನ್ಮೂಲ ವ್ಯಕ್ತಿಗಳು
- **84** ಸಂವಾದ ಕಾರ್ಯಕ್ರಮಗಳು
- **683** ಪ್ರದರ್ಶಕರು
- **15,465** ವಿದೇಶಿ ಮತ್ತು ದೇಶಿ ನಿಯೋಗಗಳ ಸದಸ್ಯರು
- **21,372** ಉದ್ಯಮಿಗಳು
- **36,837** ಸಂವಾದಗಳಲ್ಲಿ ಭಾಗಿಯಾದವರು
- **50,000+** ಪ್ರದರ್ಶನ ಮಳಿಗೆಗಳಿಗೆ ಭೇಟಿ ನೀಡಿದವರು
- **4,775** ಬಿ2ಬಿ ಸಭೆಗಳಲ್ಲಿ ಭಾಗಿಯಾದ ಉದ್ಯಮಿಗಳು
- **300+** ಬಂಡವಾಳ ಹೂಡಿಕೆ ವೇದಿಕೆಯಲ್ಲಿ ಭಾಗಿಯಾದ ನವೋದ್ಯಮಗಳು
- **100+** ಬಂಡವಾಳ ಹೂಡಿಕೆ ವೇದಿಕೆಯಲ್ಲಿ ಭಾಗಿಯಾದ ಜಾಗತಿಕ ಹೂಡಿಕೆದಾರರು

'ಜಾಗತಿಕ ಅವಕಾಶಗಳು'

ಬೆಂಗಳೂರು ಅದ್ಭುತ ಕಲ್ಪನೆಗಳ ತವರೂರು. ಈ ಶೃಂಗವು ನವೋದ್ಯಮಗಳಿಗೆ ಜಾಗತಿಕ ಮಟ್ಟದ ಅವಕಾಶಗಳನ್ನು ತೆರೆದಿಟ್ಟಿತು. ಅಂತರರಾಷ್ಟ್ರೀಯ ಮಟ್ಟದ ಸಹಕಾರಗಳಿಗೆ ವೇದಿಕೆಯಾಯಿತು. ಉದ್ಯಮಿಗಳು ತಮ್ಮ ಕನಸು ನನಸು ಮಾಡಿಕೊಳ್ಳಲು ನೆರವಾಯಿತು. ಭವಿಷ್ಯವನ್ನು ರೂಪಿಸುವ ಪರಿಕಲ್ಪನೆಗಳನ್ನು ಅನುಷ್ಠಾನಕ್ಕೆ ತರುವ ಸಾಧ್ಯತೆಗಳನ್ನು ಸರ್ಕಾರಗಳಿಗೆ, ಉದ್ಯಮಿಗಳಿಗೆ, ಹೂಡಿಕೆದಾರರಿಗೆ ಮತ್ತು ನವೋದ್ಯಮಗಳಿಗೆ ತೆರೆದಿಟ್ಟಿತು.

ಡಾ. ಶರಣಪ್ರಕಾಶ ಪಾಟೀಲ, ಕೌಶಲಾಭಿವೃದ್ಧಿ ಸಚಿವ

'ಸುಸ್ಥಿರ ನೀತಿ ಸ್ವಾಗತಾರ್ಹ'

'ಸುಸ್ಥಿರ ಅಭಿವೃದ್ಧಿ ಗುರಿಯಲ್ಲಿ ಕರ್ನಾಟಕವು ಮುಂದಿನ ಸಾಲಿನಲ್ಲಿಯೇ ಇದೆ. ನಮಗಿರುವ ಒಂದೇ ಭೂಮಿಯನ್ನು ಉಳಿಸಿ, ಮುಂದಿನ ತಲೆಮಾರಿಗೆ ದಾಟಿಸುವಲ್ಲಿ ಶೂನ್ಯ ಇಂಗಾಲ, ಏಕ ಬಳಕೆ ಪ್ಲಾಸ್ಟಿಕ್ ನಿಷೇಧ, ಮರುಬಳಕೆ ತಂತ್ರಜ್ಞಾನಗಳ ಅಳವಡಿಕೆ ಪ್ರಮುಖ ಪಾತ್ರವಹಿಸುತ್ತವೆ. ಶೃಂಗದ ಆಯೋಜನೆಯಲ್ಲಿ ಇವನ್ನು ಅಳವಡಿಸಿಕೊಳ್ಳಲಾಗಿತ್ತು. ಇದರಲ್ಲಿ ಉತ್ತಮ ಸಾಧನೆ ತೋರಿದವರಿಗೆ 'ಸುಸ್ಥಿರ ಪ್ರಶಸ್ತಿ' ನೀಡಿದ್ದು ಸ್ವಾಗತಾರ್ಹ'.

ಈಶ್ವರ ಬಿ. ಖಂಡ್ರೆ , ಅರಣ್ಯ ಮತ್ತು ಪರಿಸರ ಸಚಿವ

'ಬೆಂಗಳೂರಿಗೆ ಮಹತ್ವದ ಸ್ಥಾನ'

'ಟೆಕ್ ಉದ್ಯಮಗಳು, ನವೋದ್ಯಮಗಳಿಗೆ ವೇದಿಕೆ ಕಲ್ಪಿಸಿದ್ದಷ್ಟೇ ಅಲ್ಲ. ಜಾಗತಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ಬೆಂಗಳೂರು ಮತ್ತು ಕರ್ನಾಟಕವನ್ನು ಒಂದು ಮಹತ್ವದ ಸ್ಥಾನದಲ್ಲಿ ನಿಲ್ಲಿಸುವ ಗುರಿ ಸಾಧನೆಗೆ ಈ ಶೃಂಗ ನೆರವಾಗಲಿದೆ. ಇವಿಷ್ಟೇ ಅಲ್ಲದೆ, ಸುಸ್ಥಿರ ಅಭಿವೃದ್ಧಿ ಗುರಿಗಳನ್ನೂ ಶೃಂಗದಲ್ಲಿ ಅನುಸರಿಸಲಾಗಿದೆ. ಇಲ್ಲಿ ಉತ್ಪಾದನೆಯಾದ ಕಸದಲ್ಲಿ ಶೇ 98ರಷ್ಟನ್ನು ಮರುಬಳಕೆ ಮಾಡಲಾಗಿದೆ. ಶೃಂಗಕ್ಕಾಗಿ ಬಳಕೆಯಾದ ವಾಹನಗಳಲ್ಲಿ ಶೇ 28ರಷ್ಟು ವಿದ್ಯುತ್ ಚಾಲಿತ ವಾಹನಗಳಾಗಿದ್ದವು'

ಪ್ರಿಯಾಂಕ್ ಖರ್ಗೆ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಸಚಿವ

ಶೃಂಗದಲ್ಲಿ ಭಾಗವಹಿಸಿದ್ದ ಕುಟುಂಬವೊಂದರ ಸದಸ್ಯರು ಕುತೂಹಲದಿಂದ ವೀಕ್ಷಿಸಿದರು

ಜಿಲ್ಲೆಗೊಂದು ನವೋದ್ಯಮ ಮಾಹಿತಿ ಕೇಂದ್ರಕ್ಕೆ ಬೇಡಿಕೆ

● ಕೆ.ಎಚ್. ಓಬಳೇಶ್

ಬೆಂಗಳೂರು: 'ಬೆಂಗಳೂರಿನಲ್ಲಿಯೇ ನವೋದ್ಯಮಗಳು ತಳವೂರಿವೆ. ಆದರೆ, ಜಿಲ್ಲಾ ಕೇಂದ್ರಗಳಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ ಕಚೇರಿಯೇ ಇಲ್ಲ. ನವೋದ್ಯಮ ಸ್ಥಾಪನೆ ಕುರಿತ ಮಾಹಿತಿ ಅರಿಯಲು ನಾವು ಬೀದರ್, ಕಲಬುರಗಿಯಿಂದ ಬೆಂಗಳೂರಿಗೆ ಬರಬೇಕಿದೆ...'

ನಗರದಲ್ಲಿ ಗುರುವಾರ ನಡೆದ ಬೆಂಗಳೂರು ಟೆಕ್ ಶೃಂಗದಲ್ಲಿ 'ಭವಿಷ್ಯದಲ್ಲಿ ನವೋದ್ಯಮ ಕ್ಲಸ್ಟರ್‌ಗಳ ಸ್ಥಿತಿಗತಿ' ಕುರಿತು ನಡೆದ ಚರ್ಚೆಯಲ್ಲಿ ಪಾಲ್ಗೊಂಡಿದ್ದ ಕಲ್ಯಾಣ ಕರ್ನಾಟಕದ ಪ್ರತಿನಿಧಿಗಳು, ರಾಜ್ಯ ಸರ್ಕಾರದ ಮುಂದೆ ಅಳಲು ತೋಡಿಕೊಂಡ ಪರಿ ಇದು.

ನವೋದ್ಯಮ ವ್ಯವಸ್ಥೆಗೆ ಸಂಬಂಧಿಸಿದಂತೆ ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ ಹಾಗೂ ಕೇರಳ ಒಗ್ಗೂಡಿ ಕೆಲಸ ನಿರ್ವಹಿಸಬೇಕಿದೆ. ಇದರಿಂದ ನವೋದ್ಯಮಿಗಳಿಗೆ ಆರ್ಥಿಕ ನೆರವು ಸೇರಿ ಇತರೆ ಸವಲತ್ತು ಸಿಗಲು ನೆರವಾಗಲಿದೆ. ವಿದ್ಯಾರ್ಥಿಗಳಲ್ಲಿ ಉದ್ಯಮಶೀಲತೆಯ ಪ್ರೋತ್ಸಾಹಕ್ಕಾಗಿ ಪ್ರತಿ ಜಿಲ್ಲಾ ಕೇಂದ್ರದಲ್ಲಿ ನವೋದ್ಯಮದ ಬಗ್ಗೆ ಮಾಹಿತಿ ನೀಡುವ ಕೇಂದ್ರ ತೆರೆಯಬೇಕು ಎಂದು ಬೇಡಿಕೆ ಇಟ್ಟರು.

ಇದಕ್ಕೆ ಪ್ರತಿಕ್ರಿಯಿಸಿದ ಎಲೆಕ್ಟ್ರಾನಿಕ್ಸ್, ಐ.ಟಿ ಮತ್ತು ಬಿ.ಟಿ ಇಲಾಖೆಯ ಉಪ ಕಾರ್ಯದರ್ಶಿ ರುಚಿ ಬಿಂದಾಲ್, 'ಈಗಾಗಲೇ, ಮೈಸೂರಿನಲ್ಲಿ ನವೋದ್ಯಮಕ್ಕೆ ಪ್ರೋತ್ಸಾಹ ನೀಡುವುದಕ್ಕೆ ಸಂಬಂಧಿಸಿದ ಕೇಂದ್ರ ಕಾರ್ಯ ನಿರ್ವಹಿಸುತ್ತಿದೆ. ಎಲ್ಲಾ ಜಿಲ್ಲೆಗಳಿಗೂ ಈ ಸೇವೆಯ ವಿಸ್ತರಣೆಗೆ ಸರ್ಕಾರ ಕ್ರಮವಹಿಸಿದೆ' ಎಂದು ತಿಳಿಸಿದರು.

ಜಿಲ್ಲಾಮಟ್ಟದಲ್ಲಿಯೂ ಐ.ಟಿ, ಬಿ.ಟಿ ಕಚೇರಿ ತೆರೆಯಲಾಗುವುದು ಎಂದರು.

ಕೇರಳ ಕಾಲೇಜುಗಳಲ್ಲಿ ಐಇಡಿಸಿ ಸ್ಥಾಪನೆ: ಕೇರಳದ ಎಲೆಕ್ಟ್ರಾನಿಕ್ಸ್ ಮತ್ತು ಐ.ಟಿ ಇಲಾಖೆಯ ಕಾರ್ಯದರ್ಶಿ ಡಾ.ರತನ್ ಕೇಲ್ಕರ್ ಮಾತನಾಡಿ, 'ಕೇರಳದಲ್ಲಿ ವಿದ್ಯಾರ್ಥಿಗಳ ಹೊಸ ಆಲೋಚನೆಗೆ ನೀರೆರೆಯಲು ನಾವೀನ್ಯ ಮತ್ತು ವಾಣಿಜ್ಯೋದ್ಯಮ ಅಭಿವೃದ್ಧಿ ಕೇಂದ್ರಗಳನ್ನು (ಐಇಡಿಸಿ) ತೆರೆಯಲಾಗಿದೆ. ಈ ಕೇಂದ್ರಗಳು ವಿದ್ಯಾರ್ಥಿಗಳ ಉದ್ಯಮಶೀಲತೆಯ ಪ್ರಯಾಣಕ್ಕೆ ಉಡ್ಡಯನ ಪ್ಯಾಡ್‌ಗಳಂತೆ ಕಾರ್ಯನಿರ್ವಹಿಸುತ್ತವೆ' ಎಂದು ಮಾಹಿತಿ ನೀಡಿದರು.

ಕೇರಳದ ನವೋದ್ಯಮ ಮಿಷನ್‌ನಡಿ ರಾಜ್ಯದಾದ್ಯಂತ ಎಂಜಿನಿಯರಿಂಗ್ ಕಾಲೇಜು, ಕಲೆ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ವೈದ್ಯಕೀಯ ಕಾಲೇಜು, ಪಾಲಿಟೆಕ್ನಿಕ್ ಹಾಗೂ ವಿಶ್ವವಿದ್ಯಾಲಯಗಳಲ್ಲಿ ಈ ಕೇಂದ್ರಗಳನ್ನು ತೆರೆಯಲಾಗಿದೆ. ವಿದ್ಯಾರ್ಥಿಗಳ ಪ್ರಯೋಗ ಮತ್ತು ಆವಿಷ್ಕಾರಕ್ಕೆ ಇವು ವೇದಿಕೆಗಳಾಗಿವೆ ಎಂದರು.

ತೆಲಂಗಾಣದ ಐ.ಟಿ, ಎಲೆಕ್ಟ್ರಾನಿಕ್ ಹಾಗೂ ಸಂವಹನ ಸಚಿವಾಲಯದ ಮುಖ್ಯ ಕಾರ್ಯತಂತ್ರ ಅಧಿಕಾರಿ ಶ್ರೀಕಾಂತ್ ಲಂಕಾ ಮಾತನಾಡಿ, 'ತೆಲಂಗಾಣ ಸರ್ಕಾರವು ನವೋದ್ಯಮ ಚಟುವಟಿಕೆಗಳಿಗೆ ಪೂರಕ ವಾತಾವರಣ ಸೃಷ್ಟಿಸಿದೆ. ನವೋದ್ಯಮಗಳು ಆರಂಭದಲ್ಲಿ ಸ್ಥಿರತೆ ಕಾಯ್ದುಕೊಳ್ಳಲು (ಇನ್‌ಕ್ಯುಬೇಟರ್ ಹಂತ) ಆರ್ಥಿಕ ನೆರವಿನ ಕೊರತೆ ಎದುರಿಸುತ್ತವೆ. ಅಂತಹ ನವೋದ್ಯಮಗಳಿಗೆ ನೆರವು ನೀಡಲಾಗುತ್ತಿದೆ' ಎಂದು ತಿಳಿಸಿದರು.

ವಿದ್ಯಾರ್ಥಿಗಳು ಏನು ಹೇಳುತ್ತಾರೆ?

ಎಂಜಿನಿಯರಿಂಗ್ ವಿದ್ಯಾರ್ಥಿಗಳು ದೇಶ-ವಿದೇಶಗಳ ತಂತ್ರಜ್ಞಾನಗಳ ಕುರಿತು ಮಾಹಿತಿ ಪಡೆದುಕೊಳ್ಳಲು ಸರ್ಕಾರ ಉತ್ತಮ ವೇದಿಕೆ ಕಲ್ಪಿಸಿದೆ. ಯಾವ ಕ್ಷೇತ್ರದಲ್ಲಿ ಉದ್ಯೋಗ ಅವಕಾಶಗಳಿವೆ ಎಂಬುದರ ಕುರಿತೂ ಸ್ಪಷ್ಟತೆ ಸಿಕ್ಕಿದೆ

ಮೈತ್ರಾ ಕೆ., ಎಂಜಿನಿಯರಿಂಗ್ ವಿದ್ಯಾರ್ಥಿನಿ ಎಲೆಕ್ಟ್ರಾನಿಕ್ ಸಿಟಿ

ಬೆಂಗಳೂರು ಟೆಕ್ ಶೃಂಗದಲ್ಲಿ ಮಾಹಿತಿಯ ಜೊತೆಗೆ ಐಟಿ, ಬಯೋಟೆಕ್ ಕ್ಷೇತ್ರದಲ್ಲಿರುವ ಉದ್ಯೋಗ ಅವಕಾಶಗಳ ಕುರಿತು ನಮ್ಮಂತಹ ವಿದ್ಯಾರ್ಥಿಗಳು ಮಾಹಿತಿ ಪಡೆದುಕೊಳ್ಳಲು ಅವಕಾಶ ಇದೆ. ಸರ್ಕಾರ ವಾರ್ಷಿಕ 10 ಲಕ್ಷ ವಿದ್ಯಾರ್ಥಿಗಳಿಗೆ ತರಬೇತಿ ನೀಡುವ ಒಪ್ಪಂದ ಮಾಡಿಕೊಂಡಿರುವುದು ಶ್ಲಾಘನೀಯ

ಮೆಲಿಶಾ ಕೆ. ಸನ್ನಿ, ಎಂಜಿನಿಯರಿಂಗ್ ವಿದ್ಯಾರ್ಥಿನಿ

ನಾನು ಎರಡು ವರ್ಷಗಳಿಂದ ಈ ಶೃಂಗಕ್ಕೆ ಬರುತ್ತಿದ್ದೇನೆ. ನನಗೆ ಏನೂ ಗೊತ್ತಿಲ್ಲವೆಂದು ಒಳಗಡೆ ಬಂದರೆ, ಇಲ್ಲಿಂದ ಜ್ಞಾನದ ಭಂಡಾರವನ್ನು ಹೊತ್ತುಕೊಂಡು ಹೊರಹೋಗಬಹುದು. ನಮ್ಮಂತಹ ವಿದ್ಯಾರ್ಥಿಗಳ ಕಲಿಕೆ ಮತ್ತು ಬೆಳವಣಿಗೆಗೆ ಇದು ಸಹಕಾರಿ.

ಪ್ರಥಮ್, ಎಂಜಿನಿಯರಿಂಗ್ ವಿದ್ಯಾರ್ಥಿ, ಶಿವಮೊಗ್ಗ

ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ತಂತ್ರಜ್ಞಾನವನ್ನು ಯಾವ ರೀತಿಯಲ್ಲಿ ಬಳಕೆ ಮಾಡಿಕೊಳ್ಳಲಾಗುತ್ತದೆ. ಈ ಕ್ಷೇತ್ರದಲ್ಲಿ ಉದ್ಯೋಗ ಅವಕಾಶಗಳಿವೆಯೇ? ಎಂಬ ನಮ್ಮ ಪ್ರಶ್ನೆಗಳಿಗೆ ಉತ್ತರ ಪಡೆದುಕೊಂಡಿದ್ದೇವೆ

ಶಶಾಂಕ್, ಎಂಜಿನಿಯರಿಂಗ್ ವಿದ್ಯಾರ್ಥಿ ಬಿಎಂಎಸ್‌ಐಟಿ ಕಾಲೇಜು

ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಕಂಪನಿಗಳು ಈ ಶೃಂಗದಲ್ಲಿ ಪಾಲ್ಗೊಂಡಿವೆ. ಈ ಕಂಪನಿಗಳ ಮುಖ್ಯಸ್ಥರೊಂದಿಗೆ ಸಂವಾದ ನಡೆಸುವ ಅವಕಾಶ ನಮಗೆ ಸಿಕ್ಕಿದ್ದು, ಸ್ಪರ್ಧಾತ್ಮಕ ಜಗತ್ತಿನಲ್ಲಿ ಉದ್ಯೋಗ ಪಡೆಯಲು ಯಾವ ಕೌಶಲಗಳನ್ನು ಬೆಳೆಸಿಕೊಳ್ಳಬೇಕೆಂಬ ಮಾಹಿತಿ ಲಭಿಸಿದೆ

ನಿಶಿತಾ, ವಿದ್ಯಾರ್ಥಿನಿ

ಈಜಿಪುರ ಮೇಲ್ಸೇತುವೆ: ಸೆಗ್‌ಮೆಂಟ್‌ಗಳಲ್ಲಿನ ಸಮಸ್ಯೆಯಿಂದ ಕಾಮಗಾರಿ ವಿಳಂಬ

ಮೂರು ಸೆಗ್‌ಮೆಂಟ್‌ನಲ್ಲಿ ಬಿರುಕು

ಪ್ರಜಾವಾಣಿ ವಾರ್ತೆ

ಈಜಿಪುರ ಮೇಲ್ಸೇತುವೆಗೆ ಅಳವಡಿಸಲಾಗಿದ್ದ ಬಿರುಕುಗೊಂಡಿದ್ದ ಸೆಗ್‌ಮೆಂಟ್ ಕೆಳಗಿಳಿಸಲಾಯಿತು (ಎಡ ಚಿತ್ರ) ಈಜಿಪುರ ಮೇಲ್ಸೇತುವೆಗೆ ಅಳವಡಿಸಲಾಗಿದ್ದ ಸೆಗ್‌ಮೆಂಟ್‌ನಲ್ಲಿನ ಬಿರುಕು

ಬೆಂಗಳೂರು: ಈಜಿಪುರ ಮೇಲ್ಸೇತುವೆ ಕಾಮಗಾರಿಯಲ್ಲಿ ಬಿರುಕುಗೊಂಡಿರುವ ಸೆಗ್‌ಮೆಂಟ್‌ಗಳ ಸಂಖ್ಯೆ ಮೂರಕ್ಕೆ ತಲುಪಿದೆ. ನಾಲ್ಕು ವರ್ಷಗಳ ಹಿಂದೆ ಗುತ್ತಿಗೆದಾರರು ನಿರ್ಮಾಣ ಮಾಡಿದ್ದ ಸೆಗ್‌ಮೆಂಟ್‌ಗಳ ಸಮಸ್ಯೆಯಿಂದ ಮೇಲ್ಸೇತುವೆ ಕಾಮಗಾರಿ ಮತ್ತೆ ವಿಳಂಬವಾಗುತ್ತಿದೆ.

ಈಜಿಪುರ ಮೇಲ್ಸೇತುವೆ ಕಾಮಗಾರಿ ನಡೆಯುವ ಹಂತದಲ್ಲೇ ಸೆಗ್‌ಮೆಂಟ್‌ನಲ್ಲಿ ಬಿರುಕು ಕಂಡುಬಂದಿತ್ತು. ನಾಲ್ಕು ವರ್ಷಗಳ ಹಿಂದೆ ನಿರ್ಮಿಸಲಾಗಿದ್ದ 'ಪ್ರೀಕಾಸ್ಟ್ ಸೆಗ್‌ಮೆಂಟ್'ನಿಂದ ಸಿಮೆಂಟ್, ಜಲ್ಲಿ ಹೊರಬರುತ್ತಿತ್ತು. ಒಂದಲ್ಲ ಎರಡು ಸೆಗ್‌ಮೆಂಟ್‌ನಲ್ಲಿ ಈ ಸಮಸ್ಯೆ ಕಂಡುಬಂದಿದ್ದರಿಂದ ಅವುಗಳನ್ನು ಕೆಳಗಿಳಿಸಲಾಗುತ್ತಿದೆ. ಇದೇ ಸಂದರ್ಭದಲ್ಲಿ 'ಕಾಸ್ಟಿಂಗ್ ಘಟಕ'ದಲ್ಲಿದ್ದ ಇನ್ನೊಂದು ಸೆಗ್‌ಮೆಂಟ್‌ನಲ್ಲೂ ಬಿರುಕು ಕಂಡುಬಂದಿದೆ.

ಕೋರಮಂಗಲ ಹೊರ ವರ್ತುಲ ರಸ್ತೆಯಲ್ಲಿ (ಈಜಿಪುರ) 2.5 ಕಿ.ಮೀ. ಉದ್ದದ ಎಲಿವೇಟೆಡ್ ಕಾರಿಡಾರ್ (ಮೇಲ್ಸೇತುವೆ) ನಿರ್ಮಿಸಲು 2017ರಲ್ಲಿ ಸಿಂಪ್ಲೆಕ್ಸ್ ಇನ್‌ಫ್ರಾಸ್ಟ್ರಕ್ಚರ್ ಸಂಸ್ಥೆಗೆ ಗುತ್ತಿಗೆ ನೀಡಲಾಗಿತ್ತು. ಅವರು 69 ಪ್ರೀಕಾಸ್ಟ್ ಸೆಗ್‌ಮೆಂಟ್‌ಗಳನ್ನು ನಿರ್ಮಿಸಿದ್ದಾರೆ. ಅವುಗಳನ್ನು ಅಳವಡಿಸುವ ಕಾಮಗಾರಿಯನ್ನು ಬಿಎಸ್‌ಸಿಪಿಎಲ್ ಇನ್‌ಫ್ರಾಸ್ಟ್ರಕ್ಚರ್ ಸಂಸ್ಥೆ ನಡೆಸುತ್ತಿದ್ದಾಗ ಸಮಸ್ಯೆ ಕಂಡು ಬಂದಿದೆ.

ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್ಸಿ) ವರದಿ ಆಧರಿಸಿ ಸೆಗ್‌ಮೆಂಟ್‌ಗಳನ್ನು ಬದಲಿಸಲಾಗುತ್ತಿದೆ. ಬಿಬಿಎಂಪಿ ಯೋಜನೆ ವಿಭಾಗದ ಮುಖ್ಯ ಎಂಜಿನಿಯರ್ ಕೂಡ ಸೆಗ್‌ಮೆಂಟ್ ಬದಲಿಸಲು ಸೂಚಿಸಿದ್ದರು. ಅಳವಡಿಸಿದ್ದ ಸೆಗ್‌ಮೆಂಟ್‌ಗಳಲ್ಲಿ ದೋಷ ಕಾಣಿಸಿಕೊಂಡಿದ್ದರಿಂದ ಅವುಗಳನ್ನು ಕೆಳಗಿಳಿಸಿ, ಬದಲಿಸಲು ಹೆಚ್ಚಿನ ಸಮಯ ವ್ಯಯವಾಗಿದೆ. ಇದರಿಂದ ಕಾಮಗಾರಿ ವಿಳಂಬವಾಗಿದೆ.

'ಈಜಿಪುರ ಮೇಲ್ಸೇತುವೆ ಕಾಮಗಾರಿಗೆ ಒಟ್ಟು 564 ಪ್ರೀಕಾಸ್ಟ್ ಸೆಗ್‌ಮೆಂಟ್‌ಗಳನ್ನು ಅಳವಡಿಸಬೇಕು. ಇದರಲ್ಲಿ 69 ಸೆಗ್‌ಮೆಂಟ್ ಅನ್ನು ಹಿಂದಿನ ಗುತ್ತಿಗೆದಾರರು ನಿರ್ಮಿಸಿದ್ದಾರೆ. ಕೆಲವು ಸೆಗ್‌ಮೆಂಟ್‌ಗಳಲ್ಲಿ ದೋಷ ಕಂಡು ಬಂದಿರುವುದರಿಂದ, ಎಲ್ಲ ಸೆಗ್‌ಮೆಂಟ್‌ಗಳ ಬಳಕೆಗೆ ಮುನ್ನ ಹೆಚ್ಚಿನ ಪರೀಕ್ಷೆ ನಡೆಸಲಾಗುತ್ತದೆ' ಎಂದು ಬಿಬಿಎಂಪಿ ಎಂಜಿನಿಯರ್‌ಗಳು ತಿಳಿಸಿದರು.

'ಅತಿಹೆಚ್ಚು ವಾಹನಗಳು ಸಂಚರಿಸುವ ಮೇಲ್ಸೇತುವೆ ನಿರ್ಮಾಣದ ಹಂತದಲ್ಲೇ ಬಿರುಕು ಕಾಣಿಸಿಕೊಳ್ಳುವಂತಹ ಆತಂಕದ ಸ್ಥಿತಿ ನಿರ್ಮಾಣವಾಗಿದೆ. ಹಿಂದಿನ ಗುತ್ತಿಗೆದಾರರು ಈ ಸೆಗ್‌ಮೆಂಟ್‌ಗಳನ್ನು ನಿರ್ಮಾಣ ಮಾಡಿದ್ದಾರೆ ಎಂದು ಹೇಳಲಾಗುತ್ತಿದೆ. ಆದರೆ ಬಿಬಿಎಂಪಿಯೇ ಇದಕ್ಕೆ ಹೊಣೆಯಲ್ಲವೆ? ನಾಗರಿಕರ ಸುರಕ್ಷತೆ ಅತಿ ಮುಖ್ಯ ಅಲ್ಲವೆ' ಎಂದು ಸ್ಥಳೀಯರಾದ ರಾಮಚಂದ್ರ ಪ್ರಶ್ನಿಸಿದರು.

2025ರ ಡಿಸೆಂಬರ್‌ಗೆ ಪೂರ್ಣ

'ಕಾಸ್ಟಿಂಗ್ ಘಟಕದ ಹಸ್ತಾಂತರದಲ್ಲಾದ ವಿಳಂಬ ಸೇರಿದಂತೆ ಹಲವು ಕಾರಣಗಳಿಂದ ಮೇಲ್ಸೇತುವೆ ಕಾಮಗಾರಿ ಕ್ಷಿಪ್ರಗತಿಯಲ್ಲಿ ಆರಂಭವಾಗುವುದಕ್ಕೆ ತೊಡಕಾಯಿತು. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರೇ ಮುಂದೆ ನಿಂತು ಸಮಸ್ಯೆಗಳನ್ನು ಪರಿಹರಿಸಿದ್ದಾರೆ. ಅಲ್ಲದೆ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಸಭೆ ನಡೆಸಿ ಹಲವು ಸಮಸ್ಯೆಗಳನ್ನು ಬಗೆಹರಿಸಿದ್ದಾರೆ. ಇದೀಗ ಕಾಮಗಾರಿ ಪೂರ್ಣ ವೇಗದಲ್ಲಿ ನಡೆಯುತ್ತಿದೆ' ಎಂದು ಕಾಮಗಾರಿ ಗುತ್ತಿಗೆ ಪಡೆದಿರುವ ಬಿಎಸ್‌ಸಿಪಿಎಲ್ ಇನ್‌ಫ್ರಾಸ್ಟ್ರಕ್ಚರ್ ಸಂಸ್ಥೆಯ ವರ್ಮಾ ತಿಳಿಸಿದರು.

'ಕಾಮಗಾರಿಯ ವೇಳಾಪಟ್ಟಿಯನ್ನು ನೀಡಿದ್ದೇವೆ. ಅದರಂತೆ ಪ್ರತಿ ತಿಂಗಳಿನ ಕಾಮಗಾರಿಗಳ ಮಾಹಿತಿ ನೀಡಲಾಗಿದ್ದು, ಕಳೆದ ಮೂರು ತಿಂಗಳಿಂದ ನಿಗದಿತ ವೇಗದಲ್ಲಿ ಕಾಮಗಾರಿ ನಡೆಯುತ್ತಿದೆ. 2025ರ ಡಿಸೆಂಬರ್ ವೇಳೆಗೆ ಮೇಲ್ಸೇತುವೆ ಕಾಮಗಾರಿ ಪೂರ್ಣಗೊಳ್ಳಲಿದೆ' ಎಂದರು.

ಪರೀಕ್ಷೆ ನಡೆಸಿ ಬಳಸಲು ಐಐಎಸ್‌ಸಿ ಸಲಹೆ

ಈಜಿಪುರ ಮೇಲ್ಸೇತುವೆಯಲ್ಲಿ ಅಳವಡಿಸಲಾಗಿದ್ದ ಸೆಗ್‌ಮೆಂಟ್‌ನಲ್ಲಿ ಬಿರುಕು ಕಾಣಿಸಿಕೊಂಡ ಪ್ರಕರಣದ ಪರೀಕ್ಷೆ ನಡೆಸಿರುವ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಸಿವಿಲ್ ಎಂಜಿನಿಯರಿಂಗ್ ವಿಭಾಗದ ಪ್ರೊ. ಜೆ.ಎಂ. ಚಂದ್ರ ಕಿಶನ್ ಅವರು, 'ಎಲ್ಲ ರೀತಿಯ ಪರೀಕ್ಷೆಗಳನ್ನು ಕೈಗೊಂಡೇ ಸೆಗ್‌ಮೆಂಟ್‌ಗಳನ್ನು ಅಳವಡಿಸಬೇಕು' ಎಂದು ಸಲಹೆ ನೀಡಿದ್ದಾರೆ.

'ಸೆಗ್‌ಮೆಂಟ್‌ಗಳ ಸದೃಢತೆಯನ್ನು ರಿಬೌಂಡ್ ಹ್ಯಾಮರ್ ಮತ್ತು ಯುಪಿವಿ ಪರೀಕ್ಷೆ ಮೂಲಕ ಪರೀಕ್ಷಿಸಿಕೊಳ್ಳಬೇಕು. ಕಾಂಕ್ರೀಟ್‌ನಲ್ಲಿ ಹನಿಕೂಂಬಿಂಗ್ ಇದ್ದರೆ ಅವುಗಳ ಬಗ್ಗೆ ಹೆಚ್ಚಿನ ಪರೀಕ್ಷೆ ನಡೆಸಬೇಕು' ಎಂದು ವರದಿಯಲ್ಲಿ ತಿಳಿಸಿದ್ದಾರೆ.

ಪ್ರಮಾದಕ್ಕೆ ಕಾ. ತ. ಚಿಕ್ಕಣ್ಣ ವಿಷಾದ

ಬೆಂಗಳೂರು: 'ಕನಕದಾಸರ ಜಯಂತಿ ಆಚರಣೆ ಸಂದರ್ಭದಲ್ಲಿ ಸಂಪುಟ ಸಂಚಾಲಕರನ್ನು ವೇದಿಕೆಗೆ ಬರಮಾಡಿಕೊಳ್ಳದೆ ಪ್ರಮಾದವಾಗಿದೆ. ಇದಕ್ಕೆ ವಿಷಾದ ವ್ಯಕ್ತಪಡಿಸುತ್ತೇನೆ' ಎಂದು ಸಂತ ಕವಿ ಕನಕದಾಸರು ಮತ್ತು ತತ್ವ ಪದಕಾರರ ಅಧ್ಯಯನ ಕೇಂದ್ರದ ಅಧ್ಯಕ್ಷ ಕಾ.ತ. ಚಿಕ್ಕಣ್ಣ ತಿಳಿಸಿದ್ದಾರೆ.

'ಅಂದು ಕಾರ್ಯಕ್ರಮದಲ್ಲಿ 18 ಸಂಪುಟಗಳನ್ನು ಬಿಡುಗಡೆ ಮಾಡಲಾಗಿತ್ತು. ಸಂಪುಟಗಳ ಸಂಪಾದಕರಿಗೆ ಮುಖ್ಯಮಂತ್ರಿಯವರ ಮೂಲಕ ಗೌರವ ಪ್ರತಿ ನೀಡಲಾಗಿತ್ತು. ಅದರಲ್ಲಿ ಒಂದು ಕೃತಿಯ ಸಂಪಾದಕರಾದ ಗಂಗಪ್ಪ ತಳವಾರ್ ಹೆಸರನ್ನು ಕರೆದಿರಲಿಲ್ಲ. ಅದು ಉದ್ದೇಶ ಪೂರ್ವಕವಾಗಿ ಬಿಟ್ಟಿದ್ದಲ್ಲ. ಅಧ್ಯಯನ ಕೇಂದ್ರದ ಪ್ರಮಾದದಿಂದ ಸಂಭವಿಸಿದೆ.ಲೇಖಕರನ್ನುಕಾರ್ಯಕ್ರಮಕ್ಕೆಅಧಿಕೃತವಾಗಿಆಹ್ವಾನಿಸಲಾಗಿದ್ದು, ವೇದಿಕೆಗೆ ಬರಮಾಡಿಕೊಳ್ಳದೆ ಹೋಗಿರುವುದು ನನಗೆ ಬೇಸರವಾಗಿದೆ' ಎಂದು ಅವರು ಹೇಳಿಕೆ ಮೂಲಕ ವಿಷಾದ ವ್ಯಕ್ತಪಡಿಸಿದ್ದಾರೆ.

ಸಿಂಘ್ವಿ, ಸಿಬಲ್ ಭೇಟಿ ಮಾಡಿದ ಸಿದ್ದರಾಮಯ್ಯ

ನವದೆಹಲಿ: ಮುಡಾ ಹಗರಣದ ಕುರಿತು ಜಾರಿ ನಿರ್ದೇಶನಾಲಯ ತನಿಖೆ ನಡೆಸುತ್ತಿರುವ ಹೊತ್ತಿನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಿರಿಯ ವಕೀಲರಾದ ಅಭಿಷೇಕ್ ಮನುಸಿಂಘ್ವಿ ಹಾಗೂ ಕಪಿಲ್ ಸಿಬಲ್ ಅವರನ್ನು ನವದೆಹಲಿಯಲ್ಲಿ ಗುರುವಾರ ಭೇಟಿಯಾಗಿ ಸಮಾಲೋಚಿಸಿದರು.

ಇಲ್ಲಿ ಕೆಎಂಎಫ್ ಉತ್ಪನ್ನಗಳನ್ನು ಬಿಡುಗಡೆ ಮಾಡಿದ ಮುಖ್ಯಮಂತ್ರಿ, ಸಿಂಘ್ವಿ ಮತ್ತು ಸಿಬಲ್ ಅವರನ್ನು ಪ್ರತ್ಯೇಕವಾಗಿ ಭೇಟಿ ಮಾಡಿ ಚರ್ಚಿಸಿದರು. ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಇದ್ದರು.

ಬಿಎಂಸಿಆರ್‌ಐ: ಆಸ್ಪತ್ರೆಗಳ ಚಿಕಿತ್ಸಾ ಶುಲ್ಕ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಕ್ಟೋರಿಯಾ ಸೇರಿ ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನೆ ಸಂಸ್ಥೆಯ (ಬಿಎಂಸಿಆರ್‌ಐ) ಅಧೀನ ಆಸ್ಪತ್ರೆಗಳಲ್ಲಿನ ಶುಲ್ಕಗಳನ್ನು ಪರಿಷ್ಕರಿಸಲಾಗಿದ್ದು, ಚಿಕಿತ್ಸೆ, ಪ್ರಯೋಗಾಲಯದ ಶುಲ್ಕಗಳಲ್ಲಿ ಶೇ 20ರಷ್ಟು ಹೆಚ್ಚಳವಾಗಿದೆ.

ನ.1ರಿಂದಲೇ ಪರಿಷ್ಕೃತ ದರ ಅನ್ವಯವಾಗಿದೆ. ಬಿಎಂಸಿಆರ್‌ಐ ಅಧೀನದಲ್ಲಿ ವಿಕ್ಟೋರಿಯಾ, ವಾಣಿವಿಲಾಸ, ಮಿಂಟೊ ಕಣ್ಣಿನ ಆಸ್ಪತ್ರೆ, ಪ್ರಧಾನ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ (ಪಿಎಂಎಸ್‌ಎಸ್‌ವೈ) ಆಸ್ಪತ್ರೆ ಹಾಗೂ ಅಪಘಾತ ಮತ್ತು ತುರ್ತು ಚಿಕಿತ್ಸಾ ಕೇಂದ್ರ ಕಾರ್ಯನಿರ್ವಹಿಸುತ್ತಿವೆ. ಈ ಆಸ್ಪತ್ರೆಗಳ ಅಭಿವೃದ್ಧಿಯ ದೃಷ್ಟಿಯಿಂದ ಶುಲ್ಕ ಹೆಚ್ಚಳ ಮಾಡಲಾಗಿದೆ ಎಂದು ಸಂಸ್ಥೆಯ ಮೂಲಗಳು ತಿಳಿಸಿವೆ.

ಪಿಎಂಎಸ್‌ಎಸ್‌ವೈ ಆಸ್ಪತ್ರೆ

'5-6 ವರ್ಷಗಳ ಬಳಿಕ ದರ ಪರಿಷ್ಕರಣೆ ಮಾಡಲಾಗಿದೆ. ರೋಗಿಗಳ ಹಿತದೃಷ್ಟಿ ಹಾಗೂ ಆಸ್ಪತ್ರೆಗಳ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡೇ ಪರಿಷ್ಕರಿಸಲಾಗಿದೆ. ಬಿಪಿಎಲ್ ಕಾರ್ಡ್ ಹೊಂದಿರುವವರಿಗೆ ಸರ್ಕಾರಿ ಆರೋಗ್ಯ ವಿಮೆಗಳಡಿ ವಿವಿಧ ಪರೀಕ್ಷೆ ಹಾಗೂ ಚಿಕಿತ್ಸೆಗಳು ಉಚಿತವಾಗಿಯೇ ಲಭ್ಯವಾಗಲಿವೆ. ಬಿಪಿಎಲ್ ಕಾರ್ಡ್ ಹೊಂದಿರದವರು ಮಾತ್ರ ಈ ಮೊದಲಿಗಿಂತ ಶೇ 20ರಷ್ಟು ಹೆಚ್ಚು ಹಣ ಪಾವತಿಸಬೇಕಾಗುತ್ತದೆ' ಎಂದು ಸಂಸ್ಥೆಯ ವೈದ್ಯಾಧಿಕಾರಿಗಳು ತಿಳಿಸಿದರು.

ಪರಿಷ್ಕೃತ ದರದ ಪ್ರಕಾರ ಹೊರ ರೋಗಿಗಳ ನೋಂದಣಿ ಶುಲ್ಕ ₹10ರಿಂದ ₹20, ಒಳ ರೋಗಿಗಳ ದಾಖಲಾತಿ ನೋಂದಣಿ ಶುಲ್ಕ ₹25ರಿಂದ ₹50, ರಕ್ತ ಪರೀಕ್ಷೆಯ ಶುಲ್ಕ ₹70ರಿಂದ ₹120, ವಾರ್ಡ್ ಶುಲ್ಕ ₹25ರಿಂದ ₹50, ತ್ಯಾಜ್ಯ ನಿರ್ವಹಣೆ ದರ ₹10ರಿಂದ ₹50ಕ್ಕೆ ಹೆಚ್ಚಳ ಮಾಡಲಾಗಿದೆ. ಇದೇ ರೀತಿ, ಪ್ರಮಾಣ ಪತ್ರ ಸೇರಿ ವಿವಿಧ ಶುಲ್ಕಗಳನ್ನು ಹೆಚ್ಚಳ ಮಾಡಲಾಗಿದ್ದು, ಬೆಡ್ ಸೇರಿ ಕೆಲ ಶುಲ್ಕಗಳನ್ನು ಶೇ 20ಕ್ಕಿಂತ ಅಧಿಕ ಪ್ರಮಾಣದಲ್ಲಿ ಹೆಚ್ಚಿಸಲಾಗಿದೆ.

ತಲಾ ಎರಡು ಬೆಡ್‌ಗಳ ವಿಶೇಷ ವಾರ್ಡ್‌ನ ಶುಲ್ಕವನ್ನು ₹750ರಿಂದ ₹1 ಸಾವಿರ, ತಲಾ ಒಂದು ಬೆಡ್‌ನ ವಿಶೇಷ ವಾರ್ಡ್‌ನ ಶುಲ್ಕವನ್ನು ₹750 ರಿಂದ ₹2 ಸಾವಿರಕ್ಕೆ ಏರಿಸಲಾಗಿದೆ.

ಸುವರ್ಣ ವಿಧಾನಸೌಧಕ್ಕೆ ಡಿ. 13ರಂದು ರೈತರ ಮುತ್ತಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಸರಬರಾಜನ್ನು ಖಾಸಗೀಕರಣಗೊಳಿಸುವುದನ್ನು ವಿರೋಧಿಸಿ, ರೈತರ ಪಹಣಿಗಳಲ್ಲಿ ವಕ್ಫ್ ಹೆಸರನ್ನು ಕೂಡಲೇ ತೆಗೆದು ಹಾಕಬೇಕು ಎಂದು ಒತ್ತಾಯಿಸಿ ಬೆಳಗಾವಿಯ ಸುವರ್ಣ ವಿಧಾನಸೌಧಕ್ಕೆ ಡಿಸೆಂಬರ್ 13ರಂದು ಮುತ್ತಿಗೆ ಹಾಕಲು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ನಿರ್ಧರಿಸಿದೆ.

ನಗರದಲ್ಲಿ ಗುರುವಾರ ನಡೆದ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಪದಾಧಿಕಾರಿಗಳ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಸುದ್ದಿಗಾರರಿಗೆ ತಿಳಿಸಿದರು.

'ಬೆಂಗಳೂರಿನಲ್ಲಿ ಹೊಸದಾಗಿ ವಿದ್ಯುತ್ ಸಂಪರ್ಕ ಪಡೆಯುವವರಿಗೆ ಪ್ರೀಪೇಯ್ಡ್ ಮೀಟರ್ ಅಳವಡಿಕೆಯನ್ನು ಕಡ್ಡಾಯಗೊಳಿಸಲಾಗುತ್ತಿದೆ. ಇದನ್ನು ಖಾಸಗಿಯವರು ನಿರ್ವಹಿಸುತ್ತಾರೆ. ಅಲ್ಲದೆ, ರೈತರು ಪಂಪ್‌ಸೆಟ್‌ಗಳಿಗೆ ಸೌರಶಕ್ತಿ ಅಳವಡಿಸಿಕೊಳ್ಳಬೇಕು ಎಂದು ಹೇಳುತ್ತಿದ್ದಾರೆ. ವಿದ್ಯುತ್ ಗ್ರಿಡ್ ಸಂಪರ್ಕದಿಂದ ರೈತರನ್ನು ಹೊರಗಿಟ್ಟರೆ ಖಾಸಗೀಕರಣ ಸುಲಭವಾಗುತ್ತದೆ ಎಂಬ ಹುನ್ನಾರ ಸರ್ಕಾರದ ಮಟ್ಟದಲ್ಲಿ ನಡೆಯುತ್ತಿದೆ' ಎಂದು ಆರೋಪಿಸಿದರು.

'ರೈತರ ಎಲ್ಲ ಬೇಡಿಕೆಗಳನ್ನು ಈಡೇರಿಸಬೇಕು. ಇಲ್ಲದಿದ್ದರೆ ಸುಮ್ಮನಿರುವುದಿಲ್ಲ ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಲು ಸುವರ್ಣ ವಿಧಾನಸೌಧಕ್ಕೆ ಮುತ್ತಿಗೆ ಹಾಕಲಾಗುತ್ತಿದೆ' ಎಂದರು. ಸಂಘದ ಕಾರ್ಯಾಧ್ಯಕ್ಷ ಮಂಜುನಾಥ ಗೌಡ ಸೊರಬ, ಪದಾಧಿಕಾರಿಗಳಾದ ಭಕ್ತರಹಳ್ಳಿ ಬೈರೇಗೌಡ, ಭೀಮ್‌ಸೇನ್ ಗಡಾದಿ, ವೀರಭದ್ರಸ್ವಾಮಿ ಸೇರಿದಂತೆ ಹಲವು ನಾಯಕರು ಸಭೆಯಲ್ಲಿ ಭಾಗವಹಿಸಿದ್ದರು ಎಂದರು.

ನಗರದಲ್ಲಿ ಇಂದು

'ನಾಡೋಜ ಎಚ್.ಎಲ್. ನಾಗೇಗೌಡ ರಾಷ್ಟ್ರೀಯ ಪ್ರಶಸ್ತಿ' ಪ್ರದಾನ: ಶಿವರಾಜ ಎಸ್. ತಂಗಡಗಿ, ಉದ್ಘಾಟನೆ: ಹಂ.ಪ. ನಾಗರಾಜಯ್ಯ, ಪ್ರಶಸ್ತಿ ಪುರಸ್ಕೃತರು: ಗುಡ್ಡಪ್ಪ ಜೋಗಿ, ಅತಿಥಿಗಳು: ಪುರುಷೋತ್ತಮ ಬಿಳಿಮಲೆ, ಧರಣಿದೇವಿ ಮಾಲಗತ್ತಿ, ಅಧ್ಯಕ್ಷತೆ: ಹಿ.ಚಿ. ಬೋರಲಿಂಗಯ್ಯ, ಆಯೋಜನೆ: ಕರ್ನಾಟಕ ಜಾನಪದ ಪರಿಷತ್ತು, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

ಕನ್ನಡ ರಾಜ್ಯೋತ್ಸವ: ಉದ್ಘಾಟನೆ: ಪುರುಷೋತ್ತಮ ಬಿಳಿಮಲೆ, ಅತಿಥಿ: ಜಿ. ಶ್ರೀಧರ್, ಅಧ್ಯಕ್ಷತೆ: ಎಂ. ವೆಂಕಟೇಶ, ಆಯೋಜನೆ ಮತ್ತು ಸ್ಥಳ: ಭಾಷಾಂತರ ನಿರ್ದೇಶನಾಲಯ ಪೋಡಿಯಂ ಬ್ಲಾಕ್, ವಿವಿ ಗೋಪುರ, ಮಧ್ಯಾಹ್ನ 2.30

'ಕಾಳಿಂಗ ಸರ್ಪದ ಹೊಸ ಪ್ರಭೇದ ಅನ್ವೇಷಣೆಯ ಪ್ರಕಟಣೆ: ಅತಿಥಿಗಳು: ಈಶ್ವರ್ ಖಂಡ್ರೆ, ಸಂತೋಷ್ ಎಸ್. ಲಾಡ್, ಆರಗ ಜ್ಞಾನೇಂದ್ರ, ಸುಭಾಷ್ ಕೆ. ಮಾಲ್ಖಡೆ, ಕಾರ್ತಿಕ್ ಶಂಕರ್, ರಿಕ್ಕಿ ಕೇಜ್, ಕಿಮ್ಮನೆ ರತ್ನಾಕರ, ಸಂಜಯ್ ಗುಬ್ಬಿ, ಆರ್.ಎಂ. ಮಂಜುನಾಥ ಗೌಡ, ವಿನಯ್ ರಾಜ್‌ಕುಮಾರ್, ಆಯೋಜನೆ: ಕಾಳಿಂಗ ಫೌಂಡೇಷನ್, ಸ್ಥಳ: ಜೆ.ಎನ್. ಟಾಟಾ ಸಭಾಂಗಣ, ಐಐಎಸ್‌ಸಿ ಸಭಾಂಗಣ, ಸಂಜೆ 4ರಿಂದ

ಪಿ. ಶೇಷಾದ್ರಿ ಸಿನಿಮಾವಲೋಕನ: 'ವಿಮುಕ್ತಿ' ಚಿತ್ರ ಪ್ರದರ್ಶನ, 'ಭಾರತ್ ಸ್ಟೋರ್ಸ್', 'ಸಂಕಲನ-ಸಂಗೀತ-ಸಂಯೋಜನೆ' ಮಾತುಕತೆ: ಪ್ರವೀಣ್ ಗೋಡ್ಖಿಂಡಿ, ಗುಣಶೇಖರ್, ಸ್ಥಳ: ಸುಚಿತ್ರ ಫಿಲಂ ಸೊಸೈಟಿ, ಬನಶಂಕರಿ, ಸಂಜೆ 4

ಅಂತರರಾಷ್ಟ್ರೀಯ ಮಹಿಳಾ ಉದ್ದಿಮೆದಾರರ ದಿನ: ಬೆಳಿಗ್ಗೆ 11ರಿಂದ 'ಶಿ ಇನ್‌ಸ್ಪೈರ್' ಪ್ರದರ್ಶನ, ಅತಿಥಿಗಳು: ಸೌಮ್ಯಾ ರೆಡ್ಡಿ, ಪ್ರೇಮಾ ಧನರಾಜ್, ರೇಚಲ್ ಡೇವಿಡ್, ಅಧ್ಯಕ್ಷತೆ: ಎಂ.ಜಿ. ಬಾಲಕೃಷ್ಣ, ಆಯೋಜನೆ: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ, ಸ್ಥಳ: ಸರ್ ಎಂ.ವಿ. ಸಭಾಂಗಣ, ಎಫ್‌ಕೆಸಿಸಿಐ, ಕೆ.ಜಿ. ರಸ್ತೆ, ಸಂಜೆ 5

ಹರಿದಾಸ ಮಂಜರಿ: ಗಾಯನ: ಕಾವ್ಯ ರಾಮಚಂದ್ರ, ಕೀ-ಬೋರ್ಡ್: ಅಭಯ್ ಸಂಪಿಗೆತ್ತಾಯ, ಮೃದಂಗ: ಕಾರ್ತಿಕ್ ಪ್ರಣವ್, ಆಯೋಜನೆ ಮತ್ತು ಸ್ಥಳ: ವಜ್ರಕ್ಷೇತ್ರ ಅಭಯ ಲಕ್ಷ್ಮಿ ನರಸಿಂಹಸ್ವಾಮಿ ದೇವಸ್ಥಾನ, ತ್ಯಾಗರಾಜನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಮೃತ್ಯುಂಜಯ ದೊಡ್ಡವಾಡಗೆ 'ಗಾಯನಗಂಗಾ ಪ್ರಶಸ್ತಿ'

ಬೆಂಗಳೂರು: ಗಾಯನ ಗಂಗಾ ಟ್ರಸ್ಟ್ ನೀಡುವ 'ಗಾಯನಗಂಗಾ ವಾರ್ಷಿಕ ಪ್ರಶಸ್ತಿ'ಗೆ ಗಾಯಕ ಹಾಗೂ ಸಂಗೀತ ಸಂಯೋಜಕ ಮೃತ್ಯುಂಜಯ ದೊಡ್ಡವಾಡ ಆಯ್ಕೆಯಾಗಿದ್ದಾರೆ.



ಪ್ರಶಸ್ತಿಯು ₹10 ಸಾವಿರ ನಗದು ಒಳಗೊಂಡಿದೆ. ಸುಗಮ ಸಂಗೀತ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ಈ ಪ್ರಶಸ್ತಿ ನೀಡಲಾಗುತ್ತಿದೆ. ಪ್ರಶಸ್ತಿ ಪ್ರದಾನ ಸಮಾರಂಭವನ್ನು ಇದೇ 30ರ ಸಂಜೆ 6 ಗಂಟೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಕೃಷ್ಣರಾಜ ಪರಿಷತ್ತಿನ ಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಆನಂದ್ ಮಾದಲಗೆರೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಸಾಪ ವಿಜಯನಗರ ಘಟಕ ಸಾಹಿತ್ಯ ಸಮ್ಮೇಳನಾಧ್ಯಕ್ಷೆ ಮಧುರಾ ಅಶೋಕ್ ಕುಮಾರ್

ಮಕ್ಕಳಿಗೆ ಉರುಳಾಗಲಿದೆ ಅನ್ಯಭಾಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಕ್ಕಳ ಗ್ರಹಿಕೆ ಮತ್ತು ಕಲಿಕೆಯಲ್ಲಿ ಚುರುಕುತನ ಕಾಣಲು ಮಾತೃಭಾಷೆ ಸಹಕಾರಿ. ಶೇ90ರಷ್ಟು ಮಕ್ಕಳಿಗೆ ಅನ್ಯಭಾಷಾ ಮಾಧ್ಯಮ ಉರುಳಾಗಿ ಪರಿಣಮಿಸುತ್ತಿದೆ' ಎಂದು ಲೇಖಕಿ ಮಧುರಾ ಅಶೋಕ್ ಕುಮಾರ್ ಕಳವಳ ವ್ಯಕ್ತಪಡಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ವಿಜಯನಗರ ವಿಧಾನಸಭೆ ಕ್ಷೇತ್ರ ಘಟಕ ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

'ಕಂಠಪಾಠದ ಕಲಿಕೆ ಬುದ್ಧಿ ಭಾವವನ್ನು ಅರಳಿಸುವುದಿಲ್ಲ. ವ್ಯಕ್ತಿ ಸೃಜನಶೀಲನಾಗಿ ಬೆಳೆಯಲು ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯಬೇಕು. ನಾವು ಯಾವ ಭಾಷೆಯಲ್ಲಿ ಯೋಚಿಸಬಲ್ಲೆವೋ ಅದೇ ಭಾಷೆಯಲ್ಲಿ ಶಿಕ್ಷಣ ಪಡೆಯುವುದರಿಂದ ಬಿರುಕುಗಳಿಲ್ಲದ ಶಿಕ್ಷಣ ಮತ್ತು ಜ್ಞಾನದ ಅನ್ವೇಷಣೆ ಸಾಧ್ಯ. ಗ್ರಾಮೀಣ ಭಾಗದ ಶಾಲೆಗಳ ಸ್ಥಿತಿ ಶೋಚನೀಯವಾಗಿದೆ. ನಗರ ಪ್ರದೇಶದ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಅಧಿಕ ಶುಲ್ಕ ಪಡೆಯಲಾಗುತ್ತಿದ್ದು, ಸರಿಯಾಗಿ ಇಂಗ್ಲಿಷ್ ಭಾಷೆ ಬಾರದ ಶಿಕ್ಷಕರಿಂದ ಗುಣಮಟ್ಟದ ಬೋಧನೆ ನಿರೀಕ್ಷಿಸಲು ಸಾಧ್ಯವೆ' ಎಂದು ಪ್ರಶ್ನಿಸಿದರು.

ಸಮ್ಮೇಳನದಲ್ಲಿ 'ವಿಜಯನಗರ ವೈಭವ' ಸ್ಮರಣ ಸಂಚಿಕೆ ಬಿಡುಗಡೆ ಮಾಡಲಾಯಿತು. ಎಂ. ಕೃಷ್ಣಪ್ಪ, ಮಹೇಶ ಜೋಶಿ, ಸೌಮ್ಯನಾಥ ಸ್ವಾಮೀಜಿ, ವೀರೇಶಾನಂದ ಸರಸ್ವತಿ ಸ್ವಾಮೀಜಿ, ಮಧುರಾ ಅಶೋಕ್ ಕುಮಾರ್ ಮತ್ತು ಕೆ.ವಿ. ತ್ರಿಲೋಕಚಂದ್ರ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

'ಆಧುನಿಕ ಶಿಕ್ಷಣದಿಂದ ಮಹಿಳೆಯರ ಬದುಕು ಆಮೂಲಾಗ್ರವಾಗಿ ಬದಲಾಗಿದೆ. ಎಲ್ಲ ಕ್ಷೇತ್ರಗಳಲ್ಲಿ ಮಹಿಳೆಯರು ತಮ್ಮ ಅಸ್ತಿತ್ವ ಕಂಡುಕೊಂಡಿದ್ದಾರೆ. ಹೊರ ಪ್ರಪಂಚದ ಹೊರೆ ಹೆಚ್ಚುತ್ತಾ ಹೋದಂತೆ ಹೆಣ್ಣಿಗೆ ಮನೆಯ ಒಳಗಿನ ಜವಾಬ್ದಾರಿ ಕಡಿಮೆಯಾಗಿಲ್ಲ. ಹಲವು ಒತ್ತಡಗಳಿಂದ ನಲುಗಿ, ಖಿನ್ನತೆಗೆ ಒಳಗಾಗುತ್ತಿದ್ದಾಳೆ. ಇಂತಹ ಪರಿಸ್ಥಿತಿಯಲ್ಲಿ ಸಮಯದ ನಿರ್ವಹಣೆ ಮಾಡಬೇಕು' ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ, 'ಕನ್ನಡಿಗರಿಗೆ ತಮ್ಮ ಶಕ್ತಿಯ ಅರಿವಿಲ್ಲ. ಇದರಿಂದಾಗಿ ಕನ್ನಡಿಗರು ಅಲ್ಪಸಂಖ್ಯಾತರಾಗಿದ್ದು, ಈಗಲಾದರೂ ಎಚ್ಚರಗೊಳ್ಳದಿದ್ದರೆ ಕನ್ನಡಿಗರ ಸಂಖ್ಯೆ ಇನ್ನಷ್ಟು ಕುಸಿತವಾಗಲಿದೆ' ಎಂದು ಹೇಳಿದರು.

ತುಮಕೂರಿನ ರಾಮಕೃಷ್ಣ ವಿವೇಕಾನಂದ ಆಶ್ರಮದ ವೀರೇಶಾನಂದ ಸರಸ್ವತಿ ಸ್ವಾಮೀಜಿ, 'ಹಳೆ ಬೆಂಗಳೂರಿನ ಕನ್ನಡಿಗರು ಹೊರಗಡೆ ತಳ್ಳಲ್ಪಟ್ಟಿದ್ದಾರೆ. ಮನೆಗಳು ಅಪಾರ್ಟ್‌ಮೆಂಟ್‌ಗಳಾಗಿ ಪರಿವರ್ತನೆ-ಯಾಗುತ್ತಿವೆ. ಮಾತೃ, ಮಾತೃಭೂಮಿ, ಮಾತೃಭಾಷೆಯ ಬಗ್ಗೆ ಅಸಡ್ಡೆ ತೋರಿದರೆ, ನಮ್ಮ ಜಾಗದಲ್ಲಿಯೇ ನಿರಾಶ್ರಿತರಾಗಿ ಬದುಕಬೇಕಾಗುತ್ತದೆ. ಕನ್ನಡಿಗರು ಕಟ್ಟಿದ ನಾಡು ಬೆಂಗಾಡು ಆಗಬಾರದು' ಎಂದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ಲ, 'ಕನ್ನಡ ಉಳಿಸಿ, ಬೆಳೆಸುವ ಜವಾಬ್ದಾರಿ ಸರ್ಕಾರದ ಜತೆಗೆ ಸಾರ್ವಜನಿಕರಿಗೂ ಇದೆ' ಎಂದು ಹೇಳಿದರು.

ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ವಿಜಯನಗರ ಶಾಖೆಯ ಸೌಮ್ಯನಾಥ ಸ್ವಾಮೀಜಿ, ವಿಜಯನಗರ ಶಾಸಕ ಎಂ. ಕೃಷ್ಣಪ್ಪ, ಗೋವಿಂದರಾಜನಗರ ಶಾಸಕ ಪ್ರಿಯಕೃಷ್ಣ, ಶಾಲಾ ಶಿಕ್ಷಣ ಇಲಾಖೆ ಆಯುಕ್ತ ಕೆ.ವಿ. ತ್ರಿಲೋಕಚಂದ್ರ, ಕಸಾಪ ವಿಜಯನಗರ ವಿಧಾನಸಭೆ ಕ್ಷೇತ್ರ ಘಟಕದ ಅಧ್ಯಕ್ಷ ಎಸ್.ಬಿ. ಉಮೇಶ್ ಚಂದ್ರ ಉಪಸ್ಥಿತರಿದ್ದರು.

ಹವಾಮಾನ ಬದಲಾವಣೆ: ಅಧಿಕಾರಿಗಳಿಗೆ ತರಬೇತಿ

ಬೆಂಗಳೂರು: ಹವಾಮಾನ ಬದಲಾವಣೆಯ 'ಕರ್ನಾಟಕ ರಾಜ್ಯ ಕ್ರಿಯಾ ಯೋಜನೆ-2' ರ ಪರಿಣಾಮಕಾರಿ ಅನುಷ್ಠಾನದ ಮೇಲ್ವಿಚಾರಣೆಗೆ ಆಯ್ದ ಜಿಲ್ಲಾ ಮಟ್ಟದ ಸರ್ಕಾರಿ ಅಧಿಕಾರಿಗಳಿಗೆ ತರಬೇತಿ ನೀಡಲಾಗಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ಪರಿಸರ ಶಿಕ್ಷಣ ಕೇಂದ್ರ (ಸಿಇಇ) ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (ಎಂಪ್ರಿ) ಮತ್ತು ಭಾರತದಲ್ಲಿ ಕಾರ್ಯನಿರ್ವ-ಹಿಸುತ್ತಿರುವ ಜರ್ಮನ್ ಫೌಂಡೇಶನ್ ಹ್ಯಾನ್ಸ್ ಸೀಡೆಲ್ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 2 ದಿನಗಳ ರಾಜ್ಯ ಹವಾಮಾನ ಕ್ರಮ ಮತ್ತು ಮೇಲ್ವಿಚಾರಣೆ ಕುರಿತ ನೀತಿ ಸಂವಾದಕ್ಕೆ ಚಾಲನೆ ನೀಡಿ ಮಾತನಾಡಿದರು.

ಜಾಗತಿಕ ತಾಪಮಾನ ಏರಿಕೆ ಮತ್ತು ಹವಾಮಾನ ಬದಲಾವಣೆ ಇಂದು ವಿಶ್ವಕ್ಕೇ ಸವಾಲಾಗಿದೆ. ಇದರ ಪರಿಣಾಮ ಎದುರಿಸಲು ಮತ್ತು ಪರಿಸರದ ಉಳಿವಿಗಾಗಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ನಡುವೆ ಸಮನ್ವಯ ಸಾಧಿಸಲಾಗುವುದು. ಇದರಿಂದ ಹವಾಮಾನ ಬದಲಾವಣೆಯ ಪರಿಣಾಮಗಳನ್ನು ತಗ್ಗಿಸಲು ಸಾಧ್ಯ ಎಂದು ಅವರು ಪ್ರತಿಪಾದಿಸಿದರು.

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/33/2024
ದಿನಾಂಕ : 15-11-2024
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಗದಗ – ಹೊಟಗಿ	ರೂ. 75,49,11,162/-

ಡಬ್ಲಿಂಗ್ ಯೋಜನೆ : ಗದಗ – ವಂದಾಲ ನಿಲ್ದಾಣಗಳ ನಡುವೆ ಬಾಕಿ ಉಳಿದ ಕಾಮಗಾರಿಗಳು (ಸಂಯೋಜಿತ ಕಾಮಗಾರಿ).
(ಟೆಂಡರ್ ಉಲ್ಲೇಖ ಸಂ. : ಹೆಚ್‌ಜಿಎ-99)
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 09-12-2024 ರಂದು 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು ಬೆಂಗಳೂರು ದಂಡು
ಪಿಯುಬಿ/585/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024-25
South Western Railway - SWR SWRRLY SWRRLY

PUBLIC NOTICE

ಎಂ/ಎಸ್. ಸತ್ತ್ವ ರೆಸಿ ಪ್ರೈವೇಟ್ ಲಿಮಿಟೆಡ್, ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಕರ್ನಾಟಕ ರಾಜ್ಯ ಪರಿಸರ ಪ್ರಭಾವ ಮೌಲ್ಯಮಾಪನ ಪ್ರಾಧಿಕಾರವು (ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಿಂದ ಸ್ಥಾಪಿಸಲ್ಪಟ್ಟಿದೆ) ಸರ್ವೇ ನಂ. 43/3, ಅಂಜನಪುರ ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲೂಕು, ಬೆಂಗಳೂರು ನಗರ ಜಿಲ್ಲೆ, ಇಲ್ಲಿ ಉದ್ದೇಶಿತ ವಸತಿ ಕಟ್ಟಡ ನಿರ್ಮಾಣಕ್ಕಾಗಿ ಪರಿಸರ ಅನುಮತಿಯನ್ನು ನೀಡಿದ್ದು, ಫೈಲ್ ನಂಬರ್ ಎಸ್‌ಇಐಎಎ 84 ಸಿ ಓ ಏನ್ 2024,ದಿನಾಂಕ: 12/11/2024 ರಂದು ಮಂಜೂರಾಗಿದೆ, ಹಾಗೂ ಅನುಮತಿ ಪತ್ರದ ಪ್ರತಿಯನ್ನು ಪರಿವೇಶ್ ಪೋರ್ಟಲ್ – ಎಸ್‌ಇಐಎಎ ಕರ್ನಾಟಕ ವೆಬ್ಸೈಟ್ http://environmentclearance.nic.in ನಲ್ಲಿ ಕಾಣಬಹುದು.

PUBLIC NOTICE

ಎಂ/ಎಸ್. ಸತ್ತ್ವ ರೆಸಿ ಪ್ರೈವೇಟ್ ಲಿಮಿಟೆಡ್, ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಕರ್ನಾಟಕ ರಾಜ್ಯ ಪರಿಸರ ಪ್ರಭಾವ ಮೌಲ್ಯಮಾಪನ ಪ್ರಾಧಿಕಾರವು (ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಿಂದ ಸ್ಥಾಪಿಸಲ್ಪಟ್ಟಿದೆ) ಸರ್ವೇ ನಂ. 20/2, 20/3, 20/4, 20/5, 21/3, 27/4, 28/5, 28/2, 29/1, 30/1, 30/2, 30/3, 30/4, 30/5, ರಾಜಾನುಕುಂಟೆ ಗ್ರಾಮ, ಹೆಸರಘಟ್ಟ ಹೋಬಳಿ, ಯೆಲಹಂಕ ತಾಲೂಕು, ಬೆಂಗಳೂರುನಗರ ಜಿಲ್ಲೆ ಇಲ್ಲಿ ಉದ್ದೇಶಿತ ವಸತಿ ಕಟ್ಟಡ ನಿರ್ಮಾಣಕ್ಕಾಗಿ ಪರಿಸರ ಅನುಮತಿಯನ್ನು ನೀಡಿದ್ದು, ಫೈಲ್ ನಂಬರ್ ಎಸ್‌ಇಐಎಎ 199 ಸಿ ಓ ಏನ್ 2023, ದಿನಾಂಕ: 14/11/2024 ರಂದು ಮಂಜೂರಾಗಿದೆ, ಹಾಗೂ ಅನುಮತಿ ಪತ್ರದ ಪ್ರತಿಯನ್ನು ಪರಿವೇಶ್ ಪೋರ್ಟಲ್–ಎಸ್‌ಇಐಎಎ ಕರ್ನಾಟಕ ವೆಬ್ಸೈಟ್ http://environmentclearance.nic.in ನಲ್ಲಿ ಕಾಣಬಹುದು.

ರಾಷ್ಟ್ರೀಯ ಆವಿಷ್ಕಾರ ಪ್ರತಿಷ್ಠಾನ–ಭಾರತ

ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸ್ವಾಯುತ್ತ ಸಂಸ್ಥೆ
ಗ್ರಾಮಭಾರತಿ, ಅಮರಾಪುರ, ಮಹೂದಿ ರಸ್ತೆ, ಗಾಂಧಿನಗರ, ಗುಜರಾತ್–382650
ಫೋನ್: 02764 261134/35/36/37/38;
ವೆಬ್‌ಸೈಟ್: www.nif.org.in
ಜಾಹೀರಾತು ಸಂಖ್ಯೆ 02/2024

ರಾಷ್ಟ್ರೀಯ ಆವಿಷ್ಕಾರ ಪ್ರತಿಷ್ಠಾನ ಭಾರತ (ಎನ್‌ಐಎಫ್) ಇವರು ವಿವಿಧ ಹುದ್ದೆಗಳಲ್ಲಿ (ಫೆಲೋ/ ಅಸೋಸಿಯೇಟ್/ ಮ್ಯಾನೇಜರ್ (ಆಡಳಿತ & ಹಣಕಾಸು) ತೊಡಗಿಸಿಕೊಳ್ಳಲು ಅತ್ಯುತ್ಸಾಹಿ ಮತ್ತು ಅರ್ಹ ವೃತ್ತಿನಿಪುಣರಿಂದ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಿದ್ದಾರೆ.
ಸದರಿ ತೊಡಗಿಸಿಕೊಳ್ಳುವಿಕೆಯು ಸಂಪೂರ್ಣ ತಾತ್ಕಾಲಿಕ ಮತ್ತು ಗುತ್ತಿಗೆ ಆಧಾರದಲ್ಲಿ ಇರುತ್ತದೆ. ಈ ಕುರಿತಂತೆ ವಿವರವಾದ ಜಾಹೀರಾತನ್ನು http://www.nif.org.in/join_us ನಲ್ಲಿ ಕಾಣಬಹುದು. ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ 9ನೇ ಡಿಸೆಂಬರ್ 2024.
CBC 36118/12/0002/2425 ಸಹಿ/– ನಿರ್ದೇಶಕರು

ಕೆನರಾ ಬ್ಯಾಂಕ್ Canara Bank A Government of India Undertaking — ಸಿಂಡಿಕೇಟ್ Syndicate

ಸಾಮಾನ್ಯ ಆಡಳಿತ ವಿಭಾಗ, 1ನೇ ಮಹಡಿ, ವೃತ್ತ ಕಛೇರಿ, 86, ಸ್ಪೆನ್ಸರ್ಸ್ ಟವರ್, ಎಂ.ಜಿ.ರಸ್ತೆ, ಬೆಂಗಳೂರು – 560001 ದೂ : 080–25310038

ಬಳಸಿದ ವಾಹನಗಳ ಮಾರಟಕ್ಕಾಗಿ ಹರಾಜು ಪ್ರಕ್ರಿಯೆ

ಕ್ರ. ಸಂ.	ತಯಾರಿಕೆ	ರಿ.ಸಂ.	ಖರೀದಿಯ ವರ್ಷ	ರಸ್ತೆ ತೆರಿಗೆ	ಕಾಯ್ದಿರಿಸಿದ ಬೆಲೆ
1	ಮಾರುತಿ ಸಿಯಾಝ್	KA 02 ML 7580	2016	LTT	3,61,800/-
2	ಮಾರುತಿ ಸಿಯಾಝ್	KA 04 MT 6139	2017	LTT	3,65,400/-
3	ಮಾರುತಿ ಸ್ವಿಫ್ಟ್ ಡಿಜೈರ್	KA 03 MY 1349	2016	LTT	2,83,500/-
4	ಮಾರುತಿ ಸ್ವಿಫ್ಟ್ ಡಿಜೈರ್	KA 05 MW 0437	2017	LTT	2,80,800/-
5	ಮಾರುತಿ ಸ್ವಿಫ್ಟ್ ಡಿಜೈರ್	KA 03 MW 7772	2015	LTT	2,66,400/-
6	ಮಾರುತಿ ಸ್ವಿಫ್ಟ್ ಡಿಜೈರ್	KA 05 MW 0448	2017	LTT	2,50,000/-
7	ಸ್ಕೋಡಾ ಒಕ್ಟಿವಾ ಆಂಬಿಯೆಂಟೆ 1.8	KA 01 MP 3096	2016	LTT	4,00,000/-

ಮೇಲ್ಕಾಣಿಸಿದ ನಮ್ಮ ಕಛೇರಿಗಳಲ್ಲಿ 22.11.2024 ರಿಂದ 16.12.2024 ರವರೆಗೆ ಬೆಳಿಗ್ಗೆ 10.30 ಗಂಟೆಯಿಂದ ಸಂಜೆ 3.30 ವರೆಗೆ ಪರಿಶೀಲನೆಗಾಗಿ ವಾಹನಗಳು ಲಭ್ಯವಿರುತ್ತವೆ. ಆಸಕ್ತಿಯುಳ್ಳ ಖರೀದಿದಾರರು ನಿಗದಿಪಡಿಸಿದ ಟೆಂಡರ್ ಫಾರಂನಲ್ಲಿ ಮಾತ್ರವೇ ವಾಹನಕ್ಕಾಗಿ ತಮ್ಮ ಪ್ರಸ್ತಾವನೆಯನ್ನು ಉಲ್ಲೇಖಿಸಲು ಕೋರಿದೆ. ವಾಹನಗಳನ್ನು "ಯಥಾಸ್ಥಿತಿಯಲ್ಲಿ" ರುವಂತೆಯೇ ಮಾರಾಟ ಮಾಡಲಾಗುವುದು
ಬ್ಯಾಂಕಿನ ವೆಬ್‌ಸೈಟ್ https://canarabank.com/tenders ನಿಂದ ಅಗತ್ಯವಾದ ಅರ್ಜಿ ಫಾರಂಗಳನ್ನು ಡೌನ್‌ಲೋಡ್ ಮಾಡಬಹುದು. ಪ್ರಸ್ತಾವನೆಯ ದಾಖಲೆಯನ್ನು ಸಲ್ಲಿಸಲು ಕೊನೆಯ ದಿನಾಂಕ : 16.12.2024 ರಂದು ಸಂಜೆ 3.00 ಗಂಟೆಯವರೆಗೆ. ಮೇಲಿನ ವಿಳಾಸದಲ್ಲಿ 16.12.2024 ರಂದು ಸಂಜೆ 4:00 ಗಂಟೆಗೆ ಟೆಂಡರ್‌ಗಳನ್ನು ತೆರೆಯಲಾಗುವುದು.
ಮುಂದೆ ಮಾಹಿತಿಗಳು, ತಿದ್ದುಪಡಿಗಳು ಇದ್ದಲ್ಲಿ, ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಮಾತ್ರವೇ ಪ್ರಕಟಿಸಲಾಗುವುದು.
ಸ್ಥಳ : ಬೆಂಗಳೂರು ಸಹಿ/–
ದಿನಾಂಕ : 21.11.2024 ಸಹಾಯಕ ಮಹಾ ಪ್ರಬಂಧಕರು

ಥಾಯ್ಲೆಂಡ್ ಕ್ರೀಡಾಕೂಟ ಪ್ರಸಾದ್‌ಗೆ 3 ಪದಕ

ಬೆಂಗಳೂರು: ನಗರದ ದೇಹದಾರ್ಢ್ಯಪಟು ಕೆ.ಜೆ.ಪ್ರಸಾದ್ ಅವರು ಯುನೈಟೆಡ್ ವರ್ಲ್ಡ್ ಸ್ಪೋರ್ಟ್ಸ್ ಅಂಡ್ ಫಿಟ್ನೆಸ್ ಫೆಡರೇಷನ್ ಆಶ್ರಯದಲ್ಲಿ ಥಾಯ್ಲೆಂಡ್‌ನ ಚಾನ್ಬುರಿ ನಗರದ ಶ್ರೀರಚಾದಲ್ಲಿ ಇತ್ತೀಚೆಗೆ ನಡೆದ ವಿಶ್ವ ಪವರ್ ಯೋಗ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

ಇದರ ಜೊತೆಗೆ 85 ಕೆ.ಜಿ. ಮೇಲ್ಪಟ್ಟ ವಿಭಾಗದ ದೇಹದಾರ್ಢ್ಯ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಹಾಗೂ ಪವರ್ ಲಿಫ್ಟಿಂಗ್‌ನಲ್ಲಿ ಕಂಚಿನ ಪದಕ ಗೆದ್ದು-ಕೊಂಡಿದ್ದಾರೆ. ನಗರ ಹೊರವಲಯದ ತಾವರೆಕೆರೆ ಹೋಬಳಿಯ ಕೋಲೂರು ಕುಂದಾಳಪುರ ನಿವಾಸಿಯಾಗಿರುವ ಪ್ರಸಾದ್, ರಾಜರಾಜೇಶ್ವರಿ ನಗರದ ಮಸೆಲ್ ಮೆಕ್ಯಾನಿಕ್ ಜಿಮ್‌ನಲ್ಲಿ ಅಭ್ಯಾಸ ಮಾಡಿದ್ದಾರೆ.

IN THE COURT OF CITY CIVIL AND SESSIONS JUDGE, AT BANGALORE (CCH-59)
Miscellaneous Petition No. 1140/2024
BETWEEN : 1. Ms. Anuradha Ghosh, aged 59 years, D/o late Prabodh Ranjan Ghosh, **2. Mr. Anubhav Gopal,** aged 31 years, S/o late Padmanabhan Gopal, C/o Ms. Anuradha Ghosh, (Represented by: Duly appointed legal guardian by National Trust, Ministry of Social Justice and Empowerment Divyangjan), Government of India, 16B, Bada Bazar Road, Rajinder Nagar, New Delhi - 110 060.
Both residing at: Apartment No. W-2, 1st Floor, Shararitu Apartments, No. 39/1, AECS Layout Road, (Beside Bank of Baroda), Kundalahalli Gate, Bangalore - 560 037. **...PETITIONERS**
AND : Nil ...RESPONDENT
PUBLIC NOTICE
Whereas, the above named first petitioner has Filed a petition under Section 14 of The Rights of Persons With Disabilities Act 2016, for a declaration that the first petitioner be legally appointed as the sole legal guardian of the person and the property of the second petitioner, who is confirmed to be suffering from permanent autism spectrum disorder by virtue of the certificate issued by National Trust, Ministry of Social Justice and Empowerment (Divyangjan), Government of India, 16B, Bada Bazar Road, Rajinder Nagar, New Delhi - 110 060 and also by way of Unique Disability ID issued by Government of India and have the schedule property transferred to her name, in view of the fact that the second petitioner is incapable of holding any property on account of his disability.
If anyone has any objection in granting the above prayer in favour of the first petitioner, they may appear in person, or by a pleader duly instructed and contest the petition before the City Civil Judge (CCH-59) at Bangalore **on 7.12.2024 at 11.00 a.m.** If there are no objections filed on that day, the Hon'ble Court shall proceed to allow the petition by granting the relief claimed therein.
SCHEDULE PROPERTY
All that piece and parcel of the residential apartment bearing No. W-2, 1st Floor, Shararitu Apartments, No. 39/1, AECS Layout Road, (Beside Bank of Baroda), Kundalahalli Gate, Bangalore - 560 037, measuring 1630 sq.ft. of super built up area, comprising of three bedrooms with attached bathrooms, hall cum dining, kitchen and utility room.
Given under my hand and seal of the Court, this 13th day of November 2024 at Bangalore.
By order of the Court, Senior Sheristedar, City Civil Court, Bengaluru.
Advocate for Petitioners : **M. Arun Ponappa**
IInd Floor, Kasturi Complex, No.76, Mission Road, Bangalore-560 027.

ಶಾಸಕ ವಿಶ್ವನಾಥ್‌ಗೆ ಕೊಲೆ ಬೆದರಿಕೆ ಆರೋಪ: ಹೈಕೋರ್ಟ್‌ನಲ್ಲಿ ವಿಚಾರಣೆ

ಪ್ರಕರಣ ರದ್ದುಗೊಳಿಸಲು ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕ ಶಾಸಕ ಎಸ್.ಆರ್.ವಿಶ್ವನಾಥ್ ಅವರಿಗೆ ಕೊಲೆ ಬೆದರಿಕೆ ಹಾಕಿದ ಆರೋಪಕ್ಕೆ ಸಂಬಂಧದ ಕ್ರಿಮಿನಲ್ ಪ್ರಕರಣವನ್ನು ರದ್ದುಗೊಳಿಸುವಂತೆ ಕೋರಿ ಆರೋಪಿ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ ಪ್ರಕರಣದ ಮೊದಲನೇ ಆರೋಪಿಯಾದ ಹೆಸರಘಟ್ಟ ಹೋಬಳಿಯ ಮುತ್ತುಗದಹಳ್ಳಿಯ ಎಂ.ಎನ್. ಗೋಪಾಲಕೃಷ್ಣ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ಜಿ.ಉಮಾ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿ ಆದೇಶಿಸಿದೆ.

'ಮೇಲ್ನೋಟಕ್ಕೆ ಆರೋಪಿಯ ವಿರುದ್ಧದ ಆಪಾದನೆಗಳಲ್ಲಿ ಸಾಕಷ್ಟು ಸಾಕ್ಷ್ಯಗಳಿವೆ ಎಂಬುದು ಕಂಡು ಬರುತ್ತಿದೆ. ಇದಕ್ಕೆ ಪುಷ್ಟಿ ನೀಡುವಂತೆ ಪ್ರಕರಣದಲ್ಲಿ ತನಿಖಾಧಿಕಾರಿಯು ಪೆನ್ ಡ್ರೈವ್, ಪತ್ರ ಸೇರಿದಂತೆ ಅಮೂಲ್ಯ ಸಾಕ್ಷ್ಯಗಳನ್ನು ಸಂಗ್ರಹಿಸಿದ್ದಾರೆ ಎಂಬುದು ಗಮನಾರ್ಹ' ಎಂದು ನ್ಯಾಯಪೀಠ ಆದೇಶದಲ್ಲಿ ತಿಳಿಸಿದೆ.

'ವಿಸ್ತೃತ ತನಿಖೆಯಿಂದ ಮಾತ್ರವೇ ಗೋಪಾಲಕೃಷ್ಣ ವಿರುದ್ಧ ದೂರುದಾರ ವಿಶ್ವನಾಥ್ ಮಾಡಿರುವ ಆರೋಪಗಳ ಸತ್ಯಾಂಶ ಹೊರಬರಲು ಸಾಧ್ಯ. ಹಾಗಾಗಿ, ಈ ಹಂತದಲ್ಲಿ ಗೋಪಾಲಕೃಷ್ಣ ವಿರುದ್ಧದ ನ್ಯಾಯಿಕ ಪ್ರಕ್ರಿಯೆಯನ್ನು ರದ್ದುಗೊಳಿಸಲು ಸಾಧ್ಯವಿಲ್ಲ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಪ್ರಕರಣವೇನು?: 'ಎಂ.ಎನ್. ಗೋಪಾಲಕೃಷ್ಣ ಹಾಗೂ ಮತ್ತೊಬ್ಬ ವ್ಯಕ್ತಿ ಶಾಸಕ ಎಸ್.ಆರ್.ವಿಶ್ವನಾಥ್ ಅವರನ್ನು ಮುಗಿಸುವುದಾಗಿ ಸಂಭಾಷಣೆ ನಡೆಸಿದ್ದಾರೆ' ಎಂಬುದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಇದನ್ನು ಆಧರಿಸಿ ವಿಶ್ವನಾಥ್ 2021ರ ಡಿಸೆಂಬರ್ 1ರಂದು ರಾಜಾನುಕುಂಟೆ ಪೊಲೀಸ್ ಠಾಣೆಯಲ್ಲಿ, ಭಾರತೀಯ ದಂಡ ಸಂಹಿತೆ-1860ರ ಕಲಂ 120ಬಿ ಮತ್ತು 506ರ ಅಡಿಯಲ್ಲಿ ದೂರು ದಾಖಲಿಸಿದ್ದರು.

ದೂರು ಸಲ್ಲಿಸಿದ ದಿನವೇ ಶಾಸಕರ ಕಚೇರಿಗೆ ಲಕೋಟೆಯೊಂದು ಬಂದಿತ್ತು. ಅದರಲ್ಲಿ ಪೆನ್ ಡ್ರೈವ್ ಹಾಗೂ ಬೆದರಿಕೆ ಪತ್ರವಿತ್ತು. ಪೊಲೀಸರು ಇದನ್ನು ವಶಕ್ಕೆ ಪಡೆದಿದ್ದರು. ಏತನ್ಮಧ್ಯೆ, ತಮ್ಮ ವಿರುದ್ಧದ ದೂರನ್ನು ರದ್ದುಗೊಳಿಸುವಂತೆ ಕೋರಿ ಗೋಪಾಲಕೃಷ್ಣ ಹೈಕೋರ್ಟ್ ಮೆಟ್ಟಿಲೇರಿದ್ದರು.

ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಪೀಠ, 'ತಾಂತ್ರಿಕ ಕಾರಣಗಳಿಂದಾಗಿ ದೂರು ಸಲ್ಲಿಸಿರುವ ಪ್ರಕ್ರಿಯೆ ಸರಿಯಾಗಿಲ್ಲ. ಹಾಗಾಗಿ, ಪ್ರಕರಣವನ್ನು ರದ್ದುಗೊಳಿಸಲಾಗುತ್ತಿದೆ. ಆದರೆ, ಅರ್ಜಿದಾರರು ಹೊಸದಾಗಿ ದೂರು ಸಲ್ಲಿಸಲು ಸ್ವತಂತ್ರರು' ಎಂದು ಆದೇಶಿಸಿತ್ತು. ಈ ಆದೇಶ ಹೊರಬಂದ ನಂತರ ವಿಶ್ವನಾಥ್ ಗೋಪಾಲಕೃಷ್ಣ ವಿರುದ್ಧ ಖಾಸಗಿ ದೂರು ದಾಖಲಿಸಿದ್ದರು. ದೂರಿನ ಬಗ್ಗೆ ವಿಚಾರಣೆ ನಡೆಸಿದ್ದ ವಿಚಾರಣಾ ನ್ಯಾಯಾಲಯ, ಆರೋಪಿ ವಿರುದ್ಧ ತನಿಖೆ ನಡೆಸುವಂತೆ ರಾಜಾನುಕುಂಟೆ ಪೊಲೀಸರಿಗೆ ನಿರ್ದೇಶಿಸಿತ್ತು. ಇದನ್ನು ಪ್ರಶ್ನಿಸಿದ್ದ ಗೋಪಾಲಕೃಷ್ಣ 'ತನಿಖೆಗೆ ತಡೆ ನೀಡಬೇಕು ಮತ್ತು ಪ್ರಕರಣವನ್ನು ರದ್ದುಗೊಳಿಸಬೇಕು' ಎಂದು ಕೋರಿ ಪುನಃ ಹೈಕೋರ್ಟ್ ಮೆಟ್ಟಿಲೇರಿದ್ದರು.

ಅನಧಿಕೃತ ಮಳಿಗೆ: ನೋಟಿಸ್

ಬೆಂಗಳೂರು: 'ಕೆ.ಆರ್.ಮಾರುಕಟ್ಟೆಯಲ್ಲಿರುವ ಪಾದಚಾರಿ ಮಾರ್ಗ ಹಾಗೂ ಅಗ್ನಿ ಸುರಕ್ಷತಾ ನಿರ್ಗಮನ ಪ್ರದೇಶದಲ್ಲಿ ಅನಧಿಕೃತವಾಗಿ ನಿರ್ಮಿಸುತ್ತಿರುವ ಮಳಿಗೆಗಳನ್ನು ತೆರವುಗೊಳಿಸಲು ಆದೇಶಿಸಬೇಕು' ಎಂದು ಕೋರಿ ಸಲ್ಲಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ, 'ಆಲ್ ಟ್ರೇಡರ್ಸ್ ಫಾರ್ಮರ್ಸ್ ಮರ್ಚಂಟ್ ವೆಲ್ಫೇರ್ ಅಸೋಸಿಯೇಷನ್' ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಬಿ.ಎಂ.ಶ್ಯಾಮ್ ಪ್ರಸಾದ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ರಾಜ್ಯ ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಡಿಜಿಪಿ, ಬಿಬಿಎಂಪಿ ಮುಖ್ಯ ಆಯುಕ್ತ ಸೇರಿದಂತೆ ಒಟ್ಟು 12 ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಆರ್.ರಹಮತ್ ಉಲ್ಲಾ ಹಾಜರಿದ್ದರು.

ಮನವಿ ಏನು?: 'ಕೆ.ಆರ್.ಮಾರುಕಟ್ಟೆಯ ಪಾದಚಾರಿ ಮಾರ್ಗ, ಸಾರ್ವಜನಿಕ ಪ್ರದೇಶ ಮತ್ತು ಅಗ್ನಿ ಸುರಕ್ಷತಾ ನಿರ್ಗಮನ ಪ್ರದೇಶವನ್ನು ಕೆಲವರು ಒತ್ತುವರಿ ಮಾಡಿ ಮಳಿಗೆಗಳನ್ನು ನಿರ್ಮಿಸುತ್ತಿದ್ದಾರೆ. ಇದರಿಂದ ಸಾರ್ವಜನಿಕರಿಗೆ ಮತ್ತು ಮಾರುಕಟ್ಟೆ ವ್ಯಾಪಾರಿಗಳಿಗೆ ತೊಂದರೆಯಾಗುತ್ತಿದೆ. ಒತ್ತುವರಿ ತೆರವುಗೊಳಿಸುವಂತೆ ಕೋರಿ ಬಿಬಿಎಂಪಿ ಮತ್ತು ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರೂ, ಈವರೆಗೂ ಒತ್ತುವರಿ ತೆರವುಗೊಂಡಿಲ್ಲ. ಆದ್ದರಿಂದ, ನಮ್ಮ ಮನವಿ ಪರಿಗಣಿಸಲು ಬಿಬಿಎಂಪಿ ಮತ್ತು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಮರಕ್ಕೆ ಬೈಕ್ ಡಿಕ್ಕಿ ಸವಾರ ಸಾವು

ಬೆಂಗಳೂರು: ನಿಯಂತ್ರಣ ತಪ್ಪಿ ಬೈಕ್ ಮರಕ್ಕೆ ಡಿಕ್ಕಿ ಹೊಡೆದು ಸವಾರ ಮೃತಪಟ್ಟಿರುವ ಘಟನೆ ಕೆಂಗೇರಿ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಪೋಷಕರನ್ನು ನೋಡಲು ವಿದೇಶದಿಂದ ನಗರಕ್ಕೆ ಬಂದಿದ್ದ ಆರ್.ಆರ್.ನಗರ ನಿವಾಸಿ ಪ್ರಖ್ಯಾತ್ (26) ಮೃತ ಯುವಕ. ಬುಧವಾರ ತಡರಾತ್ರಿ 1 ಗಂಟೆಗೆ ಆರ್.ಆರ್.ನಗರ ಮುಖ್ಯರಸ್ತೆಯಿಂದ ಜಯಣ್ಣ ಸರ್ಕಲ್ ಕಡೆ ಹೋಗುವಾಗ ಘಟನೆ ನಡೆದಿದೆ ಎಂದು ಸಂಚಾರ ವಿಭಾಗದ ಪೊಲೀಸರು ತಿಳಿಸಿದ್ದಾರೆ.

ಹಾಂಕಾಂಗ್‌ನ ವಿಮಾನಯಾನ ಸಂಸ್ಥೆಯಲ್ಲಿ ಪರಿಚಾರಕರಾಗಿದ್ದ ಪ್ರಖ್ಯಾತ್, ಆರ್.ಆರ್.ನಗರ ಗೇಟ್ ಬಳಿ ಸ್ನೇಹಿತರನ್ನು ಭೇಟಿ ಮಾಡಿ, ಬೈಕ್‌ನಲ್ಲಿ ವಾಪಸ್ ಮನೆಗೆ ಬರುವಾಗ ನಿಯಂತ್ರಣ ತಪ್ಪಿ ರಸ್ತೆ ಮಧ್ಯೆ ಇರುವ ಮರಕ್ಕೆ ಡಿಕ್ಕಿ ಹೊಡೆದಿದ್ದಾರೆ.

ವಿಚಾರ ಸಂಕಿರಣ

ಅಂತರಾಷ್ಟ್ರೀಯ ಮಹಿಳಾ ಉದ್ಯಮಶೀಲತೆ ದಿನಾಚರಣೆ ಅಂಗವಾಗಿ ನಗರದಲ್ಲಿ ಮಹಿಳಾ ಉದ್ಯಮಿಗಳ ಸಂಘಗಳ ಒಕ್ಕೂಟ (ಉಬುಂಟು) ಆಯೋಜಿಸಿದ್ದ ಅಂತರರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ 'ಉಬುಂಟು' ಸಂಸ್ಥಾಪಕ ಅಧ್ಯಕ್ಷೆ ಕೆ.ರತ್ನಪ್ರಭಾ(ಎಡದಿಂದ ನಾಲ್ಕನೆಯವರು), ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವ ಶರಣಬಸಪ್ಪ ದರ್ಶನಾಪುರ, ಚೆನ್ನೈನಲ್ಲಿ ಅಮೆರಿಕದ ಕಾನ್ಸಲೇಟ್‌ನ ಕಾರೆ ಅರುಣ್ ಭಾಗವಹಿಸಿದ್ದರು

ಬಂಧನ ಭೀತಿ: 15 ದಿನ ಕಾರಿನಲ್ಲಿ ಸುತ್ತಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆ ಮಾಲೀಕರು ತೀರ್ಥಯಾತ್ರೆಗೆ ತೆರಳಿದ್ದ ವೇಳೆ ಮನೆಯಲ್ಲಿದ್ದ ಚಿನ್ನಾಭರಣ, ಕಾರು ಕದ್ದೊಯ್ದಿದ್ದ ಇಬ್ಬರು ಆರೋಪಿಗಳು ಬಂಧನದ ಭೀತಿಯಿಂದ 15 ದಿನ ಕಾರಿನಲ್ಲಿ ಸಾವಿರಾರು ಕಿಲೋ ಮೀಟರ್ ಪ್ರಯಾಣ ಮಾಡಿದ್ದರು ಎಂಬುದು ವಿಚಾರಣೆ ವೇಳೆ ಗೊತ್ತಾಗಿದೆ.

ಕನಕಪುರ ರಸ್ತೆಯ ರಘುವನಹಳ್ಳಿಯ ದೀಪಕ್ ಹಾಗೂ ಪವನ್ ಎಂಬುವರನ್ನು ಬಂಧಿಸಿದ್ದ ವಿದ್ಯಾರಣ್ಯಪುರ ಠಾಣೆ ಪೊಲೀಸರು, ಚಿನ್ನಾಭರಣ, ಎರಡು ಕಾರು ಹಾಗೂ ಆರು ದ್ವಿಚಕ್ರ ವಾಹನಗಳು ಸೇರಿದಂತೆ ಒಟ್ಟು ₹41.36 ಲಕ್ಷ ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಿದ್ದರು.

ಅಪರಾಧ ಸುದ್ದಿ

'ಕಳ್ಳತನದ ಪ್ರಕರಣ ದಾಖಲಿಸಿಕೊಂಡು ಆರೋಪಿಗಳ ಹುಡುಕಾಟ ಆರಂಭಿಸಲಾಯಿತು. ಹೋಟೆಲ್ ಮತ್ತು ಲಾಡ್ಜ್‌ನಲ್ಲಿ ವಾಸ್ತವ್ಯ ಮಾಡಿದರೆ ಸಿಕ್ಕಿಬೀಳಬಹುದೆಂಬ ಕಾರಣಕ್ಕೆ ಇಬ್ಬರೂ ಹದಿನೈದು ದಿನ ಕಾರಿನಲ್ಲಿ ಸುತ್ತಾಡಿದ್ದಾರೆ. ಸುಮಾರು 12 ಸಾವಿರ ಕಿ.ಮೀ. ಪ್ರಯಾಣಿಸಿದ್ದರು' ಎಂದು ಪೊಲೀಸರು ತಿಳಿಸಿದರು.

'ಇಬ್ಬರೂ ಆರೋಪಿಗಳು ಏಳು ಮನೆಗಳ್ಳತನ ಪ್ರಕರಣ ಹಾಗೂ 13 ದ್ವಿಚಕ್ರ ವಾಹನ ಕಳ್ಳತನ ಪ್ರಕರಣಗಳಲ್ಲಿ ಭಾಗಿ ಆಗಿರುವುದು ತನಿಖೆ ವೇಳೆ ಗೊತ್ತಾಗಿದೆ. ನಗರದ ಬಡಾವಣೆಗಳಲ್ಲಿ ಸಂಜೆ ವೇಳೆ ತಿರುಗಾಡಿ, ಯಾವ ಮನೆಗಳಲ್ಲಿ ದೀಪ ಉರಿಯುತ್ತಿದೆ ಎಂಬುದರ ಬಗ್ಗೆ ಪರಿಶೀಲನೆ ನಡೆಸುತ್ತಿದ್ದರು. ಬಳಿಕ ಬೆಳಗಿನ ಜಾವ ನಾಲ್ಕು ಗಂಟೆಗೆ ಬಂದು, ದೀಪ ಉರಿಯುವ ಮನೆಗಳ ಬೀಗ ಮುರಿದು ನಗದು, ಚಿನ್ನಾಭರಣ ದೋಚುತ್ತಿದ್ದರು. ಕೃತ್ಯದಲ್ಲಿ ಮತ್ತೊಬ್ಬ ವ್ಯಕ್ತಿ ಭಾಗಿಯಾಗಿದ್ದು, ಆತ ತಲೆಮರೆಸಿಕೊಂಡಿದ್ದಾನೆ' ಎಂದು ಪೊಲೀಸರು ಹೇಳಿದರು.

ಬಿಎಂಟಿಸಿ ಚಾಲಕ, ನಿರ್ವಾಹಕನ ಮೇಲೆ ಹಲ್ಲೆ

ಬೆಂಗಳೂರು: ಬಿಎಂಟಿಸಿ ಸಿಬ್ಬಂದಿ ಮೇಲೆ ಕರ್ತವ್ಯದ ವೇಳೆ ಹಲ್ಲೆ ನಡೆಸುವ ಪ್ರಕರಣಗಳು ಮರುಕಳಿಸುತ್ತಿದ್ದು, ದ್ವಿಚಕ್ರ ವಾಹನಕ್ಕೆ ಮುಂದೆ ಹೋಗಲು ಜಾಗ ಬಿಡಲಿಲ್ಲ ಎಂಬ ಕಾರಣಕ್ಕೆ ಬಸ್ ಚಾಲಕ ಮತ್ತು ನಿರ್ವಾಹಕನ ಮೇಲೆ ಬುಧವಾರ ಸಂಜೆ ಹಲ್ಲೆ ನಡೆಸಲಾಗಿದೆ.

ಘಟನೆ ಸಂಬಂಧ ಚಾಲಕ ಕುಶಾಲ್ ಕುಮಾರ್ ಅವರ ದೂರು ಆಧರಿಸಿ, ಹಲ್ಲೆ ನಡೆಸಿದ ದ್ವಿಚಕ್ರ ವಾಹನ ಸವಾರ ಮೊಹಮ್ಮದ್ ಫೈಜಲ್ ಎಂಬುವರನ್ನು ಹಲಸೂರು ಗೇಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೂರು ತಿಂಗಳಲ್ಲಿ ಬಿಎಂಟಿಸಿ ಬಸ್ ಚಾಲಕರು ಹಾಗೂ ನಿರ್ವಾಹಕರ ಮೇಲೆ ಹಲ್ಲೆ ನಡೆಸಿದ ಒಂಬತ್ತು ಪ್ರಕರಣಗಳು ವರದಿಯಾಗಿವೆ. ನವೆಂಬರ್ ತಿಂಗಳಲ್ಲಿ ಮೂರನೇ ಬಾರಿಗೆ ಹಲ್ಲೆ ನಡೆಸಲಾಗಿದೆ.

ಘಟನೆ ವಿವರ: 'ಮೆಜೆಸ್ಟಿಕ್‌ನಿಂದ ಸಿ.ಕೆ. ಪಾಳ್ಯ ಕಡೆಗೆ ಹೊರಟಿದ್ದ ಬಸ್ ಅನ್ನು ಮ್ಯಾಜಿಸ್ಟ್ರೇಟ್ ಕೋರ್ಟ್ ಬಳಿ ಕೆ.ಆರ್. ಸರ್ಕಲ್‌ನಿಂದ ನೃಪತುಂಗ ರಸ್ತೆಯಲ್ಲಿ ಬರುತ್ತಿದ್ದ ದ್ವಿಚಕ್ರ ವಾಹನ ಸವಾರ ತಡೆದರು. ಮುಂದೆ ಹೋಗಲು ಜಾಗ ಬಿಡಲಿಲ್ಲ ಎಂಬ ಕಾರಣಕ್ಕೆ ನನ್ನನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದರು. ಸಾರ್ವಜನಿಕರ ಮುಂದೆ ನನ್ನನ್ನು ಎಳೆದಾಡಿ, ಕಿವಿ ಮತ್ತು ಭುಜದ ಮೇಲೆ ಹೊಡೆದು ಕರ್ತವ್ಯಕ್ಕೆ ಅಡ್ಡಿಪಡಿಸಿ, ಪ್ರಾಣ ಬೆದರಿಕೆ ಹಾಕಿದರು. ಇದನ್ನು ಪ್ರಶ್ನಿಸಿದ ನಿರ್ವಾಹಕ ಕೃಷ್ಣ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ಹಲ್ಲೆಗೆ ಯತ್ನಿಸಿದರು' ಎಂದು ಚಾಲಕ ಕುಶಾಲ್ ಕುಮಾರ್ ಅವರು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದರು

'ಸ್ಥಳದಲ್ಲಿದ್ದ ಕಾರಿನ ಚಾಲಕರೊಬ್ಬರು ಇದಕ್ಕೆ ಕುಮ್ಮಕ್ಕು ನೀಡಿದ್ದರು. ಹಲ್ಲೆ ನಡೆಸಿದ ವ್ಯಕ್ತಿಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಮನವಿ ಮಾಡಿದ್ದರು.

'ಚಾಲಕನ ಮೇಲೆ ಹಲ್ಲೆ ನಡೆಸಿದ ಹಣ್ಣಿನ ವ್ಯಾಪಾರಿ ಮೊಹಮ್ಮದ್ ಫೈಜಲ್ ಅವರನ್ನು ಬಂಧಿಸಲಾಗಿದೆ. ಹಲ್ಲೆ ನಡೆಸಿದ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಬಿಎಂಟಿಸಿ ಚಾಲಕರು ಮತ್ತು ನಿರ್ವಾಹಕರ ಮೇಲೆ ಪದೇ ಪದೇ ಹಲ್ಲೆ ನಡೆಯುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿದ್ದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು, ಆರೋಪಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸುವಂತೆ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರಿಗೆ ಪತ್ರ ಬರೆದಿದ್ದರು. ಮುಂದಿನ ದಿನಗಳಲ್ಲಿ ಈ ರೀತಿಯ ಪ್ರಕರಣಗಳು ನಡೆಯದಂತೆ ನಗರ ಎಲ್ಲಾ ಠಾಣೆಗಳ ಅಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ಸೂಚಿಸಿದ್ದರು.

ವಂಚನೆ: ಎಚ್ಚರ ವಹಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಸಂಚಾರ ವಿಭಾಗದ ಪೊಲೀಸರ ಹೆಸರಿನಲ್ಲಿ ಸಾರ್ವಜನಿಕರಿಗೆ ಕರೆ ಮಾಡಿ ದಂಡ ಪಾವತಿ, ನಕಲಿ ವಿಮೆ, ವಾಹನ ಅಪಘಾತ ನಡೆಸಿ ಪರಾರಿಯಾದ ಆರೋಪ ಮತ್ತಿತರ ಕಾರಣಗಳನ್ನು ನೀಡಿ ಹಣ ವಂಚನೆಗೆ ಯತ್ನಿಸುತ್ತಿರುವ ಪ್ರಕರಣಗಳು ವರದಿಯಾಗುತ್ತಿದ್ದು, ನಕಲಿ ಕರೆಗಳ ಕುರಿತು ಸಾರ್ವಜನಿಕರು ಎಚ್ಚರ ವಹಿಸಬೇಕು ಎಂದು ಪೊಲೀಸರು ತಿಳಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಪೊಲೀಸರು, 'ಪೊಲೀಸರ ಹೆಸರಿನಲ್ಲಿ ಸಾರ್ವಜನಿಕರಿಗೆ ಕರೆ ಮಾಡುತ್ತಿರುವ ವಂಚಕರು, ದಂಡ ಪಾವತಿಸುವಂತೆ ಕೋರಿ ಲಿಂಕ್ ಕಳಿಸಿ ಹಣ ಪಾವತಿಗೆ ಒತ್ತಾಯಿಸುವುದು, ನಕಲಿ ವಿಮೆ ಮತ್ತು ನೋಂದಣಿ ಸೇವೆ ನೀಡುವುದಾಗಿ ಹಣ ಪಡೆದು ವಂಚಿಸುತ್ತಿದ್ದಾರೆ. ಅಲ್ಲದೇ, ನಿಮ್ಮ ವಾಹನ ಹಿಟ್ ಆ್ಯಂಡ್ ರನ್ ಆಗಿರುವುದಾಗಿ ಬೆದರಿಸಿ ವಂಚನೆಗೆ ಯತ್ನಿಸುತ್ತಿರುವ ಪ್ರಕರಣಗಳು ವರದಿಯಾಗುತ್ತಿವೆ. ಹಾಗಾಗಿ ನಕಲಿ ಕರೆ ಮತ್ತು ಸಂದೇಶಗಳಿಗೆ ಪ್ರತಿಕ್ರಿಯಸಬಾರದು' ಎಂದು ಸಲಹೆ ನೀಡಿದ್ದಾರೆ.

ಅನುಮಾನಾಸ್ಪದ ಕರೆಗಳು ಅಥವಾ ಸಂದೇಶಗಳನ್ನು ಸ್ವೀಕರಿಸಿದರೆ, ತಕ್ಷಣ ಇ-ಮೇಲ್ acpplanningoffice@gmail.com ಗೆ ವರದಿ ಮಾಡುವಂತೆ ತಿಳಿಸಿದ್ದಾರೆ.

ಸೂಚನೆಗಳು ಏನು...

- ಅನುಮಾನಾಸ್ಪದ ಲಿಂಕ್‌ಗಳ ಮೇಲೆ ಕ್ಲಿಕ್ ಮಾಡಬೇಡಿ ಅಥವಾ ಲಗತ್ತುಗಳನ್ನು ಡೌನ್‌ಲೋಡ್ ಮಾಡಬೇಡಿ.
- ವೈಯಕ್ತಿಕ ಮಾಹಿತಿಯನ್ನು ಒದಗಿಸಬೇಡಿ ಅಥವಾ ಹಣ ಪಾವತಿ ಮಾಡದಿರಿ.
- ಪೊಲೀಸ್ ಇಲಾಖೆಯನ್ನು ನೇರವಾಗಿ ಸಂಪರ್ಕಿಸುವ ಮೂಲಕ ಕರೆಗಳು ಅಥವಾ ಸಂದೇಶಗಳ ವಿಶ್ವಾಸಾರ್ಹತೆಯನ್ನು ದೃಢಪಡಿಸಿಕೊಳ್ಳಿ.
- ಸಂಚಾರ ವಿಭಾಗದ ಪೊಲೀಸ್ ಇಲಾಖೆಯ ಅಧಿಕೃತ ವೆಬ್‌ಸೈಟ್ ಅಥವಾ ಸಹಾಯವಾಣಿ ಸಂಖ್ಯೆಗೆ (080-22868550 /22868444) ದೂರು ದಾಖಲಿಸಿ.
- ಮಾಹಿತಿ ಒದಗಿಸುವ ಮೊದಲು ಅಧಿಕಾರಿಗಳ ಗುರುತುಗಳನ್ನು ಪರಿಶೀಲಿಸಿ.
- ದಂಡ ಅಥವಾ ಸೇವೆ, ದಂಡ ಪಾವತಿಗಾಗಿ ಅಧಿಕೃತ ವೆಬ್‌ಸೈಟ್‌ಗಳನ್ನು ಬಳಸಿ.
- ಸಾಫ್ಟ್‌ವೇರ್ ಮತ್ತು ಆಪರೇಟಿಂಗ್ ಸಿಸ್ಟಮ್‌ಗಳನ್ನು ನವೀಕೃತವಾಗಿರಿಸಿಕೊಳ್ಳಿ.
- ಅನುಮಾನಾಸ್ಪದ ಚಟುವಟಿಕೆಗಳನ್ನು ಪೊಲೀಸರಿಗೆ ವರದಿ ಮಾಡುವ ಮೂಲಕ ಸುರಕ್ಷಿತ ಹಾಗೂ ಜಾಗರೂಕರಾಗಿರಿ ಎಂದು ಪೊಲೀಸರು ಸಾರ್ವಜನಿಕರಿಗೆ ಸೂಚಿಸಿದ್ದಾರೆ.

ಡ್ರಗ್ಸ್ ಪೆಡ್ಲರ್‌ಗಳ ಸೆರೆ

ಬೆಂಗಳೂರು: ಸಿಸಿಬಿಯ ಮಾದಕ ದ್ರವ್ಯ ನಿಗ್ರಹ ದಳದ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ, ನೈಜೀರಿಯಾದ ಇಬ್ಬರು ಡ್ರಗ್ಸ್ ಪೆಡ್ಲರ್‌ಗಳನ್ನು ಬಂಧಿಸಿದ್ದಾರೆ.

ಡೇವಿಡ್ (36) ಮತ್ತು ಕೋಫಿ (34) ಎಂಬುವವರಿಂದ ಕೋಟ್ಯಂತರ ರೂಪಾಯಿ ಮೌಲ್ಯದ ಮಾದಕವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಶೈಕ್ಷಣಿಕ ವೀಸಾ ಅಡಿಯಲ್ಲಿ ನಗರಕ್ಕೆ ಬಂದಿದ್ದ ಈ ಇಬ್ಬರು ಸೋಲದೇವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಚಂದ್ರು ಎಂಬುವರ ಮನೆಯಲ್ಲಿ ಬಾಡಿಗೆಗೆ ವಾಸವಿದ್ದರು. ಕಾಲೇಜು ವಿದ್ಯಾರ್ಥಿಗಳು ಮತ್ತು ನಾಗರಿಕರಿಗೆ ಮಾರಾಟ ಮಾಡುವ ಸಲುವಾಗಿ ಇವರ ಬಾಡಿಗೆ ಮನೆಯಲ್ಲಿ ಪೆಟ್ಟಿಗೆಯಲ್ಲಿ ಇರಿಸಿದ್ದ ಎಂಡಿಎಂಎ ಮಾತ್ರೆ, ಕೋಕೇನ್ ಅನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ತಮಿಳುನಾಡಿನ ರೌಡಿಶೀಟರ್ ಹತ್ಯೆ

ಆನೇಕಲ್: ಕರ್ನಾಟಕ-ತಮಿಳುನಾಡು ಗಡಿಯಲ್ಲಿರುವ ತಾಲ್ಲೂಕಿನ ಬಳ್ಳೂರು ಸಮೀಪ ತಮಿಳುನಾಡಿನ ರೌಡಿಶೀಟರ್‌ನನ್ನು ಹತ್ಯೆ ಮಾಡಲಾಗಿದೆ.

ತಮಿಳುನಾಡಿನ ಮಧುರೆ ಮೂಲದ ಅಳಗರಾಜ್(31) ಕೊಲೆಯಾದವರು. ಅಳಗರಾಜ್ ರೌಡಿಸಂ ಬಿಟ್ಟು ಹೊಸೂರಿನಲ್ಲಿ ವಾಸವಿದ್ದು, ದ್ವಿಚಕ್ರ ವಾಹನದಲ್ಲಿ ಹೊಸೂರು ಸುತ್ತಮುತ್ತ ತುಪ್ಪದ ವ್ಯಾಪಾರ ಮಾಡುತ್ತಿದ್ದರು. ಬುಧವಾರ ರಾತ್ರಿ ಕೆಲಸ ಮುಗಿಸಿ ಬಳ್ಳೂರು ಸಮೀಪದ ಬಾರ್‌ವೊಂದರಲ್ಲಿ ಮದ್ಯ ಖರೀದಿಸಲು ಬಂದಾಗ ಹತ್ಯೆ ಮಾಡಿದ್ದಾರೆ. ಅಳಗರಾಜ್ ವಿರುದ್ಧ ತಮಿಳುನಾಡಿನ ತಿರುಪಾಚಿ ಪೊಲೀಸ್ ಠಾಣೆಯಲ್ಲಿ ವಿವಿಧ ಪ್ರಕರಣಗಳಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business Offers — Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

MSME LOANS:WE arrange msme business loans against your existing or new businesses also.Contact: 7204995189

RENTAL PROPERTIES

Accommodation Available — Commercial

RENT OFFICE space Brand new Available Godown, Garments, 3'floors total 8200sqft, Gokul (Mathikere). Rs.60 psqft. 9380586105.

REAL ESTATE BUYING

Sites — Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT. CONTACT: 9845062822, 8660751654

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

JOB OPPORTUNITIES

Factory

FACTORY WORKERS Needed Male Age Below 30 Eligibility: 10th Pass or PUC Pass Location: Rajajinagar Perks: Good Salary, Training Provided Contact: 9108458798/ 9845579620

General

ASSOCIATE OF BANK Requires TELECALLER, FIELD EXECUTIVE For Collection Process Salary 20K, Incentives. Contact: 6364581703

Marketing & Sales

WANTED EXPERIENCE_SALES REPRESENTATIVE leading coffee_powder manufacturing company_apply Biodata_Email mbeverage36@gmail. com_whatsapp 9945469899 7338678555

PERSONAL

Change of Name

I, PRATHAP L, have changed my name to PRATHAP LLOYD L., Vide Affidavit dated 20.11.2024 sworn before advocate and notary Ambujakshi, Bangalore

AFFIDAVIT: I, Mrs. TRIVENDRA KHATRI R/o. Hubli do hereby solemnly affirm that in my Aadhar Card (No. 3699 6857 5768) and Pan Card (No. AFDPK6431R) my name is mentioned as TRIVENDRA KHATRI and in my demat account bearing DP ID IN300888 Client ID 13791287 my name is mentioned as TRIVENDRA KUMAR. Above mentioned both names are one and the same and belong to me only. Sworn before notary.

CHANGE OF NAME
I, Neena Raina, residing at No. 49, 4th Cross, 5th Main, SG Palya, Behind G.T.R.E. CV Raman Nagar, Bengaluru-560093, have changed my daughters name from Aiyra Jane Mendens to Aiyra Raina, vide affidavit dated 21/11/2024 before Notary A.S Narayana Reddy, Bengaluru. Henceforth she shall be called as Aiyra Raina only

I SHARANYA PATIKE MANJUNATHA, R/o. 36/1 shakti kuteera 4th cross Lakshminarayanapura., AECS layout, Kundalahalli Bangalore-37, have changed my name to SHARANYA PATAKE MANJUNATH affidavit dated 20/11/2024, notary Varija C.J. Bangalore. Henceforth I shall be called SHARANYA PATAKE MANJUNATH only.

I, BHAGYALAKSHMI.L W/o.R.Krishna Murthy Reddy R/a#6 1st Main 1st`Cross Huchappa Layout, S.V.G.Nagar Moodalapalya Bangalore 560072 have changed my Name to BHAGYA REDDY vide`affidavit dated:14.11.2024 sworn before`Notary H.S.Sakalesh Aradhya Bangalore

I, SAI RAKSHA B. R/a.#251, 2nd floor, 9th cross road, DwarakaNagar, Channasandra, Rajarajeshwarinagar, Bangalore- 560098 Have Changed My Mother's Name From ARUNA to ARUNA M C Vide Affidavit Dated 20/11/2024 before Notary Mohammed Hussain.K Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

I, SHADAF, have changed my name to SADAF, Vide Affidavit dated 21.11.2024 sworn before advocate and notary Ambujakshi, Bangalore

PUBLIC NOTICE

PUBLIC NOTICE
This is to inform the general Public that my client is intended to Purchase this property from the Present owner **SRI. M. RAMESH** S/o late Muniswamy and SMT.MANJULA.R W/o Sri. M. Ramesh Any person having any right, claim, title, interest or possession over the property may file their objection/s to the under signed with valid documentary proof within **SEVEN days** from today and if no valid objection/s are received in respect of property, my client will proceed to purchase the above said property with assumption that, there are no objections or claim or title or interest or possession whatsoever nature from any person/s for purchasing the property from client.
SCHEDULE OF THE PROPERTY
All that piece and parcel of the house property bearing Municipal No.48, PID No.100-243-48, old Site No.48, formed in the land bearing Sy.No.1/1 of Chikkamaranahalli Village, measuring East West 30 feet and North South 35 feet, totally measuring 1050 square feet, Consisting of 8 square RCC roofed building, Situated at 5th Cross, Chikkamaranahalli, Bangalore BBMP Ward No.100 of Sanjayanagar and bounded on the: **East by:** Private Property, **West by:** Property belongs to Shivanna, **North by:** Road, **South by:** Property belongs to Basavaraju.
N. Shiva Murthy, Advocate
No.199, 3-B Complex, Shop No.6, 13th Cross, 2nd Stage WOC Road, Mahalakshmipuram Bangalore - 560 086.
Ph: 9844358516 / 9606195903
Bangalore, Date: 22-11-2024

KARNATAKA REDDYJANA SANGHA
No.1, Mahayogi Vemana Road, 3rd Block, Koramangala, Bangalore - 34
TENDER NOTICE
Quotations are invited for following works:
a) Supply of Furniture to Nurse Hostel Building at Marasuru.
b) Construction of sewage treatment plant to Hospital Building at Marasuru.
Sealed quotations to be submitted within 7 days of this publication.
For more details visit: www.reddyjanasangha.org
Contact: 080-25534194 98454 50345
General Secretary

DH Classifieds More value, more impact — ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS *Conditions apply
www.dhclassifieds.com BOOK NOW
Book your ad with us now! For more details contact:
+91 9845114560 | +91 9901641752 | 080-45557163/164

ಬಿಬಿಎಂಪಿಯ ಮರಗಣತಿ ಮಾಹಿತಿ ಪರೀಕ್ಷಾರ್ಥವಾಗಿ ನಾಗರಿಕರಿಗೆ ಲಭ್ಯ

ಮನೆ ಬಳಿಯ ಮರದ ಮಾಹಿತಿ ತಿಳಿಯಿರಿ

● ಆರ್. ಮಂಜುನಾಥ್

ಬೆಂಗಳೂರು: ನಗರದಲ್ಲಿರುವ ಮರದ ವಯಸ್ಸು, ಅದರ ಜಾತಿ, ಹೆಸರು– ಜೈವಿಕ ಹೆಸರು, ಅದರ ಸುತ್ತಳತೆ ಸೇರಿದಂತೆ ಮರದ ಮಾಹಿತಿಗಳನ್ನು ನಾಗರಿಕರು ಅರಿತುಕೊಳ್ಳಬಹುದು. ಅಷ್ಟೇ ಅಲ್ಲ, ಅದರಲ್ಲಿ ತಪ್ಪಿದ್ದರೆ, ಸರಿಪಡಿಸಲು ಬಿಬಿಎಂಪಿಗೆ ಸಲಹೆಯನ್ನೂ ನೀಡಬಹುದು.

ನಗರದಲ್ಲಿ ಪ್ರಥಮ ಬಾರಿಗೆ ಬಿಬಿಎಂಪಿ ಮರಗಳ ಗಣತಿ ನಡೆಸುತ್ತಿದ್ದು, ಮರ–ಗಿಡಗಳ ಚಿತ್ರ, ಪ್ರಭೇದ ಸಹಿತ ಸಮಗ್ರ ಮಾಹಿತಿ ಆ್ಯಪ್‌ನಲ್ಲಿ ದಾಖಲಿಸುತ್ತಿದೆ. ಇದೀಗ ಸುಮಾರು 3.25 ಲಕ್ಷ ಗಿಡ–ಮರಗಳ ಮಾಹಿತಿಯನ್ನು ಅಪ್‌ಲೋಡ್ ಮಾಡಲಾಗಿದೆ. ಪ್ರತಿ ದಿನವೂ ಸುಮಾರು 20 ಸಾವಿರ ಗಿಡ–ಮರಗಳ ಮಾಹಿತಿ ಸೇರ್ಪಡೆಯಾಗುತ್ತಿದೆ.

ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ (ಕೆಎಸ್‌ಆರ್‌ಎಸ್‌ಎಸಿ) ಸಿದ್ಧಪಡಿಸಿರುವ ಮೊಬೈಲ್ ಆ್ಯಪ್‌ನಲ್ಲಿ ಮರಗಣತಿ ಕಾರ್ಯ ನಡೆಯುತ್ತಿದೆ. ಈವರೆಗಿನ ಗಿಡ–ಮರಗಳ ಮಾಹಿತಿಯನ್ನು https://kgis.ksrsac.in/test/ನಲ್ಲಿ ನಾಗರಿಕರು ಪರೀಕ್ಷಿಸಿಕೊಳ್ಳಲು ಬಿಬಿಎಂಪಿ ಅನುವು ಮಾಡಿಕೊಟ್ಟಿದೆ.

ಮರದ ಚಿತ್ರದೊಂದಿಗೆ ಅದರ ಮಾಹಿತಿಯನ್ನು ವಾರ್ಡ್‌ವಾರು ಪಡೆಯಬಹುದು. ವಿಸ್ತಾರವಾದ ನಕ್ಷೆಯಲ್ಲಿ ವಾರ್ಡ್ ಆಯ್ಕೆ ಮಾಡಿಕೊಂಡು, ಅಡ್ಡ ಅಥವಾ ಮುಖ್ಯ ರಸ್ತೆಯಲ್ಲಿ ಗುರುತಿಸಲಾಗಿರುವ ಮರದ ಚಿತ್ರದ ಮೇಲೆ ಕ್ಲಿಕ್ ಮಾಡಿದರೆ ಅದರ ಮಾಹಿತಿ ಲಭ್ಯವಾಗುತ್ತದೆ. ಪ್ರತಿಯೊಂದು ಮರಕ್ಕೂ ವಾರ್ಡ್ ಹೆಸರು ಹಾಗೂ ಸಂಖ್ಯೆಗಳನ್ನು ನೀಡಲಾಗಿದೆ.

ಬಿಬಿಎಂಪಿ ನಡೆಸುತ್ತಿರುವ ಮರ ಗಣತಿಯ ನಕ್ಷೆ

ಎಂಟು ವಿಭಾಗ: 'ನಗರದ ಭೌಗೋಳಿಕ ವಿಸ್ತೀರ್ಣ 840 ಚದರ ಕಿಲೋಮೀಟರ್ ಇದೆ. ತಲಾ 100 ಚದರ ಕಿಲೋಮೀಟರ್‌ನ ಎಂಟು ವಿಭಾಗ ಮಾಡಿಕೊಳ್ಳಲಾಗಿದೆ. ಈ ವಿಭಾಗಗಳನ್ನು ಘಟಕ ಎಂದು ಪರಿಗಣಿಸಿ, ಎಂಟು ಗುತ್ತಿಗೆದಾರರನ್ನು ನೇಮಿಸಲಾಗಿದೆ. ಅವರು, ಕೆಎಸ್‌ಆರ್‌ಎಸ್‌ಎಸಿ ಆ್ಯಪ್‌ನಲ್ಲಿ ಮಾಹಿತಿ ನಮೂದಿಸುತ್ತಿದ್ದಾರೆ. ಪ್ರತಿ ದಿನದ ಅಂತ್ಯದಲ್ಲಿ ಎಲ್ಲ ವಿಭಾಗಗಳ ಮಾಹಿತಿ ಅಪ್‌ಲೋಡ್ ಮಾಡಲಾಗುತ್ತಿದೆ' ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಬಿ.ಎಲ್.ಜಿ ಸ್ವಾಮಿ ತಿಳಿಸಿದರು.

ಮರ ಗಣತಿಯ ಆ್ಯಪ್‌ನಲ್ಲಿರುವ ಮರದ ಮಾಹಿತಿಯ ಮಾದರಿ

ನಿಧಾನಗತಿ: 'ಯಲಹಂಕ ಹಾಗೂ ದಾಸರಹಳ್ಳಿ ವಲಯದಲ್ಲಿ ಮರ ಗಣತಿಗೆ ಗುತ್ತಿಗೆ ಪಡೆದಿರುವ ರಾಸ್ತಾ ಸಂಸ್ಥೆ, ಕಾರ್ಯವನ್ನು ವಿಳಂಬ ಮಾಡುತ್ತಿದೆ. ಅವರಿಗೆ ಗುತ್ತಿಗೆ ರದ್ದು ಮಾಡುವ ನೋಟಿಸ್ ಜಾರಿ ಮಾಡಲಾಗಿದ್ದು, ಕೂಡಲೇ ಕ್ಷಿಪ್ರವಾಗಿ ಕಾರ್ಯ ನಿರ್ವಹಿಸದಿದ್ದರೆ ಗುತ್ತಿಗೆ ರದ್ದು ಮಾಡಲಾಗುತ್ತದೆ. ಈ ಬಗ್ಗೆ ಮುಖ್ಯ ಆಯುಕ್ತರಿಗೂ ಮಾಹಿತಿ ನೀಡಲಾಗಿದ್ದು, ಅವರು ಅಂತಿಮ ನಿರ್ಧಾರ ತೆಗೆದುಕೊಳ್ಳಲಿದ್ದಾರೆ' ಎಂದು ಸ್ವಾಮಿ ಹೇಳಿದರು.

'ರಾಜರಾಜೇಶ್ವರಿನಗರ, ಪಶ್ಚಿಮ, ಪೂರ್ವ, ದಕ್ಷಿಣ ವಲಯಗಳಲ್ಲೂ ರಾಸ್ತಾ ಸಂಸ್ಥೆಯೇ ಮರ ಗಣತಿಯ ಗುತ್ತಿಗೆ ಪಡೆದಿದೆ. ಅಲ್ಲಿ ಕೆಲಸ ವೇಗವಾಗಿ ನಡೆಯುತ್ತಿದೆ. ಆದರೆ ಎರಡು ವಲಯದಲ್ಲಿ ಅವರು ನಿಧಾನವಾಗಿದ್ದಾರೆ. ಬೊಮ್ಮನಹಳ್ಳಿ ಹಾಗೂ ಮಹದೇವಪುರ ವಲಯದಲ್ಲಿ ಜೀವನ್ ಸಂಸ್ಥೆಯವರು ಗುತ್ತಿಗೆ ಪಡೆದು, ಕಾರ್ಯನಿರ್ವಹಿಸುತ್ತಿದ್ದಾರೆ' ಎಂದು ಮಾಹಿತಿ ನೀಡಿದರು.

'ಮರ ಗಣತಿ ಸಮೀಕ್ಷೆ ಕಾರ್ಯ ಅತಿವೇಗದಲ್ಲಿ ನಡೆಯುತ್ತಿದ್ದು ದಿನಕ್ಕೆ 25 ಸಾವಿರದಿಂದ 30 ಸಾವಿರ ಮರಗಳ ಮಾಹಿತಿ ಅಪ್‌ಲೋಡ್ ಆಗುತ್ತಿದೆ. ಇನ್ನೆರೆಡು ಅಥವಾ ಮೂರು ತಿಂಗಳಲ್ಲಿ ಗಣತಿ ಪೂರ್ಣಗೊಳ್ಳಲಿದೆ' ಎಂದರು.

'ಕನ್ನಡದಲ್ಲೂ ಲಭ್ಯ'

'ಮರ ಗಣತಿಯಲ್ಲಿ ಮರಗಳ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ಪರೀಕ್ಷಾರ್ಥವಾಗಿ ಪ್ರಕಟಿಸಲಾಗಿದೆ. ನಾಗರಿಕರು ತಮ್ಮ ವ್ಯಾಪ್ತಿಯಲ್ಲಿರುವ ಮರಗಳ ಮಾಹಿತಿಯನ್ನು ವೀಕ್ಷಿಸಬಹುದು. ಯಾವುದಾದರೂ ಮಾಹಿತಿ ತಪ್ಪಿದ್ದರೆ ಅದರ ಬಗ್ಗೆ ಪ್ರತಿಕ್ರಿಯಿಸಬಹುದು' ಎಂದು ಬಿಬಿಎಂಪಿ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಸ್ವಾಮಿ ತಿಳಿಸಿದರು.

'ವೆಬ್‌ಸೈಟ್ ಪ್ರಾಯೋಗಿಕ ಹಂತದಲ್ಲಿದ್ದು ಯಾವುದೇ ಬದಲಾವಣೆಯನ್ನು ಮಾಡಿಕೊಳ್ಳಬಹುದಾಗಿದೆ. ಅದ್ದರಿಂದ ನಾಗರಿಕರು ಸಲಹೆಗಳನ್ನು ಕಳುಹಿಸಬಹುದು. ಇದೀಗ ಇಂಗ್ಲಿಷ್‌ನಲ್ಲಿ ಮಾತ್ರ ಮಾಹಿತಿ ಲಭ್ಯವಿದೆ. ಅಂತಿಮವಾಗಿ ವೆಬ್‌ಸೈಟ್ ಅಧಿಕೃತವಾಗಿ ಅನಾವರಣವಾಗುವ ಸಂದರ್ಭದಲ್ಲಿ ಕನ್ನಡದಲ್ಲೂ ಮಾಹಿತಿ ಸಿಗಲಿದೆ' ಎಂದು ಹೇಳಿದರು.

ಬಿಬಿಎಂಪಿ ರಸ್ತೆ ನಿರ್ವಹಣೆ 'ಎಸ್‌ಒಪಿ' ರೂಪಿಸಲು ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ರಸ್ತೆಗಳ ನಿರ್ಮಾಣ, ಮೇಲ್ದರ್ಜೆ ಕಾರ್ಯ ಮತ್ತು ನಿರ್ವಹಣೆಗಾಗಿ 'ಸಮಗ್ರ ನಿರ್ಧಾರಿತ ಕಾರ್ಯಾಚರಣೆ ವಿಧಾನ (ಎಸ್‌ಒಪಿ)' ಸಿದ್ಧಪಡಿಸಲು ಪ್ರಧಾನ ಎಂಜಿನಿಯರ್ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿ ರಚಿಸಲಾಗಿದೆ.

ಪಾಲಿಕೆ ವ್ಯಾಪ್ತಿಯಲ್ಲಿ ಹೈಡೆನ್ಸಿಟಿ ಕಾರಿಡಾರ್, ಮುಖ್ಯ ಮತ್ತು ಉಪ ಮುಖ್ಯರಸ್ತೆ, ವಲಯ ಮಟ್ಟದ ರಸ್ತೆಗಳು ಸೇರಿದಂತೆ ಸುಮಾರು 12,878.78 ಕಿ.ಮೀ ಉದ್ದದ ರಸ್ತೆ ಜಾಲವಿದೆ. ಪ್ರತಿ ರಸ್ತೆಯನ್ನು ವೈಜ್ಞಾನಿಕವಾಗಿ ಮತ್ತು ತಾಂತ್ರಿಕವಾಗಿ ಸದೃಢ ಮತ್ತು ದೀರ್ಘ ಬಾಳಿಕೆ ಬರುವಂತೆ ವಿನ್ಯಾಸಗೊಳಿಸುವುದು, ನಿರ್ಮಾಣ ಮಾಡುವುದು ಮತ್ತು ನಿರ್ವಹಣೆ ಮಾಡುವುದು ಪ್ರಸ್ತುತ ಅತ್ಯಗತ್ಯವಾಗಿರುತ್ತದೆ ಎಂದು ಬಿಬಿಎಂಪಿ ಹೇಳಿದೆ.

ಉಪ ಮುಖ್ಯಮಂತ್ರಿಯವರ ನೇತೃತದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ, ವೈಜ್ಞಾನಿಕ ಮತ್ತು ತಾಂತ್ರಿಕವಾಗಿ ವಾಹನಗಳ ಸಾಂದ್ರತೆಯ ಅನುಗುಣವಾಗಿ ನಗರದ ವಿವಿಧ ರಸ್ತೆಗಳನ್ನು ಒಂದೇ ಮಾದರಿಯಲ್ಲಿ ಅಭಿವೃದ್ಧಿಪಡಿಸಬೇಕೆಂದು ಸೂಚನೆ ನೀಡಲಾಗಿದೆ. ಅದರಂತೆ ತಜ್ಞರ ಸಮಿತಿ ರಚಿಸಲಾಗಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಆದೇಶದಲ್ಲಿ ತಿಳಿಸಿದ್ದಾರೆ.

ರಸ್ತೆಯ ವಿನ್ಯಾಸ, ನಿರ್ಮಾಣ/ನಿರ್ವಹಣಾ ವೆಚ್ಚ, ವಾಹನ ಸಾಂದ್ರತೆಯ ಅನುಗುಣವಾಗಿ ಮರು ಡಾಂಬರೀಕರಣ ಪುನರಾವರ್ತನ ಅವಧಿ, ರಸ್ತೆ ಚರಂಡಿ ವ್ಯವಸ್ಥೆ ಮತ್ತು ವಿನ್ಯಾಸ, ರಸ್ತೆ ಉಬ್ಬು ನಿರ್ಮಾಣ ಮತ್ತು ಥರ್ಮೋಪ್ಲಾಸ್ಟಿಕ್ ಬಣ್ಣ ಬಳಿಯುವಿಕೆ ಮತ್ತಿತರ ಅಂಶಗಳಿಗೆ ಸಂಬಂಧಿಸಿದ ವರದಿಯನ್ನು ಡಿಸೆಂಬರ್ 15ರೊಳಗೆ ಸಮಿತಿ ನೀಡಬೇಕಿದೆ.

ಸಮಿತಿ ವಿವರ: ಅಧ್ಯಕ್ಷ: ಪ್ರಧಾನ ಎಂಜಿನಿಯರ್, ಬಿಬಿಎಂಪಿ. ಸದಸ್ಯರು: ಮುಖ್ಯ ಎಂಜಿನಿಯರ್ (ಯೋಜನೆ-ಕೇಂದ್ರ), ಮುಖ್ಯ ಪ್ರಧಾನ ನಿರ್ವಾಹಕ, ಜಲಮಂಡಳಿ, ಅಧೀಕ್ಷಕ ಎಂಜಿನಿಯರ್ (ವಿದ್ಯುತ್), ಪ್ರೊ. ಆಶಿಷ್ ವರ್ಮ, ಪ್ರಾಚಾರ್ಯ, ಐಐಎಸ್‌ಸಿ, ಪ್ರೊ. ವಿ.ಶ್ರೀನಿವಾಸ್, ಪ್ರಾಚಾರ್ಯ, ಐಐಎಸ್‌ಸಿ, ಪ್ರೊ. ಅಂಜ್ಞನ್, ಐಐಎಸ್‌ಸಿ, ಸತ್ಯವತಿ, ಐಐಎಸ್‌ಸಿ, ಶ್ರೀನಿವಾಸ್ ಅರವಳ್ಳಿ, ಡಬ್ಲ್ಯುಆರ್‌ಐ (ಇಂಡಿಯಾ). ಚೇತನ್, ಡಬ್ಲ್ಯುಆರ್‌ಐ(ಇಂಡಿಯಾ). ಸದಸ್ಯ ಕಾರ್ಯದರ್ಶಿ: ಉಪ ಮುಖ್ಯ ಎಂಜಿನಿಯರ್ (ರಸ್ತೆ ಮೂಲಸೌಕರ್ಯ).

'ಐದು ಖಾತರಿ ಯೋಜನೆಗಳನ್ನು ಸ್ಥಗಿತಗೊಳಿಸುವ ಪ್ರಸ್ತಾವನೆ ಇಲ್ಲ'

ಶಾಸಕರಿಗೆ ವಿಶೇಷ ಅನುದಾನ: ಸಿ.ಎಂ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಹಣದ ಕೊರತೆ ಇಲ್ಲ ಎಂದು ಸ್ಪಷ್ಟಪಡಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, 'ವಿಶೇಷ ಅನುದಾನ ಮಂಜೂರು ಮಾಡಬೇಕೆಂಬ ಶಾಸಕರ ಬೇಡಿಕೆ ಕುರಿತು ಪರಿಶೀಲಿಸಲಾಗುವುದು' ಎಂದು ಭರವಸೆ ನೀಡಿದರು.

ಗುರುವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ವಿಶೇಷ ಅನುದಾನ ಮಂಜೂರು ಮಾಡುವಂತೆ ಶಾಸಕರು ಒತ್ತಾಯಿಸುತ್ತಿದ್ದಾರೆ. ಕೆಲವು ಕ್ಷೇತ್ರಗಳಿಗೆ ವಿಶೇಷ ಅನುದಾನ ಬಿಡುಗಡೆ ಮಾಡಲಾಗಿದೆ. ಉಳಿದ ಕ್ಷೇತ್ರಗಳಿಗೂ ಶೀಘ್ರದಲ್ಲಿಯೇ ಅನುದಾನ ನೀಡಲಾಗುವುದು' ಎಂದರು.

ಐದು ಖಾತರಿ ಯೋಜನೆಗಳನ್ನು ಪರಿಷ್ಕರಣೆ ಮಾಡುವ ಅಥವಾ ಸ್ಥಗಿತಗೊಳಿಸುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ ಎಂದು ಅವರು ಪುನರುಚ್ಚರಿಸಿದರು.

ನಬಾರ್ಡ್ ನೀಡುವ ಸಾಲದ ಮೊತ್ತದಲ್ಲಿ ಅರ್ಧದಷ್ಟು ಕಡಿತಗೊಳಿಸಿರುವುದರಿಂದ ನಾವು ವಾಣಿಜ್ಯ ಬ್ಯಾಂಕುಗಳಿಗೆ ಹೋಗಬೇಕಾಗುತ್ತದೆ. ವಾಣಿಜ್ಯ ಬ್ಯಾಂಕುಗಳಲ್ಲಿ ಶೇ 10ರಿಂದ 12 ಬಡ್ಡಿ ಹಾಕುತ್ತಾರೆ. ಇದು ರೈತರಿಗೆ ಮಾಡುತ್ತಿರುವ ಅನ್ಯಾಯವಲ್ಲವೇ ಎಂದು ಅವರು ಪ್ರಶ್ನಿಸಿದರು.

'ಈ ಬಗ್ಗೆ ಪ್ರಧಾನಿ, ಕೇಂದ್ರ ಹಣಕಾಸು ಸಚಿವರಿಗೆ ಪತ್ರ ಬರೆದಿದ್ದು, ಇದನ್ನು ಆರ್‌ಬಿಐ ಒಪ್ಪಿಲ್ಲ ಎಂದು ಸಚಿವರು ಉತ್ತರವನ್ನೂ ಬರೆದಿದ್ದಾರೆ. ಕೇಂದ್ರದ ಅಧೀನದಲ್ಲಿ ನಬಾರ್ಡ್ ಕಾರ್ಯನಿರ್ವಹಿಸುತ್ತಿದೆ. ಕೇಂದ್ರ ಸಚಿವರೇ ಅಸಹಾಯಕತೆ ವ್ಯಕ್ತಪಡಿಸಿದರೆ ಹೇಗೆ' ಎಂದು ಅವರು ಪ್ರಶ್ನಿಸಿದರು.

ಕೇಂದ್ರದಿಂದ ಆಗಿರುವ ಅನ್ಯಾಯದ ಬಗ್ಗೆ ಆರ್.ಅಶೋಕ, ಬಿ.ಎಸ್. ಯಡಿಯೂರಪ್ಪ, ಬಸನಗೌಡ ಪಾಟೀಲ ಯತ್ನಾಳ, ಸಿ.ಟಿ. ರವಿ, ಎಚ್.ಡಿ. ಕುಮಾರಸ್ವಾಮಿ, ಬಿ.ವೈ.ವಿಜಯೇಂದ್ರ ಮಾತನಾಡುವುದಿಲ್ಲ ಎಂದು ಅವರು ಕಿಡಿಕಾರಿದರು.

ಆಹ್ವಾನ ಪತ್ರಿಕೆಯಲ್ಲಿ ಶಿಷ್ಟಾಚಾರ ಉಲ್ಲಂಘನೆ ಆರೋಪ

ಬೆಂಗಳೂರು: 'ರಾಜಾಜಿನಗರ ವಿಧಾನಸಭೆ ಕ್ಷೇತ್ರದಲ್ಲಿ ಗ್ಯಾರಂಟಿ ಅನುಷ್ಠಾನ ಸಮಿತಿ ಕಚೇರಿ ಉದ್ಘಾಟನೆ ಕಾರ್ಯಕ್ರಮದ ಆಹ್ವಾನ ಪತ್ರಿಕೆ ಪ್ರಕಟಣೆಯಲ್ಲಿ ಶಿಷ್ಟಾಚಾರವನ್ನು ಉಲ್ಲಂಘಿಸಲಾಗಿದೆ' ಎಂದು ಬಿಜೆಪಿಯ ರಾಜಾಜಿನಗರ ಮಂಡಲ ಸಮಿತಿ ಆರೋಪಿಸಿದೆ.

'ಸರ್ಕಾರದ ಹೆಸರಿನಲ್ಲಿ ನಡೆಯುತ್ತಿರುವ ಕಾರ್ಯಕ್ರಮ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಿಗಾಗಿ ನಡೆಯುತ್ತಿರುವ ರಾಜಕೀಯ ಕಾರ್ಯಕ್ರಮವಾಗಿದೆ' ಎಂದು ಮಂಡಲ ಸಮಿತಿ ಅಧ್ಯಕ್ಷ ಎ. ಸುದರ್ಶನ್, ಪ್ರಧಾನ ಕಾರ್ಯದರ್ಶಿಗಳಾದ ಜಿ. ಗಿರೀಶ್, ಬಿ.ಎಸ್. ಪ್ರವೀಣ್‌ಕುಮಾರ್ ದೂರಿದ್ದಾರೆ.

'ರಾಜಾಜಿನಗರ ವಿಧಾನಸಭೆ ಕ್ಷೇತ್ರದಲ್ಲಿ ರಚಿಸಿರುವ ಗ್ಯಾರಂಟಿ ಅನುಷ್ಠಾನ ಸಮಿತಿ ಕಚೇರಿಯನ್ನು ಪ್ರಕಾಶನಗರದಲ್ಲಿ ಉದ್ಘಾಟಿಸಲಾಗುತ್ತಿದೆ. ಗ್ಯಾರಂಟಿ ಎಲ್ಲರಿಗೂ ತಲುಪಿಸಬೇಕಾಗಿರುವುದು ಸರ್ಕಾರದ ಕರ್ತವ್ಯ. ಆದರೆ, ಸರ್ಕಾರಿ ಪ್ರಾಯೋಜಿತ ಕಾರ್ಯಕ್ರಮಕ್ಕೆ ಶಿಷ್ಟಾಚಾರದಂತೆ ಸ್ಥಳೀಯ ಶಾಸಕರನ್ನು ಆಹ್ವಾನಿಸದೆ, ವಿಧಾನ ಪರಿಷತ್ ಸದಸ್ಯರಿಂದ ಉದ್ಘಾಟಿಸುತ್ತಿರುವುದು ಸರಿಯಲ್ಲ. ಅಲ್ಲದೆ, ಆಹ್ವಾನ ಪತ್ರಿಕೆಯನ್ನು ಇಂಗ್ಲಿಷ್‌ನಲ್ಲಿ ಮುದ್ರಿಸಲಾಗಿದೆ' ಎಂದು ಆರೋಪಿಸಿದ್ದಾರೆ.

ಈ ವಿಚಾರದ ಬಗ್ಗೆ ರಾಜಾಜಿನಗರದಲ್ಲಿ ಆಕ್ರೋಶ ವ್ಯಕ್ತವಾದ್ದರಿಂದ, ಆಹ್ವಾನ ಪತ್ರಿಕೆಯನ್ನು ಹೊಸದಾಗಿ ಮುದ್ರಿಸಲಾಗಿದೆ. ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ಅವರ ಜೊತೆ ಸ್ಥಳೀಯ ಶಾಸಕ ಸುರೇಶ್‌ಕುಮಾರ್ ಅವರ ಹೆಸರನ್ನೂ ಸೇರಿಸಿ, ಕಾಂಗ್ರೆಸ್‌ನ ಹಲವು ಮುಖಂಡರ ಹೆಸರನ್ನು ಕೈಬಿಡಲಾಗಿದೆ.

ಪ್ರಶಸ್ತಿ ಪ್ರದಾನ

ಡಾ.ಎಸ್.ವಿದ್ಯಾಶಂಕರ ಸಾಂಸ್ಕೃತಿಕ ಪ್ರತಿಷ್ಠಾನ ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸಂಶೋಧಕರಾದ ಬಿ.ಎಸ್. ಸ್ವಾಮಿ ಅವರಿಗೆ 'ವಿದ್ಯಾಶಂಕರ ಪ್ರಶಸ್ತಿ' ಹಾಗೂ ಅಶೋಕ್ ದೊಮ್ಮಲೂರು ಅವರಿಗೆ 'ವಿದ್ಯಾಶಂಕರ ಪುರಸ್ಕಾರ'ವನ್ನು ಪ್ರದಾನ ಮಾಡಲಾಯಿತು. (ಎಡದಿಂದ) ಪ್ರತಿಷ್ಠಾನದ ಅಧ್ಯಕ್ಷ ನಲ್ಲೂರು ಪ್ರಸಾದ್ ಆರ್.ಕೆ., ನಿಡುಮಾಮಿಡಿ ಮಠದ ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ, ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಿ.ವಿ. ಪರಮಶಿವಮೂರ್ತಿ, ಎಸ್.ಜೆ.ಆರ್. ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಶೀಲವಂತ ಸಂಜೀವಕುಮಾರ್, ವಿ. ಕಾರ್ತಿಕ್ ಹಾಗೂ ಲೇಖಕ ಸಿ. ವೀರಣ್ಣ ಉಪಸ್ಥಿತರಿದ್ದರು. ಪ್ರಶಸ್ತಿಯು ₹ 30 ಸಾವಿರ ನಗದು ಹಾಗೂ ಪುರಸ್ಕಾರ ₹ 15 ಸಾವಿರ ನಗದು ಒಳಗೊಂಡಿದೆ

ಪ್ರಜಾವಾಣಿ ಚಿತ್ರ

14 ತಿಂಗಳ ಮಗುವಿಗೆ ಹೃದಯ ಕಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೃದಯ ವೈಫಲ್ಯ ಸಮಸ್ಯೆಯಿಂದ ಬಳಲುತ್ತಿದ್ದ 14 ತಿಂಗಳ ಮಗುವಿಗೆ ನಾರಾಯಣ ಹೆಲ್ತ್ ಸಿಟಿ ಆಸ್ಪತ್ರೆಯ ವೈದ್ಯರು ಯಶಸ್ವಿಯಾಗಿ ಹೃದಯ ಕಸಿ ಮಾಡಿದ್ದಾರೆ.

ಈ ಬಗ್ಗೆ ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆಸ್ಪತ್ರೆಯ ಡಾ.ಶಶಿರಾಜ್, '10 ತಿಂಗಳು ಇರುವಾಗಲೇ ಮಗುವಿಗೆ ಹೃದಯ ಸಮಸ್ಯೆ ಇತ್ತು. ಇದರಿಂದ ತೂಕ ನಷ್ಟ ಸೇರಿ ವಿವಿಧ ಸಮಸ್ಯೆಗಳು ಉಂಟಾಗಿ, ಮಗುವಿನ ಸ್ಥಿತಿ ದಿನದಿಂದ ದಿನಕ್ಕೆ ಹದಗೆಡುತ್ತಿತ್ತು. ವೈದ್ಯಕೀಯ ತಂಡದ ಪರಿಶೀಲನೆ ಬಳಿಕ ಹೃದಯದ ಕಸಿಯ ಏಕೈಕ ಆಯ್ಕೆ ನಮ್ಮ ಮುಂದಿತ್ತು. ಮಗುವಿಗೆ ಹೊಂದುವ ಹೃದಯವು 72 ಗಂಟೆಗಳಲ್ಲಿ ದೊರೆಯಿತು. ಎರಡೂವರೆ ವರ್ಷದ ಮಗುವಿನ ಹೃದಯವನ್ನು ದಾನ ಪಡೆದು, ಅದನ್ನು ಆ.18ರಂದು ಕಸಿ ಮಾಡಲಾಯಿತು' ಎಂದು ತಿಳಿಸಿದರು.

'ಮಗುವಿಗೆ ಆಸ್ಪತ್ರೆಯಲ್ಲಿ ಎರಡು ತಿಂಗಳು ಚಿಕಿತ್ಸೆ ನೀಡಿ, ಮಗು ಪೂರ್ಣ ಪ್ರಮಾಣದಲ್ಲಿ ಚೇತರಿಸಿಕೊಂಡು, ಆಸ್ಪತ್ರೆಯಿಂದ ಮನೆಗೆ ತೆರಳಿದೆ. ಈಗ ಮಗು ಆರೋಗ್ಯದಿಂದಿದ್ದು, ತೂಕವೂ ಏರಿಕೆಯಾಗಿದೆ' ಎಂದರು.

ನೆಲಮಂಗಲ ಯೋಜನಾ ಪ್ರಾಧಿಕಾರ

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ–562123.
ಇ–ಮೇಲ್: nelamangala.pa@gmail.com Phone: 9663046622

ಸಂಖ್ಯೆ: ನೆಯೋಪ್ರಾ:CLU:08:2024-25 ದಿನಾಂಕ: 21–11–2024

ಸಾರ್ವಜನಿಕ ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(3) ರಂತೆ)

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ:13–02–2007 ರನ್ವಯ **ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಕೆಂಪಲಿಂಗನಹಳ್ಳಿ** ಗ್ರಾಮವು **"ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ"** ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ:01–06–2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಪ್ರಶ್ನಿತ ಪ್ರದೇಶವನ್ನು **"ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ"** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಮಹಾಯೋಜನೆ ಅನುಮೋದನೆಗೊಂಡು ಐದು ವರ್ಷಗಳ ಅವಧಿಯು ಪೂರ್ಣಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (2) ರನ್ವಯ **"ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ"** ವಲಯದಲ್ಲಿ ಕಾಯ್ದಿರಿಸಲಾದ ಭೂ ಉಪಯೋಗ ರದ್ದಾಗುತ್ತದೆ. ಈ ಹಿನ್ನೆಲೆಯಲ್ಲಿ ಸದರಿ ಪ್ರದೇಶವನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 ರನ್ವಯ ಈ ಕೆಳಕಂಡಂತೆ **"ಕೈಗಾರಿಕೆ"** ಉದ್ದೇಶಕ್ಕೆ ಭೂ ಉಪಯೋಗ ನಿಗಧಿ ಪಡಿಸಲು ಅರ್ಜಿದಾರರು ಕೋರಿರುವಂತೆ ಸದರಿ ಕಲಂ 69 (4) ರ ಅಡಿಯಲ್ಲಿ **"ಕೈಗಾರಿಕೆ"** ಭೂ ಉಪಯೋಗ ನಿಗಧಿ ಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು	ತಾಲ್ಲೂಕು/ ಹೋಬಳಿ/ ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗುಂ)	ಅನುಮೋದಿತ ಮಹಾಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
ಶ್ರೀಮತಿ ನಸ್ರೀನ್ ತಾಜ್ ಕೋಂ ಲೇಟ್ ಎಸ್.ನಿಸಾರ್ ಅಹಮ್ಮದ್	ನೆಲಮಂಗಲ/ ಕಸಬಾ/ ಕೆಂಪಲಿಂಗನಹಳ್ಳಿ	29/3	01–23	ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ	ಕೈಗಾರಿಕೆ

ಷರಾ:– ಪ್ರಶ್ನಿತ ಜಮೀನುಗಳಲ್ಲಿ **ಕೈಗಾರಿಕೆ** ಚಟುವಟಿಕೆಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಸದರಿ ಚಟುವಟಿಕೆಯಿಂದಾಗಿ ಸುತ್ತಮುತ್ತಲಿನ ಗ್ರಾಮಗಳಲ್ಲಿರುವ ಸಾರ್ವಜನಿಕರಿಗೆ ಉದ್ಯೋಗಾವಕಾಶ ಕಲ್ಪಿಸುವ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **"ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ"** ವಲಯದಿಂದ **ಕೈಗಾರಿಕೆ ಉದ್ದೇಶಕ್ಕೆ** ಭೂ ಉಪಯೋಗ ನಿಗಧಿ ಪಡಿಸಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಜಂಟಿ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾಪ್ರ/3356/2024–25

ಮಾಧ್ಯಮ: ಮಹಿಳಾ ಪ್ರಾತಿನಿಧ್ಯದ ಕೊರತೆ

ಆನ್‌ಲೈನ್‌ನಲ್ಲೂ ಪತ್ರಕರ್ತೆಯರಿಗೆ ಕಿರುಕುಳ ತಪ್ಪಿಲ್ಲ: ಕೆ.ಪಿ. ಅಶ್ವಿನಿ ವಿಷಾದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಧ್ಯಮಗಳಲ್ಲಿ ಮಹಿಳೆಯರ ಪ್ರಾತಿನಿಧ್ಯದ ಕೊರತೆ ಇನ್ನೂ ನೀಗಿಲ್ಲ ಎಂದು ವಿಶ್ವಸಂಸ್ಥೆಯ ವರ್ಣಭೇದ ನೀತಿ ಸದಸ್ಯೆ ಹಾಗೂ ಮಾನವ ಹಕ್ಕುಗಳ ತಜ್ಞೆ ಕೆ.ಪಿ. ಅಶ್ವಿನಿ ಹೇಳಿದರು.

ಕರ್ನಾಟಕ ಪತ್ರಕರ್ತೆಯರ ಸಂಘ ಗುರುವಾರ ಆಯೋಜಿಸಿದ್ದ ನಾಗಮಣಿ ಎಸ್. ರಾವ್ ದತ್ತಿ ಉಪನ್ಯಾಸ ಹಾಗೂ ಪ್ರಶಸ್ತಿ ಪುರಸ್ಕೃತ ಪತ್ರಕರ್ತೆಯರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಅವರು 'ಮಾಧ್ಯಮದಲ್ಲಿ ಮಹಿಳಾ ಪ್ರಾಮುಖ್ಯತೆ ಮತ್ತು ಜವಾಬ್ದಾರಿ' ವಿಷಯ ಕುರಿತು ಮಾತನಾಡಿದರು.

ಕಳೆದ ಮೂರು ದಶಕಗಳಲ್ಲಿ ಮಾಧ್ಯಮರಂಗ ವೇಗವಾಗಿ ಬೆಳೆದಿದೆ. ಆದರೆ, ಜಾಗತಿಕ ಮಟ್ಟದಲ್ಲಿ ಹೋಲಿಸಿದರೆ ಭಾರತೀಯ ಮಾಧ್ಯಮಗಳಲ್ಲಿ ಮಹಿಳೆಯರ ಪ್ರಾತಿನಿಧ್ಯ ತೃಪ್ತಿಕರವಾಗಿಲ್ಲ. ಅದರಲ್ಲೂ ಕೋವಿಡ್ ನಂತರದ ದಿನಗಳಲ್ಲಿ ಪತ್ರಕರ್ತೆಯರು ತಮ್ಮ ವೈಯಕ್ತಿಕ ಬದುಕು ಹಾಗೂ ವೃತ್ತಿ ಎರಡನ್ನೂ ನಿಭಾಯಿಸಲಾಗದೇ ಹೆಚ್ಚಿನ ಸಂಖ್ಯೆಯಲ್ಲಿ ವೃತ್ತಿಯನ್ನು ತೊರೆದಿರುವುದು ವಿಷಾದನೀಯ ಎಂದರು.

ಪತ್ರಕರ್ತೆಯರ ಮೇಲೆ ನಿರಂತರವಾಗಿ ಆನ್‌ಲೈನ್‌ನಲ್ಲಿ ದಾಳಿ ನಡೆಸಲಾಗುತ್ತಿದೆ. ಈ ಬಗ್ಗೆ ನಾನು ನಡೆಸಿದ ಅಧ್ಯಯನದಲ್ಲಿ ಶೇ 60ರಿಂದ 70ರಷ್ಟು ಪತ್ರಕರ್ತೆಯರು ತಮ್ಮ ವರದಿ, ಲೇಖನಗಳ ಕಾರಣಕ್ಕಾಗಿ ಆನ್‌ಲೈನ್‌ನಲ್ಲಿ ದಾಳಿಗೊಳಗಾಗಿರುವ ಅಂಶ ಬಹಿರಂಗವಾಗಿದೆ. ಈಚೆಗಷ್ಟೇ ಡೇಟಿಂಗ್ ಆ್ಯಪ್ ಬಗ್ಗೆ ಬರೆದ ತಳಸಮುದಾಯದ ಪತ್ರಕರ್ತೆಯೊಬ್ಬರ ಮೇಲೂ ನಿರಂತರ ದಾಳಿ ನಡೆಸಲಾಗಿತ್ತು. ಆದರೆ, ಆಕೆ ಕಾರ್ಯ ನಿರ್ವಹಿಸುವ ಮಾಧ್ಯಮ ಸಂಸ್ಥೆ ಟ್ರೋಲ್ ಮಾಡುವವರಿಗೆ ಕಾನೂನು ಸಮರದ ಎಚ್ಚರಿಕೆ ನೀಡಿದ ಮೇಲಷ್ಟೇ ಅದು ನಿಂತಿತು. ಈ ರೀತಿಯ ಬೆಂಬಲದ ವಾತಾವರಣ ಎಲ್ಲ ಮಾಧ್ಯಮ ಸಂಸ್ಥೆಗಳಲ್ಲೂ ಇರಬೇಕು ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ವಿವಿಧ ಪ್ರಶಸ್ತಿ ಪುರಸ್ಕೃತ ಪತ್ರಕರ್ತೆಯರಾದ ಆರ್. ಪೂರ್ಣಿಮಾ, ಎಚ್.ಎಲ್. ಸೀತಾದೇವಿ, ಎಚ್.ಎನ್. ಆರತಿ, ಶಾಂತಕುಮಾರಿ ಕೆ., ಭಾರತಿ ಹೆಗಡೆ, ರಶ್ಮಿ ಎಸ್., ಮಂಜುಳಾ ಕಿರುಗಾವಲು, ಮಂಜುಳಾ ಹುಲಿಕುಂಟೆ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಪತ್ರಕರ್ತ ವಿ.ಟಿ. ರಾಜಶೇಖರ ನಿಧನಕ್ಕೆ ಸಂತಾಪ ಸೂಚಿಸಲಾಯಿತು.

ದತ್ತಿನಿಧಿ ಸ್ಥಾಪಕಿ ನಾಗಮಣಿ ಎಸ್.ರಾವ್, ಕರ್ನಾಟಕ ಪತ್ರಕರ್ತೆಯರ ಸಂಘದ ಅಧ್ಯಕ್ಷೆ ಪದ್ಮಾ ಶಿವಮೊಗ್ಗ, ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೇಷಾ ಖಾನಂ ಹಾಗೂ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸಂಕ್ಷಿಪ್ತ ಸುದ್ದಿ

ವಾರ್ಷಿಕ ಸಾಮಾನ್ಯ ಸಭೆ

ಬೆಂಗಳೂರು: ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯಿಂದ ನವೆಂಬರ್ 23 ಮತ್ತು 24ರಂದು ದಾರೂಲ್ ಉಲೂಮ್ ಸಬೀಲ್–ಉರ್–ರಶಾದ್ ಅರೇಬಿಕ್ ಕಾಲೇಜಿನ ಆವರಣದಲ್ಲಿ 29ನೇ ವಾರ್ಷಿಕ ಸಾಮಾನ್ಯ ಸಭೆ ಆಯೋಜಿಸಲಾಗಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಂಡಳಿ ಪ್ರಧಾನ ಕಾರ್ಯದರ್ಶಿ ಮೌಲಾನಾ ಶಾ ಫಜ್ಲೂರ್ ರಹೀಮ್ ಮುಜಾಹಿದ್ದೀನ್, 'ಎರಡು ದಿನ ನಡೆಯುವ ಈ ಸಭೆಯಲ್ಲಿ ನ. 23ರಂದು ಮಂಡಳಿಯ ಸರ್ವಸದಸ್ಯರ ಸಭೆ ನಡೆಯಲಿದೆ. ಕೇಂದ್ರ ಸರ್ಕಾರ ಜಾರಿಗೊಳಿಸಲು ಮುಂದಾಗಿರುವ ವಕ್ಫ್ ತಿದ್ದುಪಡಿ ಮಸೂದೆ ಕುರಿತು ಚರ್ಚೆ ನಡೆಯಲಿದೆ. ನ. 24ರಂದು ಮಿಲ್ಲರ್ ರಸ್ತೆಯ ಖುದ್ದೂಸ್ ಸಾಹಿಬ್ ಈದ್ಗಾದಲ್ಲಿ 'ಷರಿಯಾ ಮತ್ತು ವಕ್ಫ್' ರಕ್ಷಣೆ ಕುರಿತು ಸಾರ್ವಜನಿಕ ಸಭೆ ನಡೆಯಲಿದೆ' ಎಂದು ಮಾಹಿತಿ ನೀಡಿದರು.

ಅಖಿಲ ಭಾರತ ವಿದ್ಯಾರ್ಥಿ ಸಮ್ಮೇಳನ ಇದೇ 27ರಿಂದ

ಬೆಂಗಳೂರು: ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ ಆರ್ಗನೈಸೇಷನ್‌ನ (ಎಐಡಿಎಸ್‌ಒ) '10ನೇ ಅಖಿಲ ಭಾರತ ಸಮ್ಮೇಳನ'ವು ಇದೇ 27 ರಿಂದ 29ರವರೆಗೆ ದೆಹಲಿಯಲ್ಲಿ ನಡೆಯಲಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಐಡಿಎಸ್‌ಒ ರಾಜ್ಯ ಘಟಕದ ಕಾರ್ಯದರ್ಶಿ ಅಜಯ್ ಕಾಮತ್, 'ದೇಶದಾದ್ಯಂತ ಜಾರಿಗೊಳಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿ–2020ನ್ನು (ಎನ್‌ಇಪಿ) ರದ್ದುಗೊಳಿಸಬೇಕು. ಶಾಲಾ–ಕಾಲೇಜುಗಳಲ್ಲಿ ಪ್ರವೇಶ ಸೇರಿದಂತೆ ಎಲ್ಲ ಹಂತದ ಶುಲ್ಕ ಏರಿಕೆಗೆ ಕಡಿವಾಣ ಹಾಕಬೇಕು. ಖಾಲಿ ಇರುವ ಎಲ್ಲ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಬೇಕು ಎಂಬ ಹಕ್ಕೊತ್ತಾಯಗಳನ್ನು ಈ ಸಮ್ಮೇಳನದಲ್ಲಿ ಮಂಡಿಸಲಾಗುವುದು' ಎಂದು ಮಾಹಿತಿ ನೀಡಿದರು.

ಮೂರು ದಿನ ನಡೆಯುವ ಈ ಸಮ್ಮೇಳನದಲ್ಲಿ ರಾಜ್ಯದಿಂದ 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ. ಎಂದರು.

ಎಐಡಿಎಸ್‌ಒ ರಾಜ್ಯ ಖಜಾಂಚಿ ಸುಭಾಷ್ ಬೆಟ್ಟದಕೊಪ್ಪ, ಕಾರ್ಯದರ್ಶಿ ಮಹಾಂತೇಶ್ ಬಿಳೂರ್ ಸುದ್ದಿಗೋಷ್ಠಿಯಲ್ಲಿದ್ದರು.

ಸಾವಯವ ಸಂತೆ 24ಕ್ಕೆ

ಬೆಂಗಳೂರು: ಗ್ರೀನ್‌ಪಾತ್‌ನಿಂದ ನ. 24ರಂದು '50ನೇ ಸಾವಯವ ಸಂತೆ'ಯನ್ನು ಮಲ್ಲೇಶ್ವರದಲ್ಲಿರುವ ಗ್ರೀನ್ ಪಾತ್ ರೆಸ್ಟೋರೆಂಟ್‌ನಲ್ಲಿ ನಡೆಯಲಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಗ್ರೀನ್ ಪಾತ್ ಸಂಸ್ಥಾಪಕ ಎಚ್.ಆರ್. ಜಯರಾಮ್, 'ಭಾನುವಾರ ಬೆಳಿಗ್ಗೆ 11.30ಕ್ಕೆ ನಡೆಯಲಿರುವ ಸಾವಯವ ಸಂತೆಯನ್ನು ಕಂದಾಯ ಸಚಿವ ಕೃಷ್ಣ ಬೈರೇಗೌಡ ಉದ್ಘಾಟಿಸಲಿದ್ದಾರೆ. ಮಾಜಿ ಸಚಿವೆ ಜಯಮಾಲಾ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಸಂತೆಯಲ್ಲಿ ಆರೋಗ್ಯಕರ ಖಾದ್ಯಗಳು, ಸಾವಯವ ತರಕಾರಿ, ಸೊಪ್ಪು, ಹಣ್ಣುಗಳು ಪ್ರದರ್ಶನ ಹಾಗೂ ಮಾರಾಟ ನಡೆಯಲಿದೆ' ಎಂದರು.

ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯಕ್ಕೆ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಭೇಟಿ

'ಮಹಿಳಾ ವಸತಿನಿಲಯದಲ್ಲಿ ಹಾವು–ಚೇಳು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ವಸತಿನಿಲಯದಲ್ಲಿ ಹಾವು–ಚೇಳಿನ ಕಾಟ ಇದ್ದು, ಮೂಲಸೌಕರ್ಯದ ಕೊರತೆ ಇದೆ. ಕೂಡಲೇ ಇದನ್ನು ಸರಿಪಡಿಸಲು ಸಂಬಂಧಪಟ್ಟವರಿಗೆ ಸೂಚಿಸಬೇಕು' ಎಂದು ಕೋರಿ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯಕ್ಕೆ ಗುರುವಾರ ಭೇಟಿ ನೀಡಿದ ನಾಗಲಕ್ಷ್ಮಿ ಚೌಧರಿ ಅವರು ವಿದ್ಯಾರ್ಥಿಗಳು ಹಾಗೂ ಮಹಿಳಾ ಬೋಧಕರ ಅಹವಾಲುಗಳನ್ನು ಆಲಿಸಿದರು. ಈ ಬಗ್ಗೆ ಮುಖ್ಯಮಂತ್ರಿಯವರಿಗೆ ಬರೆದಿರುವ ಪತ್ರದಲ್ಲಿ ವಸತಿನಿಲಯದಲ್ಲಿರುವ ಸಮಸ್ಯೆಗಳನ್ನು ಉಲ್ಲೇಖಿಸಿದ್ದಾರೆ.

'ಇಲ್ಲಿನ ವಸತಿನಿಲಯದಲ್ಲಿ ಮೆನುವಿನ ಪ್ರಕಾರ ಊಟ–ತಿಂಡಿ ನೀಡುತ್ತಿಲ್ಲ. ಊಟದ ಕೊಠಡಿಯಲ್ಲಿ ಫ್ಯಾನ್ ಹಾಗೂ ವಿದ್ಯುತ್ ಬಲ್ಬ್‌ಗಳು ಕಾರ್ಯನಿರ್ವಹಿಸುತ್ತಿಲ್ಲ. ಕೊಠಡಿಗಳಲ್ಲಿ ಶಿಲೀಂದ್ರ ಬೆಳೆದ ಕಾರಣ ವಿದ್ಯಾರ್ಥಿನಿಯರು ಕೆಮ್ಮು, ಶೀತ, ಜ್ವರಕ್ಕೆ ತುತ್ತಾಗುತ್ತಿದ್ದಾರೆ. ವಸತಿನಿಲಯದ ನಿರ್ವಹಣೆ ಸಮರ್ಪಕವಾಗಿಲ್ಲ. ಶೌಚಾಲಯಗಳ ಮೇಲ್ಛಾವಣಿ ಕುಸಿದಿದ್ದು, ಕಟ್ಟಡವು ಶಿಥಿಲಾವಸ್ಥೆಯಿಂದ ಕೂಡಿದೆ' ಎಂದು ಹೇಳಿದ್ದಾರೆ.

'ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ವಿದ್ಯಾರ್ಥಿಗಳ ಸ್ನಾನಕ್ಕೆ ಬಿಸಿ ನೀರಿನ ವ್ಯವಸ್ಥೆ ಕಲ್ಪಿಸಬೇಕು. ವಸತಿನಿಲಯದ ಒಳಗೆ ಹಾಗೂ ಹೊರಗಡೆ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಪ್ರಥಮ ಚಿಕಿತ್ಸಾ ಪೆಟ್ಟಿಗೆಗಳನ್ನು ಅಳವಡಿವುದೂ ಸೇರಿದಂತೆ ಮೂಲಸೌಲಭ್ಯ ಕಲ್ಪಿಸಬೇಕು' ಎಂದು ತಿಳಿಸಿದ್ದಾರೆ.

ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ವಿದ್ಯಾರ್ಥಿನಿಯರೊಂದಿಗೆ ನಾಗಲಕ್ಷ್ಮಿ ಚೌಧರಿ ಸಂವಾದ ನಡೆಸಿದರು

'ಮಾಲಿನ್ಯ ರಹಿತ ಉಕ್ಕು ಉತ್ಪಾದನೆ'

ಬೆಂಗಳೂರು: ಉಕ್ಕು ಉತ್ಪಾದನಾ ಪ್ರಕ್ರಿಯೆಯ ವೇಳೆ ಆಗುತ್ತಿರುವ ವಾಯುಮಾಲಿನ್ಯವನ್ನು 2027ರ ವೇಳೆಗೆ ಶೂನ್ಯಮಟ್ಟಕ್ಕೆ ತರಲು ಶ್ರಮಿಸಲಾಗುತ್ತಿದೆ ಎಂದು ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಭಾರತೀಯ ಲೋಹ ಸಂಸ್ಥೆ (ಐಐಎಂ) ಹಮ್ಮಿಕೊಂಡಿದ್ದ 'ಲೋಹ ಶಾಸ್ತ್ರಜ್ಞ' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಎಸ್‌ಆರ್ ಉಕ್ಕು ಸಂಸ್ಥೆಯ ಸಿಇಒ ಶಶಿ ಮೊಹಂತಿ ಅವರಿಗೆ ಉಕ್ಕು ಕ್ಷೇತ್ರದಲ್ಲಿ ಮಾಡಿರುವ ಸಾಧನೆಗಾಗಿ ಜೀವಮಾನ ಸಾಧನೆ ಪ್ರಶಸ್ತಿ, ಡಾ.ಟಿ.ಪಿ.ಡಿ. ರಾಜನ್ ಅವರಿಗೆ ರಾಷ್ಟ್ರೀಯ ಲೋಹಶಾಸ್ತ್ರಜ್ಞ ಪ್ರಶಸ್ತಿ, ಡಾ.ಡಿ. ಸತೀಶ್ ಕುಮಾರ್ ಅವರಿಗೆ ಸಂಶೋಧನೆ ಮತ್ತು ಅಭಿವೃದ್ಧಿ ಪ್ರಶಸ್ತಿ, ಡಾ.ಸಾಯಿ ಗೌತಮ್ ಕೃಷ್ಣನ್ ಮತ್ತು ಬಿರಾಜ್‌ಕುಮಾರ್ ಸಾಹು ಅವರಿಗೆ ಯುವ ಲೋಹಶಾಸ್ತ್ರಜ್ಞ ಪ್ರಶಸ್ತಿಯನ್ನು ಸಚಿವ ಕುಮಾರಸ್ವಾಮಿ ಪ್ರದಾನ ಮಾಡಿದರು.

ನೆಲಮಂಗಲ ಯೋಜನಾ ಪ್ರಾಧಿಕಾರ

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ – 562123.
ದೂರವಾಣಿ: 9663046622 ಇ–ಮೇಲ್: nelamangala.pa@gmail.com

ಸಂಖ್ಯೆ: ನೆಯೋಪ್ರಾ/CLU/60/2024–25 ದಿನಾಂಕ: 21–11–2024

ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ: 13–02–2007 ರನ್ವಯ **ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಹೊನ್ನಸಂದ್ರ** ಗ್ರಾಮವು **"ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ"** ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ: 01–06–2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಈ ಕೆಳಕಂಡ ಜಮೀನನ್ನು **"ವ್ಯವಸಾಯ"** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ "ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು	ತಾಲ್ಲೂಕು / ಹೋಬಳಿ / ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗು)	ಅನುಮೋದಿತ ಮಹಾಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
ಶ್ರೀ ಎಸ್.ವಿ. ಶ್ರೀನಿವಾಸ ಬಿನ್ ಎಸ್.ಕೆ.ವಿ. ಚಲಪತಿ	ನೆಲಮಂಗಲ/ ಕಸಬಾ/ ಹೊನ್ನಸಂದ್ರ	88	00-20	ವ್ಯವಸಾಯ	ವಸತಿ
		134/1	01-05		
		134/2	00-32 ಪೈಕಿ 00-15		
		135	02-00 ಪೈಕಿ 01-16		
		136	02-07 ಪೈಕಿ 01-31		
		137	04-09 ಪೈಕಿ 03-39		

ಷರಾ:– ಪ್ರಶ್ನಿತ ಸರ್ವೆ ನಂಬರ್ ಜಮೀನಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು, ಪ್ರಶ್ನಿತ ಜಮೀನಿನಲ್ಲಿ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪಡೆದು ಅಭಿವೃದ್ಧಿ ಪಡಿಸುವುದರಿಂದ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸಿಗುತ್ತದೆ. ಹಾಗೂ ಯೋಜನಾ ಬದ್ದ ಬೆಳವಣಿಗೆಯಾಗುವುದು ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾ.ಪ್ರ/3363/ಅಡ್ವರ್ಟೋರ್/2024–25

ಹೊಸಬರಿಗೆ ಪ್ರೋತ್ಸಾಹ ಧನಂಜಯ ಉತ್ಸಾಹ

ವಿನಾಯಕ ಕೆ.ಎಸ್

> ಧನಂಜಯ ನಟನೆಯ ಜೀಬ್ರಾ ಚಿತ್ರ ಇಂದು (ನ.22) ತೆರೆ ಕಾಣುತ್ತಿದೆ. ಕನ್ನಡ ಸೇರಿ ನಾಲ್ಕು ಭಾಷೆಗಳಲ್ಲಿ ತೆರೆ ಕಾಣುತ್ತಿರುವ ಚಿತ್ರದಲ್ಲಿನ ಪಾತ್ರ ಹಾಗೂ ತಮ್ಮ ಸಿನಿಪಯಣದ ಕುರಿತು ಅವರು ಮಾತನಾಡಿದ್ದಾರೆ...

1. ಇದು ತೆಲುಗು ನಟ ಸತ್ಯದೇವ್ ಜೊತೆಗಿನ ಮಲ್ಟಿ ಸ್ಟಾರರ್ ಸಿನಿಮಾ. ಕಥೆ ಹೊಸತಾಗಿದೆ. ಬ್ಯಾಂಕಿಂಗ್ ಸಂಬಂಧಿಸಿದ ಕಥೆ. ಬ್ಯಾಂಕ್ ವ್ಯವಸ್ಥೆ ಒಳಗಿನ ಲೂಪ್‌ಹೋಲ್‌ಗಳನ್ನು ಇಟ್ಟುಕೊಂಡು ಮಾಡಿದ ಕಥೆ. ಬ್ಯಾಂಕ್ ಒಳಗಿದ್ದವರು ಮಾತ್ರ ಇಂಥ ಕಥೆ ಬರೆಯಲು ಸಾಧ್ಯ. ನಿರ್ದೇಶಕ ಈಶ್ವರ್ ಕಾರ್ತಿಕ್ ಬ್ಯಾಂಕ್‌ನಲ್ಲಿ ಉದ್ಯೋಗಿಯಾಗಿದ್ದವರು. ಹೀಗಾಗಿ ಅವರಿಗೆ ಅಲ್ಲಿನ ವ್ಯವಸ್ಥೆ ಬಗ್ಗೆ ತುಂಬ ಚೆನ್ನಾಗಿ ಗೊತ್ತಿತ್ತು. ಬಹಳ ಇಂಟಲಿಜೆಂಟ್ ಸ್ಕ್ರಿಪ್ಟ್. ಇದನ್ನು ಕಾಮನ್‌ಮ್ಯಾನ್‌ಗೆ ಕನ್ವೆ ಮಾಡೋದು ಕಷ್ಟ. ಆದರೆ ನಿರ್ದೇಶಕರು ಅದನ್ನು ಬಹಳ ಚೆನ್ನಾಗಿ ಕನ್ವೆ ಮಾಡಿದ್ದಾರೆ. ಅಪರೂಪಕೊಮ್ಮೆ ಇಂಥ ಸ್ಕ್ರಿಪ್ಟ್‌ಗಳು ಬರುತ್ತವೆ.

2. ಚಿತ್ರದಲ್ಲಿ ಆದಿ ಎಂಬ ಪಾತ್ರ ನನ್ನದು. ಸತ್ಯದೇವ್ ಮತ್ತು ನನ್ನ ಪಾತ್ರಕ್ಕೆ ಒಂದೇ ರೀತಿ ಸ್ಕ್ರೀನ್ ಸ್ಪೇಸ್ ಇದೆ. ಸೀಟಿನ ತುದಿಯಲ್ಲಿ ಕೂರಿಸುವ ಸಿನಿಮಾ. ಬ್ಯಾಂಕ್ ಸಿಸ್ಟಂ ಅನ್ನು ವಿವರಿಸುತ್ತ ಮನರಂಜನೆ ನೀಡುತ್ತದೆ.

3. 'ಅಣ್ಣ ಫ್ರಂ ಮೆಕ್ಸಿಕೊ' ಚಿತ್ರೀಕರಣ ನಡೆಯುತ್ತಿದೆ. 'ಜಿಂಗೋ' ಸ್ಕ್ರಿಪ್ಟ್ ಕೊನೆಯ ಹಂತದಲ್ಲಿದ್ದು, ಶೀಘ್ರದಲ್ಲಿ ಶೂಟಿಂಗ್ ಪ್ರಾರಂಭವಾಗುತ್ತದೆ. 'ಹಲಗಲಿ' ಎಲ್ಲ ರೆಡಿ ಇದೆ. ಚಿತ್ರೀಕರಣಕ್ಕೆ ಹೊರಡಬೇಕು. ಅದಕ್ಕಾಗಿ ಸಣ್ಣ ಆಗಿದ್ದೇನೆ. ವರ್ಕೌಟ್, ಡಯಟ್ ಮಾಡುತ್ತಿದ್ದೇನೆ. ಆದಿವಾಸಿಗಳ ಕಥೆ. ಶರ್ಟ್ ಬಿಚ್ಚಿ ನಟನೆ ಮಾಡುವಾಗ ಆಡಿಯನ್ಸ್ ಎದುರು ಚೆನ್ನಾಗಿ ಕಾಣಬೇಕು. ಹೀಗಾಗಿ ಈ ಚಿತ್ರಕ್ಕೆ ಶ್ರಮ ಹೆಚ್ಚಿದೆ. 'ಉತ್ತರಾಕಾಂಡ' ಚಿತ್ರೀಕರಣ ಮತ್ತೆ ಪ್ರಾರಂಭಿಸಬೇಕು. ಎಲ್ಲರ ಡೇಟ್ ಸಿಗುತ್ತಿದ್ದಂತೆ ಚಿತ್ರ ಪ್ರಾರಂಭವಾಗುತ್ತದೆ. ಈಗಾಗಲೇ ಶೇಕಡ 40-50ರಷ್ಟು ಚಿತ್ರೀಕರಣ ಮುಗಿದಿದೆ. ಚಿತ್ರದ ಕುರಿತು ಹಬ್ಬಿರುವ ವದಂತಿಗಳೆಲ್ಲ ಸುಳ್ಳು. ಶಿವಣ್ಣ ಚಿಕಿತ್ಸೆ ಪಡೆದು ಬಂದ ನಂತರ ಚಿತ್ರೀಕರಣ ಪ್ರಾರಂಭಿಸುತ್ತೇವೆ. 'ಕೆಂಪೇಗೌಡ' ಶೀರ್ಷಿಕೆ ವಿವಾದ ನಡೆಯುತ್ತಿದೆ. ಅದು ತೀರ್ಮಾನವಾಗುತ್ತಿದ್ದಂತೆ ಚಿತ್ರೀಕರಣ ಪ್ರಾರಂಭಿಸುತ್ತೇವೆ.

4. ಚಿರಂಜೀವಿಯಂಥ ದೊಡ್ಡ ನಟರು ಮನಸಾರೆ ಶ್ಲಾಘಿಸಿದಾಗ ಖುಷಿಯಾಗುತ್ತದೆ. ಅದೊಂದು ರೀತಿ ಆಶೀರ್ವಾದ. 'ಜೀಬ್ರಾ' ಸಿನಿಮಾ ಕೂಡ ಚೆನ್ನಾಗಿದೆ. ಯಾರಾದರೂ ಒಬ್ಬರು ದೊಡ್ಡವರು ಸಿನಿಮಾ ರಿಸೀವ್ ಮಾಡಿಕೊಂಡಾಗ ಖುಷಿಯಾಗುತ್ತದೆ. ಜಗತ್ತಿನೆಲ್ಲೆಡೆ ಸ್ನೇಹ ಸಂಪಾದನೆ ಮಾಡಬೇಕು. ನಟರು ಎಂದಾಗ ಎಲ್ಲ ಕಡೆ ಹೋಗಿ ಕೆಲಸ ಮಾಡಬೇಕು. ಅದೇ ಬೇರೆ ರೀತಿಯ ಅನುಭವ.

5. ಕನ್ನಡದಲ್ಲಿಯೇ ಇಡೀ ದೇಶಕ್ಕೆಲ್ಲ ತಲುಪುವ ಸಿನಿಮಾ ಮಾಡಲು ದೊಡ್ಡ ಬಜೆಟ್, ಒಳ್ಳೆ ನಿರ್ಮಾಣ ಸಂಸ್ಥೆ ಬೇಕು. ನಮ್ಮ ಹಿಂದೆ ಆ ರೀತಿ ದೊಡ್ಡ ನಿರ್ಮಾಣ ಸಂಸ್ಥೆಗಳಿಲ್ಲ. ನಾವೇ ಸಣ್ಣದಾಗಿ ಸಿನಿಮಾ ಮಾಡಿಕೊಂಡು, ಒದ್ದಾಡಿಕೊಂಡು ಬರುತ್ತಿರಬೇಕಾದರೆ ಬೇರೆ ಭಾಷೆಯ ಒಳ್ಳೆ ಸಿನಿಮಾಗಳು ಬಂದಾಗ ಇನ್ನಷ್ಟು ಜನರನ್ನು ತಲುಪುತ್ತೇವೆ. ನಾವೆಲ್ಲೋ ಒಂಚೂರು ದೊಡ್ಡವರಾದಾಗ ದೊಡ್ಡ ದೊಡ್ಡವರು ಬಂದು ನಮ್ಮ ಜೊತೆ ಕೈಜೋಡಿಸಿ ದೊಡ್ಡ ಸಿನಿಮಾ ಆಗಬಹುದೇನೋ ಎಂಬ ಆಶಯ. ಜರ್ನಿ ಮಾಡುವುದು ತುಂಬ ಮಹತ್ವದ್ದು.

6. ಸಿನಿಮಾ ನಿರ್ಮಾಣವನ್ನು ಪ್ಯಾಷನ್‌ಗಾಗಿ ಮಾಡುತ್ತೇನೆ. ರಿಸ್ಕ್ ಕೆಲಸವದು. ಪ್ರತಿ ಸಲ ಸಿನಿಮಾ ಮಾಡಿ, ಅದನ್ನು ಮಾರಾಟ ಮಾಡಿ, ದುಡ್ಡು ಮರಳಿ ಪಡೆಯುವುದು ದೊಡ್ಡ ಸವಾಲಿನ ಕೆಲಸ. ಜಾಸ್ತಿ ಜನ ನಿರ್ದೇಶಕರಿದ್ದಂತೆ ಇಂಡಸ್ಟ್ರಿ ಬೆಳೆಯುತ್ತದೆ. 'ಡೇರ್ ಡೇವಿಲ್ ಮುಸ್ತಾಫಾ' ನಿರ್ದೇಶಕರು 'ಜಿಂಗೋ'ದಂಥ ಕಥೆ ತಂದರು. ಎಲ್ಲೋ ಒಂದು ಕಡೆ ನಾವು ಮಾಡಿದ್ದು ವಾಪಾಸ್ ಬರುತ್ತದೆ. ಹೊಸ ತಂಡ ಬೆಳೆಸಿದರೆ, ಹೊಸ ನಿರ್ದೇಶಕರು ಬಂದಾಗ ಇನ್ನೊಂದು ನಾಲ್ಕು ಸಿನಿಮಾಗಳು ಆಗುತ್ತವೆ. ಕನ್ನಡದಲ್ಲಿ ಹೊಸ ನಿರ್ದೇಶಕರನ್ನು ಬಳಸಿಕೊಳ್ಳಬೇಕು. ಕಳೆದ ವರ್ಷ 'ಟಗರು ಪಲ್ಯ' ಎಲ್ಲ ವೇದಿಕೆಗಳಲ್ಲಿ ಹಿಟ್. ಆದರೆ ಆ ನಿರ್ದೇಶಕರಿಗೆ ಬೇರೆ ಯಾವುದೇ ನಿರ್ಮಾಣ ಸಂಸ್ಥೆಯಿಂದ ಮತ್ತೊಂದು ಸಿನಿಮಾ ಸಿಗದಿರುವುದು ದುರಂತ. ಸದ್ಯಕ್ಕೆ ಅವರೊಂದು ಹೊಸ ಪ್ರಾಜೆಕ್ಟ್‌ಗೆ ಕೈ ಹಾಕಿದ್ದಾರೆ.

7. ನಮ್ಮಲ್ಲಿ ನಿರಂತರವಾಗಿ ಸಿನಿಮಾ ಮಾಡುವ ನಿರ್ಮಾಣ ಸಂಸ್ಥೆಗಳು ಬೇಕು. ತಮಿಳು, ತೆಲುಗಿನಲ್ಲಿ ಆ ರೀತಿ ವೃತ್ತಿಪರ ನಿರ್ಮಾಣ ಸಂಸ್ಥೆಗಳಿವೆ. ನಮ್ಮಲ್ಲಿ ಅದರ ಕೊರತೆಯಿದೆ. ಹೆಚ್ಚು ಸಿನಿಮಾಗಳಾದಾಗ ಹೊಸ ತಂಡಗಳು ಬರುತ್ತವೆ. ಹೊಸ ಟ್ಯಾಲೆಂಟ್‌ಗಳು ಆಚೆ ಬರುತ್ತವೆ. ಉದ್ಯಮ ಬೆಳೆಯುತ್ತದೆ.ದ್ಯಮದಲ್ಲೆ ಇನ್ನಷ್ಟು ಬರಹಗಾರರು, ನಿರ್ದೇಶಕರು ಬೇಕು.

ಇಲ್ಲಿ ಕೆಲಸ ಮಾಡಿದ್ದೇನೆ

'ನಾನು ಮೂಲತಃ ವಿಶಾಖಪಟ್ಟಣಂನವನು. ನನಗೆ ಬೆಂಗಳೂರಿನ ನಂಟಿದೆ. ಪ್ರಾರಂಭದಲ್ಲಿ ಇಲ್ಲಿ ಕೆಲ ವರ್ಷ ಕೆಲಸ ಮಾಡಿದ್ದೆ. ಬಿಟಿಎಂ ಲೇಔಟ್‌ನಲ್ಲಿದ್ದೆ. ಇಲ್ಲಿನ ಹಲವು ನೆನಪುಗಳು ಇನ್ನು ಹಾಗೇ ಇವೆ. ನನ್ನದು ಮತ್ತು ಡಾಲಿ ಧನಂಜಯ ಸಿನಿಮಾ ಜರ್ನಿ ಒಂದೇ ರೀತಿಯದ್ದು. ಕನ್ನಡದಲ್ಲಿಯೂ ಸಿನಿಮಾ ಮಾಡುವ ಆಸೆಯಿದೆ' ಎನ್ನುತ್ತಾರೆ ನಟ ಸತ್ಯದೇವ್.

'ಸೂರಿ ಲವ್ಸ್ ಸಂಧ್ಯಾ' ಎಂದ ಅಭಿಮನ್ಯು

ಅಭಿಮನ್ಯು ಕಾಶಿನಾಥ್ ಹಾಗೂ ಅಪೂರ್ವ ಜೋಡಿಯಾಗಿ ನಟಿಸಿರುವ 'ಸೂರಿ ಲವ್ಸ್ ಸಂಧ್ಯಾ' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಯಾದವ್ ರಾಜ್ ನಿರ್ದೇಶನದ ಚಿತ್ರವನ್ನು ಕೆ.ಟಿ. ಮಂಜುನಾಥ್ ನಿರ್ಮಾಣ ಮಾಡಿದ್ದಾರೆ.

'ಚಿತ್ರದಲ್ಲಿ ದಿನಗೂಲಿ ನೌಕರನ ಪಾತ್ರ ಮಾಡಿದ್ದೇನೆ. ಮಿಡಲ್‌ಕ್ಲಾಸ್ ಹುಡುಗನ ಜೀವನದಲ್ಲಿ ಹುಡುಗಿಯೊಬ್ಬಳು ಬಂದಾಗ ಏನಾಗುತ್ತದೆ ಎಂಬುದೇ ಚಿತ್ರಕಥೆ. ಆತ ತನ್ನ ಲವ್‌ಗೋಸ್ಕರ ಫೈಟ್ ಮಾಡುತ್ತಾನೆ. ಮೈಸೂರು, ಕೋಲಾರ ಮತ್ತು ಕಾಶಿಯಲ್ಲಿ ಚಿತ್ರೀಕರಣ ಮಾಡಿದ್ದೇವೆ. ಕಾಶಿಯಲ್ಲಿ ನಡೆದ ಶೂಟಿಂಗ್ ಸ್ವಲ್ಪ ಕಷ್ಟವಾಗಿತ್ತು' ಎಂದರು ಅಭಿಮನ್ಯು.

'ದುಬೈನಲ್ಲಿ ನಡೆದ ಪ್ರೀಮಿಯರ್ ಷೋನಲ್ಲಿ ಉಪೇಂದ್ರ, ಪ್ರಿಯಾಂಕ ಉಪೇಂದ್ರ ಚಿತ್ರ ನೋಡಿ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಇದೊಂದು ಟ್ರಾವೆಲಿಂಗ್ ಲವ್‌ಸ್ಟೋರಿ ರೀತಿಯ ಕಥೆ. ಸಿನಿಮಾದ ಎಲ್ಲ ಕೆಲಸ ಮುಗಿದು ಬಿಡುಗಡೆಗೆ ಸಿದ್ಧವಿದೆ. ಶೀಘ್ರದಲ್ಲಿ ಚಿತ್ರ ತೆರೆಗೆ ಬರಲಿದೆ'ಎಂದರು ನಿರ್ದೇಶಕರು. ಎಸ್.ಎನ್. ಅರುಣಗಿರಿ ಸಂಗೀತ ಈ ಚಿತ್ರಕ್ಕಿದೆ.

ಅಪೂರ್ವ

ಹೊರಬಂತು 'ಗುಂಮ್ಟಿ' ಟ್ರೇಲರ್

ಕುಡುಬಿ ಜನಾಂಗದ ಕುರಿತ ಕಥೆಯನ್ನು ಹೊಂದಿರುವ 'ಗುಂಮ್ಟಿ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಈ ಹಿಂದೆ 'ಇನಾಮ್ದಾರ್' ಸಿನಿಮಾ ನಿರ್ದೇಶಿಸಿದ್ದ ಸಂದೇಶ ಶೆಟ್ಟಿ ಆಜ್ರಿ ಆ್ಯಕ್ಷನ್ ಕಟ್ ಹೇಳಿ, ನಾಯಕನಾಗಿ ಕಾಣಿಸಿಕೊಂಡಿರುವ ಚಿತ್ರ ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಪೂರ್ಣಗೊಳಿಸಿ ಬಿಡುಗಡೆಗೆ ಸಿದ್ಧವಿದೆ. 'ಇದೊಂದು ಕಲಾತ್ಮಕ ಸಿನಿಮಾವಾಗಿದ್ದು, ಕರಾವಳಿ ತೀರದ ಕುಡುಬಿ ಜನಾಂಗದ ಕಥೆಯನ್ನು ತೆರೆಮೇಲೆ ಹೇಳಲು ಹೊರಟಿದ್ದೇವೆ. 'ಗುಂಮ್ಟಿ' ಎಂಬುದು ಕುಡುಬಿಯವರ ಸಾಂಪ್ರದಾಯಿಕ ವಾದ್ಯವಾಗಿದ್ದು, ಅದನ್ನೇ ಚಿತ್ರದ ಶೀರ್ಷಿಕೆಯಾಗಿಸಿಕೊಂಡಿದ್ದೇವೆ' ಎಂದರು ಸಂದೇಶ ಶೆಟ್ಟಿ.

ವಿಕಾಸ್ ಎಸ್. ಶೆಟ್ಟಿ ಬಂಡವಾಳ ಹೂಡಿದ್ದಾರೆ. ವೈಷ್ಣವಿ ನಾಡಿಗ್ ಚಿತ್ರದ ನಾಯಕಿ. ರಂಜನ್ ಛತ್ರಪತಿ, ಕರಣ್ ಕುಂದರ್, ಯಶ್ ಆಚಾರ್ಯ, ಪ್ರಭಾಕರ ಕುಂದರ್, ರಘು ಪಾಂಡೇಶ್ವರ ಮುಂತಾದವರು ಚಿತ್ರದಲ್ಲಿದ್ದಾರೆ. ಅನೀಶ್ ಡಿಸೋಜಾ ಛಾಯಾಚಿತ್ರಗ್ರಹಣ, ಶಿವರಾಜ ಮೇಹು ಸಂಕಲನವಿದೆ. ಡೊಂಡಿ ಮೋಹನ್ ಸಾಹಿತ್ಯ ರಚಿಸಿ, ಸಂಗೀತ ಸಂಯೋಜಿಸಿದ್ದಾರೆ. ಉಡುಪಿ, ಕುಂದಾಪುರ, ಕಾರವಾರ, ಶಿರಸಿ, ಹುಬ್ಬಳ್ಳಿ ಮೊದಲಾದೆಡೆ ಚಿತ್ರೀಕರಣ ಗೊಂಡಿದೆ.

ವೈಷ್ಣವಿ ನಾಡಿಗ್

ಡಾರ್ಲಿಂಗ್ ಕೃಷ್ಣ

ಚಿತ್ರೀಕರಣ ಮುಗಿಸಿದ 'ಫಾದರ್'

ಡಾರ್ಲಿಂಗ್ ಕೃಷ್ಣ ಹಾಗೂ ಪ್ರಕಾಶ್ ರಾಜ್ ಪ್ರಮುಖ ಪಾತ್ರದಲ್ಲಿ ನಟಿಸುತ್ತಿರುವ 'ಫಾದರ್' ಚಿತ್ರದ ಮಾತಿನ ಭಾಗದ ಚಿತ್ರೀಕರಣ ಇತ್ತೀಚೆಗಷ್ಟೇ ಪೂರ್ಣಗೊಂಡಿದೆ. ಆರ್.ಚಂದ್ರು ಅವರು ಆರ್ ಸಿ ಸ್ಟುಡಿಯೋಸ್ ಮೂಲಕ ನಿರ್ಮಾಣ ಮಾಡುತ್ತಿರುವ ಚಿತ್ರಕ್ಕೆ ರಾಜ್ ಮೋಹನ್ ಆ್ಯಕ್ಷನ್– ಕಟ್ ಹೇಳುತ್ತಿದ್ದಾರೆ. ಎರಡು ಹಾಡುಗಳ ಚಿತ್ರೀಕರಣ ಮಾತ್ರ ಬಾಕಿಯಿದೆ. ಬೆಂಗಳೂರು, ಆನೇಕಲ್, ಚನ್ನಪಟ್ಟಣ, ಮಂಗಳೂರು, ಧರ್ಮಸ್ಥಳ ಮುಂತಾದ ಕಡೆ ಚಿತ್ರೀಕರಣ ನಡೆದಿದೆ ಎಂದು ಚಿತ್ರತಂಡ ಹೇಳಿದೆ.

'ಬಾಕಿಯಿರುವ ಎರಡು ಹಾಡುಗಳ ಚಿತ್ರೀಕರಣವನ್ನು ಸದ್ಯದಲ್ಲೇ ಪೂರ್ಣಗೊಳಿಸಿ, ಆದಷ್ಟು ಬೇಗ ಚಿತ್ರವನ್ನು ತೆರೆಗೆ ತರುತ್ತೇವೆ. ನಮ್ಮ ಸಂಸ್ಥೆಯಿಂದ ಈಗಾಗಲೇ ಘೋಷಿಸಿರುವ ಉಳಿದ ನಾಲ್ಕು ಚಿತ್ರಗಳಿಗೂ ಶೀಘ್ರದಲ್ಲಿಯೇ ಚಾಲನೆ ನೀಡಲಾಗುವುದು' ಎಂದು ಆರ್.ಚಂದ್ರು ಹೇಳಿದ್ದಾರೆ.

ಎರಡು ಚಿತ್ರ ಘೋಷಿಸಿದ ಹರಿಸಂತೋಷ್

'ಅಲೆಮಾರಿ' ಚಿತ್ರದೊಂದಿಗೆ ನಿರ್ದೇಶಕನಾಗಿ ಸಿನಿ ಪಯಣ ಆರಂಭಿಸಿ ಈತನಕ ಹತ್ತು ಚಿತ್ರಗಳನ್ನು ನಿರ್ದೇಶಿಸಿರುವ ಹರಿ ಸಂತೋಷ್, 'ಡಿಸ್ಕೊ' ಹಾಗೂ 'congratulations ಬ್ರದರ್' ಚಿತ್ರಗಳನ್ನು ಘೋಷಿಸಿದ್ದಾರೆ. ಕೆ.ವಿ.ಎನ್ ಪ್ರೊಡಕ್ಷನ್ಸ್ ಮುಖ್ಯಸ್ಥರಾದ ವೆಂಕಟ್ ನಾರಾಯಣ್ ಪೋಸ್ಟರ್ ಅನಾವರಣ ಮಾಡಿ ಚಿತ್ರಗಳಿಗೆ ಚಾಲನೆ ನೀಡಿದರು.

'ಡಿಸ್ಕೋ' ನಾಯಕನ ಅಡ್ಡ ಹೆಸರು. ವಿಕ್ಕಿ ವರುಣ್ ಈ ಚಿತ್ರದ ನಾಯಕ. ನನ್ನ ಹಾಗೂ ವಿಕ್ಕಿ ವರುಣ್ ಕಾಂಬಿನೇಶನ್‌ನಲ್ಲಿ 'ಕಾಲೇಜ್ ಕುಮಾರ' ಚಿತ್ರದ ನಂತರ ಈ ಚಿತ್ರ ಮೂಡಿಬರುತ್ತಿದೆ. ಇದೊಂದು ಹಳ್ಳಿಯಲ್ಲಿ ನಡೆಯುವ ಕಥೆ. ನಮ್ಮ 'ಪೆನ್ ಎನ್ ಪೇಪರ್' ಸ್ಟುಡಿಯೋಸ್ ಹಾಗೂ ಕಲ್ಲೂರ್ ಸಿನಿಮಾಸ್ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದೆ. ಧ್ರುವ್ ಸಂಗೀತ ನೀಡಲಿದ್ದಾರೆ' ಎಂದು ಮಾಹಿತಿ ನೀಡಿದರು ಹರಿ ಸಂತೋಷ್.

'congratulations ಬ್ರದರ್' ಚಿತ್ರದ ಕಥೆ ಬರೆಯಲು ಒಂದು ವರ್ಷವಾಯಿತು. ಮಾರ್ನಿಂಗ್ ಶೋ ಆಡಿಯನ್ಸ್ ತಲೆಯಲ್ಲಿಟ್ಟಿಕೊಂಡು ಕಥೆ ಮಾಡಿದ್ದೇವೆ. ಪ್ರತಾಪ್ ಗಂಧರ್ವ ಈ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದಾರೆ. ರಕ್ಷಿತ್ ನಾಯಕನಾಗಿ ಅಭಿನಯಿಸುತ್ತಿದ್ದಾರೆ. ಸಂಜನಾ ಈ ಚಿತ್ರದ ನಾಯಕಿ. ಅನುಷಾ ಎಂಬ ಹೊಸ ಹುಡುಗಿಯನ್ನು ಪರಿಚಯಿಸುತ್ತಿದ್ದೇವೆ' ಎಂದು ಅವರು ತಿಳಿಸಿದರು.

ಈ ಚಿತ್ರಕ್ಕೆ ಸೂರಜ್ ಜೋಯಿಸ್ ಸಂಗೀತ, ಗುರು ಛಾಯಾಚಿತ್ರಗ್ರಹಣವಿದೆ.

ವಿಕ್ಕಿ ವರುಣ್

ಏಳು ಸಿನಿಮಾಗಳು ತೆರೆಗೆ

ಡಾಲಿ ಧನಂಜಯ, ಸತ್ಯದೇವ್ ಮುಖ್ಯ ಭೂಮಿಕೆಯಲ್ಲಿರುವ 'ಜೀಬ್ರಾ'ದ ಕನ್ನಡ ಅವತರಣಿಕೆ ಸೇರಿದಂತೆ ಒಟ್ಟು ಏಳು ಸಿನಿಮಾಗಳು ಇಂದು (ನ.22) ತೆರೆಯಲ್ಲಿವೆ.

ಮರ್ಯಾದೆ ಪ್ರಶ್ನೆ

ಸುನೀಲ್ ರಾವ್, ರಾಕೇಶ್ ಅಡಿಗ ಮತ್ತು ಪೂರ್ಣಚಂದ್ರ ಮೈಸೂರು ಮುಖ್ಯಭೂಮಿಕೆಯಲ್ಲಿರುವ ಚಿತ್ರ 'ಮರ್ಯಾದೆ ಪ್ರಶ್ನೆ'. ನಾಗರಾಜ ಸೋಮಯಾಜಿ ನಿರ್ದೇಶನದ ಚಿತ್ರವನ್ನು ಆರ್‌ಜೆ ಪ್ರದೀಪ್ ತಮ್ಮ ಸಕ್ಕತ್ ಸ್ಟುಡಿಯೊ ಮೂಲಕ ನಿರ್ಮಾಣ ಮಾಡಿದ್ದಾರೆ. ಚಿತ್ರಕ್ಕೆ ಪ್ರದೀಪ್ ಅವರೇ ಕಥೆ ಬರೆದಿದ್ದಾರೆ. ನಾಗರಾಜ್ ಈ ಹಿಂದೆ 'ದಿ ಬೆಸ್ಟ್ ಆ್ಯಕ್ಟರ್' ಚಿತ್ರ ನಿರ್ದೇಶಿಸಿದ್ದರು. ಚಿತ್ರಕ್ಕೆ ಸಂದೀಪ್ ವೆಲ್ಲುರಿ ಛಾಯಾಚಿತ್ರಗ್ರಹಣ, ಅರ್ಜುನ್ ರಾಮು ಸಂಗೀತವಿದೆ. ತೇಜು ಬೆಳವಾಡಿ, ಶೈನ್ ಶೆಟ್ಟಿ, ಪ್ರಭು ಮುಂಡ್ಕುರ್, ನಾಗಾಭರಣ, ಪ್ರಕಾಶ್ ತುಮ್ಮಿನಾಡು ಮುಂತಾದವರು ತಾರಾಗಣದಲ್ಲಿದ್ದಾರೆ.

ಲವ್ ರೆಡ್ಡಿ

ಹೊಸಬರೇ ಸೇರಿ ಮಾಡಿರುವ ನೈಜ ಘಟನೆ ಆಧಾರಿತ ಚಿತ್ರ 'ಲವ್ ರೆಡ್ಡಿ'. ನಟ ದುನಿಯಾ ವಿಜಯ್ ಚಿತ್ರವನ್ನು ಪ್ರೆಸೆಂಟ್ ಮಾಡುತ್ತಿದ್ದಾರೆ. ಆಂಧ್ರ ಪ್ರದೇಶ ಹಾಗೂ ಕರ್ನಾಟಕದ ಗಡಿ ಭಾಗದಲ್ಲಿ ನಡೆದ ನೈಜ ಘಟನೆಯಾಧಾರಿತ ಸಿನಿಮಾಗೆ ಸ್ಮರಣ್ ರೆಡ್ಡಿ ಆ್ಯಕ್ಷನ್ ಕಟ್ ಹೇಳಿದ್ದಾರೆ. ಯುವ ನಟ ಅಂಜನ್ ರಾಮಚಂದ್ರಗೆ ಶ್ರಾವಣಿ ಜೋಡಿಯಾಗಿದ್ದಾರೆ. ಚಿತ್ರದ ತೆಲುಗು ಅವತರಣಿಕೆ ಈಗಾಗಲೇ ಬಿಡುಗಡೆಗೊಂಡಿದೆ.

ಪ್ರಭುತ್ವ

ಚೇತನ್ ಚಂದ್ರ ನಾಯಕನಾಗಿ ನಟಿಸಿರುವ ಈ ಚಿತ್ರವನ್ನು ಮೇಘಡಹಳ್ಳಿ ಶಿವಕುಮಾರ್ ಕಥೆ ಬರೆದು ನಿರ್ದೇಶಿಸಿದ್ದಾರೆ. ರವಿರಾಜ್ ಎಸ್ ಕುಮಾರ್ ನಿರ್ಮಿಸಿದ್ದಾರೆ. ಮತದಾನ ಅಮೂಲ್ಯವಾದ್ದದ್ದು. ಹಾಗಾಗಿ ಮತವನ್ನು ಮಾರಾಟ ಮಾಡಿಕೊಳ್ಳಬಾರದು ಎಂಬ ಸಂದೇಶ ಹೊಂದಿರುವ ಚಿತ್ರವಿದು. ಪಾವನ ಚಿತ್ರದ ನಾಯಕಿ. ಲೋಕೇಶ್, ವಿಜಯ್ ಚೆಂಡೂರ್, ಡ್ಯಾನಿ ಮುಂತಾದವರು ಚಿತ್ರದಲ್ಲಿದ್ದಾರೆ. ಎಮಿಲ್ ಸಂಗೀತ, ಕೆ.ಎಸ್ ಚಂದ್ರಶೇಖರ್ ಛಾಯಾಚಿತ್ರಗ್ರಹಣವಿದೆ.

ಟೆನೆಂಟ್

ಧರ್ಮ ಕೀರ್ತಿರಾಜ್, ತಿಲಕ್ ರಾಜ್ ಅಭಿನಯದ ಚಿತ್ರ 'ಟೆನೆಂಟ್'. ವಿಎಫ್‌ಎಕ್ಸ್ ತಜ್ಞರಾಗಿರುವ ಶ್ರೀಧರ್ ಶಾಸ್ತ್ರೀ ಈ ಚಿತ್ರಕ್ಕೆ ಕಥೆ ಬರೆದು, ಆ್ಯಕ್ಷನ್ ಕಟ್ ಹೇಳಿದ್ದಾರೆ. ಮಾಸ್ಟರ್ ಚಾಯ್ಸ್ ಕ್ರಿಯೇಷನ್ ಅಡಿಯಲ್ಲಿ ನಾಗರಾಜ್ ಟಿ ಬಂಡವಾಳ ಹೂಡಿದ್ದಾರೆ.

'ಕ್ರೈಂ, ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರವಿದು. ಸೋನು ಗೌಡ, ರಾಕೇಶ್ ಮಯ್ಯ ಹಾಗೂ ಉಗ್ರಂ ಮಂಜು ಈ ಚಿತ್ರದಲ್ಲಿ ಮುಖ್ಯಭೂಮಿಕೆಯಲ್ಲಿದ್ದಾರೆ. ಗಿರೀಶ್ ಹೋತೂರ್ ಸಂಗೀತ, ಉಜ್ವಲ್ ಚಂದ್ರ ಸಂಕಲನ, ಮನೋಹರ್ ಜೋಷಿ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಅಂಶು

ಕಿರುತೆರೆ ನಟಿ ನಿಶಾ ರವಿಕೃಷ್ಣನ್ ನಾಯಕಿಯಾಗಿ ನಟಿಸಿರುವ 'ಅಂಶು' ಚಿತ್ರ ನವೆಂಬರ್ 21ರಂದು ತೆರೆ ಕಂಡಿದೆ. ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರಕ್ಕೆ ಎಂ.ಸಿ ಚನ್ನಕೇಶವ ಆ್ಯಕ್ಷನ್ ಕಟ್ ಹೇಳಿದ್ದಾರೆ.

ಆರಾಮ್ ಅರವಿಂದ್‌ಸ್ವಾಮಿ

ಅನೀಶ್ ತೇಜೇಶ್ವರ್, ಮಿಲನಾ ನಾಗರಾಜ್ ಜೋಡಿಯಾಗಿ ನಟಿಸಿರುವ ಈ ಚಿತ್ರಕ್ಕೆ ಅಭಿಷೇಕ್ ಶೆಟ್ಟಿ ಆ್ಯಕ್ಷನ್ ಕಟ್ ಹೇಳಿದ್ದಾರೆ. 'ನೋಡೋಕೆ ಫುಲ್ ಆರಾಮವಾಗಿರುವ ಅರವಿಂದ್ ಸ್ವಾಮಿ ಲೈಫ್‌ನಲ್ಲಿ ಬರೀ ಟೆನ್ಷನ್. ಪ್ರೀತಿ, ಮದುವೆ, ದುಡ್ಡು, ಫ್ಯಾಮಿಲಿ ಸುತ್ತ ಸಾಗುವ ಕಥೆ. ಫ್ಯಾಮಿಲಿ ಎಂಟರ್‌ಟೈನರ್ ಸಿನಿಮಾವಿದು' ಎಂದಿದ್ದಾರೆ ನಿರ್ದೇಶಕರು.

ಹೃತಿಕಾ ಶ್ರೀನಿವಾಸ್ ಮತ್ತೋರ್ವ ನಾಯಕಿ. ಅರ್ಜುನ್ ಜನ್ಯ ಸಂಗೀತ, ವೈವಿಬಿ ಶಿವಸಾಗರ್ ಛಾಯಾಚಿತ್ರಗ್ರಹಣ, ಉಮೇಶ್ ಆರ್.ಬಿ ಸಂಕಲನವಿದೆ. ಶ್ರೀಕಾಂತ್ ಪ್ರಸನ್ನ ಹಾಗೂ ಪ್ರಶಾಂತ್ ರೆಡ್ಡಿ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

ಮಿಲನಾ ನಾಗರಾಜ್

ನಾ ನಿನ್ನ ಬಿಡಲಾರೆಯಲ್ಲಿ ಆತ್ಮದ ಆಟ

ಚಿತ್ರತಂಡ

ಬಹುತೇಕ ಹೊಸಬರಿಂದಲೇ ಕೂಡಿರುವ 'ನಾ ನಿನ್ನ ಬಿಡಲಾರೆ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನವೀನ್ ಜಿ.ಎಸ್ ನಿರ್ದೇಶಿಸಿ, ಭಾರತಿ ಬಾಲಿ ನಿರ್ಮಿಸಿರುವ ಚಿತ್ರ ನವೆಂಬರ್ 29ರಂದು ತೆರೆ ಕಾಣಲಿದೆ.

ದೇವರು, ದೆವ್ವ, ಆತ್ಮದ ಕುರಿತಾದ ಕಥೆ ಹೊಂದಿರುವ ಚಿತ್ರ ಎಂಬುದು ಟ್ರೇಲರ್‌ನಿಂದ ಗೊತ್ತಾಗುತ್ತಿದೆ. ಸಸ್ಪೆನ್ಸ್, ಥ್ರಿಲ್ಲರ್ ಜಾನರ್‌ನ ಚಿತ್ರದಲ್ಲಿ ಪ್ರೇಮಕಥೆಯೂ ಇದೆ. ಅಂಬಾಲಿ ಭಾರತಿ, ಪಂಚಿ ಜೋಡಿಯಾಗಿ ಕಾಣಿಸಿಕೊಂಡಿದ್ದಾರೆ. ಕೆ.ಎಸ್ ಶ್ರಿಧರ್, ಶ್ರೀನಿವಾಸ್ ಪ್ರಭು, ಮದನ್ ಹರಿಣಿ, ಮಹಾಂತೇಶ್ ಮೊದಲಾದವರು ಚಿತ್ರದಲ್ಲಿದ್ದಾರೆ.

'ಲಕ್ಷ್ಮಿ ಮತ್ತು ಅನಂತ್‌ನಾಗ್ ಕಾಂಬಿನೇಷನ್‌ನಲ್ಲಿ 1979ರಲ್ಲಿ ಬಂದ 'ನಾ ನಿನ್ನ ಬಿಡಲಾರೆ' ಚಿತ್ರ ಸೂಪರ್ ಹಿಟ್ ಆಗಿತ್ತು. ಈ ಚಿತ್ರದ ಪ್ರಮುಖ ಹೈಲೈಟ್ ಎಂದರೆ ಮಂತ್ರಾಲಯದ ರಾಘವೇಂದ್ರ ಸ್ವಾಮಿ. ಅದರಂತೆಯೇ ನಮ್ಮ ಚಿತ್ರದಲ್ಲಿಯೂ ಅವರೇ ಹೈಲೈಟ್' ಎಂದರು ನಿರ್ದೇಶಕರು.

ವಾಲ್ಮೀಕಿ ನಿಗಮ: 28ಕ್ಕೆ ವಿಚಾರಣೆ

ಬೆಂಗಳೂರು: 'ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿನ ಹಣ ದುರ್ಬಳಕೆ ಪ್ರಕರಣಕ್ಕೆ ಸಂಬಂಧಿಸಿದಂತೆ; ನಿಗಮದ ಮಾಜಿ ವ್ಯವಸ್ಥಾಪಕ ಜೆ.ಜಿ. ಪದ್ಮನಾಭ, ಹೈದರಾಬಾದ್‌ನ ಮಧ್ಯವರ್ತಿ ಎಂ.ಚಂದ್ರಮೋಹನ್, ಉಡುಪಿಯ ಜಿ.ಕೆ.ಜಗದೀಶ್, ಆಂಧ್ರ-ಪ್ರದೇಶದ ಕಾಕಿ ಶ್ರೀನಿವಾಸ್ ರಾವ್ ಸಲ್ಲಿಸಿರುವ ಜಾಮೀನು ಅರ್ಜಿಗಳ ವಿಚಾರಣೆಯನ್ನು ಹೈಕೋರ್ಟ್ ಇದೇ 28ಕ್ಕೆ ನಿಗದಿಪಡಿಸಿದೆ.

ಈ ನಾಲ್ಕೂ ಜಾಮೀನು ಅರ್ಜಿಗಳು ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ಪೀಠದಲ್ಲಿ ಗುರುವಾರ ವಿಚಾರಣೆಗೆ ನಿಗದಿಯಾಗಿದ್ದವು. ವಿಚಾರಣೆ ವೇಳೆ ಎಸ್‌ಐಟಿ ಪರ ಹಾಜರಾಗಿದ್ದ ವಿಶೇಷ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, 'ಈ ಪ್ರಕರಣದಲ್ಲಿನ ಮತ್ತೊಬ್ಬ ಆರೋಪಿ ತೇಜ ತಮ್ಮಯ್ಯ ಅವರೂ ಜಾಮೀನು ಕೋರಿದ್ದಾರೆ. ಆದ್ದರಿಂದ, ಎಲ್ಲಾ ಅರ್ಜಿಗಳನ್ನು ಒಟ್ಟಿಗೆ ವಿಚಾರಣೆಗೆ ನಿಗದಿಗೊಳಿಸಬೇಕು' ಎಂದು ಮನವಿ ಮಾಡಿದರು. ಇದನ್ನು ಪರಿಗಣಿಸಿದ ಪೀಠ ಒಟ್ಟಾಗಿ ವಿಚಾರಣೆಗೆ ನಿಗದಿಗೊಳಿಸಲು ರಿಜಿಸ್ಟ್ರಿಗೆ ಆದೇಶಿಸಿ, ವಿಚಾರಣೆ ಮುಂದೂಡಿತು.

ಮನೋಹರ್ ತಹಶೀಲ್ದಾರ್ ನಿಧನ

ಪ್ರಜಾವಾಣಿ ವಾರ್ತೆ

ಹಾವೇರಿ: ಜಿಲ್ಲೆಯ ಹಾನಗಲ್ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ, ಸಚಿವರೂ ಆಗಿದ್ದ ಬಿಜೆಪಿ ಮುಖಂಡ ಮನೋಹರ್ ತಹಶೀಲ್ದಾರ್ (79) ಅವರು ಬೆಂಗಳೂರಿನ ಆಸ್ಪತ್ರೆಯೊಂದರಲ್ಲಿ ಗುರುವಾರ ನಿಧನರಾದರು.

ಹಾನಗಲ್ ಪಟ್ಟಣದ ಎನ್‌ಸಿಜೆಸಿ ಮಹಾವಿದ್ಯಾಲಯ ಆವರಣದಲ್ಲಿ ಗುರುವಾರ ಪಾರ್ಥಿವ ಶರೀರದ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು.

ಹುಟ್ಟೂರಾದ ಅಕ್ಕಿವಳ್ಳಿ ಗ್ರಾಮದಲ್ಲಿನ ತೋಟದ ಜಮೀನಿನಲ್ಲಿ ಶುಕ್ರವಾರ (ನ. 22) ಸರ್ಕಾರಿ ಗೌರವದೊಂದಿಗೆ ಅಂತ್ಯಕ್ರಿಯೆ ನಡೆಯಲಿದೆ.

ಮನೋಹರ್ ತಹಶೀಲ್ದಾರ್

ಹಾನಗಲ್ ತಾಲ್ಲೂಕಿನ ಅಕ್ಕಿವಳ್ಳಿ ಗ್ರಾಮದ ಮನೋಹರ್, 1978ರಲ್ಲಿ ಮೊದಲ ಬಾರಿಗೆ ಶಾಸಕರಾದರು. 1989, 1999 ಮತ್ತು 2013ರ ಅವಧಿಯಲ್ಲೂ ಶಾಸಕರಾಗಿ ಆಯ್ಕೆಯಾಗಿದ್ದರು.

ಬಲಿಜ ಸಮುದಾಯಕ್ಕೆ ಸೇರಿದ್ದ ಅವರು ಎಸ್.ಎಂ. ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ ವಿಧಾನಸಭೆ ಉಪ ಸಭಾಪತಿಯಾಗಿದ್ದರು.

2015ರಲ್ಲಿ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಅವರು ಅಬಕಾರಿ ಸಚಿವರು ಆಗಿದ್ದರು. 2023ರ ವಿಧಾನ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಟಿಕೆಟ್ ಸಿಗದಿದ್ದಕ್ಕೆ ಕಾಂಗ್ರೆಸ್ ತೊರೆದು ಜೆಡಿಎಸ್ ಸೇರಿದ್ದರು. ಕಳೆದ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಅವರು ಜೆಡಿಎಸ್ ಪಕ್ಷವನ್ನು ತೊರೆದು, ಬಿಜೆಪಿಗೆ ಸೇರ್ಪಡೆಯಾಗಿದ್ದರು.

ಹಾಸನ ನಗರಾಭಿವೃದ್ಧಿ ಪ್ರಾಧಿಕಾರ ಬಿ.ಎಂ.ರಸ್ತೆ, ಹಾಸನ.

ದೂರವಾಣಿ ಸಂಖ್ಯೆ: 268876, 266719,

ನಂ:ಹಾನಪ್ರಾ/ಎಸ್.ಎಂ.ಕೆ.ನಗರ/ಮೂ.ನಿ/ವಾ.ನಿ/ಇ-ಹರಾಜು/ಪ್ರಕಟಣೆ/02/2024-25

ದಿನಾಂಕ:19.11.2024

ಹಾಸನ ನಗರಾಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸಿರುವ ಎಸ್.ಎಂ.ಕೆ.ನಗರ (Airport enclave) ವಸತಿ ಬಡಾವಣೆಯಲ್ಲಿ ಮೂಲೆ ನಿವೇಶನಗಳು ಮತ್ತು ವಾಣಿಜ್ಯ ನಿವೇಶನಗಳ ಇ-ಹರಾಜು ಸಾರ್ವಜನಿಕ ಪ್ರಕಟಣೆ

ಇ-ಹರಾಜನ್ನು ಆರಂಭಿಸುವ ದಿನಾಂಕ:02.12.2024 ಭಾರತೀಯ ಕಾಲಮಾನ 17.00 ಗಂಟೆಯ ನಂತರ ಇ.ಎಂ.ಡಿ. ಮೊತ್ತದೊಂದಿಗೆ ಇ-ಹರಾಜಿನಲ್ಲಿ ಪಾಲ್ಗೊಳ್ಳಲು, ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ:31.12.2024 ಭಾರತೀಯ ಕಾಲಮಾನ 17.00 ಗಂಟೆವರೆಗೆ ಕ್ರಮ ಸಂಖ್ಯೆ:01 ರಿಂದ 34 ರವರೆಗಿನ ನಿವೇಶನಗಳ ಇ-ಹರಾಜನ್ನು ಮುಕ್ತಾಯಗೊಳಿಸಲು ಕೊನೆಯ ದಿನಾಂಕ:06.01.2025 ಭಾರತೀಯ ಕಾಲಮಾನ 17.00ಗಂಟೆಗೆ (ಸಂಜೆ-5.00 ಗಂಟೆ) (ಡೆಲ್ಟಾ ಟೈಮ್ 5.00 ನಿಮಿಷ) ಕ್ರಮ ಸಂಖ್ಯೆ:35 ರಿಂದ 62 ರವರೆಗಿನ ನಿವೇಶನಗಳ ಇ-ಹರಾಜನ್ನು ಮುಕ್ತಾಯಗೊಳಿಸಲು ಕೊನೆಯ ದಿನಾಂಕ:07.01.2025 ಭಾರತೀಯ ಕಾಲಮಾನ 17.00ಗಂಟೆಗೆ (ಸಂಜೆ-5.00ಗಂಟೆ) (ಡೆಲ್ಟಾ ಟೈಮ್ 5.00 ನಿಮಿಷ) ಕ್ರಮ ಸಂಖ್ಯೆ:63 ರಿಂದ 90 ರವರೆಗಿನ ನಿವೇಶನಗಳ ಇ-ಹರಾಜನ್ನು ಮುಕ್ತಾಯಗೊಳಿಸಲು ಕೊನೆಯ ದಿನಾಂಕ:08.01.2024 ಭಾರತೀಯ ಕಾಲಮಾನ 17.00 ಗಂಟೆಗೆ (ಸಂಜೆ-5.00ಗಂಟೆ) (ಡೆಲ್ಟಾ ಟೈಮ್ 5.00 ನಿಮಿಷ) ಇ-ಹರಾಜಿನಲ್ಲಿ ಭಾಗವಹಿಸುವವರು, ಹರಾಜಿನಲ್ಲಿರುವ ನಿವೇಶನದ ಒಟ್ಟು ಮೌಲ್ಯ ರೂ.30.00 ಲಕ್ಷದವರೆಗೆ ಪಾವತಿ ಮಾಡಬೇಕಾದ ಇ.ಎಂ.ಡಿ ಹಣ ಪ್ರತಿ ನಿವೇಶನಕ್ಕೆ ರೂ.50,000/- ಹಾಗೂ ರೂ.30.00 ಲಕ್ಷಕ್ಕಿಂತ ಮೇಲ್ಪಟ್ಟ ಮೌಲ್ಯದ ನಿವೇಶನಗಳಿಗೆ ಇ.ಎಂ.ಡಿ ಹಣ ಪ್ರತಿ ನಿವೇಶನಕ್ಕೆ ರೂ.1,00,000/- ಕನಿಷ್ಠ ಬಿಡ್ ಬದಲಾವಣೆ ಮೊತ್ತ ನಿವೇಶನಗಳಿಗೆ ರೂ.10000/-ಗಳು. ಇ-ಹರಾಜಿನಲ್ಲಿ ಭಾಗವಹಿಸಲು ಹೆಚ್ಚಿನ ಮಾಹಿತಿಗಾಗಿ ನಿವೇಶನಗಳ ವಿವರಕ್ಕೆ ಸಂಪರ್ಕಿಸಬೇಕಾದ ಅಂತರ್ಜಾಲ https://kppp.karnataka.gov.in

ಎಸ್.ಎಂ.ಕೆ.ನಗರ ವಸತಿ ಬಡಾವಣೆಯಲ್ಲಿ ಲಭ್ಯವಿರುವ ಮೂಲೆ ಮತ್ತು ವಾಣಿಜ್ಯ ನಿವೇಶನಗಳು (ಕ್ರ.ಸಂ. 01 ರಿಂದ 34)

ಕ್ರ. ಸಂ	ನಿವೇಶನ ಸಂಖ್ಯೆ ಮೂಲೆ ನಿವೇಶನ	Site Facing of roads	ಅಳತೆ (ಮೀಟರ್‌ಗಳಲ್ಲಿ) ಪೂರ್ವ-ಪಶ್ಚಿಮ	ಉತ್ತರ-ದಕ್ಷಿಣ	ವಿಸ್ತೀರ್ಣ ಚ.ಮೀ	ಪ್ರಾಧಿಕಾರದಿಂದ ನಿಗಧಿಪಡಿಸಿರುವ ಕನಿಷ್ಠ ಬೆಲೆ(ಪ್ರತಿ. ಚ.ಅಡಿ ಒಂದಕ್ಕೆ ರೂ.2250/-
1	1	S-E	(15.00+17.00)/2	(4.80+12.80)/2	140.80	3408750
2	22	S-E	(15.00+16.30)/2	(9.40+15.90)/2	197.97	4792854
3	46	S-W	(12.00+13.00)/2	(6.80+12.10)/2	118.13	2859927
4	1149	N-W	(15.50+8.60)/2	(28.30+27.50)/2	336.19	8139160
5	2002	S-W	(13.20+21.10)/2	(15.00+17.00)/2	274.40	6643224
6	2038	S-W	(11.30+17.60)/2	(12.00+13.60)/2	184.96	4477882
7	2371	S-W	(15+26.40)/2	(18.00+21.70)/2	410.90	9947889
8	2372	S-E	(7.40+15.00)/2	(12.00+14.40)/2	147.84	3579206
9	3750	S-E	(16.30+16.60)/2	(18.00+18.20)/2	297.75	7208528
10	3762	N-E	(19.40+16.60)/2	(18.20+18.00)/2	325.80	7887618
11	4448	S-E	(18.00+18.20)/2	(17.00+19.60)/2	331.23	8019078
12	4476	N-E	(19.80+16.60)/2	(18.30+18.00)/2	330.33	7997289
13	4931	N-W	(25.90+24.30)/2	(5.10+12.10)/2	215.86	5225971
14	5401	S-W	(10.30+2.50)/2	(53.40+52.80)/2	339.84	8227526
15	6312	N-E	(41.30+8.80)/2	(48.00+34.50)/2	1033.30	25016193

ಎಸ್.ಎಂ.ಕೆ.ನಗರ ವಸತಿ ಬಡಾವಣೆಯಲ್ಲಿ ಲಭ್ಯವಿರುವ ವಾಣಿಜ್ಯ ನಿವೇಶನಗಳ ವಿವರಗಳು (ಕ್ರ.ಸಂ. 16 ರಿಂದ 34)

ಕ್ರ. ಸಂ	ನಿವೇಶನ ಸಂಖ್ಯೆ ವಾಣಿಜ್ಯ ನಿವೇಶನ	Site Facing of roads	ಅಳತೆ (ಮೀಟರ್‌ಗಳಲ್ಲಿ) ಪೂರ್ವ-ಪಶ್ಚಿಮ	ಉತ್ತರ-ದಕ್ಷಿಣ	ವಿಸ್ತೀರ್ಣ ಚ.ಮೀ	ಪ್ರಾಧಿಕಾರದಿಂದ ನಿಗಧಿಪಡಿಸಿರುವ ಕನಿಷ್ಠ ಬೆಲೆ(ಪ್ರತಿ. ಚ.ಅಡಿ ಒಂದಕ್ಕೆ ರೂ.3250/-
16	6342	East	24.40	36.10	878.40	30717648
17	6343	East	24.40	35.95	875.96	30674985
18	6344	East	24.40	36.20	883.28	30888302
19	6346	East	24.40	36.00	878.40	30717648
20	6353	East	24.40	35.80	873.52	30546994
21	6356	N-E	Odd site	Odd site	967.80	33843940
22	6357	S-E	Odd site	Odd site	599.81	20975272
23	6365	East	Odd site	Odd site	1013.17	35430554
24	6369	N-E	39.60+58.00/2	25.30+27.00/2	1276.12	44625916
25	6370	N-W	18.30+25.30/2	13.00+30.30/2	471.97	16504791
26	6396	S-E	25.40+32.90/2	12.25+32.15/2	647.13	22630107
27	6408	West	25.60+21.20/2	33.00+32.50/2	766.35	26799260
28	6409	West	23.30	32.50	757.25	26481033
29	6410	West	23.30	32.50	757.25	26481033
30	6411	West	23.30	32.50	757.25	26481033
31	6412	West	18.30	32.45	592.92	20734412
32	6413	West	18.30	32.45	592.92	20734412
33	6414	West	18.30	32.20	589.26	20606422
34	6416	West	15.25	31.85	483.36	16903099

ಎಸ್.ಎಂ.ಕೆ.ನಗರ ವಸತಿ ಬಡಾವಣೆಯಲ್ಲಿ ಲಭ್ಯವಿರುವ ಮಧ್ಯಂತರ ವಸತಿ ನಿವೇಶನಗಳ ವಿವರಗಳು (ಕ್ರ.ಸಂ. 35 ರಿಂದ 62)

ಕ್ರ. ಸಂ	ನಿವೇಶನ ಸಂಖ್ಯೆ ವಾಣಿಜ್ಯ ನಿವೇಶನ	Site Facing of roads	ಅಳತೆ (ಮೀಟರ್‌ಗಳಲ್ಲಿ) ಪೂರ್ವ-ಪಶ್ಚಿಮ	ಉತ್ತರ-ದಕ್ಷಿಣ	ವಿಸ್ತೀರ್ಣ ಚ.ಮೀ	ಪ್ರಾಧಿಕಾರದಿಂದ ನಿಗಧಿಪಡಿಸಿರುವ ಕನಿಷ್ಠ ಬೆಲೆ(ಪ್ರತಿ. ಚ.ಅಡಿ ಒಂದಕ್ಕೆ ರೂ.2000/-
35	467	South	6.00	9.00	54.00	1162080
36	1867	West	9.00	6.00	54.00	1162080
37	5678	South	6.00	9.00	54.00	1162080
38	5679	South	6.00	9.00	54.00	1162080
39	5680	South	6.00	9.00	54.00	1162080
40	5681	South	6.00	9.00	54.00	1162080
41	5686	South	6.00	9.00	54.00	1162080
42	5688	South	6.00	9.00	54.00	1162080
43	5689	South	6.00	9.00	54.00	1162080
44	5692	North	6.00	9.00	54.00	1162080
45	5695	North	6.00	9.00	54.00	1162080
46	5699	North	6.00	9.00	54.00	1162080
47	5702	North	6.00	9.00	54.00	1162080
48	5708	South	6.00	9.00	54.00	1162080
49	5709	East	6.00	9.00	54.00	1162080
50	5710	East	6.00	9.00	54.00	1162080
51	5714	East	6.00	9.00	54.00	1162080
52	5719	North	6.00	9.00	54.00	1162080
53	5722	North	6.00	9.00	54.00	1162080
54	5724	North	6.00	9.00	54.00	1162080
55	5744	North	6.00	9.00	54.00	1162080
56	5746	North	6.00	9.00	54.00	1162080
57	5749	North	6.00	9.00	54.00	1162080
58	5753	North	6.00	9.00	54.00	1162080
59	5765	East	6.00	9.00	54.00	1162080
60	5767	East	6.00	9.00	54.00	1162080
61	5769	East	6.00	9.00	54.00	1162080
62	5771	East	6.00	9.00	54.00	1162080

ಎಸ್.ಎಂ.ಕೆ.ನಗರ ವಸತಿ ಬಡಾವಣೆಯಲ್ಲಿ ಲಭ್ಯವಿರುವ ಮಧ್ಯಂತರ ನಿವೇಶನಗಳ ವಿವರಗಳು (ಕ್ರ.ಸಂ. 63 ರಿಂದ 90)

ಕ್ರ. ಸಂ	ನಿವೇಶನ ಸಂಖ್ಯೆ ವಾಣಿಜ್ಯ ನಿವೇಶನ	Site Facing of roads	ಅಳತೆ (ಮೀಟರ್‌ಗಳಲ್ಲಿ) ಪೂರ್ವ-ಪಶ್ಚಿಮ	ಉತ್ತರ-ದಕ್ಷಿಣ	ವಿಸ್ತೀರ್ಣ ಚ.ಮೀ	ಪ್ರಾಧಿಕಾರದಿಂದ ನಿಗಧಿಪಡಿಸಿರುವ ಕನಿಷ್ಠ ಬೆಲೆ(ಪ್ರತಿ. ಚ.ಅಡಿ ಒಂದಕ್ಕೆ ರೂ.2000/-
63	5772	East	6.00	9.00	54.00	1162080
64	5788	South	6.00	9.00	54.00	1162080
65	5789	South	6.00	9.00	54.00	1162080
66	5791	South	6.00	9.00	54.00	1162080
67	5796	South	6.00	9.00	54.00	1162080
68	5800	South	6.00	9.00	54.00	1162080
69	5805	North	6.00	9.00	54.00	1162080
70	5810	North	6.00	9.00	54.00	1162080
71	5813	North	6.00	9.00	54.00	1162080
72	5818	South	6.00	9.00	54.00	1162080
73	5819	South	6.00	9.00	54.00	1162080
74	5822	South	6.00	9.00	54.00	1162080
75	5823	South	6.00	9.00	54.00	1162080
76	5825	South	6.00	9.00	54.00	1162080
77	5826	South	6.00	9.00	54.00	1162080
78	5828	South	6.00	9.00	54.00	1162080
79	5833	North	6.00	9.00	54.00	1162080
80	5835	North	6.00	9.00	54.00	1162080
81	5837	North	6.00	9.00	54.00	1162080
82	5841	North	6.00	9.00	54.00	1162080
83	5847	South	6.00	9.00	54.00	1162080
84	5852	South	6.00	9.00	54.00	1162080
85	5860	West	6.00	9.00	54.00	1162080
86	5870	North	6.00	9.00	54.00	1162080
87	5872	North	6.00	9.00	54.00	1162080
88	5873	North	6.00	9.00	54.00	1162080
89	5875	North	6.00	9.00	54.00	1162080
90	5877	North	6.00	9.00	54.00	1162080

ಇ-ಹರಾಜಿನ ಷರತ್ತು ಮತ್ತು ನಿಯಮ ನಿಬಂಧನೆಗಳು ಕೆಳಕಂಡಂತಿವೆ:- 1.ಇ-ಹರಾಜಿನಲ್ಲಿ ಭಾಗವಹಿಸಲಿಚ್ಛಿಸುವವರು ಇ-ಹರಾಜಿಗೆ ಸಂಬಂಧಿಸಿದ ಮಾಹಿತಿಯನ್ನು https://kppp.karnataka.gov.in ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಮುಖಪುಟದ ಡೌನ್‌ಲೋಡ್‌ನಲ್ಲಿ ಟೆಂಡರ್‌ದಾರರಿಗೆ ಬಳಕೆದಾರರ ಕೈಪಿಡಿಗಳು ಇಲ್ಲಿ New e-Auction Bidding user manual ಅನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್- 080-46010000 ಮತ್ತು 080-68948777 ಗೆ ಸಂಪರ್ಕಿಸಬಹುದು 2.ಪ್ಯಾನ್ ಕಾರ್ಡ್ (PAN Card, Aadhar Card) ಲಗತ್ತಿಸುವುದು. 3.ಇ-ಮೇಲ್ ವಿಳಾಸ/ ಮೊಬೈಲ್ ದೂರವಾಣಿ ಸಂಖ್ಯೆ/ಸ್ಥಿರ ದೂರವಾಣಿ (ಲ್ಯಾಂಡ್‌ಲೈನ್)ಸಂಖ್ಯೆ ನಮೂದಿಸಿರುವುದು. ನಿರ್ಧಿಷ್ಟಪಡಿಸಿದ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು, ವಿವರಗಳನ್ನು ಭರ್ತಿ ಮಾಡಿ, ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಬೇಕಾಗಿರುತ್ತದೆ. 4.ಪಾಲುದಾರ ಸಂಸ್ಥೆ/ಲಿಮಿಟೆಡ್ ಕಂಪನಿಗಳು/ಟ್ರಸ್ಟ್ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಹೀಗೆ ಭಾಗವಹಿಸುವ ಪಾಲುದಾರ ಸಂಸ್ಥೆ/ಲಿಮಿಟೆಡ್ ಕಂಪನಿಗಳು/ಟ್ರಸ್ಟ್ ಹರಾಜಿನಲ್ಲಿ ಭಾಗವಹಿಸುವ ಮುನ್ನ ತಮ್ಮ ಪಾಲುದಾರಿಕೆ ಸಂಸ್ಥೆಯ ನೊಂದಾವಣಿಯನ್ನು ಭಾರತ ದೇಶದಲ್ಲಿ ಮಾಡಿ ಕೊಂಡಿರಬೇಕು. 5.ಹರಾಜಿನ ನಿವೇಶನಗಳಿಗೆ ಸಂಬಂಧಿಸಿದ ಎಲ್ಲಾ ಕಾನೂನು ಪ್ರಕರಣಗಳು ಹಾಸನದ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುತ್ತದೆ. 6.ಇ.ಎಂ.ಡಿ.ಮೊತ್ತ ರೂ.50,000/- & ರೂ.1,00,000/-ಗಳನ್ನು ಹಾಗೂ ಇ-ಹರಾಜಿನ ಶುಲ್ಕವನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ DEBIT CARD/CREDIT CARD/NET BANKING ಮುಖಾಂತರ ಅಥವಾ ಡಿ.ಡಿ. ಯೊಂದಿಗೆ ಚಲನ್ ಮುದ್ರಿಸಿ ಐ.ಸಿ.ಐ.ಸಿ.ಐ. ಬ್ಯಾಂಕ್ ಶಾಖೆಗೆ ಪಾವತಿ ಮಾಡಬಹುದಾಗಿದೆ. 7.ಯಶಸ್ವಿ ಬಿಡ್‌ದಾರರು ಬಿಡ್ಡನ್ನು ಅಂಗೀಕೃತಗೊಂಡಿರುವ ಬಗ್ಗೆ ಇ-ಪೋರ್ಟಲ್ ಮುಖಾಂತರವೇ ಪರಿಶೀಲಿಸಿಕೊಂಡು, 25% ರಷ್ಟು ಬಿಡ್ ಮೊತ್ತವನ್ನು (ಇ.ಎಂ.ಡಿ. ರೂ. 50,000/- ಮತ್ತು ರೂ.1,00,000/-ಗಳನ್ನು ಹೊರತುಪಡಿಸಿ) ಇ-ಹರಾಜು ಮುಕ್ತಾಯಗೊಂಡು ಅಂಗೀಕೃತಗೊಂಡ ಅವಧಿಯ 72 ಗಂಟೆಗೆ (03ದಿನಗಳ ಒಳಗಾಗಿ) ಅಥವಾ ಅದರೊಳಗಾಗಿ ಕೆಳಕಂಡ ಬ್ಯಾಂಕ್ ಖಾತೆಗೆ ಪಾವತಿ ಮಾಡಬೇಕು (ಪಾವತಿಸಿದ ನಂತರ ಅದರ ಪ್ರತಿಯನ್ನು ಕಛೇರಿಗೆ ಸಲ್ಲಿಸುವುದು) ಸರ್ಕಾರಿ ರಜಾ/ಬ್ಯಾಂಕ್ ರಜಾ ಇದ್ದಲ್ಲಿ, ನಂತರದ ದಿನದಲ್ಲಿ (Next Day) ಪಾವತಿಸತಕ್ಕದ್ದು. ಹಾಗೂ ಪಾವತಿಸಲು ವಿಫಲರಾದಲ್ಲಿ ಇ.ಎಂ.ಡಿ. ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಪಾವತಿಯ ರೀತಿ: ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ.

Beneficiary Name: Commissioner, Hassan Urban Development Authority, Hassan (HUDA)

ಕ್ರಸಂ.	ಬ್ಯಾಂಕ್ ಹೆಸರು	ಖಾತೆ ಸಂಖ್ಯೆ	ಐ.ಎಫ್.ಎಸ್.ಸಿ. ಕೋಡ್
1	ಬ್ಯಾಂಕ್ ಆಫ್ ಬರೋಡ, ಹುಡಾ ಶಾಖೆ, ಬಿ.ಎಂ.ರಸ್ತೆ, ಹಾಸನ	74730100000418	BARB0VJHUDA (ZERO)

8.ಯಶಸ್ವಿ ಬಿಡ್‌ದಾರರು ನಿವೇಶನದ ಬಿಡ್‌ನ ಮೊತ್ತದ ಶೇಕಡಾ 25 ರಷ್ಟು ಪಾವತಿಸಿದ ನಂತರ ಇ-ಹರಾಜು ಬಿಡ್‌ನ್ನು ಪ್ರಾಧಿಕಾರ ಸ್ಥಿರೀಕರಣದ ಬಗ್ಗೆ ನಮೂನೆ 1 ರಲ್ಲಿ ತಿಳುವಳಿಕೆ ಪತ್ರವನ್ನು ಸ್ವೀಕರಿಸಿದ ದಿನಾಂಕದಿಂದ 45(ನಲವತ್ತೈದು) ದಿನಗಳೊಳಗಾಗಿ ವಸತಿ ಮೂಲೆ ನಿವೇಶನಗಳ ಪೂರ್ಣ ಹಣ ಸಂದಾಯ ಮಾಡಬೇಕು. ಅದಕ್ಕೆ ತಪ್ಪಿದಲ್ಲಿ ಶೇಕಡಾ 18 ರಂತೆ ಬಡ್ಡಿಯೊಂದಿಗೆ 90 (ತೊಂಭತ್ತು) ದಿನಗಳ ಕಾಲಾವಕಾಶ ವಿಸ್ತರಿಸಲಾಗುವುದು. ಪ್ರಾಧಿಕಾರವು ಒಪ್ಪಿದಲ್ಲಿ ಶೇಕಡಾ 21 ರಂತೆ ಬಡ್ಡಿ ದರದಲ್ಲಿ ಮುಂದಿನ 30 (ಮೂವತ್ತು) ದಿವಸಗಳ ಕಾಲಾವಕಾಶ ನೀಡಲಾಗುವುದು. ಈ ಮೇಲ್ಕಂಡ ಎಲ್ಲಾ ಕಾಲಾವಧಿಯು ಮುಗಿದ ನಂತರ ಮತ್ತೆ ಕಾಲಾವಕಾಶ ನೀಡಲು ನಿಯಮಾವಳಿಯಲ್ಲಿ ಅವಕಾಶವಿರುವುದಿಲ್ಲ. ನಿಗದಿತ ಅವಧಿ ಒಳಗಡೆ ಬಾಕಿ ಬಿಡ್ ಮೊತ್ತದ ಹಣ ಪಾವತಿಸದಿದ್ದಲ್ಲಿ ಹರಾಜು ಮೊತ್ತದ ಶೇಕಡಾ 25ರಷ್ಟು ಮುಂಗಡ ಠೇವಣಿ ಹಣವನ್ನು ಯಾವುದೇ ಸೂಚನೆ ನೀಡದೆ ಪ್ರಾಧಿಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಹಾಗೂ ಸದರಿ ಹರಾಜು ರದ್ದುಪಡಿಸಿ, ಹರಾಜಿಗೆ ತಗಲಿದ ವೆಚ್ಚವನ್ನು ನಿಮ್ಮಿಂದ ವಸೂಲು ಮಾಡಲಾಗುವುದು. 9.ಯಶಸ್ವಿ ಬಿಡ್‌ದಾರರು ನಿಗದಿತ ಅವಧಿಯೊಳಗೆ ಹಣ ಪಾವತಿಸದಿದ್ದಲ್ಲಿ ನಿವೇಶನ ಮರು ಹರಾಜು ಮಾಡಲಾಗುವುದು. ಮರುಹರಾಜಿನಲ್ಲಿ ಮೊದಲ ಬಿಡ್‌ದಾರರಿಂದ ಕಡಿಮೆ ಬಿಡ್ ಮೊತ್ತಕ್ಕೆ ಹರಾಜಿನಲ್ಲಿ ಪ್ರಾಧಿಕಾರಕ್ಕೆ ನಷ್ಟವಾಗುವ ಮೊತ್ತವನ್ನು ಮೊದಲ ಬಿಡ್‌ದಾರರಿಂದ ವಸೂಲಿ ಮಾಡಲು ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲಾಗುವುದು. ಒಂದು ವೇಳೆ ಮೊದಲ ಬಿಡ್‌ದಾರರು ಬಿಡ್ ಮೊತ್ತಕ್ಕಿಂತ ಹೆಚ್ಚಿನ ಮೊತ್ತಕ್ಕೆ ಹರಾಜಿನಲ್ಲಿ ಬರುವ ಲಾಭಾಂಶ ಮೊದಲ ಬಿಡ್‌ದಾರರಿಗೆ ನೀಡಲಾಗುವುದಿಲ್ಲ. 10.ಹರಾಜಿನಲ್ಲಿ ನಿವೇಶನ ಪಡೆದವರು ನಿವೇಶನವನ್ನು ವಿಭಜಿಸಲು ನಿಯಮಾವಳಿಯಲ್ಲಿ ಅವಕಾಶವಿರುವುದಿಲ್ಲ. 11.ಹರಾಜಿನಲ್ಲಿ ನಿವೇಶನ ಪಡೆದವರು ಪ್ರಾಧಿಕಾರದಿಂದ ನಿವೇಶನ ನೋಂದಾಯಿಸಿಕೊಡುವಾಗ ವಿಧಿಸಿದ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು. 12.ನಿವೇಶನಗಳನ್ನು ಎಲ್ಲಿ ಹೇಗಿವೆಯೋ ಹಾಗೆಯೇ ಹರಾಜು ನಡೆಸಲಾಗುವುದು. 13.ಬ್ಯಾಂಕ್ ಸೇವಾ ಶುಲ್ಕ ಇತ್ಯಾದಿಗಳನ್ನು ಬಿಡ್ದುದಾರರೇ ಭರಿಸತಕ್ಕದ್ದು. 14.ಅಖೈರು ಬಿಡ್ಡಾದ ನಂತರ ಸದರಿ ಬಿಡ್ಡನ್ನು ಅಂಗೀಕರಿಸುವ ಅಥವಾ ಯಾವುದೇ ಕಾರಣ ನೀಡದೆ, ತಿಳುವಳಿಕೆ ನೀಡದೆ ತಿರಸ್ಕರಿಸುವ ಹಕ್ಕನ್ನು ಪ್ರಾಧಿಕಾರ ಹೊಂದಿರುತ್ತದೆ. 15.ಈ ಹರಾಜನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಮೂಲೆ ಮತ್ತು ವಾಣಿಜ್ಯ ನಿವೇಶನಗಳ ವಿಲೇವಾರಿ ನಿಯಮ 1991ರ ನಿಯಮಾವಳಿ ರೀತ್ಯಾ ಕ್ರಮವಹಿಸಲಾಗುವುದು. 16.ನಿವೇಶನದ ವಿವರಕ್ಕೆ ಮತ್ತು ಇತರೆ ಮಾಹಿತಿಗಳಿಗೆ https://kppp.karnataka.gov.in ಲಾಗಿನ್ ಆಗಿ ಪಡೆಯಬಹುದು. 17.ಇ-ಹರಾಜಿನ ಯಶಸ್ವಿ ಬಿಡ್‌ದಾರರು (H-1 Bidders) ನಿವೇಶನದ ಬಿಡ್‌ನ ಮೊತ್ತದ ಶೇಕಡಾ 25ರಷ್ಟು ಹಣ ಪಾವತಿಸಿದ ನಂತರ ಪಾವತಿಸಿರುವ ರಸೀದಿ ಮತ್ತು ಸಂಬಂಧಿಸಿದ ದಾಖಲಾತಿಗಳನ್ನು ಕಛೇರಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು. 18.ಬಿಡ್‌ದಾರರು ಇ-ಪೋರ್ಟಲ್‌ನಲ್ಲಿ ನಿವೇಶನಕ್ಕಾಗಿ ರಿಜಿಸ್ಟ್ರೇಷನ್ ಮಾಡುವ ವೇಳೆ ಬ್ಯಾಂಕ್ ಖಾತೆ ಸಂಖ್ಯೆ ಮತ್ತು ಐ.ಎಫ್.ಎಸ್.ಸಿ ಕೋಡ್‌ನ್ನು ಸರಿಯಾಗಿ ರೀತಿಯಲ್ಲಿ ನಮೂದಿಸಬೇಕು. ತಪ್ಪಿದಲ್ಲಿ ಇ.ಎಂ.ಡಿ. ಮೊತ್ತವನ್ನು ಬ್ಯಾಂಕ್ ಖಾತೆಗೆ https://kppp.karnataka.gov.in ರವರು ವರ್ಗಾಯಿಸಲು ಸಾಧ್ಯವಾಗುವುದಿಲ್ಲ. 19.ಕ್ರ.ಸಂ. 01 ರಿಂದ 100 ನಿವೇಶನಗಳಿಗೆ ಕನಿಷ್ಠ ಬಿಡ್ ಬದಲಾವಣೆ ಮೊತ್ತ ರೂ.10000/- ಗಳು. 20.ಹರಾಜಿನಲ್ಲಿ ವಿಫಲರಾದವರಿಗೆ ಹರಾಜು ಅಂತಿಮಗೊಳಿಸಿದ ನಂತರ ಇ.ಎಂ.ಡಿ. ಮೊತ್ತವನ್ನು https://kppp.karnataka.gov.in ರವರು ನೇರವಾಗಿ ಬ್ಯಾಂಕ್ ಖಾತೆಗೆ ಮರುಪಾವತಿಸಲು ಕ್ರಮವಹಿಸುತ್ತಾರೆ. ಇ.ಎಂ.ಡಿ. ಮೊತ್ತವನ್ನು ಹಿಂದಿರುಗಿಸಲು ತಡವಾದ್ದಲ್ಲಿ, ಇ-ಮೇಲ್ ವಿಳಾಸ refund.eproc@karnataka.gov.in ಹಾಗೂ ದೂರವಾಣಿ ಸಂಖ್ಯೆ: 080-22230960, 080-22234115 ಸಂಪರ್ಕಿಸಬಹುದಾಗಿರುತ್ತದೆ. 21.ಇ-ಹರಾಜು ಕೊನೆಯ ಕ್ಷಣದಲ್ಲಿ ಬರುತ್ತಿರುವ ಬಿಡ್ಡುಗಳಿಗೆ ಡೆಲ್ಟಾ ಟೈಮ್ 5 ನಿಮಿಷಗಳ ಕಾಲ ವಿಸ್ತರಣೆಯಾಗುತ್ತದೆ. ಉದಾ: ಇ-ಹರಾಜಿನಲ್ಲಿ ಪಾಲ್ಗೊಳ್ಳಲು, ಆಸಕ್ತಿ ವ್ಯಕ್ತಪಡಿಸಲು ಅಂತಿಮ ಸಮಯ 5.00 ಎಂದಿದ್ದಲ್ಲಿ ಅದನ್ನು 4.57 ಗಂಟೆಗಳಿಂದ ಪ್ರಾರಂಭಿಸಿ, 5.02 ಘಂಟೆಗಳ ವರೆಗೆ ಅವಧಿ ವಿಸ್ತರಣೆಯಾಗುತ್ತದೆ. ಮತ್ತೆ ಯಾರಾದರೂ ಬಿಡ್‌ದಾರರು ಬಿಡ್ಡನ್ನು 5.01 ಘಂಟೆಗೆ ಮಾಡಿದ್ದಲ್ಲಿ 5.06 ವರೆಗೆ ಅವಧಿ ವಿಸ್ತರಣೆಯಾಗುತ್ತದೆ. 22.ಅಂತಿಮವಾಗಿ ನಿವೇಶನವನ್ನು ಬಿಡ್ದುದಾರರಿಗೆ ಹಸ್ತಾಂತರಿಸುವ ಸಮಯದಲ್ಲಿ ನಿವೇಶನಗಳ ನಿಖರವಾದ ಅಳತೆಯಲ್ಲಿ ಯಾವುದೇ ವ್ಯತ್ಯಾಸ ಕಂಡು ಬಂದಲ್ಲಿ ಹೆಚ್ಚು/ಕಡಿಮೆ ದರವನ್ನು ಬಿಡ್ದುದಾರರು ನೀಡಿರುವ ಬಿಡ್ಡಿನ ದರದ ಮೇಲೆ ನಿಗಧಿಪಡಿಸಲಾಗುವುದು. 23.ಹರಾಜಿಗೆ ಸಂಬಂಧಿಸಿದ ಮಾಹಿತಿಯನ್ನು www.hassan.uda.gov.in ವೆಬ್‌ಸೈಟ್‌ನಿಂದ ನೋಡಬಹುದಾಗಿದೆ. ನಿವೇಶನ ಮತ್ತು ಸ್ಥಳದ ಮಾಹಿತಿಗಾಗಿ ಸಂಪರ್ಕಿಸಬೇಕಾದ ಅಭಿಯಂತರರ ವಿವರ:-1)ಶ್ರೀ.ಎಂ.ಸಿ.ಸತ್ಯನಾರಾಯಣ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮೊ:9448330622 2)ಶ್ರೀ.ಬಿ.ಕೆ.ಸಣ್ಣೇಗೌಡ, ನಗರ ಯೋಜಕರು ಮೊ:9741938357, 3)ಚನ್ನಕೇಶವ, ಕಿರಿಯ ಇಂಜಿನಿಯರ್ ಮೊ:9844740640.

ಸಹಿ/-(ಕೆ.ಎಂ.ರಮೇಶ್) ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ, ಹಾಸನ.

ವಾಸಾಸಂಇ/ಹಿಸನಿ/ಹಾಸನ/677/ಕೆಎಸ್‌ಎಂಸಿಎ/2024-25

आईसीएफआरई-काष्ठ विज्ञान एवं प्रौद्योगिकी संस्थान
ICFRE-INSTITUTE OF WOOD SCIENCE AND TECHNOLOGY

(भारतीय वानिकी अनुसंधान एवं शिक्षा परिषद)
(Indian Council of Forestry Research and Education)
(पर्यावरण, वन एवंजलवायु परिवर्तन मंत्रालय स्वायत (निकाय एक की) भारत सरकार
(An Autonomous Body of the Ministry of Environment, Forest and Climate Change, Government of India)
पी.ओ .मल्लेश्वरम/P.O. Malleswaram,बेंगलूरु/Bengaluru – 560 003
E-mail: dir_iwst@icfre.org | Website: http://iwst.icfre.gov.in

No. 1-11/2019-20/IWST/Estt./III/2906 Date: 20-11-2024

RECRUITMENT NOTIFICATION

Applications are invited from eligible candidates for filling up ONE post of **Library Information Assistant (SC)**, FOUR posts of **Lower Division Clerk** (UR-2 nos; OBC-1 no; SC-1 no.) and TWELVE posts of **Multi-Tasking Staff** (UR-5 nos; OBC-3 nos; SC-2 nos; ST-1 no; & EWS-1no.) at the ICFRE-Institute of Wood Science and Technology, Bengaluru.
For more details, please visit the ICFRE-IWST websites **http://iwst. icfre.gov.in** and **http://icfre.gov.in**

Sd/- In-charge Director

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.

ಸಂ.ದಾಮಪಾ:ಕಾಅಿ1:24-25ಟೆ28/ತಿದ್ದು/2024-25 ದಿನಾಂಕ : 20-11-2024

ಟೆಂಡರ್ ಪ್ರಕಟಣೆ ತಿದ್ದುಪಡಿ

ಈ ಕಛೇರಿಯ ಟೆಂಡರ್ ಪ್ರಕಟಣೆ ನಂ:ದಾಮಪಾ:ಕಾಅಿ1:ಇ.ಟೆಂಡರ್:28:2024-25 ದಿನಾಂಕ : 14-10-2024 ರಲ್ಲಿ ಡಬಲ್ ಕವರ್ ಪದ್ಧತಿಯಲ್ಲಿ ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಟೆಂಡರ್ ಕರೆಯಲಾದ 2024-25 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿಯಡಿ ಕ್ರಮ ಸಂ.22, DMA/2024-25/SE3155/CALL-2, ಆವರಗೊಳ್ಳದ 200 ಟಿ.ಪಿ.ಡಿ ಸಾಮರ್ಥ್ಯದ ಘನತ್ಯಾಜ್ಯ ಸಂಸ್ಕರಣಾ ಘಟಕದ ಕಾರ್ಯಚರಣೆ ಹಾಗೂ ನಿರ್ವಹಣೆಯನ್ನು ಹೊರಗುತ್ತಿಗೆ ಮೂಲಕ ಕೈಗೊಳ್ಳುವುದು. ಅಂದಾಜು ಮೊತ್ತ ರೂ.490.00 ಲಕ್ಷಗಳ ಕಾಮಗಾರಿಯ ದಿನಾಂಕಗಳನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ದಿನಾಂಕ: 07-11-2024 ರಿಂದ 28-11-2024ರ ಸಂಜೆ 5.00 ಗಂಟೆಯವರೆಗೆ ಪಡೆಯುವುದು.

ವಾಸಾಇ/ದಾವಣಗೆರೆ/514/ಕೆಎಸ್‌ಎಂಸಿಎ/2024-25

ಸಹಿ/-ಕಾರ್ಯಪಾಲಕ ಅಭಿಯಂತರರು,
ಮಹಾನಗರ ಪಾಲಿಕೆ, ದಾವಣಗೆರೆ

ಕೃಷಿ ಮಾರಾಟ ಇಲಾಖೆ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ವಿಜಯಪುರ,

ಕ್ರ.ಸಂ:ಕೃಮಾಇ/ಕೃಉಮಾಸ/ವಿ/ಭ.ಸಿ/1188/2024-25 ದಿನಾಂಕ:19.11.2024

ಇ-ಸಂಗ್ರಹಣಾ ಅಲ್ಪಾವಧಿ ಟೆಂಡರ್ ಪ್ರಕಟಣೆ – 02ನೇ ಕರೆ

2024-25 ನೇ ಸಾಲಿಗಾಗಿ ಕಾರ್ಮಿಕ ಇಲಾಖೆ ಅಧಿಸೂಚಿತ ಕ್ರ.ಸಂ.66 ರನ್ವಯ ಈ ಸಮಿತಿಯ ಭದ್ರತಾ ಹಾಗೂ ವಿವಿಧ ನುರಿತ ಮತ್ತು ಕಛೇರಿಗೆ ಸಹಾಯಕ ಸಿಬ್ಬಂದಿಗಳನ್ನು ಮತ್ತು ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಸಂಸ್ಥೆ/ಏಜೆನ್ಸಿಯವರಿಂದ ನಿಯಮಾನುಸಾರ ಕನಿಷ್ಠ ವೇತನ ಕಾಯ್ದೆಯನ್ವಯ ಈ ಕೆಳಗಿನ ಸೇವೆಗೆ ಪ್ರತ್ಯೇಕವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ.

ಕ್ರ.ಸಂ	ಕೆಲಸದ ಹೆಸರು	ಭದ್ರತಾ ಠೇವಣಿ
1	ಭದ್ರತಾ ಸಿಬ್ಬಂದಿ **Indent No: APMC/2024-25/SE0466/CALL-2**	ರೂ. 3,00,000/-

ಸದರಿ ವೆಬ್‌ಸೈಟ್ http://kppp.karnataka.gov.in ಪೋರ್ಟಲ್‌ನಲ್ಲಿ ಭರ್ತಿ ಮಾಡಿದ **ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 06.12.2024 ಸಾಯಂಕಾಲ 5.30 ಗಂಟೆಗೆ ಸಲ್ಲಿಸುವುದು.** ಪ್ರಯುಕ್ತ ಸಂಬಂಧಿಸಿದ ಅರ್ಹ ಸಂಸ್ಥೆ/ಏಜೆನ್ಸಿಯವರು ವೆಬ್‌ಸೈಟ್ ಮೂಲಕ ಕ್ರಮ ಜರುಗಿಸಲು ಕೋರಲಾಗಿದೆ. ಸಹಾಯವಾಣಿ ಸಂಖ್ಯೆ : **080-25501216, 080-25501227, 08352-250073.**

ಸಹಿ/- ಕಾರ್ಯದರ್ಶಿ   ಸಹಿ/- ಆಡಳಿತಾಧಿಕಾರಿಗಳು

ವಾಸಾಸಂಇ/ವಿಜಯಪುರ/435/ಕೆಎಸ್‌ಎಂಸಿಎ/2024-25

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ಸಂಖ್ಯೆ 16 ಸಿ-1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು-560052. ಫೋನ್: 080-22268677/78/79, ಫ್ಯಾಕ್ಸ್: 080-22268667
ಇಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ನಂ: ಕವಿನಿಆ-5/ಉನಿ(ಜ)/2023-24/ಎಫ್‌ಟಿಎಸ್-1345/ಸಂಪುಟ 3/960 ದಿನಾಂಕ: 20.11.2024

ಸಾರ್ವಜನಿಕ ವಿಚಾರಣೆ ಬಗ್ಗೆ ಸೂಚನೆ

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ದಿನಾಂಕ: 04.11.2024ರಂದು **ಕರಡು ಕವಿನಿಆ (ಬಹು ವಾರ್ಷಿಕ ಪ್ರಸರಣೆ, ವಿತರಣೆ ಮತ್ತು ಚಿಲ್ಲರೆ ಮಾರಾಟ) (ಮೊದಲನೇ ತಿದ್ದುಪಡಿ) ವಿನಿಯಮಗಳು, 2024** ನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ ಸಾರ್ವಜನಿಕರಿಂದ / ಆಸಕ್ತರಿಂದ ವಿಮರ್ಶೆ / ಅಭಿಪ್ರಾಯ / ಸಲಹೆ / ಆಕ್ಷೇಪಣೆಗಳನ್ನು ಆಹ್ವಾನಿಸಿತ್ತು. ಸದರಿ ಕರಡು ವಿನಿಯಮಗಳನ್ನು ಆಯೋಗದ ಅಂತರ್ಜಾಲತಾಣ **https://kerc.karnataka.gov.in** ನಲ್ಲಿ ಪ್ರಕಟಿಸಲಾಗಿತ್ತು.

ಆಯೋಗವು ಈ ವಿಷಯದಲ್ಲಿ ಭಾಗೀದಾರರು/ಆಸಕ್ತರ ಅಭಿಪ್ರಾಯಗಳನ್ನು ಪಡೆಯಲು **ದಿನಾಂಕ: 06.12.2024ರಂದು ಮಧ್ಯಾಹ್ನ 12.00 ಗಂಟೆಗೆ ನಂ. 16 ಸಿ-1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು-560052ರ 1ನೇ ಮಹಡಿಯಲ್ಲಿರುವ ಆಯೋಗದ ಕೋರ್ಟ್ ಹಾಲ್‌ನಲ್ಲಿ** ಸಾರ್ವಜನಿಕ ವಿಚಾರಣೆಯನ್ನು ನಡೆಸಲಾಗುವುದು. ಆಸಕ್ತ ವ್ಯಕ್ತಿಗಳು / ಭಾಗೀದಾರರು ಸದರಿ ಸಾರ್ವಜನಿಕ ವಿಚಾರಣೆಯಲ್ಲಿ ಭಾಗವಹಿಸಿ ತಮ್ಮ ಲಿಖಿತ/ಮೌಖಿಕ ಅಭಿಪ್ರಾಯಗಳನ್ನು ಆಯೋಗದ ಮುಂದೆ ಸಲ್ಲಿಸಬಹುದಾಗಿದೆ.

ಸಹಿ/- ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ

DIPR/CP/3347/2024-25

ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ

ಉಪ ಪ್ರಧಾನ ವ್ಯವಸ್ಥಾಪಕರ ಕಛೇರಿ – 1, BSWML,
1ನೇ ಮಹಡಿ, UNI ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ,
ಬೆಂಗಳೂರು – 560052
Email: bluruswml2021@gmail.com

ಸಂ: ಡಿಜಿಎಂ-1/ಬಿಎಸ್‌ಡಬ್ಲ್ಯೂಎಂಎಲ್/ತಿದ್ದುಪಡಿ-01/24-25 ದಿನಾಂಕ: 21.11.2024

ತಿದ್ದುಪಡಿ – 1

ವಿಷಯ: ಟೆಂಡರ್ ಅಧಿಸೂಚನೆಯ ಇವೆಂಟ್ಸ್‌ನ ಕ್ಯಾಲೆಂಡರ್ ವಿಸ್ತರಣೆ
ಉಲ್ಲೇಖ: ಈ ಕಚೇರಿ ಟೆಂಡರ್ ಅಧಿಸೂಚನೆ ಸಂಖ್ಯೆ: DGM-1/BSWML/TEND/06/24-25 ದಿನಾಂಕ: 04.11.2024

ಮೇಲಿನ ವಿಷಯ ಮತ್ತು ಉಲ್ಲೇಖದ ಪ್ರಕಾರ, ಮೇಲಿನ ಟೆಂಡರ್ ಅಧಿಸೂಚನೆಯ ಕಾರ್ಯಕ್ರಮಗಳ ಕ್ಯಾಲೆಂಡರ್‌ನ್ನು ಆಡಳಿತ ಮತ್ತು ತಾಂತ್ರಿಕ ಕಾರಣಗಳಿಂದ ವಿಸ್ತರಿಸಲಾಗಿದೆ.

ವೇಳಾಪಟ್ಟಿ/ಇವೆಂಟ್ಸ್‌ನ ಕ್ಯಾಲೆಂಡರ್:

ಕ್ರ. ಸಂ.		ಟೆಂಡರ್ ಅಧಿಸೂಚನೆಯ ಪ್ರಕಾರ	ವಿಸ್ತರಿಸಿದ ದಿನಾಂಕಗಳನ್ನು ದಯವಿಟ್ಟು ಹೀಗೆ ಓದಿ
1 2	ಅರ್ಹತಾ ದಾಖಲೆಗಳನ್ನು ಅಪ್ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	29.11.2024 ಸಂಜೆ 4:00 ರವರೆಗೆ.	12.12.2024 ಸಂಜೆ 4:00 ರವರೆಗೆ.
	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	30.11.2024 ಸಂಜೆ 4:30 ರ ನಂತರ.	13.12.2024 ಸಂಜೆ 4:30 ರ ನಂತರ.

ಹೆಚ್ಚಿನ ಮಾಹಿತಿಗೆ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ವೆಬ್‌ಸೈಟ್ **www.kppp.karnataka.gov.in** ಗೆ ಭೇಟಿ ನೀಡಿ.

ಸಹಿ/-
ಉಪ ಪ್ರಧಾನ ವ್ಯವಸ್ಥಾಪಕರು -1
BSWML

ವಾಸಾಸಂಇ/ವಾ.ಪ್ರ/3361/ಎಂಎಎ/2024-25

ಕರ್ನಾಟಕ ಸರಕಾರ

ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಉಡುಪಿ

ಟೆಂಡರ್ ಪ್ರಕಟಣೆ ಸಂ:: ಕಾಇಂ/ಪಂರಾಇಂವಿಉ/ ಟೆಂಡರ್ ಪ್ರಕಟಣೆ ನಂ 03/2024-25:ಜೆಇ-1/2138/ ದಿನಾಂಕ: 21-11-2024

ಟೆಂಡರ್ ಪ್ರಕಟಣೆ

(ಇ-ಪೋರ್ಟಲ್ ಪದ್ಧತಿಯಲ್ಲಿ e-portal ನಡಿಯಲ್ಲಿ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಉಡುಪಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರವರಿಂದ 2022-23 ನೇ ಸಾಲಿನ ವಿವೇಕ ಯೋಜನೆಯಡಿಯಲ್ಲಿನ ಈ ಕೆಳಗಿನ ಕಾಮಗಾರಿಗೆ ಇ-ಪೋರ್ಟಲ್ ಪದ್ಧತಿಯಲ್ಲಿ **(Standard Tender Documents for Procurment of Goods)** ನ ನಿಭಂದನೆಗೊಳಪಟ್ಟಂತೆ ನೊಂದಾಯಿಸಿದ ಅರ್ಹ ದರ್ಜೆಯ ಗುತ್ತಿಗೆದಾರರಿಂದ ದ್ವಿ ಲಕೋಟೆಯಲ್ಲಿ ಟೆಂಡರ್ ಅನ್ನು ಅಹ್ವಾನಿಸಲಾಗಿದ್ದು, ಇ-ಪೋರ್ಟಲ್ ಮೂಲಕ ನಮೂದಿಸಿದ ದಿನಾಂಕದಂದು Government of Karnataka e-procurement portal WEBsite **https://www.kppp.karnataka.gov.in** ಆನ್‌ಲೈನ್ ಮುಖಾಂತರ ಸ್ವೀಕರಿಸಲಾಗುವುದು. (1) ಟೆಂಡರ್ ಗಳನ್ನು ಸಲ್ಲಿಸಲು ನಿಗದಿಪಡಿಸಿದ **ದಿನಾಂಕ: 21-11-2024 ರಿಂದ 30-11-2024ರ 4.00** (PM) **ಗಂಟೆಯ ವರೆಗೆ.** (2) ಟೆಕ್ನಿಕಲ್ ಬಿಡ್ಡುಗಳನ್ನುತೆರೆಯುವ **ದಿನಾಂಕ: 02-12-2024 ರ 11.00** (AM) ಗಂಟೆಯ ನಂತರ. (3) ಆರ್ಥಿಕ ಬಿಡ್ಡುಗಳನ್ನು ತೆರೆಯುವ **ದಿನಾಂಕ: 04-12-2024 ರ 4.00** (PM) ಗಂಟೆಯ ನಂತರ. ಇನ್ನಿತರೆ ನಿಬಂಧನೆಗಳು, ಷರತ್ತುಗಳನ್ನು ಹಾಗೂ ಟೆಂಡರ್ ತಿದ್ದುಪಡಿಗಳನ್ನು ಅಥವಾ ಬದಲಾವಣೆಗಳನ್ನು ವೆಬ್‌ಸೈಟ್ **https://www.kppp.karnataka.gov.in** ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಯನ್ನು ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಕಚೇರಿಯವರಿಂದ ಪಡೆಯಬಹುದಾಗಿದೆ.

E-proc portal helpdesk: 080-22371090/22373788
Hphelpdesk.blr@intarvo.com

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಉಡುಪಿ

ವಾಸಾಇ/ಸನಿಉ/ಕೆಎಸ್‌ಎಂಸಿಎ/469/24-24 ದಿ: 21.11.2024

ವಾರವಿಡೀ ನ್ಯಾಯಾಲಯ ಸುತ್ತಾಟ; ವಕೀಲರಿಗೆ ಶುಲ್ಕ ಕೊಡಲು ಮಾಜಿ ನಕ್ಸಲರ ಪರದಾಟ

ಮುಖ್ಯವಾಹಿನಿಗೆ ಬಂದವರಿಗೆ ಜೋಪಡಿ ಜೀವನ

• ವಿಜಯಕುಮಾರ್ ಎಸ್.ಕೆ.

ಚಿಕ್ಕಮಗಳೂರು: 'ಸಶಸ್ತ್ರ ಹೋರಾಟ ಬಿಟ್ಟು ಪ್ರಜಾತಂತ್ರದ ಮುಖ್ಯವಾಹಿನಿಗೆ ಮರಳಿದ ಹಲವರ ಬದುಕು ದಯನೀಯ ಸ್ಥಿತಿಯಲ್ಲಿದೆ. ಜೋಪಡಿಯ ಜೀವನ, ವಾರದಲ್ಲಿ ನಾಲ್ಕು- ದಿನ ಕೋರ್ಟ್ ಅಲೆದಾಟ, ಹೆಂಡತಿ-ಮಕ್ಕಳಿಗೆ ಅರೆಹೊಟ್ಟೆಯ ಜೀವನ ನಮ್ಮದಾಗಿದೆ' ಎನ್ನುತ್ತಾರೆ ಕೆಲ ಮಾಜಿ ನಕ್ಸಲರು.

2014-2018 ರವರೆಗೆ ಚಿಕ್ಕಮಗಳೂರು ಜಿಲ್ಲೆಯಲ್ಲಿ 13 ಜನ ನಕ್ಸಲ್ ಹಾದಿ ತೊರೆದು ಮುಖ್ಯವಾಹಿನಿಗೆ ಬಂದರು. ಕುದುರೆಮುಖ ರಾಷ್ಟ್ರೀಯ ಉದ್ಯಾನದ ಹೆಸರಿನಲ್ಲಿ ಒಕ್ಕಲೆಬ್ಬಿಸುವ ಪ್ರಯತ್ನ ಹಾಗೂ ಕಸ್ತೂರಿ ರಂಗನ್ ವರದಿ ಹೇರಿಕೆಗೆ ವಿರೋಧಿಸಿ, ದುಡಿಯುವ ಕೈಗಳಿಗೆ ಉದ್ಯೋಗ ಕೊಡಬೇಕು, ಜಮೀನ್ದಾರಿ ಪದ್ಧತಿ ಕಡೆಯಾಗಬೇಕು, ಭೂಮಿ ಹಂಚಿಕೆಯಾಗಬೇಕು ಎಂಬ ಬೇಡಿಕೆ ಮುಂದಿಟ್ಟು ನಡೆಸಿದ ಹೋರಾಟಗಳಲ್ಲಿ ಇದ್ದವರು ಕೊನೆಗೆ ನಕ್ಸಲ್ ಹಾದಿ ಸೇರಿಕೊಂಡರು.

ಆ ನಂತರ ಎಚ್.ಎಸ್.ದೊರೆಸ್ವಾಮಿ, ಗೌರಿ ಲಂಕೇಶ್, ಎ.ಕೆ.ಸುಬ್ಬಯ್ಯ ನೇತೃತ್ವದಲ್ಲಿ ಹಲವರು ಮುಖ್ಯವಾಹಿನಿಗೆ ಬರಲು ಒಪ್ಪಿದರು. ಬಂದವರನ್ನು ಹೂವಿನ ಹಾರ ಹಾಕಿ ಅಂದಿನ ಅಧಿಕಾರಿಗಳು ಬರಮಾಡಿಕೊಂಡರು.

'ಮುಖ್ಯವಾಹಿನಿಗೆ ಬಂದರೆ ಭೂಮಿ, ವಸತಿ, ಉದ್ಯೋಗ ನೀಡುತ್ತೇವೆ. ಎಲ್ಲಾ ಪ್ರಕರಣ ವಾಪಸ್ ಪಡೆಯುತ್ತೇವೆ ಎಂದು ಸರ್ಕಾರ ನಂಬಿಸಿತ್ತು. ಕೊಟ್ಟ ಭರವಸೆಗಳು ಇಂದಿಗೂ ಕಡತ ಗಳಿಗಷ್ಟೇ ಸೀಮಿತವಾಗಿವೆ' ಎಂದು 2016ರ ನ.15ರಂದು ಮುಖ್ಯವಾಹಿನಿಗೆ ಮರಳಿದ ನಿಲಗುಳಿ ಪದ್ಮನಾಭ್-ರೇಣುಕಾ ದಂಪತಿ ಹೇಳುತ್ತಾರೆ.

'ಹೋರಾಟ ಬಿಟ್ಟು ಹೆಂಡತಿ-ಮಕ್ಕಳೊಂದಿಗೆ ಜೀವನ ನಡೆಸಬೇಕು ಎಂದು ಬಂದೆವು. ಆದರೆ, ಮೊದಲಿಗೆ ಒಂದಷ್ಟು ದಿನ ಜೈಲಿನಲ್ಲಿ ಕೊಳೆಯಬೇಕಾಯಿತು. ಈಗ ನ್ಯಾಯಾಲಯದಲ್ಲಿ ಗೋಡೆಗಳ ನಡುವೆ ದಿನ ಕಳೆಯುವಂತಾಗಿದೆ. ವಕೀಲರಿಗೆ ಶುಲ್ಕ ನೀಡಲು ಹಣವಿಲ್ಲದ ಸ್ಥಿತಿ ಇದೆ. ವಾರದಲ್ಲಿ ನಾಲ್ಕೈದು ದಿನ ನ್ಯಾಯಾಲಯದಲ್ಲೇ ಇದ್ದರೆ ದುಡಿಮೆ ಯಾವಾಗ ಮಾಡಬೇಕು' ಎಂಬುದು ಅವರ ಪ್ರಶ್ನೆ.

'ಅಂಗವಿಕಲ ಎಂಬ ಕಾರಣಕ್ಕೆ 2 ಎಕರೆ ಜಮೀನು ಕೇಳಿದ್ದೆವು. ಜಾಗ ಗುರುತಿಸಲು ಅಧಿಕಾರಿಗಳು ತಿಳಿಸಿದ್ದರು. ಗುರುತಿಸಿ 5 ವರ್ಷಗಳಾಗಿವೆ. ಅದನ್ನು ಕೊಡುವ ಮನಸ್ಸನ್ನು ಸರ್ಕಾರ ಮಾಡಲಿಲ್ಲ. ವಾಸವಿರಲು ಮನೆ ಕೇಳಿದ್ದೆವು, ಅದನ್ನೂ ಕೊಟ್ಟಿಲ್ಲ. ಕೊಪ್ಪ ತಾಲ್ಲೂಕಿನ ನಿಲುಗಳಿಯಲ್ಲಿ ಈಗ ಗುಡಿಸಲಿನಲ್ಲಿ ಇದ್ದೇವೆ. ಆಗ ಕತ್ತಲ ಕೋಣೆಯ ಜೈಲು ವಾಸ, ಈಗ ವಿದ್ಯುತ್ ಇಲ್ಲದ ಜೋಪಡಿಯಲ್ಲಿ ಜೀವನ' ಎಂದು ಪದ್ಮನಾಭ್ ಕಣ್ಣೀರು ಸುರಿಸುತ್ತಾರೆ.

'ಅತಂತ್ರರಾಗಿರುವ ನಮಗೆ ಕನಿಷ್ಠ ಮೂಲಸೌಕರ್ಯ ಒದಗಿಸಲು ಕೋರಿ ಇತ್ತೀಚೆಗೆ ಸಿರಿಮನೆ ನಾಗರಾಜ್, ಗೌಸ್ ಮೊಹಿಯುದ್ದೀನ್, ದಿನೇಶ್ ಪಟವರ್ಧನ್ ನೇತೃತ್ವದ ನಿಯೋಗದೊಂದಿಗೆ ಜಿಲ್ಲಾಧಿಕಾರಿಗೆ ಮನವಿಯನ್ನೂ ಸಲ್ಲಿಸಿದ್ದೆವು. ಪ್ರಯೋಜನ ಮಾತ್ರ ಆಗಲಿಲ್ಲ' ಎನ್ನುತ್ತಾರೆ ಅವರು.

ಪರಶುರಾಮ ಮತ್ತು ನಿಲಗುಳಿ ಪದ್ಮನಾಭ್ ದಂಪತಿ ಅಂದಿನ ಚಿಕ್ಕಮಗಳೂರು ಜಿಲ್ಲಾಧಿಕಾರಿ ಜಿ.ಸತ್ಯವತಿ ಸಮ್ಮುಖದಲ್ಲಿ ಮುಖ್ಯವಾಹಿನಿಗೆ ಬಂದಾಗಿನ ಚಿತ್ರ. ಗೌರಿ ಲಂಕೇಶ್, ಎ.ಕೆ.ಸುಬ್ಬಯ್ಯ ಜೊತೆಗಿದ್ದರು ಸಂಗ್ರಹ ಚಿತ್ರ

ಮುಖ್ಯ ವಾಹಿನಿಗೆ ಬಂದವರು

ಹಾಗಲಗಂಜಿ ವೆಂಕಟೇಶ್, ಮಲ್ಲಿಕಾ (ಕವಿತಾ), ಕೋಮಲಾ, ಹೊರ್ಲೆ ಜಯಾ, ಸಿರಿಮನೆ ನಾಗರಾಜ್, ನೂರ್ ಶ್ರೀಧರ್, ನಿಲಗುಳಿ ಪದ್ಮನಾಭ್, ಭಾರತಿ (ರೇಣುಕಾ), ರಿಜ್ವಾನಾ ಬೇಗಂ(ಕಾವೇರಿ), ಕನ್ಯಾಕುಮಾರಿ, ಶಿವು, ಚನ್ನಮ್ಮ (ಸುಮಾ), ಪರಶುರಾಮ್.

ಕನ್ಯಾಕುಮಾರಿಗೆ ಜೈಲೇ 'ಮುಖ್ಯವಾಹಿನಿ'

ಮುಖ್ಯವಾಹಿನಿಗೆ ಬಂದ 13 ಜನರ ಪೈಕಿ ಕನ್ಯಾಕುಮಾರಿ ಅವರು ಏಳೂವರೆ ವರ್ಷಗಳಿಂದ ಜೈಲಿನಲ್ಲೇ ಇದ್ದಾರೆ. ಇದು ಮುಖ್ಯವಾಹಿನಿಯೇ ಎಂಬುದು ಸಶಸ್ತ್ರ ಬಿಟ್ಟು ಬಂದವರು ಕೇಳುವ ಪ್ರಶ್ನೆ.

ಮೂಡಿಗೆರೆ ತಾಲ್ಲೂಕಿನ ಹಳುವಳ್ಳಿಯ ಕನ್ಯಾಕುಮಾರಿ ಮತ್ತು ಬೆಂಗಳೂರಿನ ಶಿವ ಜ್ಞಾನದೇವ್ ದಂಪತಿ 2017ರ ಜೂನ್ 5ರಂದು ಮುಖ್ಯ ವಾಹಿನಿಗೆ ಬಂದರು. ಆಗ ಅವರಿಗೆ ಆರು ತಿಂಗಳ ಮಗ ಇದ್ದ. ಕನ್ಯಾಕುಮಾರಿ ಅವರ ವಿರುದ್ಧ ಕರ್ನಾಟಕ ಮತ್ತು ಕೇರಳದಲ್ಲಿ 64 ಪ್ರಕರಣಗಳು ದಾಖಲಾಗಿದ್ದವು.

'ಎಲ್ಲ ಪ್ರಕರಣಗಳನ್ನು ಶೀಘ್ರವೇ ಇತ್ಯರ್ಥ ಪಡಿಸಲಾಗುವುದು ಎಂದು ಸರ್ಕಾರ ಭರವಸೆ ನೀಡಿತ್ತು. ಆದರೆ, ಈಗ ಏಳೂವರೆ ವರ್ಷ ಕಳೆದಿವೆ. ಪ್ರಕರಣಗಳನ್ನು ಪೂರ್ಣಗೊಳಿಸಲು ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ಶಿವು ಜ್ಞಾನದೇವ್ ಬೇಸರ ವ್ಯಕ್ತಪಡಿಸಿದರು.

'ಕೆಲವು ಪ್ರಕರಣಗಳಲ್ಲಿ ಕರ್ನಾಟಕದ ಪೊಲೀಸರು ಇನ್ನೂ ಆರೋಪ ಪಟ್ಟಿಯನ್ನೇ ಸಿದ್ಧಪಡಿಸಿಲ್ಲ. ಅವುಗಳು ವಿಚಾರಣೆಗೆ ಬಂದು ಇತ್ಯರ್ಥವಾಗುವುದು ಯಾವಾಗ' ಎಂದು ಅವರು ಪ್ರಶ್ನಿಸಿದರು.

'ಬೆಂಗಳೂರಿನಲ್ಲಿ ಬಾಡಿಗೆಗೆ ಆಟೊರಿಕ್ಷಾ ಪಡೆದು ಓಡಿಸುತ್ತಿದ್ದೇನೆ. ಐದೂವರೆ ವರ್ಷ ತಾಯಿಯೊಂದಿಗೆ ಜೈಲಿನಲ್ಲೇ ಇದ್ದ ಮಗ ಈಗ ಮನೆಗೆ ಬಂದಿದ್ದಾನೆ. ಮಗನ ಜವಾಬ್ದಾರಿ, ನ್ಯಾಯಾಲಯ ಮತ್ತು ಜೈಲಿಗೆ ತಿರುಗಾಡಿ ರೋಸಿ ಹೋಗಿದ್ದೇನೆ' ಎಂದರು.

'ಕರ್ನಾಟಕ ಮತ್ತು ತಮಿಳುನಾಡು ಎರಡೂ ಕಡೆ ಪ್ರಕರಣಗಳಿವೆ. ಮುಖ್ಯವಾಹಿನಿಗೆ ಬರುವಾಗ ನಮಗೆ ನೀಡಿದ ಭರವಸೆ ಬಗ್ಗೆ ಸರ್ಕಾರಕ್ಕೆ ಯಾವುದೇ ಕಾಳಜಿ ಇಲ್ಲ. ಪ್ರಕರಣಗಳು ಸದ್ಯಕ್ಕೆ ಇತ್ಯರ್ಥವಾಗುವ ಯಾವ ಲಕ್ಷಣಗಳೂ ಇಲ್ಲ. ವಕೀಲರಿಗೆ ಕೊಡಲು ಕಾಸಿಲ್ಲ, ಹೆಂಡತಿ ಜೈಲಿನಲ್ಲಿ ಶಿಕ್ಷೆ ಅನುಭವಿಸಿದರೆ, ನಾವಿಬ್ಬರು ಹೊರಗಿದ್ದೇ ಶಿಕ್ಷೆ ಅನುಭವಿಸುತ್ತಿದ್ದೇವೆ' ಎಂದು ವಿವರಿಸಿದರು.

'ಯಾಕಾದರೂ ಮುಖ್ಯವಾಹಿನಿಗೆ ಬಂದೆವೊ ಎನಿಸುತ್ತಿದೆ. ಇಲ್ಲಿ ದಿನವೂ ಶಿಕ್ಷೆ ಅನುಭವಿಸುವ ಬದಲು, ಒಂದು ದಿನದ ಶಿಕ್ಷೆಯೇ ಲೇಸು ಎನ್ನಿಸುತ್ತಿದೆ. ದೈಹಿಕ ಹಿಂಸೆಯಾಗಿದ್ದರೆ ತಡೆಯಬಹುದಿತ್ತು. ಮಾನಸಿಕ ಹಿಂಸೆ ಅನುಭವಿಸಲಾರೆ' ಎಂದು ಗದ್ಗದಿತರಾದರು ಶಿವು.

'ಕರ್ನಾಟಕ ಮತ್ತು ಕೇರಳದಲ್ಲಿ 10-15 ನ್ಯಾಯಾಲಯಗಳಿಗೆ ಸುತ್ತಾಡಬೇಕು. ಆಟೊರಿಕ್ಷಾ ಓಡಿಸುವ ನಾನು ಹಣ ಎಲ್ಲಿಂದ ತರಬೇಕು, ಇದನ್ನು ಮುಖ್ಯವಾಹಿನಿ ಎಂದು ಕರೆಯಬೇಕೆ' ಎಂದು ಪ್ರಶ್ನಿಸಿದರು.

'ಅಮ್ಮನನ್ನೂ ನೋಡಲು ಬರಲಿಲ್ಲ'

• ಸುಕುಮಾರ್ ಮುನಿಯಾಲ್

ಹೆಬ್ರಿ (ಉಡುಪಿ): 'ಅಮ್ಮ ಯಾವಾಗಲೂ ಅಣ್ಣನ ನೆನಪಲ್ಲೇ ಕೊರಗುತ್ತಿದ್ದರು. ಅಮ್ಮ ತೀರಿಹೋಗಿ ಒಂಬತ್ತು ವರ್ಷಗಳು ಕಳೆದಿವೆ. ಅಮ್ಮನ ಕೊನೆಯ ದಿನಗಳ ವೇಳೆ ಇರಲಿ, ಅಂತಿಮ ದರ್ಶನಕ್ಕೂ ಅಣ್ಣ ಬರಲಿಲ್ಲ...' ಎಂದು ಎನ್‌ಕೌಂಟರ್‌ನಲ್ಲಿ ಮೃತಪಟ್ಟಿರುವ ನಕ್ಸಲ್ ನಾಯಕ ವಿಕ್ರಂ ಗೌಡನ ತಮ್ಮ ಸುರೇಶ್ ಗೌಡ ಕಣ್ಣೀರಾದರು.

ವಿಕ್ರಂ ಗೌಡ

'ಪ್ರಜಾವಾಣಿ' ಯೊಂದಿಗೆ ಮಾತನಾಡಿದ ಸುರೇಶ್ ಗೌಡ, ತಮ್ಮ ಅಣ್ಣ ಹಾಗೂ ಮನೆತನದ ಸ್ಥಿತಿಗತಿ ಬಗ್ಗೆ ಹೇಳಿದ್ದು ಹೀಗೆ.

ನಾನು ಕೂಡ ಹಲವು ವರ್ಷಗಳ ಹಿಂದೆ ಮನೆ ಬಿಟ್ಟು ಮುದ್ರಾಡಿಯಲ್ಲಿ ವಾಸವಾಗಿದ್ದೇನೆ. ಅಣ್ಣ ಮನೆ ಬಿಟ್ಟು ಹೋಗುವಾಗ ಮನೆಯಲ್ಲಿ ನಾನು ಇರಲಿಲ್ಲ. ಮನೆ ಬಿಟ್ಟ ನಂತರ ಅವನ ಜೊತೆ ಯಾವುದೇ ಸಂಪರ್ಕ ಇರಲಿಲ್ಲ. ಅಲ್ಲಿ ಇಲ್ಲಿ ಬಂದು ಹೋಗುತ್ತಿದ್ದ ಎಂಬ ಮಾಹಿತಿಗಳು ಮಾತ್ರ ನಮಗೆ ಗೊತ್ತಾಗುತ್ತಿದ್ದವು. ಬಾಲ್ಯದಲ್ಲಿ ಬಹಳಷ್ಟು ಕಷ್ಟಗಳು ನಮ್ಮನ್ನು ಕಾಡುತ್ತಿದ್ದರಿಂದ, ಬೇಗನೆ ಶಾಲೆಯನ್ನು ಬಿಟ್ಟೆವು. ಅಣ್ಣ ಒಂದು ಕಡೆಯಲ್ಲಿ, ನಾನು ಇನ್ನೊಂದು ಕಡೆಯಲ್ಲಿದ್ದೆ. ಕುಟುಂಬ ಮುನ್ನಡೆಸುವ ಹೊಣೆ ನಮ್ಮ ಮೇಲಿತ್ತು. ಕೆಲಸ ಅರಸಿ ಮುಂಬೈಗೆ ಹೋದೆ. ಅಣ್ಣ, ಅಮ್ಮ ಮತ್ತು ಅಕ್ಕ ಮನೆಯಲ್ಲಿ ಇದ್ದರು. ಮೃದು ಸ್ವಭಾವದ ಅಣ್ಣ ವಿಕ್ರಂ ಒಳ್ಳೆಯವನು. ನಮ್ಮನ್ನೆಲ್ಲ ಅಂದು ಚೆನ್ನಾಗಿ ನೋಡಿಕೊಂಡಿದ್ದ. ಕುಟುಂಬಕ್ಕೆ ಜಾಗ ಇತ್ತು. ಅಣ್ಣನೂ ಸ್ವಂತ ಜಾಗ ಮಾಡಿದ್ದನು. ಅವನು ಎಲ್ಲಿಗೆ, ಯಾಕೆ, ಹೇಗೆ ಹೋದ ಎಂಬ ಮಾಹಿತಿಯೇ ನಮಗೆ ಅಂದು ಗೊತ್ತಾಗಿರಲಿಲ್ಲ.

ಅಣ್ಣ ನಕ್ಸಲ್ ಆಗಿದ್ದಾನೆ ಎಂದು ನಮ್ಮ ಕುಟುಂಬಕ್ಕೆ ಪೊಲೀಸರಿಂದಲೇ ತಿಳಿಯಿತು. ಯಾಕೆ ನಕ್ಸಲ್ ಆದ ಗೊತ್ತಿಲ್ಲ. ನಕ್ಸಲರಿಗೆ ಶರಣಾಗಲು ಅವಕಾಶವಿದೆ ಎಂದು ಗೊತ್ತಿದೆ. ಅಣ್ಣ ಶರಣಾಗಿದ್ದರೆ ಈ ಸ್ಥಿತಿ ಬರುತ್ತಿರಲಿಲ್ಲ. ನಮ್ಮನ್ನೆಲ್ಲ ನೋಡಬೇಕಾಗಿದ್ದ ಅಣ್ಣ ಈಗ ನಮ್ಮೊಂದಿಗೆ ಇಲ್ಲ. ಸ್ವಂತ ಮನೆ ಕಟ್ಟಬೇಕು ಎಂಬ ಅಣ್ಣನ ಆಸೆ ಈಡೇರಬೇಕು, ನಮ್ಮ ಕುಟುಂಬದ ಕನಸಿನ ಮನೆ ಪೂರ್ಣ ಮಾಡುವ ಹೊಣೆ ಅಕ್ಕ ಸುಗುಣಾ ಹೊತ್ತಿದ್ದಾಳೆ. ಅಕ್ಕನ ಕುಟುಂಬವೂ ತೀವ್ರ ಸಂಕಷ್ಟದಲ್ಲಿದೆ. ಕೂಲಿ ಕೆಲಸ, ಹೋಟೆಲ್ ಕೆಲಸ ಮಾಡಿ ಸ್ವಂತ ಮನೆ ನಿರ್ಮಿಸಿ ಕೊಳ್ಳಬೇಕು. ತಂಗಿಗೆ ಮದುವೆ ಮಾಡಿ ಒಳ್ಳೆಯ ಜೀವನ ಮಾಡುವ ಆಸೆಯನ್ನು ಅಣ್ಣ ಹೊಂದಿದ್ದ. ಈಗ ಹೀಗಾಗಿದೆ. ಇನ್ನು ನಾವೆಲ್ಲರೂ ಹೊಸ ಜೀವನ ನಡೆಸಬೇಕಿದೆ.

'ಅಂತ್ಯಕ್ರಿಯೆಗೆ ಊರವರಿಂದ ನೆರವು'

ಪ್ರಜಾವಾಣಿ ವಾರ್ತೆ

ಉಡುಪಿ: 'ವಿಕ್ರಂನ ಮೃತದೇಹವನ್ನು ಪೊಲೀಸರೇ ನಮ್ಮ ಮೂಲ ಮನೆ ಇದ್ದ ಕೂಡ್ಲುವಿಗೆ ಆಂಬುಲೆನ್ಸ್‌ನಲ್ಲಿ ತಂದಿದ್ದರು. ಸಂಬಂಧಿಕರು ಮತ್ತು ಊರವರು ಸೇರಿ ಅಂತ್ಯ ಸಂಸ್ಕಾರಕ್ಕೆ ಬೇಕಾದ ಕಟ್ಟಿಗೆಗಳನ್ನು ಸಿದ್ಧ ಪಡಿಸಿದ್ದರು. ನಮ್ಮದೇ ಸ್ಥಳದಲ್ಲಿ ಅಂತ್ಯಕ್ರಿಯೆ ನಡೆಸಿದೆವು' ಎಂದು ನಕ್ಸಲ್ ನಾಯಕ ವಿಕ್ರಂ ಗೌಡನ ತಮ್ಮ ಸುರೇಶ್ ಗೌಡ ತಿಳಿಸಿದರು.

ಐದನೇ ದಿವಸದ ವಿಧಿ ವಿಧಾನಗಳನ್ನು ಮುಗಿಸಿದ ಬಳಿಕ ಕುಟುಂಬದವರೊಂದಿಗೆ ಚರ್ಚಿಸಿ, ಉತ್ತರಕ್ರಿಯೆ ಎಲ್ಲಿ ನಡೆಸುವುದು ಎಂಬುದನ್ನು ನಿರ್ಧರಿಸುತ್ತೇವೆ ಎಂದೂ ಹೇಳಿದರು..

ಎನ್‌ಕೌಂಟರ್: ಹೆಬ್ರಿ ಠಾಣೆಯಲ್ಲಿ ಎಫ್‌ಐಆರ್ ದಾಖಲು

ಯುಎಪಿಎ ಅಡಿ ಪ್ರಕರಣ

ಪ್ರಜಾವಾಣಿ ವಾರ್ತೆ

ಉಡುಪಿ: ಪೀತುಬೈಲ್‌ನಲ್ಲಿ ನಡೆದಿರುವ ಎನ್‌ಕೌಂಟರ್‌ಗೆ ಸಂಬಂಧಿಸಿ ಕಾರ್ಕಳ ಎಎನ್‌ಎಫ್‌ನ ಡಿವೈಎಸ್‌ಪಿ ರಾಘವೇಂದ್ರ ಆರ್. ನಾಯ್ಕ್ ಅವರು ನೀಡಿರುವ ದೂರಿನ ಅನ್ವಯ ಕಾನೂನುಬಾಹಿರ ಚಟುವಟಿಕೆಗಳ (ತಡೆಗಟ್ಟುವಿಕೆ) ಕಾಯ್ದೆಯ (ಯುಎಪಿಎ) ಅಡಿ ಹೆಬ್ರಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ನಿಷೇಧಿತ ಉಗ್ರವಾದಿ ಸಿಪಿಐ (ಮಾವೋವಾದಿ) ಸಂಘಟನೆಯ ಸದಸ್ಯರ ಚಲನವಲನಗಳ ಬಗ್ಗೆ ಖಚಿತ ಮಾಹಿತಿಯ ಮೇರೆಗೆ ಸೋಮವಾರ ಸಂಜೆ 5 ಗಂಟೆಗೆ ನಾಡ್ಪಾಲು ಗ್ರಾಮದ ಪೀತುಬೈಲಿನ ಕಾಡಿನೊಳಗೆ ಶೋಧ ಕಾರ್ಯಾಚರಣೆ ನಡೆಸುತ್ತಿದ್ದಾಗ ಸಂಜೆ 6 ಗಂಟೆಯ ವೇಳೆಗೆ ಮೂರರಿಂದ ನಾಲ್ಕು ಮಂದಿ ಕಂಡು ಬಂದಿದ್ದಾರೆ. ಅವರು ವಿಕ್ರಂ ಗೌಡ ಮತ್ತು ಇತರರು ಎಂಬುದನ್ನು ಖಚಿತ ಪಡಿಸಿಕೊಂಡು, 'ನಾವು ಪೊಲೀಸರು ಶರಣಾಗಿ' ಎಂದು ಪದೇ ಪದೇ ಕೂಗಿ ಹೇಳಿದರೂ ಸಹ ಅದನ್ನು ಧಿಕ್ಕರಿಸಿ ನಮ್ಮನ್ನು ಕೊಲ್ಲುವ ಉದ್ದೇಶದಿಂದ ಗುಂಡು ಹಾರಿಸಿದ್ದಾರೆ ಎಂದು ರಾಘವೇಂದ್ರ ಆರ್. ನಾಯ್ಕ್ ದೂರಿನಲ್ಲಿ ಹೇಳಿದ್ದಾರೆ.

ಆತ್ಮರಕ್ಷಣೆಗಾಗಿ ಪ್ರತಿದಾಳಿ ನಡೆಸಿದಾಗ ವಿಕ್ರಂ ಗೌಡ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಆತನ ಬಳಿ 9 ಎಂ.ಎಂ. ಕಾರ್ಬೈನ್ ಬಂದೂಕು ಇತ್ತು. ರಾಷ್ಟ್ರೀಯ ಭದ್ರತೆಗೆ ಭಂಗ ತರುವ ನಕ್ಸಲ್ ಚಟುವಟಿಕೆಗಳಲ್ಲಿ ತೊಡಗಿಕೊಂಡು ಸುಲಿಗೆ ಮೊದಲಾದ ಅಪರಾಧ ಚಟುವಟಿಕೆಗಳಲ್ಲಿ ಆತ ಭಾಗಿಯಾಗಿದ್ದ. ವಿಕ್ರಂ ಮೃತಪಟ್ಟಿದ್ದು, ಪರಾರಿಯಾಗಿರುವ ಇತರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಕೂಡ್ಲು ಫಾಲ್ಸ್‌ಗೆ ನಿರ್ಬಂಧ

ಹೆಬ್ರಿ (ಉಡುಪಿ ಜಿಲ್ಲೆ): ಹೆಬ್ರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಕ್ಸಲ್ ಎನ್‌ಕೌಂಟರ್ ನಡೆದ ಕಾರಣ ಮುಂಜಾಗ್ರತಾ ಕ್ರಮವಾಗಿ ಕೂಡ್ಲು ಜಲಪಾತಕ್ಕೆ ಪ್ರವಾಸಿಗರ ಪ್ರವೇಶ ನಿಷೇಧಿಸಿ ಅರಣ್ಯ ಇಲಾಖೆ ಆದೇಶ ಹೊರಡಿಸಿದೆ.

ಕೂಡ್ಲು ಫಾಲ್ಸ್ ಇರುವ ಪ್ರದೇಶದಲ್ಲೇ ನಕ್ಸಲ್ ಚಟುವಟಿಕೆ ಮತ್ತೆ ಬಿರುಸುಗೊಂಡಿರುವುದು ಹಾಗೂ ನಕ್ಸಲ್ ನಿಗ್ರಹ ಪಡೆಯವರಿಂದ ಹತನಾದ ನಕ್ಸಲ್ ನಾಯಕ ವಿಕ್ರಂ ಗೌಡನ ಮನೆ ಜಲಪಾತದ ಸಮೀಪದಲ್ಲೇ ಇರುವುದರಿಂದ ಒಂದು ವಾರ ಜಲಪಾತಕ್ಕೆ ಪ್ರವೇಶ ಇಲ್ಲ ಎಂದು ಸೋಮೇಶ್ವರ ವನ್ಯಜೀವಿ ವಿಭಾಗದ ಡಿಸಿಎಫ್ ಶಿವರಾಂ ಬಾಬು ತಿಳಿಸಿದ್ದಾರೆ.

ಸಂಪಾಜೆಯಲ್ಲಿ ತಪಾಸಣೆ

ಸುಳ್ಯ (ದಕ್ಷಿಣ ಕನ್ನಡ): ನಕ್ಸಲ್ ಮುಖಂಡ ವಿಕ್ರಂ ಗೌಡ ಎನ್‌ಕೌಂಟರ್ ಸಂದರ್ಭ ಆತನ ಜೊತೆಯಲ್ಲಿದ್ದವರು ತಪ್ಪಿಸಿಕೊಂಡಿರುವ ಕಾರಣ ಜಿಲ್ಲೆಯ ಗಡಿಪ್ರದೇಶವಾದ ಸಂಪಾಜೆ ಅರಣ್ಯ ತಪಾಸಣಾ ಚೆಕ್ ಪೋಸ್ಟ್‌ನಲ್ಲಿ ಪೊಲೀಸರು ಎಲ್ಲ ವಾಹನಗಳನ್ನು ತಪಾಸಣೆ ನಡೆಸುತ್ತಿದ್ದಾರೆ. ವಿಕ್ರಂ ಗೌಡ ಜತೆಗಿದ್ದವರು ಕೊಡಗು ಜಿಲ್ಲೆಯನ್ನು ಪ್ರವೇಶಿಸುವ ಸಾಧ್ಯತೆ ಇರುವುದರಿಂದ ರಾಷ್ಟ್ರೀಯ ಹೆದ್ದಾರಿಯಲ್ಲಿ ಚಲಿಸುವ ಎಲ್ಲ ವಾಹನಗಳನ್ನು ನಿಲ್ಲಿಸಿ ತಪಾಸಣೆ ನಡೆಸಲಾಗುತ್ತಿದೆ.

'ನಕಲಿ ಎನ್‌ಕೌಂಟರ್ ಅಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಕ್ಸಲ್ ವಿಕ್ರಂ ಗೌಡನ ಚಟುವಟಿಕೆ ಮೇಲೆ 20 ವರ್ಷಗಳಿಂದ ನಿಗಾ ಇಡಲಾಗಿತ್ತು. ಆತ ಜನ ವಿರೋಧಿ ಕೆಲಸಗಳಲ್ಲಿ ತೊಡಗಿದ್ದ ಎಂಬ ಮಾಹಿತಿಯಿದೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ವಿಕ್ರಂ ಗೌಡ ಕಾನೂನುಬಾಹಿರವಾಗಿ, ಅನುಮತಿ ಇಲ್ಲದೆ ಶಸ್ತ್ರಾಸ್ತ್ರಗಳನ್ನು ಹೊಂದಿದ್ದ. ನಕ್ಸಲ್ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದ ಕಾರಣಕ್ಕೆ ಈ ಘಟನೆ ನಡೆದಿದೆ. ವಿಕ್ರಂ ಗೌಡ ಹತ್ಯೆ ನಕಲಿ ಎನ್‌ಕೌಂಟರ್ ಅಲ್ಲ' ಎಂದರು.

'ನಕ್ಸಲ್ ಚಟುವಟಿಕೆಯಲ್ಲಿ ತೊಡಗಿರುವವರಿಗೆ ಶರಣಾಗುವಂತೆ ವಿಚಾರವಾದಿಗಳು ಮನವಿ ಮಾಡಿದ್ದಾರೆ. ನ್ಯಾಯಯುತವಾಗಿ ಪ್ರತಿಭಟನೆ ಮಾಡಿ, ನಕ್ಸಲ್ ಚಟುವಟಿಕೆಗೆ ಸೇರಬೇಡಿ ಎಂದಿದ್ದಾರೆ. ನಕ್ಸಲ್ ಚಟುವಟಿಕೆ ಯಲ್ಲಿ ತೊಡಗಿರುವವರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಪ್ರಗತಿಪರ ಚಿಂತಕರು ಪ್ರಯತ್ನಿಸಬೇಕು' ಎಂದು ಅವರು ಹೇಳಿದರು.

'ಆಂಧ್ರಪ್ರದೇಶ ಗಡಿ, ತುಮಕೂರಿನ ಪಾವಗಡ ಭಾಗದಲ್ಲಿ ಈ ಹಿಂದೆ ಪೀಪಲ್ಸ್ ವಾರ್ ಗ್ರೂಪ್ ಇತ್ತು. ನಕ್ಸಲ್ ಚಟುವಟಿಕೆಯಲ್ಲಿ ತೊಡಗಿಕೊಂಡಿದ್ದ ಆ ಗುಂಪಿನ ಸದಸ್ಯರು ಅನುಕೂಲಸ್ಥರಿಂದ ಹಣ ಕೇಳುವುದು, ಜಮೀನುಗಳಿಗೆ ಬೇಲಿ ಹಾಕುವುದು, ಪೊಲೀಸರ ಹತ್ಯೆ ಮಾಡಿದ್ದರು. ಎಸ್.ಎಂ. ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ ಹಲವು ನಕ್ಸಲರು ಶಸ್ತ್ರಾಸ್ತ್ರಗಳನ್ನು ಒಪ್ಪಿಸಿ ಶರಣಾಗಿದ್ದರು' ಎಂದರು.

ನ್ಯಾಯಾಧೀಶರಿಂದ ಸ್ಥಳ ಪರಿಶೀಲನೆ

ಹೆಬ್ರಿ (ಉಡುಪಿ): ಹೆಬ್ರಿ ತಾಲ್ಲೂಕಿನ ನಾಡ್ಪಾಲು ಗ್ರಾಮದ ಪೀತುಬೈಲಿನಲ್ಲಿ ನಕ್ಸಲ್ ನಾಯಕ ಕೂಡ್ಲು ವಿಕ್ರಂ ಗೌಡನ ಎನ್‌ಕೌಂಟರ್ ನಡೆದ ಸ್ಥಳಕ್ಕೆ ಕಾರ್ಕಳದ ಪ್ರಧಾನ ಸಿವಿಲ್ ನ್ಯಾಯಾಧೀಶ ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ಗುರುವಾರ ಭೇಟಿ ನೀಡಿ ಪರಿಶೀಲಿಸಿದರು.

ನ್ಯಾಯಾಧೀಶರ ಸಮ್ಮುಖದಲ್ಲಿ ಕಾನೂನು ಪ್ರಕ್ರಿಯೆ ನಡೆದವು. ಕಾರ್ಕಳ ನಕ್ಸಲ್ ನಿಗ್ರಹ ಪಡೆಯ ಎಸ್.ಪಿ. ಜಿತೇಂದ್ರ ದಯಾಮ, ಪೊಲೀಸ್ ಅಧಿಕಾರಿಗಳು ಹಾಜರಿದ್ದರು.

ನಿಯೋಜನೆ: ನಕ್ಸಲ್ ಚಟುವಟಿಕೆ ಮತ್ತೆ ಆರಂಭಗೊಂಡ ಕಾರಣ ಮುಂಜಾಗ್ರತಾ ಕ್ರಮವಾಗಿ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆ ಯೋಧರನ್ನು ಹೆಚ್ಚುವರಿಯಾಗಿ ನಿಯೋಜಿಸಿ ರಾಜ್ಯ ಆಂತರಿಕ ಭದ್ರತಾ ವಿಭಾಗದ ಡಿಜಿಪಿ ಪ್ರಣವ್ ಮೊಹಂತಿ ಗುರುವಾರ ಆದೇಶ ಹೊರಡಿಸಿದ್ದಾರೆ. ಇದರಿಂದ ಶೋಧ ಕಾರ್ಯಾಚರಣೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ನಡೆಸಲು ಸಹಕಾರಿಯಾಗಲಿದೆ ಎಂದು ಮೂಲಗಳು ತಿಳಿಸಿವೆ. ಎನ್‌ಕೌಂಟರ್ ಬಳಿಕ ತಪ್ಪಿಸಿಕೊಂಡಿರುವ ಉಳಿದವರಿಗಾಗಿ ಶೋಧ ನಡೆಯುತ್ತಿದೆ. ಜಿಲ್ಲೆಯ ಗಡಿಭಾಗ ಹಾಗೂ ಕೂಡ್ಲು, ಮೇಗದ್ದೆ, ಕಬ್ಬಿನಾಲೆಯಲ್ಲಿ ನಿರಂತರವಾಗಿ ಶೋಧ ಕಾರ್ಯಾಚರಣೆ ಮುಂದುವರಿದಿದೆ ಎಂದು ಕಾರ್ಕಳ ನಕ್ಸಲ್ ನಿಗ್ರಹ ಪಡೆಯ ಎಸ್.ಪಿ. ಜಿತೇಂದ್ರ ದಯಾಮ ಮಾಹಿತಿ ನೀಡಿದರು.

ಬಿಜೆಪಿ ಭಿನ್ನಮತೀಯರ ಸಭೆ

ತಿಪಟೂರಿನಲ್ಲಿ ಬಿಜೆಪಿ ಭಿನ್ನಮತಿಯ ನಾಯಕರ ಜತೆ ಮಾಜಿ ಸಚಿವ ನಾಗೇಶ್ ಚರ್ಚೆ ನಡೆಸಿದರು

ತಿಪಟೂರು (ತುಮಕೂರು): ಬಿಜೆಪಿ ಭಿನ್ನಮತೀಯರ ಗುಂಪಿನಲ್ಲಿ ಗುರುತಿಸಿಕೊಂಡಿರುವ ಪ್ರಮುಖ ನಾಯಕರು ಮಾಜಿ ಸಚಿವ ಬಿ.ಸಿ. ನಾಗೇಶ್ ಅವರನ್ನು ಗುರುವಾರ ಭೇಟಿಯಾಗಿ ಎರಡು ತಾಸು ಚರ್ಚೆ ನಡೆಸಿದರು.

ಬಸನಗೌಡ ಪಾಟೀಲ ಯತ್ನಾಳ, ಕುಮಾರ್ ಬಂಗಾರಪ್ಪ, ಪ್ರತಾಪ್ ಸಿಂಹ, ಅರವಿಂದ ಲಿಂಬಾವಳಿ. ಬಾಲಚಂದ್ರ ಜಾರಕಿಹೊಳಿ ಸೇರಿದಂತೆ ಇತರ ನಾಯಕರು ಭಾಗವಹಿಸಿದ್ದರು.

ರಾಜ್ಯದಲ್ಲಿಯ ಇತ್ತೀಚಿನ ರಾಜಕೀಯ ಬೆಳವಣಿಗೆ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ನಡೆಯ ಬಗ್ಗೆಯೂ ಚರ್ಚೆ ನಡೆಯಿತು ಎಂದು ಮೂಲಗಳು ತಿಳಿಸಿವೆ.

ಬಳಿಕ ಅಲ್ಲಿಂದ ಎಲ್ಲರೂ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಮಾಜಿ ರಾಜಕೀಯ ಕಾರ್ಯದರ್ಶಿ ಎನ್. ಆರ್. ಸಂತೋಷ್ ಸಹೋದರನ ಮದುವೆ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಪ್ರತಿಭಟನೆ

ಕಲಬುರಗಿಯಲ್ಲಿ ಗುರುವಾರ ನಡೆದ ವಕ್ಫ್ ಹಠಾವೋ, ಅನ್ನದಾತ ಬಚಾವೋ ಪ್ರತಿಭಟನಾ ಮೆರವಣಿಗೆಯಲ್ಲಿ ಮಠಾಧೀಶರು, ರೈತ ಮುಖಂಡರು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಅನ್ನದಾನೇಶ್ವರ ಶಾಖಾಮಠದ ಜಾಗವೂ ವಕ್ಫ್ ಆಸ್ತಿ

ಹನುಮಸಾಗರ (ಕೊಪ್ಪಳ ಜಿಲ್ಲೆ): 150 ವರ್ಷಗಳ ಇತಿಹಾಸ ಹೊಂದಿರುವ ಗದಗ ಜಿಲ್ಲೆಯ ನರೇಗಲ್‌ನ ಅನ್ನದಾನೇಶ್ವರ ಮಠದ ಶಾಖಾ ಮಠವು ಕುಷ್ಟಗಿ ತಾಲ್ಲೂಕಿನ ಹನುಮಸಾಗರದಲ್ಲಿದ್ದು, ಮಠದ ಒಂದಷ್ಟು ಜಾಗ ವಕ್ಫ್ ಆಸ್ತಿ ಎಂದು ನಮೂದಾಗಿದೆ.

'ನಮ್ಮ ಶಾಖಾ ಮಠವು ಸರ್ವೆ ಸಂಖ್ಯೆ 17ರಲ್ಲಿ ಒಟ್ಟು 6 ಎಕರೆ 37 ಗುಂಟೆ ಭೂಮಿ ಹೊಂದಿದೆ. ಇದರಲ್ಲಿ 35 ಗುಂಟೆ ಜಾಗ ವಕ್ಫ್ ಆಸ್ತಿ ಎಂದಿದೆ. ಹಿಂದಿನಿಂದಲೂ ಮಠಕ್ಕೆ ಸೇರಿದ ಭೂಮಿಯಾಗಿದ್ದರೂ ಪ್ರಸ್ತುತ ಪಹಣಿಯಲ್ಲಿ ವಕ್ಫ್ ಹೆಸರು ಬಂದಿದ್ದು ಅಚ್ಚರಿ ಮೂಡಿಸಿದೆ' ಎಂದು ಮಠದ ಪ್ರಮುಖರಾದ ಮಲ್ಲಯ್ಯ ಕೋಮಾರಿ, ಸಂಗಯ್ಯ ವಸ್ತ್ರದ, ಬಸವರಾಜ ಹಳ್ಳೂರು ತಿಳಿಸಿದರು. '35 ಗುಂಟೆ ಭೂಮಿಯನ್ನು ಮರಳಿ ಮಠದ ಹೆಸರಿಗೆ ವರ್ಗಾಯಿಸಿಕೊಡಬೇಕು' ಎಂದು ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

ವೈದ್ಯಕೀಯ ವರದಿ ನೀಡಲು ಆದೇಶ • ನಿಯಮಿತ ಜಾಮೀನು ಅರ್ಜಿ ವಿಚಾರಣೆ 26ಕ್ಕೆ

ದರ್ಶನ್ ಚಿಕಿತ್ಸಾ ಮಾಹಿತಿ ಅಲಭ್ಯ: ಅತೃಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ ನಟ ದರ್ಶನ್ ಅವರಿಗೆ ಬೆನ್ನುಹುರಿ ನೋವಿಗೆ ಶಸ್ತ್ರಚಿಕಿತ್ಸೆಯ ಅಗತ್ಯವಿದೆ ಎಂಬ ಕಾರಣ ನೀಡಿ ಮಧ್ಯಂತರ ಜಾಮೀನು ಪಡೆದು ಹೊರಗೆ ಬಂದಿರುವರಾದರೂ ಈತನಕ ಆಸ್ಪತ್ರೆಯಲ್ಲಿ ಯಾವ ಚಿಕಿತ್ಸೆ ಪಡೆಯುತ್ತಿದ್ದೇನೆ ಎಂಬ ಮಾಹಿತಿಯನ್ನು ಹಂಚಿಕೊಂಡಿಲ್ಲ' ಎಂದು ಪ್ರಾಸಿಕ್ಯೂಷನ್, ಹೈಕೋರ್ಟ್‌ನಲ್ಲಿ ಬಲವಾಗಿ ಆಕ್ಷೇಪಿಸಿದೆ.

ಪ್ರಕರಣದ ಮೊದಲ ಆರೋಪಿ ಪವಿತ್ರಾ ಗೌಡ, 2ನೇ ಆರೋಪಿ ದರ್ಶನ್, 6ನೇ ಆರೋಪಿ ಜಗದೀಶ್, 7ನೇ ಆರೋಪಿ ಅನುಕುಮಾರ್ ಅಲಿಯಾಸ್ ಅನು, 11ನೇ ಆರೋಪಿ ನಾಗರಾಜ್ ಮತ್ತು 12ನೇ ಆರೋಪಿ ಎಂ.ಲಕ್ಷ್ಮಣ್, ಪ್ರತ್ಯೇಕವಾಗಿ ಸಲ್ಲಿಸಿದ್ದ ನಿಯಮಿತ (ರೆಗ್ಯುಲರ್) ಜಾಮೀನು ಅರ್ಜಿಗಳನ್ನು ನ್ಯಾಯಮೂರ್ತಿ ಎಸ್. ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್, 'ಪ್ರಕರಣದ ಪ್ರಮುಖ ಮತ್ತು ಎರಡನೇ ಆರೋಪಿಯಾದ ದರ್ಶನ್ ವೈದ್ಯಕೀಯ ಚಿಕಿತ್ಸೆಗಾಗಿ ಜಾಮೀನು ಪಡೆದಿದ್ದಾರೆ. ಆದರೆ, ಕೋರ್ಟ್ ಜಾಮೀನು ನೀಡುವಾಗ; ಯಾವಾಗ ಶಸ್ತ್ರ-ಚಿಕಿತ್ಸೆ ಮಾಡಿಸಿಕೊಳ್ಳಬೇಕು, ಎಷ್ಟು ದಿನ ಆಸ್ಪತ್ರೆಯಲ್ಲಿ ಇರಬೇಕಾಗುತ್ತದೆ.

ದರ್ಶನ್

ತದನಂತರದಲ್ಲಿ ಏನಾದರೂ ಚಿಕಿತ್ಸೆ ಮುಂದುವರಿಯುತ್ತದೆಯೋ ಹೇಗೆ ಎಂಬ ವಿವರಗಳನ್ನು ಬಿಡುಗಡೆಯಾದ ಒಂದು ವಾರದಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಬೇಕು ಎಂಬ ಷರತ್ತು ವಿಧಿಸಿತ್ತು. ಆದರೆ, ಈ ಷರತ್ತಿಗೆ ಅನುಗುಣವಾಗಿ ಅವರು ಈತನಕ ಪ್ರಾಸಿಕ್ಯೂಷನ್‌ಗೆ ಯಾವುದೇ ಮಾಹಿತಿ ಹಂಚಿಕೊಂಡಿಲ್ಲ. ಬದಲಾಗಿ ಕೋರ್ಟ್‌ಗೆ ಮುಚ್ಚಿದ ಲಕೋಟೆಯಲ್ಲಿ ನೀಡಿದೆ' ಎಂದು ಅತೃಪ್ತಿ ವ್ಯಕ್ತಪಡಿಸಿದರು.

'ಚಿಕಿತ್ಸೆಗೆ ಸಂಬಂಧಿಸಿದ ಎಲ್ಲಾ ದಾಖಲೆಗಳು ಮತ್ತು ಆ ಚಿಕಿತ್ಸೆಯ ಮುನ್ನೋಟವನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು ಎಂಬ ಷರತ್ತು ಇದೆಯಾದರೂ, ಅರ್ಜಿದಾರರು ಈಗ ನಿಯಮಿತ ಜಾಮೀನು ಅರ್ಜಿ ಸಲ್ಲಿಸಿದ್ದು ಈ ಕುರಿತಾದ ಕಾನೂನು ಔಚಿತ್ಯದ ನಿಷ್ಕರ್ಷೆ ಅಗತ್ಯವಿದೆ' ಎಂದರು.

ಅಂತೆಯೇ, 'ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಕಿ ಇದ್ದ ಮುಂದುವರಿದ ತನಿಖೆಯನ್ನು ಪೂರ್ಣಗೊಳಿಸಲಾಗಿದ್ದು, 1,200ಕ್ಕೂ ಹೆಚ್ಚಿನ ಪುಟಗಳ ಹೆಚ್ಚುವರಿ ದೋಷಾರೋಪ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಶುಕ್ರವಾರ (ನ.22) ವಿಚಾರಣಾ ನ್ಯಾಯಾಲಯಕ್ಕೆ ಇದನ್ನು ನಿವೇದಿಸಲಾಗುವುದು. ಅದನ್ನು ನೋಡಿ ಅರ್ಜಿದಾರರ ಪರ ವಕೀಲರು ತಮ್ಮ ವಾದ ಮುಂದುವರಿಸಬಹುದು' ಎಂದು ಮನವಿ ಮಾಡಿದರು.

ಇದಕ್ಕೆ ಪ್ರತಿಯಾಗಿ ದರ್ಶನ್ ಪರ ಹಾಜರಿದ್ದ ಹಿರಿಯ ವಕೀಲ ಸಿ.ವಿ. ನಾಗೇಶ್, 'ಕೋರ್ಟ್ ಈಗಾಗಲೇ ಆರು ವಾರಗಳ ಕಾಲ ಮಧ್ಯಂತರ ಜಾಮೀನು ನೀಡಿಯಾಗಿದೆ. ಅದನ್ನು ವಾಪಸು ಪಡೆಯುವ ಪ್ರಶ್ನೆ ಉದ್ಭವಿಸುವುದಿಲ್ಲ' ಎಂದರು.

ಇದಕ್ಕೆ ನ್ಯಾಯಪೀಠ, 'ಒಂದು ವೇಳೆ ಷರತ್ತು ಪಾಲನೆ ಆಗಲಿಲ್ಲ ಎಂದಾದರೆ ಜಾಮೀನು ವಾಪಸು ಪಡೆಯಲಾಗುವುದು' ಎಂದು ಸ್ಪಷ್ಟಪಡಿಸಿತಲ್ಲದೆ, 'ದರ್ಶನ್ ಪಡೆದಿರುವ ವೈದ್ಯಕೀಯ ಚಿಕಿತ್ಸೆಯ ವರದಿಯನ್ನು ಪ್ರಾಸಿಕ್ಯೂಷನ್‌ಗೆ ನೀಡಬೇಕು' ಎಂದು ರಿಜಿಸ್ಟ್ರಿಗೆ ಆದೇಶಿಸಿ ವಿಚಾರಣೆಯನ್ನು ಇದೇ 26ಕ್ಕೆ ಮುಂದೂಡಿತು.

ಪವಿತ್ರಾಗೌಡ ಪರ ಹಿರಿಯ ವಕೀಲ ಟಾಮಿ ಸೆಬಾಸ್ಟಿಯನ್, ದರ್ಶನ್ ಪರ ಎಸ್.ಸುನಿಲ್ ಕುಮಾರ್, ಎಂ.ಲಕ್ಷ್ಮಣ್ ಪರ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್, ಜಗದೀಶ್ ಮತ್ತು ಅನುಕುಮಾರ್ ಪರ ಹೈಕೋರ್ಟ್ ವಕೀಲ ರಾಜವರ್ಧನ ರೆಡ್ಡಿ ಹಾಜರಿದ್ದರು.

ರೇಣುಕ ಶವದ ಎದುರು ದರ್ಶನ್

ಮೊದಲ ಪುಟದಿಂದ...

'20ಕ್ಕೂ ಹೆಚ್ಚು ಸಾಕ್ಷ್ಯಗಳನ್ನು ಸಂಗ್ರಹಿಸಲಾಗಿದೆ. ತಾಂತ್ರಿಕ ಸಾಕ್ಷ್ಯ ಮತ್ತು ಎಫ್‌ಎಸ್‌ಎಲ್ ವರದಿಯನ್ನು ಆರೋಪಪಟ್ಟಿಯಲ್ಲಿ ಸೇರಿಸಲಾಗುತ್ತದೆ' ಎಂದು ಮೂಲಗಳು ಹೇಳಿವೆ.

ನಗರದ ಪಟ್ಟಣಗೆರೆಯ ಶೆಡ್‌ನಲ್ಲಿ ಜೂನ್ 9ರಂದು ಕೊಲೆ ನಡೆದಿತ್ತು. ಕೊಲೆ ಆರೋಪದಡಿ ದರ್ಶನ್ ಹಾಗೂ ಅವರ ಆಪ್ತೆ ಪವಿತ್ರಾಗೌಡ ಸೇರಿ 17 ಮಂದಿಯನ್ನು ಬಂಧಿಸಿದ್ದರು.

ದರ್ಶನ್ ಮತ್ತು ಇತರ ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ 3,991 ಪುಟಗಳ ಪ್ರಾಥಮಿಕ ದೋಷಾರೋಪ ಪಟ್ಟಿಯನ್ನು ಸೆಪ್ಟೆಂಬರ್ 4ರಂದು ಪೊಲೀಸರು ಸಲ್ಲಿಸಿದ್ದರು. ಮೂವರು ಪ್ರತ್ಯಕ್ಷದರ್ಶಿ ಸಾಕ್ಷಿಗಳ ಹೇಳಿಕೆ, ಎಂಟು ವರದಿಗಳು, 231ಕ್ಕೂ ಹೆಚ್ಚು ಸಾಕ್ಷಿಗಳ ಹೇಳಿಕೆಗಳನ್ನು ಆರೋಪಪಟ್ಟಿಯಲ್ಲಿ ಒದಗಿಸಲಾಗಿತ್ತು.

ಕೃಷಿ ಸಾಲ ಮೊತ್ತ ಕಡಿತ: ಕೈಚೆಲ್ಲಿದ ಕೇಂದ್ರ

ಮೊದಲ ಪುಟದಿಂದ....

2024-25ನೇ ಸಾಲಿನಲ್ಲಿ ಹಂಗಾಮಿನ ಕೃಷಿ ಚಟುವಟಿಕೆಗಳಿಗೆ ಅಲ್ಪಾವಧಿ ಸಹಕಾರಿ ಸಾಲ ವ್ಯವಸ್ಥೆಯಡಿ ₹9,162 ಕೋಟಿ ಕೃಷಿ ಸಾಲ ಮಿತಿಗೆ ಅನುಮೋದನೆ ನೀಡುವಂತೆ ನಬಾರ್ಡ್‌ಗೆ ಅಪೆಕ್ಸ್ ಬ್ಯಾಂಕ್ ಪ್ರಸ್ತಾವನೆ ಸಲ್ಲಿಸಿತ್ತು.

2023-24ನೇ ಸಾಲಿನಲ್ಲಿ ನಬಾರ್ಡ್ ಕೃಷಿ ಚಟುವಟಿಕೆಗಳಿಗೆ ₹5,600 ಕೋಟಿ ಮೊತ್ತದ ರಿಯಾಯಿತಿ ದರದ ಸಾಲದ ಮಿತಿಗೆ ಅನುಮೋದನೆ ನೀಡಿತ್ತು. 2024-25ನೇ ಸಾಲಿನಲ್ಲಿ ₹9,162 ಕೋಟಿಗೆ ಪ್ರಸ್ತಾವನೆ ಸಲ್ಲಿಸಿದ್ದರೂ, ನಬಾರ್ಡ್ ಕೃಷಿ ಚಟುವಟಿಕೆಗಳಿಗೆ ₹2,340 ಕೋಟಿ ರಿಯಾಯಿತಿ ದರದ ಸಾಲ ಅನುಮೋದಿಸಿದೆ. ಇದು ಕಳೆದ ವರ್ಷಕ್ಕಿಂತ ಶೇ 58ರಷ್ಟು ಕಡಿಮೆ. ಆರ್‌ಬಿಐ ಸಾಮಾನ್ಯ ಸಾಲದ ಮಿತಿಯನ್ನು (ಎಲ್‌ಒಸಿ) ಕಡಿಮೆ ಗೊಳಿಸಿರುವುದೇ ಪ್ರಸ್ತುತ ವರ್ಷ ರಿಯಾಯಿತಿ ದರದ ಸಾಲದ ಮಿತಿಯನ್ನು ಕಡಿಮೆಗೊಳಿಸಲು ಕಾರಣ ಎಂದು ನಬಾರ್ಡ್ ಮಾಹಿತಿ ನೀಡಿದೆ.

ರಾಜ್ಯದಲ್ಲಿ ಈ ಬಾರಿ ಉತ್ತಮ ಮಳೆಯಾಗಿದ್ದು, ರೈತರು ಕೃಷಿ ಸಹಕಾರಿ ಚಟುವಟಿಕೆಗಳಿಗೆ ರಿಯಾಯಿತಿ ದರದ ಸಾಲದ ಮಿತಿಯನ್ನು ಹೆಚ್ಚಿಸುವಂತೆ ಬೇಡಿಕೆ ಇರಿಸಿದ್ದಾರೆ. ಆದರೆ, ರಾಜ್ಯಕ್ಕೆ 2024-25ನೇ ಸಾಲಿಗೆ ರಿಯಾಯಿತಿ ದರದ ಸಾಲದ ಮಿತಿಯನ್ನು ಕಡಿತಗೊಳಿಸಿರುವುದು ಅಲ್ಪಾವಧಿ ಕೃಷಿ ಸಹಕಾರಿ ಸಾಲದ ವಿತರಣೆ ಮೇಲೆ ಗಂಭೀರ ಪರಿಣಾಮ ಬೀರಲಿದೆ.

ಈ ಹಿನ್ನೆಲೆಯಲ್ಲಿ, ಅಲ್ಪಾವಧಿ ಕೃಷಿ ಸಾಲದ ಮಿತಿ ಹೆಚ್ಚಿಸುವಂತೆ ನಬಾರ್ಡ್ ಹಾಗೂ ಆರ್‌ಬಿಐಗೆ ನಿರ್ದೇಶನ ನೀಡಬೇಕು ಎಂದು ನಿಯೋಗ ಮನವಿ ಮಾಡಿತು.

ನಿರ್ಮಲಾ ಸೀತಾರಾಮನ್ ಅವರಿಗೆ ಸಿದ್ದರಾಮಯ್ಯ ಮನವಿ ಸಲ್ಲಿಸಿದರು. ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಉಪಸ್ಥಿತರಿದ್ದರು

ರಾಜಸ್ಥಾನ, ಗುಜರಾತ್ ಮೊತ್ತ ಕಡಿತ: ಜೋಶಿ

'ಕಾಂಗ್ರೆಸ್ ಸರ್ಕಾರದ ದುರಾಡಳಿತ, ಭ್ರಷ್ಟಾಚಾರ- ಇವೆಲ್ಲವನ್ನೂ ಮರೆಮಾಚಲು ಸಿದ್ದರಾಮಯ್ಯ ಅವರು ಕೇಂದ್ರದ ವಿರುದ್ಧ ಆರೋಪ ಮಾಡುತ್ತಲೇ ಬಂದಿದ್ದಾರೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಬಾರ್ಡ್‌ನಿಂದ ಕರ್ನಾಟಕಕ್ಕೆ ಮಾತ್ರ ಸಮಸ್ಯೆ ಆಗಿದೆ ಎಂದು ಸಿದ್ದರಾಮಯ್ಯ ಹೇಳುತ್ತಿದ್ದಾರೆ. ಗುಜರಾತ್‌ನಲ್ಲಿ ಕೃಷಿ ಕ್ಷೇತ್ರಕ್ಕೆ ನಬಾರ್ಡ್ ಮೊತ್ತ ಕಳೆದ ಬಾರಿ ₹1,800 ಕೋಟಿ ಸಾಲ ಇದ್ದುದು ಈ ಬಾರಿ ₹1,070 ಕೋಟಿ ಆಗಿದೆ. ರಾಜಸ್ಥಾನದಲ್ಲಿ ಕಳೆದ ಬಾರಿ ₹4,792 ಕೋಟಿ ಇತ್ತು. ಈ ಸಲ ₹2,070 ಕೋಟಿಗೆ ಇಳಿದಿದೆ. ಉತ್ತರ ಪ್ರದೇಶದಲ್ಲಿ ಕಳೆದ ಬಾರಿ ₹2,700 ಕೋಟಿ ಇತ್ತು. ಈ ಬಾರಿ ₹920 ಕೋಟಿ ಆಗಿದೆ' ಎಂದರು.

'ಎಲ್ಲ ಬ್ಯಾಂಕ್‌ಗಳು ಆದ್ಯತಾ ರಂಗವಾದ ಕೃಷಿಗೆ ನಿಗದಿತ ಮೊತ್ತವನ್ನು ಸಾಲವಾಗಿ ಕೊಡುತ್ತಿವೆ. ಸಹಜವಾಗಿ ನಬಾರ್ಡ್‌ಗೆ ರಿಸರ್ವ್ ಬ್ಯಾಂಕ್ ಕೊಡುವ ಮೊತ್ತ ಕಡಿಮೆಯಾಗುತ್ತದೆ. ಈ ವ್ಯವಸ್ಥೆ ಗೊತ್ತಿರುವ ಸಿದ್ದರಾಮಯ್ಯನವರು ಇದನ್ನು ಮೆಚ್ಚಬೇಕಿತ್ತು. ತಳಹಂತದ ಸಾಲವು ಕರ್ನಾಟಕದಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ಶೇ 8 ಇದ್ದದ್ದು ಶೇ 8.15 ಆಗಿದೆ. ಇದು ದೇಶದಾದ್ಯಂತ ನಬಾರ್ಡ್ ಹಣಕಾಸಿನ ಲಭ್ಯತೆ ಕಡಿಮೆ ಆಗಲು ಕಾರಣ' ಎಂದು ಅವರು ವಿಶ್ಲೇಷಿಸಿದರು.

ನಬಾರ್ಡ್ ನೀಡಿದ ಸಾಲದ ವಿವರ (₹ ಕೋಟಿಗಳಲ್ಲಿ)

ವರ್ಷ	ಮೊತ್ತ	ಇಳಿಕೆ/ ಏರಿಕೆ	ಶೇಕಡವಾರು (ಇಳಿಕೆ/ಏರಿಕೆ)
2019-20	4,200	700	15
2020-21	5,500	1300	27
2021-22	5,483	-16.10	-1
2022-23	5,550	66.10	1
2023-24	5,600	50	1
2024-25	2,340	-3,260	-58

ದಲಿತ ಸಮುದಾಯದ ಡಾಬಾ ಹೊನ್ನಮ್ಮ ಕೊಲೆ ಪ್ರಕರಣ

21 ಮಂದಿಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ತುಮಕೂರು: ಚಿಕ್ಕನಾಯಕನ ಹಳ್ಳಿ ತಾಲ್ಲೂಕು ಹಂದನಕೆರೆ ಪೊಲೀಸ್ ಠಾಣೆ ವ್ಯಾಪ್ತಿಯ ಗೋಪಾಲಪುರ ಗ್ರಾಮದ ಪರಿಶಿಷ್ಟ ಜಾತಿಯ ಮಹಿಳೆ ಡಾಬಾ ಹೊನ್ನಮ್ಮ ಕೊಲೆ ಪ್ರಕರಣ ದಲ್ಲಿ ಅಪರಾಧಿಗಳು ಎಂದು ಸಾಬೀತಾದ ಎಲ್ಲಾ 21 ಮಂದಿಗೂ ಜಿಲ್ಲಾ ಮೂರನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯ ಗುರುವಾರ ಜೀವಾವಧಿ ಶಿಕ್ಷೆ ವಿಧಿಸಿದೆ.

ಶಿಕ್ಷೆ ಪ್ರಕಟವಾಗುತ್ತಿದ್ದಂತೆ 21 ಅಪರಾಧಿಗಳನ್ನು ಪೊಲೀಸರು ವಶಕ್ಕೆ ಪಡೆದು ಜೈಲಿಗೆ ಕಳುಹಿಸಿದರು.ಜೀವಾವಧಿ (ಜೀವ ಇರುವವರೆಗೂ) ಶಿಕ್ಷೆ ಜತೆಗೆ ತಲಾ ₹13,500 ದಂಡ ವಿಧಿಸಲಾಗಿದೆ.

ಬುಧವಾರ ವಿಚಾರಣೆ ಪೂರ್ಣಗೊಳಿಸಿದ್ದ ಕೋರ್ಟ್ ಎಲ್ಲಾ 21 ಮಂದಿಯನ್ನೂ ಅಪರಾಧಿಗಳು ಎಂದು ಆದೇಶಿಸಿತ್ತು. ಕಾಯ್ದಿರಿಸಿದ್ದ ಆದೇಶವನ್ನು ನ್ಯಾಯಾಧೀಶ ಎ.ನಾಗಿರೆಡ್ಡಿ ಗುರುವಾರ ಪ್ರಕಟಿಸಿದರು.

ಒಟ್ಟು 27 ಮಂದಿಯನ್ನು ಅಪರಾಧಿಗಳು ಎಂದು ಕೋರ್ಟ್ ತೀರ್ಮಾನಿಸಿತ್ತು. ಅದರಲ್ಲಿ 6 ಮಂದಿ ಈಗಾಗಲೇ ಮೃತಪಟ್ಟಿದ್ದು, ಉಳಿದ 21 ಮಂದಿಗೆ ಶಿಕ್ಷೆ ಜಾರಿ ಮಾಡಲಾಗಿದೆ. ಐಪಿಸಿ ಹಾಗೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆ ಅಡಿ ಶಿಕ್ಷೆ ವಿಧಿಸಲಾಗಿದೆ.

ಹಂದನಕೆರೆ ಪೊಲೀಸ್ ಠಾಣೆ ವ್ಯಾಪ್ತಿಯ ಗೋಪಾಲಪುರ ಗ್ರಾಮದಲ್ಲಿ 2010 ಜೂನ್ 28ರಂದು ಪರಿಶಿಷ್ಟ ಜಾತಿಗೆ ಸೇರಿದ ಹೊನ್ನಮ್ಮ ಕೊಲೆ ನಡೆದಿತ್ತು. ಸುದೀರ್ಘ ಒಂದೂವರೆ ದಶಕ ವಿಚಾರಣೆ ನಡೆದು ಇದೀಗ ಅಪರಾಧಿಗಳಿಗೆ ಶಿಕ್ಷೆಯಾಗಿದೆ.

ಡಾಬಾ ನಡೆಸುತ್ತಿದ್ದ ಗೋಪಾಲಪುರದ ಹೊನ್ನಮ್ಮ, ಗ್ರಾಮದಲ್ಲಿ ದೇವಸ್ಥಾನ ನಿರ್ಮಿಸಲು ಮರದ ತುಂಡು ಸಂಗ್ರಹಿಸಿ ಇಟ್ಟಿದ್ದರು. ಮರದ ತುಂಡುಗಳನ್ನು ಗ್ರಾಮದ ಕೆಲವರು ಕಳವು ಮಾಡಿದ್ದರು. ಈ ಸಂಬಂಧ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಇದರಿಂದಾಗಿ ಗ್ರಾಮದ ಜನರು ಹಾಗೂ ಹೊನ್ನಮ್ಮನ ಮಧ್ಯೆ ದ್ವೇಷ ಉಂಟಾಗಿತ್ತು. ಕೊನೆಗೆ ಹೊನ್ನಮ್ಮ ಅವರನ್ನು ಕಲ್ಲಿನಿಂದ ಜಜ್ಜಿ ಬರ್ಬರವಾಗಿ ಕೊಲೆ ಮಾಡಲಾಗಿತ್ತು.

ಕೊಲೆಯಾದ ಮಹಿಳೆ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕ ಬಿ.ಎಸ್. ಜ್ಯೋತಿ ವಾದ ಮಂಡಿಸಿದ್ದರು.

ಶಿಕ್ಷೆಗೆ ಒಳಗಾದವರು: ರಂಗನಾಥ, ಮಂಜುಳ, ತಿಮ್ಮರಾಜು, ರಾಜು (ದೇವರಾಜು), ಶ್ರೀನಿವಾಸ್, ಆನಂದ (ಆನಂದಸ್ವಾಮಿ), ವೆಂಕಟಸ್ವಾಮಿ, ವೆಂಕಟೇಶ್, ನಾಗರಾಜು, ರಾಜಪ್ಪ, ಮೀಸೆ ಹನುಮಂತಯ್ಯ, ಗಂಗಾಧರ (ಗಂಗಣ್ಣ), ನಂಜುಂಡಯ್ಯ (ಪರಿಶಿಷ್ಟ ಜಾತಿ), ಸತ್ಯಪ್ಪ- ಸತೀಶ (ಪರಿಶಿಷ್ಟ ಜಾತಿ), ಚಂದ್ರಶೇಖರ (ಚಂದ್ರಯ್ಯ), ರಂಗಯ್ಯ (ರಾಮಯ್ಯ), ಉಮೇಶ್, ಚನ್ನಮ್ಮ, ಮಂಜಣ್ಣ, ಮಂಜು, ಸ್ವಾಮಿ (ಮೋಹನ್ ಕುಮಾರ್).

ಹನುಮಂತಯ್ಯ (ಪರಿಶಿಷ್ಟ ಜಾತಿ), ವೆಂಕಟೇಶ್, ರಾಮಯ್ಯ, ರಾಮಯ್ಯ, ದಾಸಪ್ಪ, ಬುಳ್ಳೆ ಹನುಮಂತಯ್ಯ ಈಗಾಗಲೇ ಮೃತಪಟ್ಟಿದ್ದಾರೆ.

ಕೃಷಿಯೇತರ ಉದ್ದೇಶಕ್ಕೆ ಪರಿವರ್ತನೆಗೊಂಡು ಅಭಿವೃದ್ಧಿಯಾಗದ ಜಮೀನು ನೋಂದಣಿ ತೊಡಕು ನಿವಾರಣೆ

‘ಕೃಷಿಯೇತರ ಜಮೀನು’ ನೋಂದಣಿಗೆ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿಯೇತರ ಉದ್ದೇಶಕ್ಕೆ ಪರಿವರ್ತನೆಗೊಂಡು ಅಭಿವೃದ್ಧಿ ಯಾಗದೇ ಇರುವ ಜಮೀನುಗಳ ನೋಂದಣಿ ಪ್ರಕ್ರಿಯೆಗೆ ಇದ್ದ ತೊಡಕು ಗಳನ್ನು ಕಂದಾಯ ಇಲಾಖೆ ನಿವಾರಿಸಿದ್ದು, ಅಂತಹ ಜಮೀನುಗಳನ್ನು ‘ಕೃಷಿ ಯೇತರ ಅಭಿವೃದ್ಧಿಯಾಗದ ಜಮೀನು’ ಎಂದು ಪರಿಗಣಿಸಲು ಸೂಚಿಸಿದೆ.

ಕಾವೇರಿ-2 ತಂತ್ರಾಂಶ ಹಾಗೂ ಇ-ಖಾತೆ ಸಂಯೋಜನೆಗೊಂಡ ನಂತರ ಕೃಷಿಯೇತರ ಉದ್ದೇಶಕ್ಕೆ ಪರಿವರ್ತನೆ ಯಾಗಿದ್ದೂ, ನಿವೇಶನ ಇತ್ಯಾದಿ ಆಸ್ತಿ ಸಂಖ್ಯೆ ಪಡೆಯದ (ಇ-ಖಾತಾ) ಜಮೀನಿನ ಸ್ವರೂಪದಲ್ಲೇ ಉಳಿದಿದ್ದ ಭೂಮಿಯನ್ನು ಪಹಣಿ ಅಥವಾ ಇ-ಖಾತಾ ಆಧಾರದ ಮೇಲೆ ನೋಂದಣಿ ಮಾಡಲು ಸಾಧ್ಯವಾಗದೇ, ಯಾವುದೇ ವಹಿವಾಟು ಮಾಡಲು ಆಗದೇ ಸಾರ್ವಜನಿಕರು ಪರದಾಡುವಂತಾಗಿತ್ತು. ಅಂತಹ ಜಮೀನುಗಳನ್ನು ಇನ್ನು ಮುಂದೆ ‘ಕೃಷಿಯೇತರ ಅಭಿವೃದ್ಧಿಯಾಗದ ಜಮೀನು’ ಎಂದು ಪರಿಗಣಿಸಿ, ಪ್ರಸ್ತುತ ಮಾರುಕಟ್ಟೆ ಮೌಲ್ಯದ ಆಧಾರದಲ್ಲಿ ನೋಂದಣಿ ಮತ್ತು ಮುದ್ರಾಂಕ ಶುಲ್ಕ ಪಾವತಿಸಿಕೊಂಡು, ನೋಂದಣಿಗೆ ಅವಕಾಶ ಕಲ್ಪಿಸಲಾಗಿದೆ.

ಹೊಸ ನಿಯಮ ದಿಂದಾಗಿ ಪರಿವರ್ತಿತ ಹಾಗೂ ಅಭಿವೃದ್ಧಿ ಗೊಳ್ಳದ ಭೂಮಿಯನ್ನು ಆರ್‌ಟಿಸಿ ಆಧಾರದಲ್ಲಿ ಹಾಗೂ ಯೋಜನಾ ಪ್ರಾಧಿಕಾರಗಳಿಂದ ಅನುಮೋದನೆ ಗೊಂಡಿದ್ದ ಬಡಾವಣೆಗಳಲ್ಲಿನ ರಸ್ತೆ, ಉದ್ಯಾನ ಹಾಗೂ ಆಟದ ಮೈದಾನಗಳಿಗೂ ಇ-ಖಾತಾ ಮಾಡಿ ಕೊಳ್ಳುವ ಪೂರ್ವದಲ್ಲಿ ಇದ್ದ ನೋಂದಣಿ ಗೊಂದಲಗಳಿಗೂ ತೆರೆ ಎಳೆಯಲಾಗಿದೆ.

ಪರಿತ್ಯಾಜನಾ ಪತ್ರಗಳ ನೋಂದಣಿ

ಯೋಜನಾ ಪ್ರಾಧಿಕಾರದಿಂದ ಅನುಮೋದನೆಗೊಂಡ ಬಡಾವಣೆಗಳ ರಸ್ತೆ, ಆಟದ ಮೈದಾನ, ಉದ್ಯಾನಗಳನ್ನು ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರ (ರಿಲಿಂಕ್ವಿಷ್‌ಮೆಂಟ್) ಮಾಡಬೇಕು. ಆದರೆ, ಅವುಗಳಿಗೆ ಖಾತೆ ನೀಡುವ ಬಗ್ಗೆ ಗೊಂದಲವಿದ್ದ ಕಾರಣ ಈ ಪ್ರಕ್ರಿಯೆ ಸ್ಥಗಿತವಾಗಿತ್ತು.

ಇಂತಹ ಬಡಾವಣೆಗಳ ಮೂಲ ಮಾಲೀಕರು, ಅಭಿವೃದ್ಧಿದಾರರ ಹೆಸರಿಗೆ ರಸ್ತೆ ಉದ್ಯಾನಗಳಿಗೆ ಖಾತೆ ಸೃಜನೆ ಮಾಡಿ, ಅವರಿಂದ ನೋಂದಣಿ ಮುಖಾಂತರ ವರ್ಗಾಯಿಸಲು ಸಾಧ್ಯವಾಗುವ ರೀತಿ ಪೌರಾಡಳಿತ ನಿರ್ದೇಶನಾಲಯ ಆದೇಶ ಹೊರಡಿಸಿದೆ. ಇದೇ ರೀತಿಯಲ್ಲಿ ಬಿಬಿಎಂಪಿ ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲೂ ಪರಿಹಾರ ನೀಡಲು ತೀರ್ಮಾನಿಸಲಾಗಿದೆ. ಇದಕ್ಕೆ ತಕ್ಕಂತೆ ಬದಲಾವಣೆಗಳನ್ನು ಇ-ಖಾತಾ ವ್ಯವಸ್ಥೆಯಲ್ಲೂ ಕಲ್ಪಿಸಲಾಗು ವುದು ಎಂದು ಕಂದಾಯ ಇಲಾಖೆ ಮಾಹಿತಿ ನೀಡಿದೆ.

ಕಂದಾಯ ಇಲಾಖೆ, ಗ್ರಾಮೀಣ ಅಭಿವೃದ್ಧಿ ಇಲಾಖೆ, ನಗರಾಭಿವೃದ್ಧಿ ಹಾಗೂ ಪೌರಾಡಳಿತ ಇಲಾಖೆ ಒಟ್ಟಾಗಿ ಕೆಲವು ಪ್ರಮುಖ ತೀರ್ಮಾನಗಳನ್ನು ತೆಗೆದುಕೊಳ್ಳುವ ಮೂಲಕ ನಗರಗಳ ಇ-ಖಾತಾ ಹಾಗೂ ನೋಂದಣಿಯ ಸಮಸ್ಯೆಗಳಿಗೂ ಪರಿಹಾರ ದೊರೆತಿದೆ ಎಂದು ಕಂದಾಯ ಇಲಾಖೆ ಹೇಳಿದೆ.

ಭೂಮಿ, ಇ-ಸ್ವತ್ತು ಹಾಗೂ ಇ-ಆಸ್ತಿ ತಂತ್ರಾಂಶಗಳ ಸಂಯೋಜನೆಯು ಅಭಿವೃದ್ಧಿ ಹಂತದಲ್ಲಿದ್ದು, ಒಂದು ಸರ್ವೆ ನಂಬರ್ ಜಮೀನು ಭೂಪರಿವರ್ತನೆ ಯಾದ ನಂತರ ಇ-ಸ್ವತ್ತು ಹಾಗೂ ಇ-ಆಸ್ತಿ ಗುರುತಿನ ಸಂಖ್ಯೆ ಸೃಜನೆಯಾಗಿದ್ದರೆ ಅಂತಹ ಆಸ್ತಿ ಗುರುತಿನ ಸಂಖ್ಯೆಯನ್ನು ಭೂಮಿ ತಂತ್ರಾಂಶಕ್ಕೆ ರವಾನಿಸಲಾಗು ತ್ತದೆ. ಆಗ ಪಹಣಿ ಆಧಾರದ ಮೇಲೆ ನೋಂದಣಿ ವಹಿವಾಟು ನಡೆಸಲು ಅವಕಾಶ ಸಿಗುವುದಿಲ್ಲ ಎಂದರು.

ಹೇರ್ ಡ್ರಯರ್ ಸ್ಫೋಟ ಪಾರ್ಸಲ್ ಬಗ್ಗೆ ತನಿಖೆ

ಇಳಕಲ್ (ಬಾಗಲಕೋಟೆ): ಆನ್‌ಲೈನ್‌ನಲ್ಲಿ ಖರೀದಿಸಿದ ಹೇರ್ ಡ್ರಯರ್ ಸ್ಫೋಟಗೊಂಡು ಪಟ್ಟಣದ ಬಸವರಾಜೇಶ್ವರಿ ಯರನಾಳ ಎಂಬುವರ ಎರಡೂ ಕೈಗಳ ಬೆರಳುಗಳು ಛಿದ್ರಗೊಂಡಿವೆ. ಆದರೆ, ಹೇರ್‌ಡ್ರಯರ್ ಅನ್ನು ಆನ್‌ಲೈನ್‌ನಲ್ಲಿ ಬುಕ್ ಮಾಡಿದ್ದು ಮತ್ತು ಕೊರಿಯರ್‌ನಲ್ಲಿ ಕಳುಹಿಸಿದ್ದು ಯಾರು ಎಂಬುದು ನಿಗೂಢವಾಗಿದೆ.

‘ಶಶಿಕಲಾ ಹಡಪದ ಎಂಬುವರ ಹೆಸರಿನಲ್ಲಿ ಪಾರ್ಸಲ್ ಬಂದ ಹಿನ್ನೆಲೆಯಲ್ಲಿ ಕೊರಿಯರ್ ಸಂಸ್ಥೆಯವರು ದೂರವಾಣಿ ಕರೆ ಮಾಡಿದಾಗ, ‘ಯಾವುದನ್ನೂ ಆರ್ಡರ್ ಮಾಡಿಲ್ಲ’ ಎಂದಿದ್ದಾರೆ. ಸ್ನೇಹಿತರು ಆರ್ಡರ್ ಮಾಡಿರಬಹುದೆಂದು ಭಾವಿಸಿ ಶಶಿಕಲಾ ಅವರು ಸ್ನೇಹಿತೆ ಬಸವ ರಾಜೇಶ್ವರಿಗೆ ಅದನ್ನು ತರಲು ತಿಳಿಸಿದ್ದಾರೆ. ಪಾರ್ಸಲ್‌ನಲ್ಲಿದ್ದ ಹೇರ್ ಡ್ರಯರ್‌ನ್ನು ಮನೆಗೆ ತಂದು ಬಸವ ರಾಜೇಶ್ವರಿ ಬಳಸಲು ಮುಂದಾದಾಗ, ಅದು ಸ್ಫೋಟಗೊಂಡಿದೆ’ ಎಂದು ಇಳಕಲ್ ಠಾಣೆ ಪೊಲೀಸರು ತಿಳಿಸಿದ್ದಾರೆ.

‘ಪಾರ್ಸಲ್ ಯಾರು ಮತ್ತು ಯಾಕೆ ಕಳುಹಿಸಿರು ಎಂಬುದರ ಬಗ್ಗೆ ಸ್ಪಷ್ಟ ಮಾಹಿತಿ ಸಿಕ್ಕಿಲ್ಲ. ಎಲ್ಲರನ್ನೂ ವಿಚಾರಣೆಗೆ ಒಳಪಡಿಸಿ, ತನಿಖೆ ನಡೆಸಿದಾಗ ಸತ್ಯಾಂಶ ಗೊತ್ತಾಗಲಿದೆ’ ಎಂದು ಅವರು ತಿಳಿಸಿದ್ದಾರೆ.

‘ಸ್ಫೋಟದಿಂದ ಬಸವರಾಜೇಶ್ವರಿ ಅವರ ಒಂಬತ್ತು ಬೆರಳುಗಳ ಮಾಂಸ ಛಿದ್ರವಾಗಿವೆ. ಅವುಗಳನ್ನು ಮೊದಲಿನ ಸ್ಥಿತಿಗೆ ತರಲು ಆಗದು. ಅವರಿಗೆ ಚಿಕಿತ್ಸೆ ಮುಂದುವರಿದಿದೆ’ ಎಂದು ಡಾ.ಎನ್.ಆರ್. ಪಾಟೀಲ ತಿಳಿಸಿದರು.

ಅತ್ಯಾಚಾರ: ಇಬ್ಬರಿಗೆ 20 ವರ್ಷ ಜೈಲು

ಗುರುಗ್ರಾಮ(ಪಿಟಿಐ): ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಇಬ್ಬರು ಅಪರಾಧಿ ಗಳಿಗೆ ಗುರುಗ್ರಾಮದ ನ್ಯಾಯಾಲಯ 20 ವರ್ಷ ಜೈಲು ಶಿಕ್ಷೆ ಹಾಗೂ ತಲಾ ₹1.5 ಲಕ್ಷ ದಂಡ ವಿಧಿಸಿ ಆದೇಶಿಸಿದೆ.

ಇಲ್ಲಿನ ನ್ಯಾಯಾಲಯದ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಅಶ್ವನಿಕುಮಾರ್ ಅವರು ಈ ಇಬ್ಬರಿಗೆ ಬುಧವಾರ ಶಿಕ್ಷೆ ಪ್ರಕಟಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ತನ್ನ 15 ವರ್ಷ ವಯಸ್ಸಿನ ಮಗಳ ಮೇಲೆ ಇಬ್ಬರು ಅತ್ಯಾಚಾರ ಎಸಗಿದ್ದಾರೆ ಎಂದು ಆರೋಪಿಸಿ, ಬಾಲಕಿಯ ತಂದೆ 2021ರ ಮೇ 31ರಂದು ದೂರು ನೀಡಿದ್ದರು.

ವರಿಷ್ಠರ ಭೇಟಿಗೆ ಸಮಯ ಕೇಳಿದ ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಕೆಲಸದ ನಿಮಿತ್ತ ಶುಕ್ರವಾರ ದೆಹಲಿಗೆ ತೆರಳಲಿರುವ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ವರಿಷ್ಠರ ಭೇಟಿಗಾಗಿ ಸಮಯ ಕೇಳಿದ್ದಾರೆ.

ವರಿಷ್ಠರು ಭೇಟಿಗೆ ಅವಕಾಶ ನೀಡಿದರೆ, ಪಕ್ಷದ ಮತ್ತು ರಾಜ್ಯದ ವಿದ್ಯಮಾನಗಳ ಬಗ್ಗೆ ಚರ್ಚಿಸಲಿದ್ದಾರೆ. ಶಾಸಕ ಬಸನಗೌಡ ಪಾಟೀಲ ಯತ್ನಾಳ ನೇತೃತ್ವದ ತಂಡ ವಕ್ಫ್ ಹೋರಾಟ ವಿಚಾರದಲ್ಲಿ ಪಕ್ಷಕ್ಕೆ ಸಹಕಾರ ನೀಡದೇ ಪ್ರತ್ಯೇಕ ಹೋರಾಟ ನಡೆಸಲು ಮುಂದಾಗಿರುವ ವಿಚಾರವನ್ನು ಪ್ರಸ್ತಾ ಪಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪಕ್ಷದ ವತಿಯಿಂದ ಎರಡು ದಿನಗಳ ‘ನಮ್ಮ ಭೂಮಿ ನಮ್ಮ ಹಕ್ಕು’ ಹೋರಾಟ ಗುರುವಾರ ಆರಂಭವಾಗಿದ್ದು, ಮೊದಲ ದಿನ 9 ಜಿಲ್ಲೆಗಳಲ್ಲಿ ನಡೆದಿದೆ. ಉಳಿದ ಜಿಲ್ಲೆಗಳಲ್ಲಿ ಶುಕ್ರವಾರ ನಡೆಯಲಿದೆ. ಇದಕ್ಕೆ ಪರ್ಯಾಯವಾಗಿ ಯತ್ನಾಳ ನೇತೃತ್ವದ ತಂಡ ಇದೇ 25ರಿಂದ ಜನ ಜಾಗೃತಿ ಅಭಿಯಾನ ಹಮ್ಮಿಕೊಂಡಿದೆ.

ಮೆರವಣಿಗೆ

ಬೆಳಗಾವಿ ಜಿಲ್ಲೆಯ ಮೂಡಲಗಿಯಲ್ಲಿ ನವೆಂಬರ್ 23 ಮತ್ತು 24ರಂದು ಜರುಗುವ ಬೆಳಗಾವಿ ಜಿಲ್ಲಾ 16ನೇ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಯುಕ್ತ ಗುರುವಾರ ‘ಕನ್ನಡ ರೊಟ್ಟಿ ಬುತ್ತಿ ಜಾತ್ರೆ’ಯಲ್ಲಿ ಮಹಿಳೆಯರು ರೊಟ್ಟಿ ಬುತ್ತಿಗಳನ್ನು ಹೊತ್ತು ಮೆರವಣಿಗೆಯಲ್ಲಿ ಸಾಗಿದರು
ಪ್ರಜಾವಾಣಿ ಚಿತ್ರ: ಬಾಲಶೇಖರ ಬಂದಿ

ವಸತಿ ಶಾಲೆ ಮಕ್ಕಳಿಗೆ ‘ಮಂಗನ ಬಾವು’

ಪ್ರಜಾವಾಣಿ ವಾರ್ತೆ

ಮುಂಡಗೋಡ (ಉತ್ತರ ಕನ್ನಡ ಜಿಲ್ಲೆ): ಇಲ್ಲಿನ ಶಿರಸಿ ರಸ್ತೆಯ ಬ್ರಿಂದಾವನ ವಸತಿ ಬಡಾವಣೆಯಲ್ಲಿನ ಇಂದಿರಾಗಾಂಧಿ ವಸತಿ ಶಾಲೆಯ 50ಕ್ಕೂ ಹೆಚ್ಚು ವಿದ್ಯಾ ರ್ಥಿಗಳಿಗೆ ಮಂಗನ ಬಾವು ಕಾಯಿಲೆ ಕಾಣಿಸಿಕೊಂಡಿದೆ.

ವಸತಿ ಶಾಲೆಯಲ್ಲಿ 205 ವಿದ್ಯಾರ್ಥಿ ಗಳಿದ್ದು, ಅದರಲ್ಲಿ ಬುಧವಾರ 25 ಮಂದಿಗೆ ಮಂಗನಬಾವು ಕಾಣಿಸಿದ್ದ ರಿಂದ ಮನೆಗೆ ಕಳಿಸಲಾಗಿತ್ತು, ಗುರುವಾರ ಮತ್ತೆ 25 ವಿದ್ಯಾರ್ಥಿಗಳಲ್ಲಿ ಕಾಯಿಲೆಯ ಲಕ್ಷಣ ಕಂಡುಬಂದಿದೆ.

‘ಮಂಗನ ಬಾವು ಬಂದಿರುವ ವಿದ್ಯಾರ್ಥಿಗಳು ವಿಶ್ರಾಂತಿ ಪಡೆಯುತ್ತಿರು ವುದು ಕಂಡುಬಂತು. ಮೂರು– ನಾಲ್ಕು ದಿನಗಳ ಹಿಂದೆ ಕಾಣಿಸಿ ಕೊಂಡ ಮಂಗನ ಬಾವು ದಿನದಿಂದ ದಿನಕ್ಕೆ ಹರಡುತ್ತಿದೆ’ ಎಂದು ಶಿಕ್ಷಕರು ಹೇಳಿದರು. ‘ಮಂಗನಬಾವು ಲಕ್ಷಣವುಳ್ಳ ವಿದ್ಯಾರ್ಥಿಗಳಿಗೆ ಸೂಕ್ತ ಚಿಕಿತ್ಸೆ ಕೊಡಿಸಿ, ವಿಶ್ರಾಂತಿಗಾಗಿ ಮನೆಗೆ ಕರೆದೊಯ್ಯಲು ಪಾಲಕರಿಗೆ ತಿಳಿಸಲಾಗಿದೆ’ ಎಂದು ತಾಲ್ಲೂಕು ಪಂಚಾಯಿತಿ ಇ.ಒ ಟಿ.ವೈ. ದಾಸನಕೊಪ್ಪ ಹೇಳಿದರು.

‘ಕೆಲವು ವಿದ್ಯಾರ್ಥಿಗಳ ರಕ್ತದ ಮಾದರಿಯನ್ನು ಪ್ರಯೋಗಾಲಯಕ್ಕೆ ಕಳಿಸಲಾಗುವುದು’ ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಹೇಳಿದರು.

ಮುಂಡಗೋಡದ ವಸತಿ ಶಾಲೆಗೆ ತಾಲ್ಲೂಕು ಆರೋಗ್ಯ ಅಧಿಕಾರಿ ಡಾ.ಭರತ ಡಿ.ಟಿ ಹಾಗೂ ತಾಲ್ಲೂಕು ಪಂಚಾಯಿತಿ ಇ.ಒ ಟಿ.ವೈ.ದಾಸನಕೊಪ್ಪ ಭೇಟಿ ನೀಡಿದರು

ಸರ್ಕಾರಿ ಆಸ್ಪತ್ರೆಗಳ ಶುಲ್ಕ ಹೆಚ್ಚಳ: ಸಮರ್ಥನೆ

ಮಂಗಳೂರು: ‘ಸರ್ಕಾರಿ ಆಸ್ಪತ್ರೆಗಳ ಶುಲ್ಕದಲ್ಲಿ ಬಹಳ ವರ್ಷಗಳ ನಂತರ ಸಣ್ಣ ಪರಿಷ್ಕರಣೆ ಮಾಡಲಾಗಿದೆ. ಕೆಲವು ಶುಲ್ಕವನ್ನು ₹ 10ರಿಂದ ₹ 15ಕ್ಕೆ, ₹50ರಿಂದ ₹ 70ಕ್ಕೆ ಹೆಚ್ಚಿಸಲಾಗಿದೆ. ಈ ನಿರ್ಧಾರದಿಂದ ಆಸ್ಪತ್ರೆಗಳಿಗೆ ಅನುಕೂ ಲವಾಗಲಿದೆ’ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

‘ಸರ್ಕಾರಿ ಆಸ್ಪತ್ರೆಗಳ ಶುಲ್ಕ ಪರಿಷ್ಕ ರಣೆಯಿಂದ ಸಂಗ್ರಹವಾಗುವ ಮೊತ್ತ ಆಸ್ಪತ್ರೆಯ ಆರೋಗ್ಯ ಸುರಕ್ಷಾ ಸಮಿತಿಗೆ ಹೋಗುತ್ತದೆ. ತಾಲ್ಲೂಕು ಮಟ್ಟದ ಆಸ್ಪತ್ರೆಗಳ ಆರೋಗ್ಯ ಸುರಕ್ಷಾ ಸಮಿತಿಗೆ ಸ್ಥಳೀಯ ಶಾಸಕರೇ ಅಧ್ಯಕ್ಷರಾಗಿರುತ್ತಾರೆ. ಜಿಲ್ಲಾ ಮಟ್ಟದ ಆಸ್ಪತ್ರೆ ಸಮಿತಿಯಲ್ಲೂ ಶಾಸಕರು ಇರುತ್ತಾರೆ. ಆಸ್ಪತ್ರೆಯ ಶುಲ್ಕ ಹೆಚ್ಚಳಕ್ಕೂ ಗ್ಯಾರಂಟಿ ಯೋಜನೆಗೆ ತಳಕು ಹಾಕುವುದು ಸರಿಯಲ್ಲ’ ಎಂದರು.

ರಶೀದ್ ಜಾಮೀನು ಅರ್ಜಿ: ಜನಪ್ರತಿನಿಧಿಗಳ ಕೋರ್ಟ್‌ಗೆ ಶಿಫಾರಸು

ನವದೆಹಲಿ (ಪಿಟಿಐ): ಉಗ್ರರಿಗೆ ಹಣ ಒದಗಿಸಿದ ಆರೋಪ ಎದುರಿಸುತ್ತಿರುವ ಎಂಜಿನಿಯರ್ ರಶೀದ್, ಸದ್ಯ ಸಂಸದ ಆಗಿರುವ ಕಾರಣ ಅವರ ವಿರುದ್ಧದ ಪ್ರಕರಣವನ್ನು ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ವರ್ಗಾಯಿಸಲು ದೆಹಲಿ ನ್ಯಾಯಾಲಯವು ಶಿಫಾರಸು ಮಾಡಿದೆ.

ಎಂಜಿನಿಯರ್ ರಶೀದ್

ಜಾಮೀನು ಕೋರಿ ರಶೀದ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಛಂದರ್ ಜೀತ್ ಸಿಂಗ್ ಅವರು ಜಿಲ್ಲಾ ನ್ಯಾಯಾಲಯಕ್ಕೆ ಈ ಪ್ರಕರಣವನ್ನು ವರ್ಗಾಯಿಸಿದರು. ನ.25ರಂದು ಈ ಅರ್ಜಿಯ ವಿಚಾರಣೆ ನಡೆಯುವ ಸಾಧ್ಯತೆಯಿದೆ.

ಇದಲ್ಲದೇ, ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿ ದಂತೆ ಎನ್‌ಐಎ ದಾಖಲಿಸಿರುವ ಪ್ರಕರಣ ಸಂಬಂಧ ರಶೀದ್ ಸಲ್ಲಿಸಿದ ಜಾಮೀನು ಅರ್ಜಿ ವಿಚಾರಣೆಯನ್ನು ವಿಶೇಷ ನ್ಯಾಯಾಲಯಕ್ಕೆ ವರ್ಗಾಯಿಸಲಾಗಿದೆ.

ಎಂಜಿನಿಯರ್ ರಶೀದ್ ಅವರು ಬಾರಾಮುಲ್ಲಾ ಲೋಕಸಭಾ ಕ್ಷೇತ್ರದ ಸಂಸದರಾಗಿದ್ದು, ಭಯೋತ್ಪಾದಕರಿಗೆ ಹಣಕಾಸಿನ ನೆರವು ನೀಡಿದ ಆರೋಪ ದಡಿ 2019ರಿಂದ ತಿಹಾರ್ ಜೈಲಿನಲ್ಲಿ ದ್ದಾರೆ.

ಕರೀಂಗಂಜ್ ಇನ್ನು ‘ಶ್ರೀಭೂಮಿ’

ಗುವಾಹಟಿ(ಪಿಟಿಐ): ಅಸ್ಸಾಂನ ಕರೀಮ್ ಗಂಜ್ ಜಿಲ್ಲೆಯ ಹೆಸರನ್ನು ಶ್ರೀಭೂಮಿ ಎಂದು ಮರುನಾಮಕರಣ ಮಾಡಿರುವ ಸರ್ಕಾರ ಈ ಕುರಿತು ಅಧಿಕೃತ ಅಧಿಸೂ ಚನೆಯನ್ನು ಗುರುವಾರ ಹೊರಡಿಸಿದೆ.

ಜಿಲ್ಲಾ ಕೇಂದ್ರ ಕರೀಂಗಂಜ್ ಪಟ್ಟಣ ವನ್ನು ಶ್ರೀಭೂಮಿ ಪಟ್ಟಣ ಎಂದು ಮರು ನಾಮಕರಣ ಮಾಡಲಾಗಿದೆ ಹೇಳಿದೆ. ‘ಮರುನಾಮಕರಣ ನಿರ್ಧಾರವು ಜಿಲ್ಲೆಯ ಜನರ ನಿರೀಕ್ಷೆಗಳು ಮತ್ತು ಆಕಾಂಕ್ಷೆ ಪ್ರತಿಬಿಂಬಿಸುತ್ತದೆ’ ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ಹೇಳಿದ್ದಾರೆ.

ನಗರಸಭಾ ಕಾರ್ಯಾಲಯ, ಉಡುಪಿ
ಉಡುಪಿ ಜಿಲ್ಲೆ-576101

Web: www.udupicity.mrc.gov.in, E-Mail: itstaff_ulb_udupi@yahoo.com
Phone: 0820-2520446/ 2520306 Fax: 0820-2524236
UCMC/HS/HEE-130/CR-106/2024-25 Date:20.11.2024

ಟೆಂಡರ್ ಪ್ರಕಟಣೆ-3ನೇ ಕರೆ

ಕೆ.ಟಿ.ಟಿ.ಪಿ.ಕಾಯ್ದೆ 1999 ಮತ್ತು ನಿಯಮಗಳು 2000ರನ್ವಯ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದನ್ವಯ ಕರ್ನಾಟಕ ಪಬ್ಲಿಕ್ ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತಾರ ಹೈಡ್ರಾಲಿಕ್ ಅರ್ಥ್‌ಎಸ್ಕವೇಟರ್ ಮೆಷಿನ್ ವಾಹನವನ್ನು ಪೂರೈಸಲು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 05/12/2024 ಸಮಯ 5.00 ಗಂಟೆವರೆಗೆ. ಅರ್ಹ ಪೂರೈಕೆದಾರರು/ ಗುತ್ತಿಗೆದಾರರು/ ಏಜನ್ಸಿಯವರು ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (https://kppp.karnataka.gov.in) ಅಪ್‌ಲೋಡ್ ಮಾಡಿರುವ ಟೆಂಡರ್ ಡಾಕ್ಯುಮೆಂಟ್‌ನಲ್ಲಿ ಪಡೆಯಬಹುದು.

ಅನುದಾನದ ವಿವರ:-ಎಸ್.ಬಿ.ಎಂ 1.0 ಉಳಿತಾಯದ ಅನುದಾನ

ಕ್ರ. ಸಂ.	ಕೆಲಸದ ಹೆಸರು	ಟೆಂಡರ್ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ	ಇ.ಎಂ.ಡಿ. ಮೊತ್ತ
1	Procurement of Hydraulic Earth Excavator Machine (130)	DMA 2024-25/IND1870/CALL-3	Rs. 49,39,100/-	Rs. 1,23,750/-

ಸಹಿ/-ಪೌರಾಯುಕ್ತರು,
ನಗರಸಭೆ, ಉಡುಪಿ

ವೈದ್ಯಕೀಯ ಅಧೀಕ್ಷಕರ ಕಛೇರಿ, ಕೆ.ಸಿ. ಜನರಲ್ ಆಸ್ಪತ್ರೆ
ಮಲ್ಲೇಶ್ವರಂ, ಬೆಂಗಳೂರು -560 003,
ದೂರವಾಣಿ:080-23344022, 23341771, ಇ-ಮೇಲ್:kcghoffice@gmail.com

ಸಂಖ್ಯೆ:ಕೆಸಿಜಿಆ:ಎನ್‌ಒಹೆಚ್‌ಪಿ/01/2024-25 ದಿನಾಂಕ: 21.11.2024
DHFWS/2024-25/IND0933/Call-2

ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕೆಸಿ ಜನರಲ್ ಆಸ್ಪತ್ರೆ, ಮಲ್ಲೇಶ್ವರಂ ಮತ್ತು ಬೆಂಗಳೂರು ಇಲ್ಲಿಗೆ ದ್ವಿ-ಲಕೋಟೆ ಪದ್ಧತಿ ವ್ಯವಸ್ಥೆಯಲ್ಲಿ ಅಗತ್ಯವಿರುವ ಡೆಂಟಲ್ ಚೇರ್‌ಗಳನ್ನು ಪೂರೈಸಲು ಅರ್ಹ ಬಿಡ್ಡರ್‌ಗಳಿಂದ ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

ಸಲಕರಣೆಗಳ ವಿವರಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ https://kppp.karnataka.gov.in ನಿಂದ ವೀಕ್ಷಿಸಬಹುದು (ಸೂಚನೆ: ಉಪ-ಏಜೆಂಟರನ್ನು ಅನುಮತಿಸಲಾಗುವುದಿಲ್ಲ.)

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಜಿಓಕೆ ಕೆಪಿಪಿ ಪೋರ್ಟಲ್ https://kppp.karnataka.gov.in ನಿಂದ 21.11.2024ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ **ದಿನಾಂಕ: 10.12.2024ರ ಬೆಳಿಗ್ಗೆ 11.00 ಗಂಟೆಯವರೆಗೆ. 3)** ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **12.12.2024ರ ಮಧ್ಯಾಹ್ನ 3.00 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ/ಸ್ಪಷ್ಟೀಕರಣಕ್ಕಾಗಿ ಕಛೇರಿ ಸಮಯದಲ್ಲಿ ಆಡಳಿತ ಕಚೇರಿಯನ್ನು ಸಂಪರ್ಕಿಸಬಹುದು.

ಸಹಿ/- ವೈದ್ಯಕೀಯ ಅಧೀಕ್ಷಕರು,
ಕೆ.ಸಿ. ಜನರಲ್ ಆಸ್ಪತ್ರೆ, ಬೆಂಗಳೂರು.
ವಾಸಾಸಂಇ/ವಾಪ್ರ/ಜಿಎ/3351/2024-25

ಆಯುಷ್ ಇಲಾಖೆ
ಧನ್ವಂತರಿ ರಸ್ತೆ, ಬೆಂಗಳೂರು-560009. ದೂರವಾಣಿ: 080-22876553,
ಫ್ಯಾಕ್ಸ್ : 080-22340139, ಇ-ಮೇಲ್: directorayush@gmail.com

ಸಂಖ್ಯೆ: AYUSH/8/DEV2/2024-25/DEV ದಿನಾಂಕ: 20.11.2024

ಸಾರ್ವಜನಿಕ ಪ್ರಕಟಣೆ

ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಬಿ.ಎ.ಎಂ.ಎಸ್ (B.A.M.S) ಪದವಿ ಕೋರ್ಸ್‌ನ ವ್ಯಾಸಂಗ ಮಾಡಲು ಪಾರಂಪರಿಕ ವೈದ್ಯರ ಮಕ್ಕಳಿಗೆ ವಿಶೇಷ ಪ್ರಕರಣದಡಿ ಪ್ರವೇಶಾತಿ ಪರಿಗಣಿಸಿ 2017-18ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬರುವಂತೆ ಸರ್ಕಾರಿ ಕೋಟಾ ಸೀಟುಗಳಲ್ಲಿ ಎರಡು (02) ಸೀಟುಗಳನ್ನು ಮೀಸಲಿರಿಸಿದೆ.

ತಾರಾನಾಥ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಬಳ್ಳಾರಿ ಹಾಗೂ ಸರ್ಕಾರಿ ಆಯರ್ವೇದ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆ ಮೈಸೂರು ಇಲ್ಲಿ ತಲಾ ಒಂದು ಸೀಟನ್ನು ಕಾಯ್ದಿರಿಸಲಾಗಿದೆ.

B.A.M.S ಪದವಿ ಕೋರ್ಸ್‌ನ ಪ್ರವೇಶಾತಿಗೆ National Commission for Indian System of Medicine ನವದೆಹಲಿ ಇವರು NEET ಪರೀಕ್ಷೆಯ ಅರ್ಹತೆಯನ್ನು ಹೊಂದುವುದು ಕಡ್ಡಾಯಗೊಳಿಸಲಾಗಿರುತ್ತದೆ, ಅದ್ದರಿಂದ ಅರ್ಹ ವಿದ್ಯಾರ್ಥಿಗಳ ಆಯ್ಕೆ ಪ್ರಕ್ರಿಯೆಯನ್ನು ನಿಯಮಾನುಸಾರ NEET RANK ಜೇಷ್ಠತೆಯ ಆಧಾರದ ಮೇಲೆ ಅವಕಾಶ ಕಲ್ಪಿಸಲಾಗುವುದು.

ಈಗಾಗಲೇ **ದಿನಾಂಕ: 06.10.2024ರಂದು** ರಾಜ್ಯದ 2 ದಿನಪತ್ರಿಕೆಗಳಲ್ಲಿ ಪತ್ರಿಕಾ ಪ್ರಕಟಣೆ ನೀಡಲಾಗಿದ್ದು, ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 04.11.2024ರ ಸಂಜೆ 5:30 ರವರೆಗೆ** ಕಾಲಾವಕಾಶವನ್ನು ನೀಡಲಾಗಿರುತ್ತದೆ ಆದರೆ, ಸದರಿ ಸೀಟುಗಳಿಗೆ ಅಭ್ಯರ್ಥಿಗಳಿಂದ ಈವರೆಗೂ ಯಾವುದೇ ಅರ್ಜಿಗಳು ಸ್ವೀಕೃತವಾಗಿರುವುದಿಲ್ಲ.

B.A.M.S ಇವರ ಪತ್ರ ಸಂಖ್ಯೆ: NCISM/Examination/State DME/2024, Date: 12.11.2024 ರಲ್ಲಿ ಆಯುಷ್ ಪದವಿ UG ಕೋರ್ಸ್‌ಗಳ ಪ್ರವೇಶಕ್ಕಾಗಿ NEET (UG) 2024-25 ರ ಕನಿಷ್ಠ ಅರ್ಹತಾ ಶೇಕಡಾವಾರು ಮಾನದಂಡಗಳನ್ನು 15% ಕಡಿತಗೊಳಿಸಿರುತ್ತಾರೆ ಹಾಗೂ ಪ್ರವೇಶಾತಿ ದಿನಾಂಕವನ್ನು Cut-off date for admission) 20 ಡಿಸೆಂಬರ್ 2024ಕ್ಕೆ ವಿಸ್ತರಿಸಿರುವುದರಿಂದ ಪಾರಂಪರಿಕೆ ವೈದ್ಯರ ಮಕ್ಕಳು 2024-25ನೇ ಶೈಕ್ಷಣಿಕ ಸಾಲಿನಲ್ಲಿ NEET ಪರೀಕ್ಷೆಯಲ್ಲಿ ಭಾಗವಹಿಸಿ, ಅರ್ಹತೆ ಪಡೆದ ವಿದ್ಯಾರ್ಥಿಗಳು ಮಾತ್ರ ಸದರಿ ಸೀಟುಗಳ ಪ್ರವೇಶಾತಿಗೆ ಅರ್ಜಿಗಳನ್ನು **ದಿನಾಂಕ: 05.12.2024ರ ಸಂಜೆ 5:30ರ ಒಳಗಾಗಿ** ಆಯುಷ್ ನಿರ್ದೇಶನಾಲಯ, ಧನ್ವಂತರಿ ರಸ್ತೆ, ಬೆಂಗಳೂರು, ಇಲ್ಲಿಗೆ ಸಲ್ಲಿಸಲು ಸೂಚಿಸಿದೆ.

ಹೆಚ್ಚಿನ ವಿವರಗಳಿಗಾಗಿ ಆಯಾ ಜಿಲ್ಲೆಗಳ ಜಿಲ್ಲಾ ಆಯುಷ್ ಅಧಿಕಾರಿಗಳನ್ನು ಸಂಪರ್ಕಿಸುವುದು.

ಸಹಿ/-
ಆಯುಕ್ತರು
DIPR/CP/RO3350/AAPL/2024-25

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ
ಕೇಂದ್ರ ಕಛೇರಿ, ಸಾರಿಗೆ ಸದನ, ಮುಖ್ಯ ರಸ್ತೆ, ಕಲಬುರಗಿ-585102, ದೂರವಾಣಿ ಸಂ: 08472 227687

ಸಂಖ್ಯೆ: ಕಕಸಾ/ಕೇಕ/ನೇಮಕ/ನೇ-1/ಕ-387/1882/2024-25 ದಿನಾಂಕ:21.11.2024

:: ಪ್ರಕಟಣೆ ::

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಪ.ಜಾ./ಪ.ಪಂಗಡಗಳ ಹಿಂಬಾಕಿ ಹುದ್ದೆಗಳ ನೇಮಕಾತಿ ಜಾಹೀರಾತು ಸಂಖ್ಯೆ:01/2022 ಮತ್ತು ಸಂಖ್ಯೆ: 02/2022 ದಿನಾಂಕ:17.08.2022 ಗಳ ಅಡಿ ಅರ್ಹರಾದ ಅಭ್ಯರ್ಥಿಗಳಿಗೆ 1:5ರ ಅನುಪಾತದಲ್ಲಿ ಮೂಲ ದಾಖಲಾತಿಗಳ ಪರಿಶೀಲನೆಯನ್ನು "ಕಕರಸಾ ನಿಗಮದ ಕೇಂದ್ರ ಕಛೇರಿ, ಆರ್ಚಿಡ್ ಮಾಲ್ ಹಿಂಭಾಗ, ಕಲಬುರಗಿ" ಇಲ್ಲಿ ದಿನಾಂಕ:28.11.2024 ರಂದು ನಡೆಸಲಾಗುತ್ತಿದೆ.

ಈ ಸಂಬಂಧ ಅರ್ಹ ಅಭ್ಯರ್ಥಿಗಳು ನಿಗಮದ ವೆಬ್ ವಿಳಾಸ https://kkrtcjobs.karnataka.gov.in/call2022/ ಗೆ ಭೇಟಿ ನೀಡಿ, ಪಟ್ಟಿಯಲ್ಲಿ ತಮ್ಮ ಹೆಸರಿರುವುದು ಖಚಿತಪಡಿಸಿಕೊಂಡು ತಮ್ಮ ಕರೆಪತ್ರಗಳನ್ನು ದಿನಾಂಕ:22.11.2024 ರಿಂದ ಡೌನ್ಲೋಡ್ ಮಾಡಿಕೊಳ್ಳಲು ಸೂಚಿಸಿದೆ. ಅಲ್ಲದೇ ಕರಾಸಾ ಪೇದೆ ಹುದ್ದೆಯ ದಾಖಲಾತಿ ಪರಿಶೀಲನೆಯ ನಂತರ ದೈಹಿಕ ಪರೀಕ್ಷೆಗೆ ಅರ್ಹರಾಗುವ ಅಭ್ಯರ್ಥಿಗಳಿಗೆ ದಿನಾಂಕ:29.11.2024 ರಂದು ದೈಹಿಕ ಪರೀಕ್ಷೆಯನ್ನು ಕಲಬುರಗಿಯ ಸಿಂಥೆಟಿಕ್ ಮೈದಾನದಲ್ಲಿ ಕೈಗೊಳ್ಳಲಾಗುತ್ತಿದ್ದು, ಅಭ್ಯರ್ಥಿಗಳ ಸುರಕ್ಷತೆಯ ದೃಷ್ಟಿಯಿಂದ ಶೂಸ್ ಹಾಗೂ ಅನುಕೂಲಕರ ಉಡುಪಿನೊಂದಿಗೆ ಹಾಜರಿರಲು ಸೂಚಿಸಲಾಗಿದೆ. ದಾಖಲಾತಿಗಳ ಪರಿಶೀಲನೆಯನ್ನು ಒಂದೇ ದಿನ ಮಾಡುತ್ತಿರುವುದರಿಂದ ಗೈರು ಹಾಜರಾಗುವ ಅಭ್ಯರ್ಥಿಗಳಿಗೆ ಮತ್ತೊಂದು ಅವಕಾಶ ಕಲ್ಪಿಸಲಾಗುವುದಿಲ್ಲ.

ಸಹಿ/-
ವ್ಯವಸ್ಥಾಪಕ ನಿರ್ದೇಶಕರು
ವಾ.ಸಾ.ಸಂ.ಇ/ಕಲಬುರಗಿ/642/ಕೆ.ಎಸ್.ಎಂ.ಸಿ.&ಎ/2024-25

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ. ಎಂ.ಹೆಚ್. ಮರೀಗೌಡ ರಸ್ತೆ, ಬೆಂಗಳೂರು-560 029
ಫೋನ್: 26096832/26096910 ಫ್ಯಾಕ್ಸ್: 080-25536105 E'mail : purchase@kmf.coop

ಟೆಂಡರ್ ಪ್ರಕಟಣೆಗಳು (ಕೆಪಿಪಿ ಪೋರ್ಟಲ್ ಮುಖಾಂತರ)

ಕರ್ನಾಟಕ ಸಹಕಾರ ಹಾಲು ಮಹಾಮಂಡಳ, ಬೆಂಗಳೂರು ಈ ಕೆಳಕಂಡ ಮಾರುಕಟ್ಟೆ ಪ್ರದೇಶಗಳಿಗೆ 2 ವರ್ಷಗಳ ಅವಧಿಗೆ ವಿವಿಧ ಮಾದರಿಯ ಐಸ್‌ಕ್ರೀಮ್‌ಗಳನ್ನು ಕೋ-ಪ್ಯಾಕಿಂಗ್ ಮಾಡಿ ಸರಬರಾಜು ನೀಡಲು ಸೇವಾದಾರರನ್ನು ಗುರುತಿಸಲು ಆಸಕ್ತಿಯುಳ್ಳ ಸಂಸ್ಥೆದಾರರಿಂದ ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್‌ಜಾಲದ ಮೂಲಕ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ http://kppp.karnataka.gov.in ಗೆ ಭೇಟಿ ನೀಡಿ ಪಡೆಯಬಹುದಾಗಿದೆ.

Sl. No	Tender Notification No.	Markets	Quantity	EMD (Rs.)
1.	KMF/PUR/Tender-715/2024-25	Bengaluru Market	As detailed in tender document	62,42,000/-
2	KMF/PUR/Tender-716/2024-25	Mumbai Market	As detailed in tender document	52,22,000/-
3	KMF/PUR/Tender-717/2024-25	Delhi / Punjab Market	As detailed in tender document	52,22,000/-
4	KMF/PUR/Tender-718/2024-25	Jammu Market	As detailed in tender document	52,22,000/-

1) ಟೆಂಡರ್ ಪ್ರಾರಂಭವಾಗುವ ದಿನಾಂಕ : From 22.11.2024. ಟೆಂಡರ್ ಪೂರ್ವಭಾವಿ ಸಭೆ ದಿನಾಂಕ : 06.12.2024 at 11.00 AM. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: on or before 21.12.2024 up to 5.00 PM. ತಾಂತ್ರಿಕ ಟೆಂಡರ್ ತೆರಯುವ ದಿನಾಂಕ : on 23.12.2024 at 11.00 AM. ವಾಣಿಜ್ಯ ಟೆಂಡರ್ ತೆರಯುವ ದಿನಾಂಕ : ತಾಂತ್ರಿಕ ದಾಖಲಾತಿಗಳ ಪರಿಶೀಲನೆಯ ನಂತರ. ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/- ನಿರ್ದೇಶಕರು (ಖರೀದಿ)

ಪೊಲೀಸ್ ಇಲಾಖೆ
ಪೊಲೀಸ್ ಮಹಾ ನಿರ್ದೇಶಕರವರ ಕಛೇರಿ, ಸಿ.ಐ.ಡಿ. ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು,
ಕಾರ್ಲ್‌ಟನ್ ಭವನ, ಅರಮನೆ ರಸ್ತೆ, ಬೆಂಗಳೂರು-560 001.

ಸಂಖ್ಯೆ: 08/ಸಂಗ್ರಹ-1/ಸಿಸಿಡಿ&ಸಿಐಡಿಅಪ್‌ಗ್ರೇಡೇಷನ್/ಸಿಐಡಿ/2023-24 (Vol-II) ದಿನಾಂಕ: 21.11.2024

ಇ-ಖರೀದಿ ನೋಟೀಸ್

ಸಿಐಡಿ ಕಛೇರಿಗೆ ಅವಶ್ಯವಿರುವ ಕೆಳಕಂಡ ಸಾಫ್ಟ್‌ವೇರ್ / ಪರಿಕರಗಳನ್ನು ಕೆ.ಟಿ.ಪಿ.ಪಿ ಕಾಯ್ದೆ 1999 ನಿಯಮ 2000ರ ಪ್ರಕಾರ ಕರ್ನಾಟಕ ಸರ್ಕಾರದ (https://kppp.karnataka.gov.in) 10 ದಿನಗಳ ಅಲ್ಪಾವಧಿ ಇ-ಟೆಂಡರ್ ಪ್ರಕ್ರಿಯೆ ಮೂಲಕ ಖರೀದಿಸಲು ಟೆಂಡರ್‌ಗೆ ಅರ್ಜಿಗಳನ್ನು ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ.

"Upgradation of Softwares of Cyber Crime Division, CID and Network & IT Infrastructure at CID Unit" Scheme

Sl. No.	Name of the Item/Component	Qty	Approximate Cost (in Rs.)	Last Date for Bid submission
	Short Term Tender for 10 days (Call-2)			25.11.2024 at 17.00 Hours
1	Dark and Deep Web Intelligence Collection Tool	01 No.	40,00,000/-	
2	Upgradation of Network and Providing IT Infrastructure to CID	01 No.	45,00,000/-	
3	Upgradation of Case Management System software	01 No.	45,00,000/-	
	Short Term Tender for 10 days (Call-3)			
4	Social Media and Web Based Evidence Collection Solution	01 No.	15,00,000/-	

ಮೇಲಿನ ಸಾಫ್ಟ್‌ವೇರ್ / ಪರಿಕರಗಳನ್ನು ಸರಬರಾಜು ಮಾಡಲು ಇಚ್ಛಿಸುವವರು ಇ-ಖರೀದಿ ಪೋರ್ಟಲ್‌ನಲ್ಲಿ ನೊಂದಾಯಿಸಿಕೊಳ್ಳಬೇಕು. ಇ-ಖರೀದಿಯ ಬಗ್ಗೆ ತರಬೇತಿಯ ಕಾರ್ಯಕ್ರಮವನ್ನು ಇ-ಖರೀದಿ ಪ್ರೊಕ್ಯೂರ್‌ಮೆಂಟ್ ಸೆಲ್‌ನಲ್ಲಿ ವ್ಯವಸ್ಥೆಗೊಳಿಸಲಾಗುತ್ತಿದ್ದು. ಎಲ್ಲಾ ಸರಬರಾಜುದಾರರು ದೂರವಾಣಿ ಸಂಖ್ಯೆ 080-46010000, 080-68948777 ಗಳಿಗೆ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದು. ಇ-ಖರೀದಿ ಪ್ರಕ್ರಿಯೆಯಲ್ಲಿ ಭಾಗವಹಿಸುವ ಸರಬರಾಜುದಾರರು ಇ-ಖರೀದಿ ಫ್ಲಾಟ್‌ಫಾರಂನಲ್ಲಿ ನೊಂದಾಯಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ.

ಹೆಚ್ಚಿನ ವಿವರಗಳಿಗೆ https://kppp.karnataka.gov.in ಅಥವಾ ಹೆಲ್ಪ್‌ಲೈನ್ ಸಂಖ್ಯೆ: 080-46010000, 080-68948777 ಗಳಿಗೆ ಸಂಪರ್ಕಿಸತಕ್ಕದ್ದು.

ಸಹಿ/-
ಪೊಲೀಸ್ ಮಹಾ ನಿರ್ದೇಶಕರ ಪರವಾಗಿ
ಸಿಐಡಿ, ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು, ಬೆಂಗಳೂರು
DIPR/CP/3340/MAA/24-25

TAMIL NADU NEWSPRINT AND PAPERS LIMITED
Mondipatti, Manapparai Tk, Trichy Dist.- 621306
Ph:04324-277001; Email: purchase.wood@tnpl.co.in

NOTICE INVITING TENDER

Tender No.	Description of Work	Due Date
242523 002907	Procurement of Debarked Eucalyptus pulpwood from open market sources of Karnataka to TNPL Unit-II, Mondipatti, Trichy dist.	27.11.24

Corrigendum if any will be issued in TNPL Website only. Detailed requirements, Period, Terms & conditions, Tender fee, EMD, etc., are available in tender document at our websites: **www.tnpl.com**

DIPR/5064/Tender/2024 TNPL - Maker of bagasse based eco-friendly Paper

ಮಂಗಳೂರು ಮಹಾನಗರಪಾಲಿಕೆ
DMA/2024-25/WORK INDENT NO.21069, 22499, 24898, 29540, 29542, 27133, 28215, 28219, 29402, 29545, 29615, 29618 ದಿನಾಂಕ: 21.11.2024

ಟೆಂಡರ್ ಪ್ರಕಟಣೆ
E-PROCUREMENT OF KARNATAKA

ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ **2023-24 ಮತ್ತು 2024-25ನೇ ಸಾಲಿನ ಮಹಾನಗರಪಾಲಿಕೆ ಅನುದಾನದಲ್ಲಿ** DMA/2024-25/WORK INDENT NO.21069, 22499, 24898, 29540, 29542, 27133, 28215, 28219, 29402, 29545, 29615, 29618 ಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. **12 ಕಾಮಗಾರಿಗಳ ಒಟ್ಟು ಮೊತ್ತ ರೂಪಾಯಿ 131.89 ಲಕ್ಷಗಳಾಗಿರುತ್ತದೆ.** ಟೆಂಡರ್ ಸಲ್ಲಿಸಲು **ಕೊನೆಯ ದಿನಾಂಕ: 06-12-2024, ಅಪರಾಹ್ನ 4.00 ಗಂಟೆ.** ಹೆಚ್ಚಿನ ವಿವರವನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **kppp.karnataka.gov.in** ಮುಖಾಂತರ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು
ಮಹಾನಗರಪಾಲಿಕೆ ಮಂಗಳೂರು.
DIPR/MNG/KSMCA/873/24-25 dt: 21.11.2024

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ
4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು - 560 041
ದೂ: 080-26961928 ಫ್ಯಾಕ್ಸ್-080-26961929

ಸಂಖ್ಯೆ:ರಾಗಾವಿ/ಪ್ರೊಕ್/ಸ್ಟೇಷನರಿ/20/2024-25 ದಿನಾಂಕ: 21.11.2024

ಇ-ಟೆಂಡರ್ ಪ್ರಕಟಣೆ (ಆರ್‌ಎಫ್‌ಪಿ)

ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಲೇಖನ ಸಾಮಗ್ರಿ ಮತ್ತು ಮುದ್ರಣ ವಸ್ತುಗಳನ್ನು ಸರಬರಾಜು ಮಾಡಲು ಟೆಂಡರನ್ನು ಆಹ್ವಾನಿಸಿದ್ದಾರೆ. ಸೇವೆಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಲಗತ್ತಿಸಿರುವ ಉಲ್ಲೇಖಿತ ಷರತ್ತುಗಳಲ್ಲಿ ಒದಗಿಸಲಾಗಿದೆ. **(Tender No: RGUHSK/2024-25/IND0014/Call-2)**

ಟೆಂಡರ್ ದಾಖಲೆಗಳು ಡೌನ್‌ಲೋಡ್ ಮಾಡಲು ಲಭ್ಯತೆ	21/11/2024 12:19 ಗಂಟೆಗೆ
ಬಿಡ್ ಪೂರ್ವಭಾವಿ ಸಭೆಯ ದಿನಾಂಕ	03/12/2024 11:30 ಗಂಟೆಗೆ
ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ	23/12/2024 5:29 ಗಂಟೆಗೆ
ಮಾದರಿ ಸಲ್ಲಿಕೆಯ ದಿನಾಂಕ	23/12/2024 5:30 ಗಂಟೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	26/12/2024 11:30 ಗಂಟೆಗೆ
ಆರ್ಥಿಕ ಬಿಡ್ ತೆರೆಯುವ ದಿನಾಂಕ	28/12/2024 11:30 ಗಂಟೆಗೆ
ಟೆಂಡರ್ ತೆರೆಯುವ ಸ್ಥಳ	ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು

ಹೆಚ್ಚಿನ ಮಾಹಿತಿಗಳನ್ನು https://kppp.karnataka.gov.in ನಿಂದ ಪಡೆದುಕೊಳ್ಳಬಹುದು.

ಸಹಿ/-
ಕುಲಸಚಿವರು
ಡಿಐಪಿಆರ್/3342/2024-25

ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ
ಕಾರ್ಯಪಾಲಕ ಅಭಿಯಂತರರ ಕಛೇರಿ,
ಜಿಲ್ಲಾಡಳಿತ ಭವನ, ಚಪ್ಪರದಕಲ್ಲು (ಬೀರಸಂದ್ರ), ದೇವನಹಳ್ಳಿ ತಾಲ್ಲೂಕು,
ಬೆಂಗಳೂರು ಗ್ರಾಮಾಂತರ. ದೂರವಾಣಿ : 080-2978 7463,
ಮೊ. : 99720 45178, ಇ-ಮೇಲ್ : eerdwsd.bngr1@gmail.com

ಸಂಖ್ಯೆ : ಕಾ.ಪಾ.ಅ./ಗ್ರಾ.ಕು.ನೀ.&ನೈ. ವಿಭಾಗ/ಬೆಂ.ಗ್ರಾ./ಹೊರಗುತ್ತಿಗೆ/ಟೆಂಡರ್/2024-25/739 ದಿನಾಂಕ : 20-11-2024

ಟೆಂಡರ್ ಪ್ರಕಟಣೆ
ಸಂಖ್ಯೆ : 04/2024-25 ದಿನಾಂಕ : 20-11-2024
(ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ ಮೂಲಕ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, **ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಮತ್ತು ಉಪವಿಭಾಗ ಕಛೇರಿಗಳಿಗೆ** ಹೊರಗುತ್ತಿಗೆ ಆಧಾರದ ಮೇಲೆ **ಕಿರಿಯ ತಾಂತ್ರಿಕ ಸಮಾಲೋಚಕರು 1 & 2 ಮತ್ತು ಡಾಟಾ ಎಂಟ್ರಿ ಆಪರೇಟರ್, ವಾಹನ ಚಾಲಕರು, ಗ್ರೂಪ್-ಡಿ, ಭೂವಿಜ್ಞಾನಿ, ಹಿರಿಯ ವಿಶ್ಲೇಷಣೆಗಾರರು (Senior Analyst), ಕಿರಿಯ, ವಿಶ್ಲೇಷಣೆಗಾರರು (Junior Analyst), ನೀರಿನ ಮಾದರಿಗಳ ಸಂಗ್ರಹಗಾರರು (Water Sample Collector), Sample Cell Incharge** ಸಿಬ್ಬಂದಿಗಳ ಸೇವೆಯನ್ನು 12 ತಿಂಗಳು (ಒಂದು ವರ್ಷ) ಅವಧಿಗೆ ಗುತ್ತಿಗೆ ಪಡೆಯುವ ಸಲುವಾಗಿ ಸೂಕ್ತ ಮ್ಯಾನ್ ಪವರ್ ಏಜನ್ಸಿಗಳಿಂದ ಕೆ.ಪಿ.ಪಿ.ಪಿ. ಪೋರ್ಟಲ್ ಮೂಲಕ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ. ಕರಾರು ನಿಯಮಗಳು ಹಾಗೂ ಇನ್ನಿತರ ವಿವರಗಳನ್ನು ಕೆ.ಪಿ.ಪಿ.ಪಿ. ಪೋರ್ಟಲ್ **http://kppp portal** ನಲ್ಲಿ ಪಡೆಯಬಹುದಾಗಿರುತ್ತದೆ ಹಾಗೂ ನಿಗದಿಪಡಿಸಿರುವ ಕರಾರು ನಿಯಮಗಳಂತೆ ಸಂಬಂಧಪಟ್ಟ ದಾಖಲಾತಿಗಳನ್ನು ದರಗಳೊಂದಿಗೆ ಸಲ್ಲಿಸಲು ಕೋರಿದೆ.

ಹೆಚ್ಚಿನ ಮಾಹಿತಿಗಳು ಬೇಕಾಗಿದ್ದಲ್ಲಿ **ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ಗ್ರಾಮಾಂತರ, ಬೀರಸಂದ್ರ, ದೇವನಹಳ್ಳಿ ಕಛೇರಿಯ ವೇಳೆಯಲ್ಲಿ (ರಜೆ ದಿನಗಳನ್ನು ಹೊರತು ಪಡಿಸಿ) ಪಡೆದುಕೊಳ್ಳಬಹುದಾಗಿದೆ.** ದಾಖಲೆಗಳ ಡೌನ್‌ಲೋಡಿಂಗ್ ಹಾಗೂ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಮಾಹಿತಿ ಮುಂತಾದ ಅಂಶಗಳು ಈ ಕೆಳಗಿನಂತಿವೆ.

1) ಟೆಂಡರ್ ದಾಸ್ತಾವೇಜುಗಳನ್ನು ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ : 21-11-2024 ರ ಸಂಜೆ 4.30 ಗಂಟೆಯ ನಂತರ, 2) ಪ್ರೀಬಿಡ್ ಸಭೆಯ ಸ್ಥಳ ಮತ್ತು ದಿನಾಂಕ : ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ಗ್ರಾಮಾಂತರ ಕಛೇರಿ, ಬೀರಸಂದ್ರ, ದೇವನಹಳ್ಳಿ. ದಿನಾಂಕ : 25-11-2024 ರ ಬೆಳಿಗ್ಗೆ 11.00 ಗಂಟೆಗೆ, 3) ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 06-12-2024 ರ ಸಂಜೆ 4.00 ಗಂಟೆಯವರೆಗೆ, 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 07-12-2024 ರ ಸಂಜೆ 4.05 ಗಂಟೆಯ ನಂತರ, 5) ಆರ್ಥಿಕ ಬಿಡ್ ತೆರೆಯುವ ದಿನಾಂಕ : 09-12-2024 ರ ಬೆಳಿಗ್ಗೆ 11.00 ಗಂಟೆಯ ನಂತರ.

ಸಹಿ/- ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ,
ಬೆಂಗಳೂರು ಗ್ರಾಮಾಂತರ.
ವಾಸಾಸಂಇ/ಬೆಂಗ್ರಾಜಿ/ಮಣಿಪಾಲ್/3336/2024-25

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಸಾಮರಸ್ಯದಿಂದ ಇರಿ, ಆದರೆ ಅದರ ನಡುವೆಯೂ ಭಿನ್ನ ಅಸ್ಮಿತೆ ಕಾಯ್ದುಕೊಳ್ಳಿ.

-ಕನ್‌ಫ್ಯೂಷಿಯಸ್

ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಗೆಲುವು ಮಹಿಳಾ ಹಾಕಿಗೆ ಹೊಸ ಹುರುಪು

ಭಾರತದಲ್ಲಿ ಕ್ರಿಕೆಟ್ ಆಟವು ಅಗಾಧವಾಗಿ ಬೆಳೆದಿದೆ. ಆದರೆ ಹಾಕಿ ಕ್ರೀಡೆಯೊಂದಿಗಿನ ಭಾವನಾತ್ಮಕ ನಂಟು ಇನ್ನೂ ಗಟ್ಟಿಯಾಗಿಯೇ ಉಳಿದಿದೆ. ಆದ್ದರಿಂದಲೇ ಭಾರತವು ಯಾವುದೇ ಅಂತರರಾಷ್ಟ್ರೀಯ ಹಾಕಿ ಟೂರ್ನಿಯಲ್ಲಿ ಮಾಡುವ ಸಾಧನೆಯು ಅಭಿಮಾನಿಗಳಲ್ಲಿ ಹರುಷದ ಹೊನಲು ಹರಿಸುತ್ತದೆ. ಇದೀಗ ಯುವ ಆಟಗಾರ್ತಿ ಸಲೀಮಾ ಟೆಟೆ ಸಾರಥ್ಯದ ಭಾರತ ಮಹಿಳಾ ತಂಡವು ಏಷ್ಯನ್ ಚಾಂಪಿಯನ್ಸ್ ಟ್ರೋಫಿಯನ್ನು ಗೆಲ್ಲುವ ಮೂಲಕ ದೇಶದ ಕ್ರೀಡಾಪ್ರೇಮಿಗಳ ಮನಸ್ಸಿಗೆ ತಂಪೆರೆದಿದೆ. ಭಾರತದ ವನಿತೆಯರ ತಂಡವು ಸತತ ಎರಡನೇ ಬಾರಿ ಟ್ರೋಫಿ ಜಯಿಸಿರುವುದು ಹೆಮ್ಮೆಯ ಸಂಗತಿ. ಆಗಸ್ಟ್‌ನಲ್ಲಿ ಜರುಗಿದ ಪ್ಯಾರಿಸ್ ಒಲಿಂಪಿಕ್ಸ್‌ಗೆ ಮಹಿಳಾ ತಂಡವು ಅರ್ಹತೆ ಗಳಿಸಿರಲಿಲ್ಲ. ಆ ನಿರಾಶೆಯನ್ನು ಮರೆಸುವ ರೀತಿಯಲ್ಲಿ ಭಾರತ ಪುಟಿದೆದ್ದಿದೆ. ಮುಂದಿನ ಒಲಿಂಪಿಕ್ಸ್ ಮತ್ತು ವಿಶ್ವಕಪ್ ಟೂರ್ನಿಗಳತ್ತ ಸಾಗುವ ಪಯಣಕ್ಕೆ ಈ ಗೆಲುವು ಹುರುಪು ತುಂಬಲಿದೆ. ಬಿಹಾರದ ಐತಿಹಾಸಿಕ ನಗರಿ ರಾಜಗೀರ್‌ನಲ್ಲಿ ನಡೆದ ಈ ಟೂರ್ನಿಯಲ್ಲಿ ಏಷ್ಯಾದ ಆರು ಪ್ರಮುಖ ತಂಡಗಳು ಪೈಪೋಟಿ ನಡೆಸಿದವು. 2023ರಲ್ಲಿ ಚಾಂಪಿಯನ್ ಆಗಿದ್ದ ಭಾರತವೇ ಈ ಬಾರಿಯೂ ಪ್ರಶಸ್ತಿಗೆ ನೆಚ್ಚಿನ ತಂಡವಾಗಿತ್ತು. ಆದರೂ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಜಯಿಸಿದ್ದ ಚೀನಾ ತಂಡ ಮತ್ತು ಶಿಸ್ತಿನ ಆಟಕ್ಕೆ ಹೆಸರಾದ ಜಪಾನ್ ತಂಡವನ್ನು ಮಣಿಸುವುದು ಸುಲಭದ ಮಾತಾಗಿರಲಿಲ್ಲ. ಆದರೆ ರೌಂಡ್ ರಾಬಿನ್ ಲೀಗ್ ಮತ್ತು ನಾಕೌಟ್ ಹಂತಗಳಲ್ಲಿ ಈ ತಂಡಗಳನ್ನು ಸೋಲಿಸಿದ್ದು ಭಾರತದ ಹೆಗ್ಗಳಿಕೆ. ಅದರಲ್ಲೂ ಫೈನಲ್‌ನಲ್ಲಿ ಚೀನಾ ತಂಡದ ಪ್ರತಿರೋಧ ಮತ್ತು ಸೆಮಿಫೈನಲ್‌ನಲ್ಲಿ ಜಪಾನ್ ತಂಡದ ದಿಟ್ಟ ಆಟವನ್ನು ಮೀರಿ ನಿಂತಿದ್ದು ರೋಚಕವಾದ ಅಧ್ಯಾಯಗಳು. ಥಾಯ್ಲೆಂಡ್, ಮಲೇಷ್ಯಾ ಮತ್ತು ದಕ್ಷಿಣ ಕೊರಿಯಾ ತಂಡಗಳು ಆಡಿದ ಈ ಟೂರ್ನಿಯಲ್ಲಿ ಅಜೇಯವಾಗುಳಿದ ಏಕೈಕ ತಂಡ ಭಾರತ.

ಪುರುಷ ಮತ್ತು ಮಹಿಳಾ ವಿಭಾಗಗಳ ತಂಡಗಳಿಗೆ ಈ ಹಿಂದೆ ಉತ್ತಮ ಆಟಗಾರ್ತಿಯರನ್ನು ನೀಡಿರುವ ಪರಂಪರೆಯನ್ನು ಮುಂದುವರಿಸುವ ದಿಸೆಯಲ್ಲಿ ಹಾಕಿ ಕರ್ನಾಟಕ ಕಾರ್ಯೋನ್ಮುಖವಾಗಬೇಕಿದೆ

2010ರಿಂದ ಈ ಟೂರ್ನಿ ನಡೆಯುತ್ತಿದ್ದು, ಭಾರತ ತಂಡವು 2016ರಲ್ಲಿ ಮೊದಲ ಬಾರಿ ಚಾಂಪಿಯನ್ ಆಗಿತ್ತು. 2013, 2018ರಲ್ಲಿ ರನ್ನರ್ಸ್ ಅಪ್ ಆಗಿತ್ತು. 2020ರ ಟೋಕಿಯೊ ಒಲಿಂಪಿಕ್ ಕೂಟದಲ್ಲಿ ಭಾರತದ ವನಿತೆಯರು ನಾಲ್ಕನೇ ಸ್ಥಾನ ಪಡೆದರು. ಕೂಟದಲ್ಲಿ ಅವರು ಆಡಿದ ರೀತಿ ಮೆಚ್ಚುಗೆಗೆ ಪಾತ್ರವಾಗಿತ್ತು. ಅನಂತರ ಭಾರತದ ಮಹಿಳಾ ಹಾಕಿ ತಂಡವೂ ತಾರಾಮೌಲ್ಯ ಪಡೆಯಿತು. ಆದರೂ ಪ್ಯಾರಿಸ್ ಒಲಿಂಪಿಕ್ ಕೂಟದಲ್ಲಿ ಸ್ಥಾನ ಪಡೆಯುವಲ್ಲಿ ಹಿನ್ನಡೆ ಅನುಭವಿಸಿತು. ಇದೀಗ ಮುಖ್ಯ ಕೋಚ್ ಹರೇಂದರ್ ಸಿಂಗ್ ಅವರ ಮಾರ್ಗದರ್ಶನದಲ್ಲಿ ತಂಡವು ಯಶಸ್ಸು ದಾಖಲಿಸಿದೆ. ಈ ತಂಡದಲ್ಲಿ ಗೋಲ್‌ಕೀಪರ್, 34 ವರ್ಷ ವಯಸ್ಸಿನ ಸವಿತಾ ಪೂನಿಯಾ ಅವರೊಬ್ಬರೇ ಅನುಭವಿ ಆಟಗಾರ್ತಿ. ನಾಯಕಿ ಸಲೀಮಾ ಸೇರಿದಂತೆ ಎಲ್ಲರೂ ಯುವ ಆಟಗಾರ್ತಿಯರು. ಆಟದಲ್ಲಿ ಅವರೆಲ್ಲರೂ ತೋರಿದ ಬದ್ಧತೆ ಮತ್ತು ಛಲ ಭರವಸೆ ಮೂಡಿಸಿದವು. ಜಾರ್ಖಂಡ್‌ನ ಕುಗ್ರಾಮದ ಬಡಕುಟುಂಬವೊಂದರ ಸಲೀಮಾ ಅವರ ಪಾಲಿಗಂತೂ ಇದು ಬಹಳ ದೊಡ್ಡ ಸಾಧನೆ. ಈ ಹಿಂದೆ ಅಸುಂತಾ ಲಕ್ರಾ, ರಾಣಿ ರಾಂಪಾಲ್, ಸವಿತಾ ಪೂನಿಯಾ ಅವರು ನಾಯಕತ್ವದಲ್ಲಿ ಮಾಡಿದ ಸಾಧನೆಯನ್ನು ಸರಿಗಟ್ಟುವ ಭರವಸೆಯನ್ನೂ ಸಲೀಮಾ ಮೂಡಿಸಿದ್ದಾರೆ. ಜಾರ್ಖಂಡ್‌ನವರೇ ಆದ ಸಂಗೀತಾ ಕುಮಾರಿ, ಉತ್ತರಪ್ರದೇಶದ ಪ್ರೀತಿ ದುಬೆ ಅವರು ಗಮನ ಸೆಳೆದರು. ಆದರೆ ಹರಿಯಾಣದ ದೀಪಿಕಾ ಸೆಹ್ರಾವತ್ ಅವರ ಆಟವು ಕಣ್ಮನ ಸೆಳೆಯಿತು. ಟೂರ್ನಿಯಲ್ಲಿ ಒಟ್ಟು 11 ಗೋಲುಗಳನ್ನು ಗಳಿಸಿದ ಅವರು, ಭಾರತೀಯ ಹಾಕಿ ಕ್ಷೇತ್ರದ ನವತಾರೆಯಾಗಿ ಹೊರಹೊಮ್ಮಿದ್ದಾರೆ. ಹರಿಯಾಣದವರೇ ಆದ ನವನೀತ್ ಕೌರ್, ಉದಿತಾ ಧುಹಾನ್, ಉತ್ತರಾಖಂಡದ ಮನೀಷಾ ಅವರೆಲ್ಲರೂ ತಂಡದ ಗೆಲುವಿಗೆ ಕಾಣಿಕೆ ನೀಡಿದ್ದಾರೆ. ಬಿಹಾರ, ಹರಿಯಾಣ, ಪಂಜಾಬ್, ಒಡಿಶಾ, ಜಾರ್ಖಂಡ್ ಮತ್ತು ಮಧ್ಯಪ್ರದೇಶದಲ್ಲಿ ಹಾಕಿ ಕ್ರೀಡೆಯ ಬೆಳವಣಿಗೆಗೆ ಸಿಗುತ್ತಿರುವ ಪ್ರೋತ್ಸಾಹದ ಫಲವಾಗಿ ಹೊಸ ಪ್ರತಿಭೆಗಳು ಬೆಳಕಿಗೆ ಬರುತ್ತಿವೆ. ಮಹಿಳೆ ಮತ್ತು ಪುರುಷರ ಹಾಕಿ ತಂಡಗಳಿಗೆ ಅತ್ಯುನ್ನತ ಮಟ್ಟದ ತರಬೇತಿ ಲಭಿಸುತ್ತಿರುವುದು ಬೆಂಗಳೂರಿನ ಭಾರತ ಕ್ರೀಡಾ ಪ್ರಾಧಿಕಾರದ ಹಾಕಿ ವಸತಿ ನಿಲಯದಲ್ಲಿ ಎಂಬುದು ವಿಶೇಷ. ಆದರೆ ಕರ್ನಾಟಕದ ಒಬ್ಬ ಆಟಗಾರ್ತಿಯೂ ಈ ಬಾರಿಯ ತಂಡದಲ್ಲಿ ಇರಲಿಲ್ಲ ಎನ್ನುವುದು ಬೇಸರದ ಸಂಗತಿ. ಕರ್ನಾಟಕವು ಈ ಹಿಂದೆ ಪುರುಷ ಮತ್ತು ಮಹಿಳಾ ವಿಭಾಗಗಳ ತಂಡಗಳಿಗೆ ಉತ್ತಮ ಆಟಗಾರ್ತಿಯರನ್ನು ನೀಡಿರುವ ಹೆಗ್ಗಳಿಕೆ ಹೊಂದಿದೆ. ಆ ಪರಂಪರೆಯನ್ನು ಮುಂದುವರಿಸುವ ದಿಸೆಯಲ್ಲಿ ಹಾಕಿ ಕರ್ನಾಟಕ ಕಾರ್ಯೋನ್ಮುಖವಾಗಬೇಕಿದೆ.

ಈಜು ಕಲಿಸುವುದನ್ನು ಶಿಕ್ಷಣ ಕ್ರಮದಲ್ಲಿ ಅಳವಡಿಸಬೇಕಾದ ಅಗತ್ಯ ಬಂದಿದೆ

‘ಮುಳುಗು’ ಈಗ ಸಾಮಾಜಿಕ ಬಿಕ್ಕಟ್ಟು!

ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ಮೈಸೂರಿನ ಮೂವರು ಎಂಜಿನಿಯರಿಂಗ್ ವಿದ್ಯಾರ್ಥಿನಿಯರು, ಮಂಗಳೂರಿನ ರೆಸಾರ್ಟ್‌ನ ಈಜುಕೊಳದಲ್ಲಿ ಮುಳುಗಿ ಪ್ರಾಣ ಬಿಟ್ಟಿರುವ ದಾರುಣ ಪ್ರಕರಣವು ಸುರಕ್ಷಾ ಕ್ರಮಗಳ ಲೋಪದ ಬಗ್ಗೆ ಪ್ರಶ್ನೆ ಎತ್ತುವುದರ ಜೊತೆಗೆ ನೀರಿನಲ್ಲಿ ಮುಳುಗುವುದು ಅಪಘಾತವಷ್ಟೇ ಅಲ್ಲ ಅದೊಂದು ಸಾಮಾಜಿಕ ಬಿಕ್ಕಟ್ಟು ಎಂಬುದನ್ನು ಸಾರಿ ಹೇಳುತ್ತಿದೆ.

ಮೂರು ತಿಂಗಳ ಹಿಂದೆ, ಯುಪಿಎಸ್‌ಸಿ ಪರೀಕ್ಷೆಗೆ ತರಬೇತಿ ನೀಡುವ ದೆಹಲಿಯ ರಾಜೇಂದ್ರ ನಗರದ ಕೋಚಿಂಗ್ ಸಂಸ್ಥೆಯೊಂದರ ನೆಲಮಾಳಿಗೆಯ ತರಗತಿ ಕೋಣೆಯಲ್ಲಿ ಇದ್ದಕ್ಕಿದ್ದಂತೆ ಮಳೆನೀರು ತುಂಬಿಕೊಂಡಾಗ, ಮೂವರು ಯುವಕರು ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದರು. ಈ ಪ್ರಕರಣವು ಕೋಚಿಂಗ್ ಸಂಸ್ಥೆಗಳು ಇರುವ ಜಾಗದ ಅವ್ಯವಸ್ಥೆಯ ಚಿತ್ರಣ ನೀಡಿತ್ತಾದರೂ ಬಾಳಿ ಬದುಕಬೇಕಾದ ಹರೆಯದ ಯುವಕರು ಅಸಹಾಯಕರಂತೆ ಸಾವನ್ನಪ್ಪಿದ್ದು ಬಹಳ ದೊಡ್ಡ ಮಟ್ಟದಲ್ಲಿ ತಲ್ಲಣ ಸೃಷ್ಟಿಸಿತ್ತು. ವಿದ್ಯಾರ್ಥಿಗಳ ಇಂತಹ ಸಾವು ಜನರು ಎಲ್ಲಿ, ಯಾವಾಗ ಮತ್ತು ಹೇಗೆ ಬೇಕಾದರೂ ಮುಳುಗಿ ಸಾಯಬಹುದು ಎಂಬ ವ್ಯಂಗ್ಯವನ್ನು ಧ್ವನಿಸುತ್ತಿತ್ತು.

ನದಿ, ಸಮುದ್ರ, ಬಾವಿ, ಕೊಳ, ಕೆರೆ, ಹಳ್ಳ, ಕಲ್ಲು ಕ್ವಾರಿ ಪ್ರವಾಹ ಮತ್ತು ಸುಳಿಗಳಲ್ಲಿ ಸಿಲುಕಿ ಮುಳುಗುವುದನ್ನು ಸಾಮಾನ್ಯ ಘಟನೆ ಎಂಬಂತೆ ಜನ ಸ್ವೀಕರಿಸುತ್ತಾರೆ. ಆದರೆ ಈಜುಕೊಳ, ನೀರಿನ ತೊಟ್ಟಿ, ಸಂಪು, ಅಪಾರ್ಟ್‌ಮೆಂಟ್‌ಗಳ ನೆಲಮಹಡಿಗಳ ಸಣ್ಣ ಆಳದ ನೀರಿನಲ್ಲಿ ಮುಳುಗಿ ಸಾಯುವುದರ ಬಗ್ಗೆ ತೀವ್ರ ಆತಂಕ ಪಡುತ್ತಾರೆ. ಸತ್ತವರ ಅಜಾಗರೂಕತೆ ಏನೇ ಇರಲಿ, ಸಂಬಂಧಿಸಿದವರ ಬಗ್ಗೆ ಕ್ರಮ ಕೈಗೊಳ್ಳುವಂತೆ ಆಕ್ರೋಶ ವ್ಯಕ್ತಪಡಿಸುತ್ತಾರೆ. ಯಾರದೋ ನಿರ್ಲಕ್ಷ್ಯ, ಅಜಾಗರೂಕತೆಯಿಂದ ಹೀಗಾಗಿದೆ ಎಂಬ ಕಾರಣಕ್ಕೆ, ಸಂಬಂಧಿಸಿದ ವ್ಯಕ್ತಿ, ಸಂಸ್ಥೆಗಳ ಮೇಲೆ ಕಾನೂನು ಕ್ರಮ ಜರುಗಿಸುವುದನ್ನೇ ನೆಚ್ಚಿಕೊಂಡು ಕೂರುವ ನಾವು, ನೀರಿನಲ್ಲಿ ಮುಳುಗಿ ಪ್ರಾಣ ಬಿಡುವ ಪ್ರಕರಣಗಳು ಸಾಮಾಜಿಕ ಸಮಸ್ಯೆಯ ಸ್ವರೂಪ ಪಡೆಯುತ್ತಿರುವುದನ್ನು ಗಮನಿಸುತ್ತಿಲ್ಲ.

ಅಂಕಿ ಅಂಶಗಳ ಪ್ರಕಾರ, ಪ್ರತಿ ತಾಸಿಗೆ 42 ಜನ ನೀರಿನಲ್ಲಿ ಮುಳುಗಿ ಸಾವನ್ನಪ್ಪುತ್ತಾರೆ. ವಿಶ್ವ ಆರೋಗ್ಯ ಸಂಸ್ಥೆ ಹೇಳುವಂತೆ, ವಾರ್ಷಿಕ 2.36 ಲಕ್ಷ ಜನ ನೀರಿನಲ್ಲಿ ಮುಳುಗುವುದರಿಂದ ಸಾಯುತ್ತಿದ್ದಾರೆ ಮತ್ತು ಅದರಲ್ಲಿ ಶೇಕಡ 20ರಷ್ಟು ಮಂದಿ 1ರಿಂದ 14ರ ವಯೋಮಾನದ ಒಳಗಿನ ಮಕ್ಕಳೇ ಆಗಿರುತ್ತಾರೆ. ಇದು ಅಪೌಷ್ಟಿಕತೆ, ಮಲೇರಿಯಾದಿಂದ ಸಾಯುವವರಿಗಿಂತ ಹೆಚ್ಚು. ಉಗಾಂಡ, ವಿಯೆಟ್ನಾಂ ದೇಶಗಳಲ್ಲಿ ಎಳೆಯ ಮಕ್ಕಳು ನೀರಿನ ಸೆಳೆತಕ್ಕೆ ಬಲಿಯಾಗುತ್ತಿದ್ದಾರೆ. ಬಾಂಗ್ಲಾದೇಶದ ಶೇ 43ರಷ್ಟು ಶಿಶುಮರಣಗಳು ನೀರಿನಲ್ಲಿ ಮುಳುಗುವುದರಿಂದ ಸಂಭವಿಸುತ್ತಿವೆ. ಅಮೆರಿಕದಲ್ಲಿ ಮಕ್ಕಳು ಈಜುಕೊಳ ಮತ್ತು ಮನೆಯ ಬಿಸಿನೀರಿನ ಟಬ್‌ಗಳಲ್ಲಿ ಮುಳುಗುತ್ತಿದ್ದಾರೆ. ನಮ್ಮ ದೇಶದ ಗ್ರಾಮೀಣ ಪ್ರದೇಶದ ಸಾವಿರಾರು ಮಕ್ಕಳು ಶಾಲೆ ತಲುಪಲು, ರಭಸದಿಂದ ಹರಿಯುವ, ಮೊಸಳೆ, ಹಾವುಗಳಿರುವ ನದಿಗಳ ಮೇಲೆ ನಿರ್ಮಿಸಲಾದ ಸಂಕಗಳನ್ನು ಬಳಸಿ, ಒಂದು ಕಡೆಯಿಂದ ಇನ್ನೊಂದು ಕಡೆ ಕೈಯಲ್ಲಿ ಜೀವ ಹಿಡಿದು ಸಾಗುವುದನ್ನು ಕಂಡು ‘ಅಯ್ಯೋ ಈ ಮಕ್ಕಳು ಅದೆಷ್ಟು ಕಷ್ಟಪಡುತ್ತಿದ್ದಾರೆ’ ಎಂದು ನೊಂದುಕೊಳ್ಳುತ್ತೇವೆ. ಆದರೆ ಪರಿಹಾರ ರೂಪವಾಗಿ ಏನನ್ನೂ ಮಾಡದ ನಿರ್ಲಜ್ಜತನ ಬೆಳೆಸಿಕೊಂಡಿದ್ದೇವೆ.

ನೀರಲ್ಲಿ ಮುಳುಗಿ ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆ ಅಷ್ಟೇನೂ ದೊಡ್ಡದಿಲ್ಲ. ತೆಪ್ಪ, ದೋಣಿಗಳಲ್ಲಿ ಸಂಚರಿಸುವಾಗ ಆಗುವ ಅಪಘಾತಗಳಲ್ಲಿ ಸಾಯುವವರ ಸಂಖ್ಯೆ ದೊಡ್ಡದಿದೆ. ಪ್ರಾಕೃತಿಕ ಅವಘಡಗಳಲ್ಲಿ ಕೊಚ್ಚಿ ಹೋಗುವವರು, ಸುನಾಮಿಗೆ ಸಿಲುಕಿ ಕಾಣೆಯಾಗುವವರು, ಪ್ರವಾಹಗಳಲ್ಲಿ ಸಿಲುಕಿ ಪ್ರಾಣ ಬಿಡುವವರು ಎಷ್ಟು ಎಂಬ ಬಗ್ಗೆ ಸ್ಪಷ್ಟ ದಾಖಲೆಗಳು ಇಲ್ಲ. ಪ್ರವಾಸ ಹೋದಾಗ ಅಜಾಗರೂಕತೆ ಕಾರಣಕ್ಕೆ, ಮೀನು ಹಿಡಿಯುವಾಗ, ದೋಣಿ ನಡೆಸುವಾಗ ಆಯತಪ್ಪಿ ನೀರಿಗೆ ಬಿದ್ದು ಸಾವು ತಂದುಕೊಳ್ಳುವವರೂ ಇದ್ದಾರೆ. ಎಲ್ಲವನ್ನೂ ಪರಿಗಣಿಸಿದರೆ ಮುಳುಗಿ ಸಾಯುವವರ ಸಂಖ್ಯೆಯು ಮೇಲೆ ಹೇಳಿದ್ದಕ್ಕಿಂತ ಐದಾರುಪಟ್ಟು ಜಾಸ್ತಿ ಇರುತ್ತದೆ ಎಂದು ವಿಶ್ವ ಆರೋಗ್ಯ ಸಂಸ್ಥೆಯೇ ಅಭಿಪ್ರಾಯಪಟ್ಟಿದೆ. ಆದರೂ ನಮ್ಮ ಗಮನ ಇದರ ಕಡೆ ಇಲ್ಲ.

ಮೈಸೂರಿನ ವಿದ್ಯಾರ್ಥಿನಿಯರಿಗೆ ನೀರಿನಲ್ಲಿ ಇಳಿದಾಗ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು ತಿಳಿದಿದ್ದವೋ ಇಲ್ಲವೋ ಹೇಳುವವರಿಲ್ಲ. ಆದರೆ ರೆಸಾರ್ಟ್ ನಡೆಸುವವರು ನೀರಿಗಿಳಿಯುವವರ ರಕ್ಷಣೆಗೆ ಒದಗಿಸಬೇಕಾದ ರಕ್ಷಣಾ ಪರಿಕರ, ಹೇಗೆ ಉಪಯೋಗಿಸಬೇಕೆಂಬುದರ ಪ್ರಾತ್ಯಕ್ಷಿಕೆ, ಎಲ್ಲಿ ಎಷ್ಟು ಅಡಿ ಆಳವಿದೆ, ಕಾಲಡಿಯ ನೆಲ ಎಲ್ಲಿ ಜಾರುತ್ತದೆ, ಈಜಲು ಬರದಿದ್ದವರು ಎಷ್ಟು ಆಳದವರೆಗೆ ಸುರಕ್ಷಿತವಾಗಿ ಇರಬಹುದು, ಅಪಾಯದ ಸಂದರ್ಭದಲ್ಲಿ ಹೇಗೆ ಪ್ರತಿಕ್ರಿಯಿಸಬೇಕು, ಸಹಾಯಕ್ಕಾಗಿ ಯಾರನ್ನು ಕರೆಯಬೇಕು ಎಂಬ ಬಗ್ಗೆ ಸರಿಯಾದ ಮಾಹಿತಿ ನೀಡಲೇಬೇಕು. ಪ್ರವಾಸ ಕೈಗೊಳ್ಳುವವರು, ವಿದ್ಯಾರ್ಥಿಗಳು, ಸ್ಥಳೀಯರ ನಿರ್ದೇಶನಗಳನ್ನು ಚಾಚೂ ತಪ್ಪದೆ ಪಾಲಿಸಬೇಕು.

ವಿಶ್ವಸಂಸ್ಥೆಯು ನೀಡಿರುವ ಮಾಹಿತಿಯ ಪ್ರಕಾರ, ಮುಳುಗಿ ಸಾಯುವವರ ಪೈಕಿ ಶೇ 90ರಷ್ಟು ಜನ ಕೆಳ ಮತ್ತು ಮಧ್ಯಮ ಆದಾಯವಿರುವ ದೇಶಗಳ ಪ್ರಜೆಗಳು ಎಂಬ ದತ್ತಾಂಶ ದೊರಕಿದೆ. ಇವರಲ್ಲಿ ಮುಂದುವರಿದ ದೇಶಗಳ ಬಡವರು ಸಹ ಇದ್ದಾರೆ. ಇದು ಹೊಸ ಚಿಂತನೆಗೆ ದಾರಿ ಮಾಡಿದೆ. ಪ್ರವಾಹಗಳ ಸಂದರ್ಭಗಳಲ್ಲಿ ಅಸುನೀಗುವವರ ಒಟ್ಟು ಸಂಖ್ಯೆಯಲ್ಲಿ ಶೇ 75ರಷ್ಟು ಜನ ನೀರಿನಲ್ಲಿ ಮುಳುಗುವುದರಿಂದಲೇ ಸಾಯುತ್ತಾರೆ. ಮುಳುಗುವುದರಿಂದ ಸಾಯುವವರ ಕುರಿತಾದ ಜಾಗತಿಕ ಮಟ್ಟದ ವರದಿಯೊಂದನ್ನು ವಿಶ್ವ ಆರೋಗ್ಯ ಸಂಸ್ಥೆಯು 10 ವರ್ಷಗಳ ಹಿಂದೆ ಪ್ರಕಟಿಸಿತ್ತು. ಮುಳುಗು ಅವಘಡಗಳನ್ನು ತಡೆಯಲು ಸರಿಯಾದ ಅಧ್ಯಯನ, ನೀತಿ ಮತ್ತು ಕಾರ್ಯ ಚೌಕಟ್ಟುಗಳನ್ನು ಹಾಕಿಕೊಳ್ಳುವಂತೆ ದೇಶಗಳಿಗೆ ತಾಕೀತು ಮಾಡಿತ್ತು.

ಅಧ್ಯಯನಗಳ ಫಲಶ್ರುತಿಯು ಕೆಲವು ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಪ್ರೇರಣೆ ನೀಡಿತು. 2021ರ ಏಪ್ರಿಲ್‌ನಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲೂ ಚರ್ಚೆಗೆ ಬಂದ ಈ ವಿಷಯವು ಮುಳುಗುವುದರ ವಿರುದ್ಧ ಸಮರ ಸಾರುವ ವಿಶ್ವವ್ಯಾಪಿ ಕಾರ್ಯಕ್ರಮಕ್ಕೆ ಚಾಲನೆ ನೀಡಿತು. ತೀರ ಪ್ರದೇಶಗಳಲ್ಲಿ ಬದುಕುವ, ನೀರಿನ ಸೆಳೆತಕ್ಕೆ ಸಿಲುಕಿ ಸಾಯಬಹುದಾದ 12 ಕೋಟಿ ಜನರನ್ನು ಈಗಾಗಲೇ ಸ್ಥಳಾಂತರಿಸಲಾಗಿದೆ. ವಾಯುಗುಣ ತ್ವರಿತವಾಗಿ ಹದಗೆಡುತ್ತಿರುವುದರಿಂದ ಜಲಪ್ರಳಯ, ಚಂಡಮಾರುತ, ಪ್ರವಾಹ, ಸುನಾಮಿಗಳ ಸಂಖ್ಯೆ ಏರಲಿದೆ ಎಂದಿರುವ ವಿಶ್ವಸಂಸ್ಥೆಯು ರಭಸದಿಂದ ಹರಿಯುವ ನೀರಿನ ಸಂಪರ್ಕಕ್ಕೆ ಬರುವವರ ಸಂಖ್ಯೆಯು ಹಲವು ಪಟ್ಟು ಹೆಚ್ಚಲಿದೆ ಎಂದಿದೆ.

ವಿಶ್ವಸಂಸ್ಥೆಯ ನಿರ್ದೇಶನದಂತೆ ಈಗ ಕೆಲವು ದೇಶಗಳು ತಮ್ಮ ಜನರ ಹಾಗೂ ಮಕ್ಕಳ ಸುರಕ್ಷತೆಗೆ ಒತ್ತು ನೀಡುವ ಹಲವು ಕ್ರಮಗಳನ್ನು ಜಾರಿಗೆ ತಂದಿವೆ. ವಿಯೆಟ್ನಾಂ ದೇಶದಲ್ಲಿ ಈಜು ಕಲಿಯುವಿಕೆಯನ್ನು ಶಿಕ್ಷಣದ ಭಾಗವನ್ನಾಗಿಸಲಾಗಿದೆ. ಬಾಂಗ್ಲಾದೇಶವು ‘ಅಂಚಲ್’ ಎಂಬ ಸಮುದಾಯ ಚಟುವಟಿಕೆ ಆಧಾರಿತ ಯೋಜನೆ ರೂಪಿಸಿದ್ದು, ಒಂದರಿಂದ ಐದರ ವಯೋಮಾನದ ಶಿಶುಗಳನ್ನು ನೀರಿನ ಅಪಾಯದಿಂದ ರಕ್ಷಿಸುವುದರ ಜವಾಬ್ದಾರಿಯನ್ನು ಶಿಶು ಆರೈಕೆ ಕೇಂದ್ರಗಳಿಗೆ ವಹಿಸಿದೆ. ನಮ್ಮ ದೇಶದಲ್ಲಿ ಮುಳುಗುವಿಕೆ ತಡೆಯುವ ಉದ್ದೇಶದಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಸ್ಟ್ರಾಟಜಿಕ್ ಫ್ರೇಮ್‌ವರ್ಕ್ ಫಾರ್ ಡ್ರೌನಿಂಗ್ ಪ್ರಿವೆನ್ಷನ್ ಕಾರ್ಯಕ್ರಮವು ಕಳೆದ ವರ್ಷ ರೂಪುಗೊಂಡಿದೆ.

ಮುಳುಗುವುದನ್ನು ಬರೀ ಅಪಘಾತದಂತೆ ನೋಡದೆ, ಅದಕ್ಕಿರುವ ಆರ್ಥಿಕ, ಸಾಮಾಜಿಕ ಕಾರಣಗಳನ್ನು ಗುರುತಿಸುವ ಕೆಲಸ ಈಗ ನಡೆದಿದೆ. ಮುಳುಗುವುದನ್ನು ತಡೆಯಲು ಸರ್ಕಾರಿ ಕಾರ್ಯಕ್ರಮಗಳೇ ಆಗಬೇಕೆಂದಿಲ್ಲ. ಇದಕ್ಕೆ ಹಲವು ಇಲಾಖೆಗಳ ಸಹಯೋಗ ಬೇಕು. ಜನ ಜವಾಬ್ದಾರಿಯಿಂದ ನಡೆದುಕೊಳ್ಳಬೇಕು. ಇತರ ಕೌಶಲಗಳಂತೆ ಈಜುವುದನ್ನು ಮಕ್ಕಳಿಗೆ ಕಲಿಸಬೇಕು. ಕಂಪ್ಯೂಟರ್ ಕಲಿಕೆಯ ಕಡೆಗಷ್ಟೇ ಆದ್ಯತೆ ನೀಡಿದರೆ ಸಾಲದು. ಈಜು ಕಲಿಕೆಗೂ ಪ್ರಾಮುಖ್ಯ ಇರಬೇಕು. ಜನ ನೀರಿಗಿಳಿಯುವ ಮುನ್ನ ಅಗತ್ಯವಿರುವ ಎಚ್ಚರಿಕೆ ವಹಿಸಬೇಕು. ಸರ್ಕಾರಗಳು ನೀತಿ, ನಿಬಂಧನೆ, ಕಾನೂನು ಜಾರಿಗೆ ತಂದು ಅಗತ್ಯ ಸೌಕರ್ಯ ಒದಗಿಸಿ, ವ್ಯವಸ್ಥೆಯ ದೋಷ ನಿವಾರಣೆ ಮಾಡಬೇಕು. ಕೊಳಗಳ ಬಳಿ ರಕ್ಷಣಾ ಸಿಬ್ಬಂದಿ ಇರುವುದನ್ನು ಕಡ್ಡಾಯಗೊಳಿಸಬೇಕು. ಜೊತೆಗೆ ಈಜು ಕಲಿಸುವುದನ್ನು ಶಿಕ್ಷಣ ಕ್ರಮದಲ್ಲಿ ಅಳವಡಿಸಿದರೆ ಮುಳುಗುವುದರಿಂದ ಸಂಭವಿಸುವ ಪ್ರಾಣಹಾನಿಯನ್ನು ಗಣನೀಯ ಪ್ರಮಾಣದಲ್ಲಿ ತಡೆಗಟ್ಟಬಹುದು.

ಚುರುಮುರಿ

ಐಪಿಎಲ್- ಬಿಪಿಎಲ್!

• ಬಿ.ಎನ್.ಮಲ್ಲೇಶ್

‘ಲೇ ದುಬ್ಬೀರ, ವಿಷ್ಯ ಗೊತ್ತಾತ? ನಮ್ ಚಾದಂಗಡಿ ಮಂಜಮ್ಮಂದು ಬಿಪಿಎಲ್ ಕಾರ್ಡ್ ರದ್ದಾತಂತೆ...’ ಎಂದ ತೆಪರೇಸಿ.

‘ನಂದೂ ರದ್ದಾಗೇತಿ’ ಎಂದ ಗುಡ್ಡೆ.

‘ಅಲ್ಲೋ ನಿನ್ನತ್ರ ಬೈಕು, ಮೊಬೈಲು, ಮನ್ಯಾಗೆ ವಾಶಿಂಗ್ ಮೆಷೀನ್, ಟೀವಿ ಎಲ್ಲ ಐತಿ, ಮಂಜಮ್ಮನತ್ರ ಏನೈತಿ?’ ತೆಪರೇಸಿ ಪ್ರಶ್ನಿಸಿದ.

‘ಅಂದ್ರೇ ಮೊಬೈಲು, ಬೈಕು ಇದ್ದೋರು ಶ್ರೀಮಂತರಾ? ಇವತ್ತು ಮೊಬೈಲ್ ಇಲ್ದೇ ಇರೋರು ಯಾರದಾರೆ ಹೇಳಲೆ, ಎಮ್ಮಿ ಕಾಯೋರತ್ರನೂ ಮೊಬೈಲ್ ಇರ್ತತಿ’ ಗುಡ್ಡೆ ವಾದಿಸಿದ.

‘ಅದು ಹಂಗಲ್ಲೋ, ಸರ್ಕಾರ ಅದೇನೋ ಮಾನದಂಡ ಮಾಡೇತಲ್ಲ’.

‘ಮಾನ ಎಲ್ಲೈತಿ? ಬರೀ ದಂಡ ಅಷ್ಟೆ. ಮಂಜಮ್ಮನತ್ರ ಏನೈತಿ ಅಂದ್ರೆಲ್ಲ, ಅವಳತ್ರ ಫೋರ್ ವೀಲರ್ ಇಲ್ವಾ?’

‘ಫೋರ್ ವೀಲರಾ? ಮಂಜಮ್ಮನತ್ರಾನಾ?’ ಕೊಟ್ರೇಶಿ ತಲೆ ಕೆರೆದುಕೊಂಡ.

‘ಮತ್ತೆ ಇಲ್ವಾ? ಅವಳ ಚಾದಂಗಡಿ ತಳ್ಳೋ ಗಾಡಿಗೆ ನಾಲ್ಕು ಚಕ್ರ ಇಲ್ವಾ?’

ಗುಡ್ಡೆ ಕೀಟಲೆಗೆ ತೆಪರೇಸಿಗೆ ಸಿಟ್ಟು ಬಂತು ‘ನಿನ್ನೆಲಿ, ಇದ್ರಾಗೂ ನಗಿಚ್ಯಾಟಿಕಿ ಮಾಡ್ತೀಯಲ್ಲಲೆ, ಮಂಜಮ್ಮ ಇದ್ದಿದ್ರೆ ನಿನ್ನ ಉಗಿದು ಉಪ್ಪಾಕಿರೋಳು’ ಎಂದ.

‘ನೋಡ್ರಲೆ, ಈ ದೇಶದಾಗೆ ಎರಡೇ ಇರೋದು. ಒಂದು ಐಪಿಎಲ್ ಭಾರತ, ಇನ್ನೊಂದು ಬಿಪಿಎಲ್ ಭಾರತ. ಈ ಗುಡ್ಡೆ ಯಾವತ್ತಾದ್ರೂ ಸೊಸೈಟಿ ರೇಷನ್ನಿಗೆ ಕ್ಯೂ ನಿಂತಿದಾನಾ? ಅವನ ಗಾಡಿಗೂ ಬಾಡಿಗೂ ಎಣ್ಣೆ ಹಾಕಾಕೇ ತಿಂಗಳಿಗೆ ಹತ್ತು ಸಾವಿರ ಬೇಕು. ಜೊತೆಗೆ ಐಪಿಎಲ್ ಬೆಟ್ಟಿಂಗ್ ಬೇರೆ ಆಡ್ತಾನೆ, ಇವ್ನು ಬಡವಾನಾ?’ ಕೊಟ್ರೇಶಿ ಕೊಕ್ಕೆ ಹಾಕಿದ.

‘ಹೌದು ಬಡವಾನೇ... ಅವ್ನು ಬಿಪಿಎಲ್ಲೇ...’ ಎಂದ ದುಬ್ಬೀರ.

‘ಹೆಂಗೆ?’

‘ಹೆಂಗೆ ಅಂದ್ರೆ? ಐಪಿಎಲ್ ಬೆಟ್ಟಿಂಗ್ ಆಡಿ ಆಡೇ ಅವ್ನು ಬಿಪಿಎಲ್ ಆಗಿರೋದು!’ ದುಬ್ಬೀರನ ಕೀಟಲೆಗೆ ಎಲ್ಲರೂ ಗೊಳ್ಳಂತ ನಕ್ಕರು. ಗುಡ್ಡೆ ಪಿಟಿಕ್ಕನ್ನಲಿಲ್ಲ.

ದಿನದ ಟ್ವೀಟ್

ಆಶಾದಾಯಕ ಬೆಳವಣಿಗೆ

ಮಹಾರಾಷ್ಟ್ರದ 15 ವಿಧಾನಸಭಾ ಕ್ಷೇತ್ರಗಳಲ್ಲಿ ಇದೀಗ ಇದು ಸಂಭವಿಸಿದೆ. ಈ ಕ್ಷೇತ್ರಗಳಲ್ಲಿನ ಅಭ್ಯರ್ಥಿಗಳ ಹೆಸರು ಮತಯಂತ್ರಗಳಲ್ಲಿ ಮರಾಠಿಯೊಂದಿಗೆ ಕನ್ನಡದಲ್ಲೂ ಇರುವಂತೆ ಚುನಾವಣಾ ಆಯೋಗ ಮಾಡಿದೆ. ಕನ್ನಡ ಭಾಷಿಕರು ಇಲ್ಲಿ ಬಹುಸಂಖ್ಯೆಯಲ್ಲಿ ಇದ್ದಾರೆ. ಇದು, ಕನ್ನಡ ಭಾಷಾ ಯೋಜನೆಗೆ ಸಂದ ಜಯವಾಗಿದೆ.

ಹರೀಶ್ ಇಟಗಿ

ಕಿಡಿನುಡಿ

ಇದು, ಗಂಭೀರವಾಗಿ ಪರಿಗಣಿಸಬೇಕಾದ ವಿಷಯ. ಆಹಾರ ಸುರಕ್ಷತಾ ಅಧಿಕಾರಿಗಳು ಬೆಂಗಳೂರಿನ ಪ್ರತಿ ಪಿ.ಜಿಯನ್ನೂ ಪರಿಶೀಲನೆಗೆ ಒಳಪಡಿಸಬೇಕು.

(ಬೆಂಗಳೂರಿನ ಪಿ.ಜಿಯೊಂದರಲ್ಲಿ ಸಿದ್ಧಪಡಿಸಿ ಇಟ್ಟಿದ್ದ ಆಹಾರದ ಪಾತ್ರೆಯಲ್ಲಿ ಇಲಿಯೊಂದು ಓಡಾಡುತ್ತಿದ್ದ ವಿಡಿಯೊ ದೃಶ್ಯಾವಳಿಗೆ ಪ್ರತಿಕ್ರಿಯೆ)

ಶೇಷಗಿರಿ ದೇಶಪಾಂಡೆ, ಟೆಕಿ

25 ವರ್ಷಗಳ ಹಿಂದೆ

ಸೋಮವಾರ, 22-11-1999

• **ಬಸ್ ಖಾಸಗೀಕರಣಕ್ಕೆ ಕಾರ್ಯಸೂಚಿ: ಆದೇಶ**

ಬೆಂಗಳೂರು, ನ. 21– ರಾಜ್ಯದ ಎಲ್ಲಾ ಕಡೆಗಳಿಗೂ ಸರ್ಕಾರದಿಂದ ಬಸ್ ಸಂಪರ್ಕ ಕಲ್ಪಿಸಲು ಸಾಧ್ಯವಿಲ್ಲದಿರುವುದರಿಂದ ಸಾರಿಗೆ ವ್ಯವಸ್ಥೆಯನ್ನು ಖಾಸಗೀಕರಣಗೊಳಿಸಲು ಪರಿಶೀಲಿಸಲಾಗುತ್ತಿದ್ದು, ಖಾಸಗೀಕರಣ ಜಾರಿಗೆ ಕಾರ್ಯಸೂಚಿ ರೂಪಿಸುವಂತೆ ಸಾರಿಗೆ ಸಚಿವ ಸಗೀರ್ ಅಹಮದ್ ಅವರು ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಆದೇಶಿಸಿದರು.

ಇಂದು ಇಲ್ಲಿ ಕರ್ನಾಟಕ ಮೋಟಾರು ವಾಹನ ತನಿಖಾಧಿಕಾರಿಗಳ ಸಂಘವು ಪ್ರಕಟಿಸಿದ ‘ಚಾಲಕರ ಮಾರ್ಗದರ್ಶಿ’ ಕೈಪಿಡಿಯನ್ನು ಬಿಡುಗಡೆಗೊಳಿಸಿ ಮಾತನಾಡುತ್ತಿದ್ದ ಅವರು, ಸಾರಿಗೆ ವ್ಯವಸ್ಥೆಯನ್ನು ಖಾಸಗೀಕರಣಗೊಳಿಸಿ ಸಾರ್ವಜನಿಕರಿಗೆ ಹೇಗೆ ಅನುಕೂಲ ಕಲ್ಪಿಸಿಕೊಡಬಹುದು ಎಂಬ ಬಗ್ಗೆ ಮಾಹಿತಿಯನ್ನು ತಮಗೆ ಸಲ್ಲಿಸಬೇಕು ಎಂದು ತಾಕೀತು ಮಾಡಿದರು.

• **ವಾಜಪೇಯಿ ಸಂಪುಟ ಇಂದು ಪುನರ್‌ರಚನೆ**

ನವದೆಹಲಿ, ನ. 21 (ಪಿಟಿಐ)– ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ತಮ್ಮ 70 ಸದಸ್ಯರ ಸಚಿವ ಸಂಪುಟವನ್ನು ನಾಳೆ ಪ್ರಥಮ ಬಾರಿಗೆ ಪುನರ್ ರಚಿಸಲಿದ್ದು, ಕೆಲ ಖಾತೆಗಳ ಬದಲಾವಣೆಯನ್ನೂ ಮಾಡಲಿದ್ದಾರೆ. ಸಂಪುಟದಲ್ಲಿ ಆರು ಹೊಸ ಮುಖಗಳು ಕಾಣಿಸಿಕೊಳ್ಳುವ ನಿರೀಕ್ಷೆಯಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 22-11-1974

• **ಬೆಂಗಳೂರಿನ ಪ್ರಪ್ರಥಮ ಟೆಸ್ಟ್ ಪಂದ್ಯ ಇಂದು ಆರಂಭ**

ಬೆಂಗಳೂರು, ನ. 21– ಬೆಂಗಳೂರಿನ ಬೃಹತ್ ಸಂಖ್ಯೆಯ ಕ್ರೀಡಾಭಿಮಾನಿಗಳ ದೀರ್ಘಕಾಲದ ಕನಸೊಂದು ಇಂದು ನನಸಾಗುತ್ತಿದೆ.

ರಾಷ್ಟ್ರಪತಿ ಫಕ್ರುದೀನ್ ಅಲಿ ಅಹ್ಮದ್ ಅವರು ಇಂದು ಬೆಳಿಗ್ಗೆ 10 ಗಂಟೆಗೆ ಪ್ರವಾಸಿ ವೆಸ್ಟ್ ಇಂಡೀಸ್ ಮತ್ತು ಭಾರತ ತಂಡಗಳ ಈ ಸರಣಿಯ ಪ್ರಥಮ ಟೆಸ್ಟ್ ಪಂದ್ಯವನ್ನು 50 ಸಹಸ್ರ ಕ್ರೀಡಾಭಿಮಾನಿಗಳ ಮುಂದೆ ಹಚ್ಚ ಹಸುರಿನ ಮೈದಾನ, ರಾಜ್ಯ ಕ್ರಿಕೆಟ್ ಸಂಸ್ಥೆ ಕ್ರೀಡಾಗಾರದಲ್ಲಿ ಉದ್ಘಾಟಿಸಲಿದ್ದಾರೆ.

ಬೆಂಗಳೂರಿನಲ್ಲಿ ನಡೆಯಲಿರುವ ಈ ಪ್ರಪ್ರಥಮ ಟೆಸ್ಟ್ ಪಂದ್ಯ, ಮತ್ತೊಮ್ಮೆ ವೆಸ್ಟ್ ಇಂಡೀಸ್ ಟೀಮಿನ ಬಿರುಸಿನ ಹೊಡೆತದ ಆಟಗಾರರು ಹಾಗೂ ಭಾರತದ ವಿಶ್ವಖ್ಯಾತ ಸ್ಪಿನ್ನರುಗಳು, ಶಕ್ತ ಬ್ಯಾಟ್ಸ್‌ಮನ್‌ಗಳ ನಡುವಣ ತೀಕ್ಷ್ಣ ಹೋರಾಟದ ಕಣವಾಗಲಿರುವುದು ಖಂಡಿತ.

• **ಮರವೆಯೋ ಅಲಕ್ಷ್ಯವೋ?**

ನವದೆಹಲಿ, ನ. 21– ಗೃಹ ಸಚಿವ ಕೆ. ಬ್ರಹ್ಮಾನಂದ ರೆಡ್ಡಿ ಅವರು ಎದ್ದು ನಿಂತು, ಇನ್ನೇನು ಮಾತನಾಡಬೇಕು ಎನ್ನುವಷ್ಟರಲ್ಲಿ ಅವರು ಉದ್ರಿಕ್ತರಾಗಿ, ಅಧಿಕಾರಿಗಳು ಕುಳಿತಿದ್ದ ಕಡೆಗೆ ಕೈಸನ್ನೆ ಮಾಡುತ್ತಿದ್ದ ಅಸಾಮಾನ್ಯ ದೃಶ್ಯ ಇಂದು ಲೋಕಸಭೆಯಲ್ಲಿ ಕಂಡುಬಂದಿತು. ಕೆಲ ಕ್ಷಣಗಳ ಕಾಲ ಕಲಾಪಗಳು ನಿಂತು ಹೋದವು. ವಿರೋಧ ಪಕ್ಷಗಳ ಸದಸ್ಯರು ಚುರುಕಿನಿಂದ ಗಮನಿಸುತ್ತಿದ್ದರು.

ಆಮದು ಲೈಸೆನ್ಸ್ ಹಗರಣದ ಬಗ್ಗೆ ಬುಧವಾರದ ಚರ್ಚೆಗಳ ಸಮಯದಲ್ಲಿ ಸರ್ಕಾರದ ವಿರುದ್ಧ ವಿರೋಧಿ ಸದಸ್ಯರು ಮಾಡಿದ ಆಪಾದನೆಗಳಿಗೆ ಉತ್ತರವೀಯಲು ರೆಡ್ಡಿ ಅವರು ಎದ್ದುನಿಂತಿದ್ದರು. ಆದರೆ ತಮ್ಮ ಬಳಿ ಅಗತ್ಯವಾದ ಕಾಗದಪತ್ರಗಳು ಇಲ್ಲದಿದ್ದುದನ್ನು ಕಂಡು ಅವರ ಉತ್ಸಾಹ ಕುಗ್ಗಿತು.

ಗೃಹಖಾತೆ ಉಪಸಚಿವ ಎಫ್.ಎಚ್. ಮೊಹಸಿನ್ ಅವರು ಅಧಿಕಾರಿಗಳಿಂದ ಅತಿ ಶೀಘ್ರವಾಗಿ ಕಾಗದಪತ್ರಗಳನ್ನು ಸಂಗ್ರಹಿಸಿ ಕೈಕೈ ಬದಲಿಸಿ ಸಚಿವರಿಗೆ ತಲುಪಿಸಿದರು. ಆದರೆ ವಿರೋಧಿ ಸದಸ್ಯರ ಪ್ರತಿಭಟನೆಗೆ ಮುನ್ನವೇ ಈ ಕಾರ್ಯ ಸಾಧ್ಯವಾಗಲಿಲ್ಲ.

ಸಂಗತ

ನಕ್ಸಲ್ ಚಳವಳಿ: ದಕ್ಕಿದ್ದೇನು?

ಸದುದ್ದೇಶದ ಹೋರಾಟಗಳಿಗೆ ಸಾವಿಲ್ಲ, ಆದರೆ...

• ನೀಲಾ ಎಂ.ಎಚ್.

ಹೆಬ್ರಿ ಮತ್ತೊಮ್ಮೆ ಸದ್ದು ಮಾಡಿದೆ. ಕಾರ್ಕಳ ಸಮೀಪದ ಕಾಡಂಚಿನ ಈ ಪ್ರಶಾಂತ ಪರಿಸರದಲ್ಲಿ ಇನ್ನೊಮ್ಮೆ ನೆತ್ತರಿನ ಕೋಡಿ ಹರಿದಿದೆ. 21 ವರ್ಷಗಳ ಹಿಂದೆ ಇದೇ ನವೆಂಬರ್‌ನಲ್ಲಿ ಮೊದಲ ಬಾರಿಗೆ ಇಲ್ಲಿನ ನೀರವ ಮೌನವನ್ನು ಭೇದಿಸಿದ್ದ ಪೊಲೀಸರ ಗುಂಡಿನ ಸದ್ದು, ಪಶ್ಚಿಮಘಟ್ಟದಲ್ಲಿ ಸದ್ದಿಲ್ಲದೇ ಸಂಘಟಿತವಾಗಿದ್ದ ಶಸ್ತ್ರಸಜ್ಜಿತ ಹೋರಾಟದ ಸುಳಿವನ್ನು ನಾಡಿಗೆ ನೀಡಿತ್ತು. ನೆರೆಯ ಆಂಧ್ರದಿಂದ ಕೋಲಾರ– ತುಮಕೂರು– ರಾಯಚೂರು ಭಾಗದಲ್ಲಷ್ಟೇ ವ್ಯಾಪಿಸಿದೆ ಎಂದುಕೊಂಡಿದ್ದ ನಕ್ಸಲ್ ಚಳವಳಿ, ಪಶ್ಚಿಮಘಟ್ಟದಲ್ಲೂ ಬಲವಾಗಿ ಬೇರುಬಿಟ್ಟಿದ್ದು ಜಗಜ್ಜಾಹೀರಾಗಿತ್ತು.

ಈ ಚಳವಳಿಯ ವಿರುದ್ಧ ರಾಜ್ಯದಲ್ಲಿ ನಡೆದ ಪೊಲೀಸರ ಆ ಮೊದಲ ಎನ್‌ಕೌಂಟರ್‌ನಲ್ಲಿ ಪಾರ್ವತಿ, ಹಾಜಿಮಾ ಎಂಬಿಬ್ಬರು ಯುವತಿಯರು ಬಲಿಯಾದದ್ದನ್ನು ನಾಡಿನ ಜನ ನಿಬ್ಬೆರಗಾಗಿ ನೋಡಿದ್ದರು. ಅಲ್ಲಿಂದೀಚೆಗೆ ಚಿಕ್ಕಮಗಳೂರು– ಮಂಗಳೂರು– ಉಡುಪಿ ಭಾಗದ ಕಾಡಂಚಿನಲ್ಲಿ ವ್ಯಾಪಕವಾಗಿ ಆರಂಭವಾದ ಹಿಂಸಾಸರಣಿ ಇದೀಗ ನಕ್ಸಲ್ ನಾಯಕ ವಿಕ್ರಂ ಗೌಡ ಹತನಾಗುವುದರೊಂದಿಗೆ ಒಂದು ಸುತ್ತು ಬಂದು ನಿಂತಿದೆ. ಹತ್ತಾರು ನಕ್ಸಲರು, ಪೊಲೀಸರನ್ನು ಬಲಿ ಪಡೆದ ಕ್ರಾಂತಿಕಾರಿ ಚಳವಳಿಗೆ ಈ ಎರಡು ದಶಕಗಳ ಹೋರಾಟದಲ್ಲಿ ಸಿಕ್ಕಿದ್ದಾದರೂ ಏನು? ಇವರ ಹುಟ್ಟಡಗಿಸುವ ಶಪಥ ತೊಟ್ಟ ಸರ್ಕಾರ ಸಾಧಿಸಿದ್ದಾದರೂ ಏನನ್ನು? ಆಡಳಿತಗಾರರು ಮತ್ತು ಚಳವಳಿಗಾರರು ಇಬ್ಬರೂ ಈ ಪ್ರಶ್ನೆಯನ್ನು ಎದೆಮುಟ್ಟಿ ಕೇಳಿಕೊಳ್ಳಬೇಕಾಗಿದೆ.

2000ದ ಸುಮಾರಿಗೆ, ಒಕ್ಕಲಿನ ಭೀತಿ ಎದುರಿಸುತ್ತಿದ್ದ ಕಾಡಂಚಿನ ಗ್ರಾಮಸ್ಥರನ್ನು ಸಂಘಟಿಸತೊಡಗಿದ ನಕ್ಸಲರಿಗೆ ಆರಂಭದಲ್ಲಿ ಉತ್ತಮ ಸ್ಪಂದನೆ ಸಿಕ್ಕಿದ್ದರಲ್ಲಿ ಅತಿಶಯೋಕ್ತಿಯೇನಿರಲಿಲ್ಲ. ಆದರೆ ಬರಬರುತ್ತಾ ಅವರ ಉಪಟಳ ಮಿತಿಮೀರುತ್ತಿದೆ ಎನಿಸತೊಡಗಿದಾಗ, ಪ್ರಮುಖ ನಾಯಕ ಸಾಕೇತ್ ರಾಜನ್ ಸೇರಿದಂತೆ ತಂಡದ ಹಲವರನ್ನು ಪೊಲೀಸರು ಹೊಡೆದುರುಳಿಸಿದ್ದು, ಹೋರಾಟದ ರಕ್ತಸಿಕ್ತ ಅಧ್ಯಾಯವನ್ನಷ್ಟೇ ಅಲ್ಲ ಈ ಭಾಗದ ಅಖಂಡ ಸಮಸ್ಯೆಗಳಿಗೂ ಕನ್ನಡಿ ಹಿಡಿದಿತ್ತು.

ಅಲ್ಲಿಂದೀಚೆಗೆ ಇದನ್ನು ಸಾಮಾಜಿಕ– ಆರ್ಥಿಕ ಸಮಸ್ಯೆ ಎಂದು ಬಣ್ಣಿಸತೊಡಗಿದ ಸರ್ಕಾರ, ಕೋಟ್ಯಂತರ ರೂಪಾಯಿಯ ಸರಣಿ ಅಭಿವೃದ್ಧಿ ಪ್ಯಾಕೇಜ್‌ಗಳನ್ನು ಘೋಷಿಸಿತು. ಐಎಎಸ್ ಅಧಿಕಾರಿಯಾಗಿದ್ದ ಚಿರಂಜೀವಿ ಸಿಂಗ್ ಅವರ ವರದಿ ಆಧರಿಸಿ, ಅಭಿವೃದ್ಧಿಗೆ ಪೂರಕವಾದ ಭರವಸೆಗಳು ಹರಿದುಬಂದವು. ಎಲ್ಲೆಡೆ ಎಲ್ಲ ಸಚಿವರೂ ಮಾಧ್ಯಮಗಳ ಮುಂದೆ ಇದೇ ಮಂತ್ರ ಜಪಿಸತೊಡಗಿದರು. ಇದನ್ನೆಲ್ಲಾ ಕಂಡು, ಹಕ್ಕುಪತ್ರದ ಜೊತೆಗೆ ಮೂಲ ಸೌಲಭ್ಯಗಳನ್ನೂ ಒದಗಿಸಿ ಸರ್ಕಾರ ತಮ್ಮನ್ನು ಉದ್ಧರಿಸಲಿದೆ ಎಂಬ ನಂಬಿಕೆಯಿಂದ ಆದಿವಾಸಿಗಳು ನಿಟ್ಟುಸಿರುಬಿಟ್ಟಿದ್ದರು. ಆದರೆ ಆಗಿದ್ದೇನು?

ಬೆರಳೆಣಿಕೆಯಷ್ಟು ಊರುಗಳಿಗಷ್ಟೇ ಒಂದಷ್ಟು ಸೌಲಭ್ಯಗಳು ದಕ್ಕಿದವು. ಬೇಡಿಕೆ ಬೆಟ್ಟದಷ್ಟು, ಆಗಿದ್ದು ಹಿಡಿಯಷ್ಟು ಎಂಬಂತಹ ಸ್ಥಿತಿಯಲ್ಲಿ, ಸುಧಾರಣೆ ಅವರಿಗೆ ಕನಸಿನ ಮಾತೇ ಆಯಿತು. ಹಾಗಿದ್ದರೆ ಆ ಎಲ್ಲ ಪ್ಯಾಕೇಜ್‌ಗಳ ಕತೆ ಏನಾಯಿತು? ಅರಣ್ಯವಾಸಿಗಳನ್ನು ಸೂಕ್ತ ಸ್ಥಳಾಂತರ ಯೋಜನೆಯ ಮೂಲಕ ಮುಖ್ಯವಾಹಿನಿಗೆ ಕರೆತರುವ ಆಡಳಿತಾರೂಢರ ಮಹತ್ವಾಕಾಂಕ್ಷೆಯ ಮಾತುಗಳೆಲ್ಲ ಏನಾದವು? ಶಸ್ತ್ರ ಹಿಡಿದವರಿಗಾಗಿ ಘೋಷಿಸಿದ ಶರಣಾಗತಿ ಪ್ಯಾಕೇಜ್ ಆದರೂ ಸರಿಯಾಗಿ ಅನುಷ್ಠಾನಕ್ಕೆ ಬಂದಿದೆಯೇ ಎಂದರೆ ಇಲ್ಲೂ ಭ್ರಮನಿರಸನವೇ ಆಗುತ್ತದೆ. ಈ ವರ್ಷದ ಜನವರಿ ವೇಳೆಗೆ 14 ಮಂದಿ ಶರಣಾಗಿರುವುದಾಗಿ ಸರ್ಕಾರಿ ಅಂಕಿಅಂಶಗಳು ತಿಳಿಸುತ್ತವೆ. ಪರಿಹಾರದ ಹಣ, ಪ್ರೋತ್ಸಾಹಧನ, ಕೌಶಲ ತರಬೇತಿಗೆ ಆರ್ಥಿಕ ನೆರವು ನೀಡುವ ಭರವಸೆಯೊಂದಿಗೆ, 2015ರ ‘ನಕ್ಸಲರ ಶರಣಾಗತಿ’ ಪ್ಯಾಕೇಜನ್ನು ರಾಜ್ಯ ಗೃಹ ಇಲಾಖೆ ಇದೇ ವರ್ಷದ ಮಾರ್ಚ್ 14ರಂದು ಪರಿಷ್ಕರಿಸಿದೆ. ಈ ಸಂಬಂಧ ಅದು ಹೊರಡಿಸಿರುವ ಆದೇಶ ಓದುವುದಕ್ಕೇನೋ ಚೆನ್ನಾಗಿದೆ. ಆದರೆ ಶರಣಾದ ಎಷ್ಟು ಮಂದಿಗೆ ಇದರ ಪೂರ್ಣ ಪ್ರಯೋಜನ ದಕ್ಕಿದೆ?

‘ಮುಖ್ಯವಾಹಿನಿಗೆ ಬಂದ ನಾಲ್ಕೈದು ವರ್ಷಗಳ ಬಳಿಕ ನನಗೆ ಕೊಟ್ಟ 1 ಲಕ್ಷದಲ್ಲಿ 88 ಸಾವಿರ ರೂಪಾಯಿ ನನ್ನ ಮೇಲಿದ್ದ ಕೇಸುಗಳನ್ನು ನಡೆಸಿದ ಲಾಯರ್ ಫೀಸಿಗೇ ಖರ್ಚಾಗಿತ್ತು. ಸದ್ಯ ನಮಗೆ ಯಾವ ಪರಿಹಾರವೂ ಬೇಡ, ನಮ್ಮ ಮೇಲೆ ಹಾಕಿರುವ ಕೇಸುಗಳನ್ನು ವಾಪಸ್ ಪಡೆದು, ನಾವು ಕೋರ್ಟಿಗೆ ಅಲೆಯುವುದನ್ನು ತಪ್ಪಿಸಿದರೆ ಸಾಕು’ ಎನ್ನುತ್ತಾರೆ ಶರಣಾದ ನಕ್ಸಲರೊಬ್ಬರು. ಪರಿಹಾರದ ಘೋಷಣೆಗಳೆಲ್ಲಾ ಮೀನು ಹಿಡಿಯುವ ಗಾಳಕ್ಕೆ ಕಟ್ಟಿದ ತಿಂಡಿಯ ಆಮಿಷದಂತೆ ಶರಣಾಗತರಿಗೆ ಭಾಸವಾಗಿದ್ದರೆ ಅದರ ಹೊಣೆಯನ್ನು ಸರ್ಕಾರವೇ ಹೊರಬೇಕಾಗುತ್ತದೆ.

ಈ ನಡುವೆ, ಈ ಭಾಗದ ಸಮಸ್ಯೆಗಳು ಈಗ ಹಿಂದೆಂದಿಗಿಂತಲೂ ವ್ಯಾಪಕವಾಗಿವೆ. ತೆರವಿನ ಭೀತಿ, ಮೂಲ ಸೌಲಭ್ಯಗಳ ಕೊರತೆಯಿಂದ ಆದಿವಾಸಿಗಳು, ತಳವರ್ಗದವರು ನಲುಗುತ್ತಿದ್ದರೆ, ಕಾಫಿ, ಕಾಳುಮೆಣಸು, ಅಡಿಕೆ ಬೆಳೆಗಳಿಗೆ ತಗುಲಿರುವ ರೋಗಬಾಧೆಯಿಂದ ಬೆಳೆಗಾರರು ಕಂಗೆಟ್ಟಿದ್ದಾರೆ. ಅಭಿವೃದ್ಧಿಯ ಹೆಸರಿನಲ್ಲಿ ಇಲ್ಲಿನ ಪರಿಸರವು ಸೂಕ್ಷ್ಮಸ್ಥಿತಿ ತಲುಪಿದ್ದರೆ, ಅಭಿವೃದ್ಧಿ ಕಾಣದ ಜನರ ಬದುಕು ಇನ್ನೊಂದು ರೀತಿಯಲ್ಲಿ ಸೂಕ್ಷ್ಮವಾದ ಹಂತಕ್ಕೆ ಬಂದು ನಿಂತಿದೆ. ಅಷ್ಟರನಡುವೆಯೂ ಶಸ್ತ್ರಸಜ್ಜಿತ ಹೋರಾಟದ ಕಾವು ತಗ್ಗಿರುವುದಕ್ಕೆ, ಪ್ರಜಾಪ್ರಭುತ್ವದಲ್ಲಿ ಇಂಥ ಅರ್ಥರಹಿತ ಭೂಗತ ಹೋರಾಟಗಳಿಗೆ ನೆಲೆಯಿಲ್ಲ ಎಂಬ ವಾದದಲ್ಲಿ ಹುರುಳಿರುವುದಕ್ಕೆ, ಒಂದಂಕಿಗೆ ಬಂದು ನಿಂತಿರುವ ನಕ್ಸಲೀಯರ ಸಂಖ್ಯೆಯೇ ನಿದರ್ಶನವಾಗಿದೆ.

ಸದುದ್ದೇಶದ ಹೋರಾಟಗಳಿಗೆ ಸಾವಿಲ್ಲ, ಆದರೆ ಹೋರಾಟದ ಮಾರ್ಗ ಬದಲಾಗದೇ ಗತ್ಯಂತರವಿಲ್ಲ.

ವಾಚಕರ ವಾಣಿ

ಸಾಹಿತ್ಯ ಸಮ್ಮೇಳನ: ನೈಜ ಸಮಸ್ಯೆ ಚರ್ಚೆಗೆ ಬರಲಿ

ಬಹುಸಂಸ್ಕೃತಿಯನ್ನು ಒಪ್ಪಿಕೊಳ್ಳುವಂತೆ ಮಾಡಬೇಕು ಎಂದು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷ ಗೊ.ರು. ಚನ್ನಬಸಪ್ಪ ಅಭಿಪ್ರಾಯಪಟ್ಟಿದ್ದರೆ, ಸಮ್ಮೇಳನದ ಸ್ವರೂಪ ಬದಲಾಗಲಿ ಎಂದು ವಿಮರ್ಶಕ ನರಹಳ್ಳಿ ಬಾಲಸುಬ್ರಹ್ಮಣ್ಯ ಪ್ರತಿಪಾದಿಸಿದ್ದಾರೆ (ಪ್ರ.ವಾ., ನ. 21). ನದಿಯ ನೀರೊಳಗೆ ಬಯಲಿನ ನೀರು ಹರಿದರೂ ನದಿ ನೀರಿನ ಅಸ್ತಿತ್ವ ಕೆಡದಂತೆ ಇರಬೇಕೇ ವಿನಾ ನದಿ ತನ್ನ ಅಸ್ತಿತ್ವವನ್ನೇ ಬಿಟ್ಟುಕೊಟ್ಟು, ಬಯಲಿನ ಬಣ್ಣಕ್ಕೆ ಬದಲಾಗಬಾರದು. ಇದು ಬಹುಸಂಸ್ಕೃತಿಯನ್ನು ಒಪ್ಪಿಕೊಳ್ಳಲು ಕನ್ನಡ ತನಗೆ ತಾನೇ ಹಾಕಿಕೊಳ್ಳಬೇಕಾದ ಪರಿಮಿತಿ.

ಭಾರತ ಜನನಿಯ ಜೊತೆಯಲ್ಲೇ ಕನ್ನಡ ಮಾತೆ ಇದ್ದರೂ, ಕನ್ನಡ ತಾಯಿಗೆ ತನ್ನದೇ ಆದ ಜೀವಂತಿಕೆ ಇದೆ. ಇತ್ತೀಚಿನ ದಿನಗಳಲ್ಲಿ ಉತ್ತರ ಭಾರತದಿಂದ ಉದ್ಯೋಗ, ವ್ಯಾಪಾರಕ್ಕಾಗಿ ರಾಜ್ಯಕ್ಕೆ ಬರುವ ವಲಸಿಗರು ಇಲ್ಲಿಯೇ ಬೇರು ಬಿಡುತ್ತಿದ್ದಾರೆ. ಅಂತಹವರು ಕನ್ನಡ ಭಾಷೆಯನ್ನು ಕಲಿಯಲೇಬೇಕಾದ ಅನಿವಾರ್ಯ ರಾಜ್ಯದಲ್ಲಿಲ್ಲ. ಪ್ರಾಥಮಿಕ ಹಂತದಲ್ಲಿ ಕನ್ನಡ ಮಾಧ್ಯಮ ಕಡ್ಡಾಯವಾಗದಿದ್ದರೆ, ಮುಂದೊಂದು ದಿನ ಬಯಲು ನೀರಿನ ಗಾತ್ರಕ್ಕೆ ಸಿಕ್ಕಿ ನದಿ ತನ್ನ ಅಸ್ತಿತ್ವ ಕಳೆದುಕೊಳ್ಳುವ ಅಪಾಯವಿದೆ. ಈಗಾಗಲೇ ಹಿಂದಿ ಭಾಷೆಯು ಕನ್ನಡವನ್ನು ಗದರಿಸುವಷ್ಟು ವ್ಯಾವಹಾರಿಕವಾಗಿ ಬೆಳೆಯುತ್ತಿದೆ. ಇಷ್ಟು ವರ್ಷಗಳಾದರೂ ರಾಷ್ಟ್ರ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕನ್ನಡ ಭಾಷೆಯನ್ನೂ ಕಡ್ಡಾಯ ಮಾಡುವಲ್ಲಿ ನಾವು ಸೋತಿದ್ದೇವೆ. ರಾಜ್ಯದಲ್ಲಿ ಕೆಲಸ ಮಾಡುತ್ತಿರುವ ಕೇಂದ್ರ ಸರ್ಕಾರದ ಕಚೇರಿ ಮತ್ತು ಕಾರ್ಖಾನೆಗಳಲ್ಲಿ ಕನ್ನಡೇತರರು ತುಂಬಿಕೊಳ್ಳುತ್ತಿರುವುದನ್ನು ತಡೆಯಲು ನಮಗೆ ಶಕ್ತಿ ಬರಲಿಲ್ಲ. ಸಂಸದರು ರಾಜ್ಯದ ಜನರ ಹಿತ ಕಾಯುವಲ್ಲಿ ವಿಫಲರಾಗಿದ್ದಾರೆ. ರಾಜಕಾರಣದ ಭ್ರಷ್ಟ ವ್ಯವಸ್ಥೆಯಲ್ಲಿ ಮತದಾರರೂ ಸೇರಿಕೊಂಡಿರುವ ಭಯ ಪ್ರಜಾಪ್ರಭುತ್ವವನ್ನು ಕಾಡುತ್ತಿದೆ. ರಾಷ್ಟ್ರಮಟ್ಟದ ಸಾಹಿತ್ಯ ವೇದಿಕೆಯಲ್ಲಿ ಇವೆಲ್ಲವೂ ಚರ್ಚೆಗೆ ಒಳಗಾಗಬೇಕು. ಊಟ, ಉಪಾಹಾರ, ಅಲಂಕಾರವೇ ಪ್ರಧಾನವಾಗದೆ, ಕನ್ನಡದ ವಾಸ್ತವಿಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ಶಕ್ತಿ ಸಮ್ಮೇಳನಕ್ಕೆ ಬರಲಿ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಕಪ್ಪು

ಸಚಿವ ಜಮೀರ್, ಕುಮಾರ್ ಸ್ವಾಮಿಯವರನ್ನು ‘ಕರಿಯ’ ಎಂದು ಕರೆದು ಜರಿದರಂತೆ!
ವಸ್ತುತಃ ಇಂತಹ ವರ್ಣಮೀಮಾಂಸೆ ಹಿಂಸೆ; ಸಾರ್ವಜನಿಕ ಜೀವನದ ಕಪ್ಪು (ಚುಕ್ಕೆ); ತಪ್ಪು!

ಸಿ.ಪಿ.ಕೆ., ಮೈಸೂರು

ಇಂಗ್ಲಿಷ್ ಬಿತ್ತಿ ಕನ್ನಡ ಬೆಳೆಯಲಾಗದು!

‘ಒಂದೊಳ್ಳೆ ನೌಕರಿ, ಸ್ಥಾನಮಾನ, ಗೌರವಕ್ಕೆಲ್ಲಾ ಇಂಗ್ಲಿಷೇ ಬುನಾದಿ ಎಂಬ ಮಿಥ್ಯೆಯೊಂದು ಗಾಢವಾಗಿ ಬೇರೂರಿದೆ’ ಎಂದು ಮುರಳೀಧರ ಕಿರಣಕೆರೆ ಅವರು ತಮ್ಮ ಲೇಖನದಲ್ಲಿ (ಸಂಗತ, ನ. 20) ಅಭಿಪ್ರಾಯಪಟ್ಟಿದ್ದಾರೆ. ನಮ್ಮಲ್ಲಿ ಬಹುತೇಕರ ಮೂಢನಂಬಿಕೆ ಇದೇ ಆಗಿದೆ. ಖಾಸಗಿ ಉದ್ಯೋಗಕ್ಷೇತ್ರವು ಇಂಗ್ಲಿಷಿನೊಂದಿಗೆ ಬೆಸೆದುಕೊಂಡಿದೆ. ಒಕ್ಕೂಟ ಭಾರತದ ಉದ್ಯೋಗ ನೀತಿಯು ಹಿಂದಿ, ಇಂಗ್ಲಿಷ್ ಭಾಷೆಗಳೊಂದಿಗೆ ಬೆಸೆದುಕೊಂಡಿದೆ. ಕರ್ನಾಟಕ ಸರ್ಕಾರದ ಉದ್ಯೋಗ ನೀತಿಯೂ ನಿಧಾನವಾಗಿ ಇಂಗ್ಲಿಷಿನತ್ತ ವಾಲುತ್ತಿದೆ.

ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷ ಗೊ.ರು.ಚನ್ನಬಸಪ್ಪ ಅವರು ಕನ್ನಡದ ಬೆಳವಣಿಗೆಗೆ ಬೇಕಾಗಿರುವ ಚಿಕಿತ್ಸಕ ಪರಿಹಾರಗಳ ಬಗ್ಗೆ ಆಲೋಚಿಸಬೇಕು. ಇಂಗ್ಲಿಷನ್ನು ಬಿತ್ತಿ ಕನ್ನಡವನ್ನು ಬೆಳೆಯಲಾಗದು. ಪ್ರಸ್ತುತ ವ್ಯವಸ್ಥೆ ಬಿತ್ತುತ್ತಿರುವುದು ಇಂಗ್ಲಿಷ್ ಭಾಷೆಯನ್ನೇ, ಬಯಸುತ್ತಿರುವುದು ಕನ್ನಡ ಬೆಳೆಯನ್ನು!

ಗಿರೀಶ್ ಮತ್ತೇರ, ಹೊದಿಗೆರೆ, ಚನ್ನಗಿರಿ

ಪಡಿತರ ಚೀಟಿ ಪರಿಷ್ಕರಣೆ: ವಿರೋಧ ಸಲ್ಲದು

ರಾಜ್ಯದಲ್ಲಿ ಅರ್ಹರಲ್ಲದವರ ಬಿಪಿಎಲ್ ಪಡಿತರ ಚೀಟಿಗಳನ್ನು ರದ್ದುಗೊಳಿಸಿ, ಅವುಗಳನ್ನು ಎಪಿಎಲ್ ಪಡಿತರ ಚೀಟಿಗಳನ್ನಾಗಿ ಪರಿವರ್ತಿಸುವ ನಿರ್ಧಾರ ಸೂಕ್ತವೂ ಸಮಂಜಸವೂ ಆಗಿದೆ. ಮುಖ್ಯಮಂತ್ರಿಯವರು ಇದಕ್ಕೆ ಸರಿಯಾದ ಸ್ಪಷ್ಟನೆ ನೀಡಿದ್ದಾರೆ. ಆದಾಯ ತೆರಿಗೆ ಪಾವತಿದಾರರು ಮತ್ತು ಸರ್ಕಾರಿ ನೌಕರರ ಹೆಸರಿನಲ್ಲಿರುವ ಬಿಪಿಎಲ್ ರೇಷನ್ ಕಾರ್ಡ್‌ಗಳನ್ನಷ್ಟೇ ರದ್ದುಪಡಿಸಬೇಕೆನ್ನುವ ಈ ನಿರ್ಧಾರಕ್ಕೆ ವಿರೋಧ ಸಲ್ಲದು. ವೋಟ್ ಬ್ಯಾಂಕ್ ದೃಷ್ಟಿಯಿಂದ ವಿರೋಧ ಪಕ್ಷಗಳೇನಾದರೂ ಈ ನಿರ್ಧಾರದ ವಿರುದ್ಧ ಪ್ರತಿಭಟಿಸಿದರೆ, ಅದು ಠುಸ್ ಪಟಾಕಿ ಆಗುವುದರಲ್ಲಿ ಎರಡು ಮಾತಿಲ್ಲ.

ನರೇಂದ್ರ ಘೋರ್ಪಡೆ, ಭದ್ರಾವತಿ

ಭರವಸೆ ಹುಟ್ಟಿಸುವುದೇ ಚುನಾವಣಾ ಸಮೀಕ್ಷೆ?

ಚುನಾವಣೆಗಳಲ್ಲಿ ಮತದಾನ ಮುಗಿದ ಮೇಲೆ ವಿವಿಧ ಸಂಸ್ಥೆಗಳು ತಾವು ಅದುವರೆಗೂ ಕಲೆಹಾಕಿದ ಮಾಹಿತಿಯ ಆಧಾರದಲ್ಲಿ, ಯಾವ ಪಕ್ಷ ಅಥವಾ ಪಕ್ಷಗಳ ಮೈತ್ರಿಕೂಟಕ್ಕೆ ಕನಿಷ್ಠ, ಗರಿಷ್ಠ ಸ್ಥಾನಗಳು ಲಭ್ಯವಾಗುತ್ತವೆ ಮತ್ತು ಯಾವುದು ಅಧಿಕಾರದ ಗದ್ದುಗೆಯನ್ನು ತನ್ನದಾಗಿ ಮಾಡಿಕೊಳ್ಳುವ ಸ್ಥಿತಿಯಲ್ಲಿದೆ ಎಂಬ ಭವಿಷ್ಯವನ್ನು ಜನರ ಮುಂದಿಡುತ್ತವೆ. ಇದೀಗ ಮಹಾರಾಷ್ಟ್ರ ಮತ್ತು ಜಾರ್ಖಂಡ್‌ನಲ್ಲಿ ನಡೆದ ವಿಧಾನಸಭಾ ಚುನಾವಣೆ ಬಗ್ಗೆ ಮತಗಟ್ಟೆ ಸಮೀಕ್ಷೆಗಳು ಪ್ರಕಟವಾಗಿವೆ. ವಿವಿಧ ಸಂಸ್ಥೆಗಳು ಕೊಟ್ಟಿರುವ ಸಂಖ್ಯೆಗಳನ್ನು ಸೂಕ್ಷ್ಮವಾಗಿ ಪರಿಗಣಿಸಿದಾಗ, ಅಲ್ಲಿರುವ ಅಂದಾಜುಗಳಲ್ಲಿ ಕಂಡುಬರುವ ವ್ಯತ್ಯಾಸ ಹುಬ್ಬೇರಿಸುವಂತಿದೆ. ಎರಡು ಸಂಸ್ಥೆಗಳು ಒಂದು ಮೈತ್ರಿಕೂಟದ ಬಗ್ಗೆ ಕೊಟ್ಟಿರುವ ಕನಿಷ್ಠ– ಗರಿಷ್ಠ ಸಂಖ್ಯೆಗಳಲ್ಲಿ 25ರಿಂದ 38 ಸ್ಥಾನಗಳವರೆಗೂ ಅಂತರ ಕಂಡುಬರುತ್ತದೆ. ಇನ್ನು ಕೆಲವು ಸಂಸ್ಥೆಗಳ ಅಂದಾಜು ಹೆಚ್ಚು ಕಡಿಮೆ ಹೊಂದಿಕೆಯಾಗುತ್ತದೆ.

ಮಹಾರಾಷ್ಟ್ರದ ಎಲ್ಲಾ 288 ಕ್ಷೇತ್ರಗಳಲ್ಲಿ ಅಥವಾ ಶೇಕಡ 75ರಷ್ಟು ಕ್ಷೇತ್ರಗಳಲ್ಲಿ, ವಿವಿಧ ಸಂಸ್ಥೆಗಳು ಪ್ರತ್ಯೇಕವಾಗಿ ನಡೆಸಿದ ಸಮೀಕ್ಷೆಯಲ್ಲಿ ಒಂದು ಪಕ್ಷದ ಅಭ್ಯರ್ಥಿಯ ಗೆಲುವು ಅಥವಾ ಸೋಲು ಇಂಥಿಂಥ ಕ್ಷೇತ್ರಗಳಲ್ಲಿ ಕಂಡುಬರುತ್ತದೆ ಎಂಬ ನಿರ್ದಿಷ್ಟ ತೀರ್ಮಾನಕ್ಕೆ ಬಹುತೇಕ ಎಲ್ಲಾ ಸಂಸ್ಥೆಗಳು ಬಂದಿವೆ ಎನ್ನುವುದಾದರೆ, ಸಮೀಕ್ಷೆಗಳ ಬಗ್ಗೆ ಭರವಸೆ ಹುಟ್ಟುತ್ತದೆ. ಲೋಕಸಭೆಗೆ ನಡೆದ ಚುನಾವಣೆಯಲ್ಲಿ ಸಮೀಕ್ಷೆಗಳು ತಲೆಕೆಳಗಾಗಿದ್ದುದು ನಮಗೆ ನೆನಪಿದೆ ಅಲ್ಲವೇ? ಎದ್ದೋಗೋ ಮಾತು ಬಿದ್ದೋಗೋ ರೀತಿಯಲ್ಲಿ ಅನ್ನುವಂತಾದರೆ, ಸಮೀಕ್ಷೆಗಳು ಏನು ಸಾಧಿಸಿದ ಹಾಗಾಯಿತು?

ಸಾಮಗ ದತ್ತಾತ್ರಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅಮೆರಿಕದ ಕಟಕಟೆಯಲ್ಲಿ ಅದಾನಿ

ಭಾರತದ ಸರ್ಕಾರಿ ಸ್ವಾಮ್ಯದ ವಿದ್ಯುತ್ ಸರಬರಾಜು ಕಂಪನಿಗಳಿಗೆ ಸೌರ ವಿದ್ಯುತ್ ಪೂರೈಸುವ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ಅಮೆರಿಕದ ಬ್ಯಾಂಕ್ ಹಾಗೂ ಅಂತರರಾಷ್ಟ್ರೀಯ ಸಂಸ್ಥೆಗಳಿಂದ ಅದಾನಿ ಸಮೂಹದ ಅದಾನಿ ಗ್ರೀನ್ ಎನರ್ಜಿ ಲಿ. 2021–2024ರ ಮಧ್ಯೆ 300 ಕೋಟಿ ಡಾಲರ್‌ಗೂ (₹25 ಸಾವಿರ ಕೋಟಿಗೂ) ಹೆಚ್ಚು ಬಂಡವಾಳ ಸಂಗ್ರಹಿಸಲಾಗಿದ್ದು, ಇದರಲ್ಲಿ 25 ಕೋಟಿ ಡಾಲರ್ (₹2,100 ಕೋಟಿ) ಮೊತ್ತವನ್ನು ಭಾರತದ ಸರ್ಕಾರಿ ಅಧಿಕಾರಿಗಳಿಗೆ ಲಂಚ ನೀಡಿದ ಅಥವಾ ನೀಡುವ ಉದ್ದೇಶಕ್ಕೆ ಬಳಸಿಕೊಳ್ಳಲಾಗಿದೆ ಎಂದು ಅಮೆರಿಕದ ಬ್ರೂಕ್ಲಿನ್‌ನಲ್ಲಿರುವ ನ್ಯೂಯಾರ್ಕ್‌ನ ಪೂರ್ವ ಜಿಲ್ಲೆಯ ಜಿಲ್ಲಾ ನ್ಯಾಯಾಲಯದಲ್ಲಿ ಸಲ್ಲಿಸಲಾದ ಆರೋಪಪಟ್ಟಿಯಲ್ಲಿ ಹೇಳಲಾಗಿದೆ.

ಅದಾನಿ ಸಮೂಹದ ಮುಖ್ಯಸ್ಥ ಗೌತಮ್ ಅದಾನಿ, ಅವರ ಅಣ್ಣನ ಮಗ ಸಾಗರ್ ಅದಾನಿ ಹಾಗೂ ಇತರ ಆರು ಜನರ ವಿರುದ್ಧ ನ್ಯಾಯಾಲಯದಲ್ಲಿ ಆರೋಪ ಹೊರಿಸಲಾಗಿದೆ. ಪ್ರಕರಣದ ತನಿಖೆಗೆ ಅಡ್ಡಿಪಡಿಸಲಾಗಿದೆ ಎಂದೂ ದೂರಲಾಗಿದೆ. ಗೌತಮ್ ಅದಾನಿ ಮತ್ತು ಸಾಗರ್ ಅದಾನಿ ಅವರ ಬಂಧನಕ್ಕೆ ವಾರಂಟ್ ಕೂಡ ಹೊರಡಿಸಲಾಗಿದೆ.

ಅದಾನಿ ಸಮೂಹ, ಅದರ ಭಾಗವಾಗಿರುವ ಗ್ರೀನ್ ಎನರ್ಜಿ ಕಂಪನಿ, ಅಮೆರಿಕದ ಷೇರುಪೇಟೆಯಲ್ಲಿ ನೋಂದಾಯಿಸಿದ್ದ ಭಾರತ ಮೂಲದ ಅಜ್ಯೂರ್ ಪವರ್ ಗ್ಲೋಬಲ್ ಲಿಮಿಟೆಡ್, ಈ ಕಂಪನಿಯ ದೊಡ್ಡ ಷೇರು ಪಾಲುದಾರನಾಗಿರುವ ಕೆನಡಾದ ಹೂಡಿಕೆದಾರ ಸಂಸ್ಥೆ ಈ ಪ್ರಕರಣದಲ್ಲಿ ಭಾಗಿಯಾಗಿವೆ ಎಂದು ಗ್ರ್ಯಾಂಡ್ ಜ್ಯೂರಿ ಹೇಳಿದೆ. ಈ ಯೋಜನೆಯನ್ನು ಅದು 'ಭ್ರಷ್ಟ ಸೌರ ವಿದ್ಯುತ್ ಯೋಜನೆ' ಎಂದು ಕರೆದಿದೆ.

ನ್ಯಾಯಾಲಯಕ್ಕೆ ಸಲ್ಲಿಸಿರುವ ಆರೋಪ ಪಟ್ಟಿಯಲ್ಲಿರುವ ಪ್ರಮುಖ ಅಂಶಗಳನ್ನು ಇಲ್ಲಿ ನೀಡಲಾಗಿದೆ



ಆರೋಪಿಗಳು ಯಾರ್‍ಯಾರು?

1. ಗೌತಮ್ ಅದಾನಿ: ಅದಾನಿ ಸಮೂಹದ ಸಂಸ್ಥಾಪಕ
2. ಸಾಗರ್ ಆರ್.ಅದಾನಿ: ಅದಾನಿ ಗ್ರೀನ್ ಎನರ್ಜಿ ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕ
3. ವಿನೀತ್ ಜೈನ್: 2020ರ ಜುಲೈನಿಂದ ಮೇ 2023ರವರೆಗೆ ಅದಾನಿ ಗ್ರೀನ್ ಎನರ್ಜಿಯ ಮುಖ್ಯ ಕಾರ್ಯನಿರ್ವಾಹಕ ನಿರ್ದೇಶಕ. ಪ್ರಸ್ತುತ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ
4. ರಂಜಿತ್ ಗುಪ್ತಾ: 2019ರ ಜುಲೈನಿಂದ 2022ರ ಏಪ್ರಿಲ್‌ವರೆಗೆ ಅಮೆರಿಕದ ಅಜ್ಯೂರ್ ಪವರ್ ಕಂಪನಿಯ ಸಿಇಒ ಮತ್ತು ಭಾರತದಲ್ಲಿರುವ ಅದರ ಅಂಗಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾಗಿದ್ದರು
5. ಸಿರಿಲ್ ಕ್ಯಾಬೆನ್ಸ್: ಆಸ್ಟ್ರೇಲಿಯ ಮತ್ತು ಫ್ರಾನ್ಸ್ ಪೌರತ್ವ ಹೊಂದಿರುವ ಇವರು ಸಿಂಗಪುರ ವಾಸಿ. ಕೆನಡಾದ ಹೂಡಿಕೆ ಸಂಸ್ಥೆಗೆ ಸಂಬಂಧಿಸಿದ ಕಂಪನಿಯೊಂದರಲ್ಲಿ 2016ರ ಫೆಬ್ರುವರಿಯಿಂದ 2023ರ ಅಕ್ಟೋಬರ್‌ವರೆಗೆ ಉದ್ಯೋಗಿಯಾಗಿದ್ದರು. 2017ರಿಂದ ಅಕ್ಟೋಬರ್ 2023ರವರೆಗೆ ಅಜ್ಯೂರ್ ಪವರ್ ಹಾಗೂ ಅದರ ಭಾರತದ ಅಂಗ ಸಂಸ್ಥೆಯ ಕಾರ್ಯನಿರ್ವಾಹಕೇತರ ನಿರ್ದೇಶಕ ಆಗಿದ್ದರು
6. ಸೌರಭ್ ಅಗರ್ವಾಲ್: ಕೆನಡಾದ ಹೂಡಿಕೆ ಸಂಸ್ಥೆಗೆ ಸಂಬಂಧಿಸಿದ ಕಂಪನಿಯೊಂದರಲ್ಲಿ 2017ರ ಮೇನಿಂದ 2023ರ ಜುಲೈ ಅವಧಿಯಲ್ಲಿ ಉದ್ಯೋಗಿದ್ದರು. ಸಿರಿಲ್ ಕ್ಯಾಬೆನ್ಸ್ ಅವರ ಅಧೀನದಲ್ಲಿ ಕೆಲಸ ಮಾಡುತ್ತಿದ್ದರು
7. ದೀಪಕ್ ಮಲ್ಹೋತ್ರಾ: ಕೆನಡಾದ ಹೂಡಿಕೆ ಸಂಸ್ಥೆಗೆ ಸಂಬಂಧಿಸಿದ ಕಂಪನಿಯೊಂದರಲ್ಲಿ 2018ರ ಸೆಪ್ಟೆಂಬರ್‌ನಿಂದ 2023ರ ಅಕ್ಟೋಬರ್‌ವರೆಗೆ ಉದ್ಯೋಗಿಯಾಗಿದ್ದರು. 2019ರ ನವೆಂಬರ್‌ನಿಂದ 2023ರ ಅಕ್ಟೋಬರ್‌ವರೆಗೆ ಅಜ್ಯೂರ್ ಪವರ್ ಮತ್ತು ಅದರ ಅಂಗ ಸಂಸ್ಥೆಯ ಕಾರ್ಯನಿರ್ವಾಹಕೇತರ ನಿರ್ದೇಶಕ ಆಗಿದ್ದರು
8. ರೂಪೇಶ್ ಅಗರ್ವಾಲ್: ಅಜ್ಯೂರ್ ಪವರ್ ಮತ್ತು ಅದರ ಅಂಗಸಂಸ್ಥೆಯ ಕನ್ಸಲ್ಟೆಂಟ್ ಆಗಿ 2022ರ ವರ್ಷಾರಂಭದಿಂದ ಜುಲೈವರೆಗೆ ಕೆಲಸ ಮಾಡಿದ್ದರು. 2022ರ ಜುಲೈ ಮತ್ತು ಆಗಸ್ಟ್‌ನಲ್ಲಿ ಅಜ್ಯೂರ್ ಪವರ್‌ನ ಮುಖ್ಯ ಕಾರ್ಯತಂತ್ರ ಮತ್ತು ವಾಣಿಜ್ಯ ಅಧಿಕಾರಿಯಾಗಿದ್ದರು. 2022ರ ಆಗಸ್ಟ್‌ನಿಂದ 2023ರ ಜುಲೈವರೆಗೆ ಕಂಪನಿಯ ಪ್ರಭಾರ ಸಿಇಒ ಆಗಿದ್ದರು

- ಎಂಟು ಆರೋಪಿಗಳೊಂದಿಗೆ ಅಜ್ಯೂರ್ ಪವರ್ ಕಂಪನಿಯಲ್ಲಿ ಈ ಹಿಂದೆ ಕೆಲಸ ಮಾಡಿದ್ದ ಇನ್ನಿಬ್ಬರನ್ನು ಸಹ ಪಿತೂರಿಗಾರರು ಎಂದು ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ
- ಆಂಧ್ರಪ್ರದೇಶದ ಉನ್ನತ ಮಟ್ಟದ ಅಧಿಕಾರಿಯೊಬ್ಬರನ್ನು ವಿದೇಶಿ ಅಧಿಕಾರಿ ಎಂದು ಪ್ರಸ್ತಾಪಿಸಲಾಗಿದೆ
- ಕೇಂದ್ರ ಸರ್ಕಾರದ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯದ ಅಧೀನದಲ್ಲಿ ಬರುವ ಭಾರತೀಯ ಸೌರ ಶಕ್ತಿ ನಿಗಮವನ್ನು (ದಿ ಸೋಲಾರ್ ಎನರ್ಜಿ ಕಾರ್ಪೊರೇಷನ್ ಆಫ್ ಇಂಡಿಯಾ–ಎಸ್‌ಇಸಿಐ) ಮತ್ತು ಅದರ ಅಧಿಕಾರಿಗಳ ಬಗ್ಗೆಯೂ ಆರೋಪ ಪಟ್ಟಿಯಲ್ಲಿ ಉಲ್ಲೇಖ ಇದೆ. ಈ ನಿಗಮವು ಖಾಸಗಿ ಕಂಪನಿಗಳಿಂದ ವಿದ್ಯುತ್ ಖರೀದಿ ಮಾಡುತ್ತದೆ. ಅದನ್ನು ರಾಜ್ಯಗಳ ವಿದ್ಯುತ್ ಪೂರೈಸುವ ನಿಗಮ/ಕಂಪನಿಗಳಿಗೆ ಮಾರಾಟ ಮಾಡುತ್ತದೆ

ಆರೋಪ ಪಟ್ಟಿಯಲ್ಲಿನ ಪ್ರಮುಖ ಅಂಶಗಳು

- ಸೌರ ವಿದ್ಯುತ್ ಪೂರೈಕೆ ಒಪ್ಪಂದದಿಂದ ಅದಾನಿ ಗ್ರೀನ್ ಎನರ್ಜಿ ಕಂಪನಿಗೆ 20 ವರ್ಷಗಳಲ್ಲಿ ₹16,800 ಕೋಟಿ (200 ಕೋಟಿ ಡಾಲರ್) ಲಾಭವಾಗಲಿದೆ ಎಂದು ಅಂದಾಜಿಸಲಾಗಿತ್ತು
- ಭಾರತೀಯ ಸೌರ ಶಕ್ತಿ ನಿಗಮವು 12 ಗಿಗಾ ವಾಟ್ ಸೌರ ಶಕ್ತಿಯನ್ನು ಖಾಸಗಿ ಕಂಪನಿಗಳಿಂದ ಖರೀದಿಸಿ, ರಾಜ್ಯಗಳಿಗೆ ಮಾರಾಟ ಮಾಡುವ ಯೋಜನೆ ಮಾಡಿಕೊಂಡಿತ್ತು. ಆದರೆ, ಖಾಸಗಿ ಕಂಪನಿಗಳು ಪ್ರತಿ ಯೂನಿಟ್‌ಗೆ ಹೆಚ್ಚಿನ ದರ ಪ್ರಸ್ತಾಪಿಸಿದ್ದರಿಂದ ಯಾವ ರಾಜ್ಯವೂ ಇದರ ಬಗ್ಗೆ ಆಸಕ್ತಿ ತೋರಿಸಲಿಲ್ಲ. ಹೀಗಾಗಿ, ಖಾಸಗಿ ಕಂಪನಿಗಳೊಂದಿಗೆ ಖರೀದಿ ಒಪ್ಪಂದಕ್ಕೆ ನಿಗಮ ಮನಸ್ಸು ಮಾಡಲಿಲ್ಲ.
- 2020ರ ಹೊತ್ತಿಗೆ ಗೌತಮ್ ಅದಾನಿ, ಸಾಗರ್ ಅದಾನಿ, ವಿನೀತ್ ಜೈನ್, ರಂಜಿತ್ ಗುಪ್ತಾ ಹಾಗೂ ಎರಡನೇ ಪಿತೂರಿದಾರ ಸೇರಿ ರಾಜ್ಯಗಳ ವಿದ್ಯುತ್ ಸರಬರಾಜು ಕಂಪನಿಗಳು ಸೌರಶಕ್ತಿ ನಿಗಮದೊಂದಿಗೆ ಒಪ್ಪಂದ ಮಾಡಿಕೊಳ್ಳುವ ಸಲುವಾಗಿ ಸರ್ಕಾರಿ ಅಧಿಕಾರಿಗಳಿಗೆ ಲಂಚದ ಆಮಿಷ ಒಡ್ಡುವ ಯೋಜನೆಯನ್ನು ರೂಪಿಸಿದರು. ಲಂಚದ ಒಟ್ಟು ಮೊತ್ತದಲ್ಲಿ ಸ್ವಲ್ಪ ಭಾಗವನ್ನು ಅಜ್ಯೂರ್ ಪವರ್ ಕಂಪನಿ ನೀಡಲು ಒಪ್ಪಿಕೊಂಡಿತು
- ಗೌತಮ್ ಅದಾನಿ ಸೇರಿದಂತೆ ಇತರ ಆರೋಪಿಗಳು ಭಾರತದ ಸರ್ಕಾರಿ ಅಧಿಕಾರಿಗಳಿಗೆ ಒಟ್ಟು ₹2,029 ಕೋಟಿ ಲಂಚ ನೀಡುವ ಆಮಿಷ ಒಡ್ಡಿದ್ದರು
- ಲಂಚದ ಆಮಿಷ ಒಡ್ಡಿದ ನಂತರ ಒಡಿಶಾ, ಜಮ್ಮು ಮತ್ತು ಕಾಶ್ಮೀರ, ತಮಿಳುನಾಡು, ಛತ್ತೀಸಗಡ ಮತ್ತು ಆಂಧ್ರ ಪ್ರದೇಶ ಸರ್ಕಾರಗಳು ವಿದ್ಯುತ್ ಖರೀದಿಗಾಗಿ ಭಾರತೀಯ ಸೌರಶಕ್ತಿ ನಿಗಮದೊಂದಿಗೆ ಒಪ್ಪಂದ ಮಾಡಿಕೊಳ್ಳಲು ಮುಂದೆ ಬಂದವು
- ಆಂಧ್ರ ಪ್ರದೇಶದ ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ 7000 ಮೆಗಾ ವಾಟ್ ಸೌರ ವಿದ್ಯುತ್ ಪೂರೈಕೆ ಒಪ್ಪಂದವನ್ನು ಕುದುರಿಸುವುದಕ್ಕಾಗಿ ಗೌತಮ್ ಅದಾನಿ ಅವರು ಮೂರು ಬಾರಿ (2021 ಆಗಸ್ಟ್ 7, ಸೆ.12 ಮತ್ತು ನ.20) ಖುದ್ದಾಗಿ ಆಂಧ್ರ ಪ್ರದೇಶದ ವಿದ್ಯುತ್ ಸರಬರಾಜು ಕಂಪನಿಗೆ ಸಂಬಂಧಿಸಿದ ಉನ್ನತ ಅಧಿಕಾರಿಯನ್ನು ಭೇಟಿ ಮಾಡಿದ್ದರು. ₹1,750 ಕೋಟಿಯನ್ನು ಲಂಚವಾಗಿ ನೀಡುವ ಭರವಸೆ ನೀಡಲಾಗಿತ್ತು
- ರಾಜ್ಯಗಳೊಂದಿಗೆ ಒಪ್ಪಂದ ಮಾಡಿಕೊಂಡ ಕಾರಣದಿಂದ ನಿಗಮವು ಅದಾನಿ ಗ್ರೀನ್ ಎನರ್ಜಿ ಮತ್ತು ಅದರ ಅಂಗಸಂಸ್ಥೆಗಳು ಮತ್ತು ಅಮೆರಿಕದ ಅಜ್ಯೂರ್ ಪವರ್ ಕಂಪನಿಯೊಂದಿಗೆ ಖರೀದಿ ಒಪ್ಪಂದಕ್ಕೆ ಮುಂದಾಗಿತ್ತು. 2021ರ ಅಕ್ಟೋಬರ್ ಮತ್ತು 2022ರ ಫೆಬ್ರುವರಿ ನಡುವೆ ವಿದ್ಯುತ್ ಖರೀದಿ ಒಪ್ಪಂದ ನಡೆದಿತ್ತು
- ಆಂಧ್ರ ಪ್ರದೇಶವು ಸೌರಶಕ್ತಿ ನಿಗಮದೊಂದಿಗೆ 2021ರ ಡಿ.1ರಂದು 7000 ಮೆಗಾ ವಾಟ್ ವಿದ್ಯುತ್ ಖರೀದಿ ಒಪ್ಪಂದ ಮಾಡಿಕೊಂಡಿತ್ತು
- ಛತ್ತೀಸಗಡ, ತಮಿಳುನಾಡು, ಒಡಿಶಾ ಮತ್ತು ಜಮ್ಮು ಕಾಶ್ಮೀರಕ್ಕೆ ಒಟ್ಟಾಗಿ 650 ಮೆಗಾ ವಾಟ್ ಮತ್ತು ಆಂಧ್ರಪ್ರದೇಶಕ್ಕೆ 2.3 ಗಿಗಾವಾಟ್‌ನಷ್ಟು ವಿದ್ಯುತ್ ಪೂರೈಸುವುದಕ್ಕಾಗಿ ಸೌರಶಕ್ತಿ ನಿಗಮ ಮತ್ತು ಅಜ್ಯೂರ್ ಪವರ್ ಕಂಪನಿಯೊಂದಿಗೆ ವಿದ್ಯುತ್ ಖರೀದಿ ಒಪ್ಪಂದ ನಡೆದಿತ್ತು. ಅದೇ ರೀತಿ ಅದಾನಿ ಗ್ರೀನ್ ಎನರ್ಜಿ ಮತ್ತು ಅದರ ಅಂಗ ಸಂಸ್ಥೆಗಳೂ ನಿಗಮದೊಂದಿಗೆ ಈ ರಾಜ್ಯಗಳಿಗೆ ವಿದ್ಯುತ್ ಪೂರೈಸುವ ಸಂಬಂಧ ಪ್ರತ್ಯೇಕ ಒಪ್ಪಂದ ಮಾಡಿಕೊಂಡಿದ್ದವು
- ಅಧಿಕಾರಿಗಳಿಗೆ ಭರವಸೆ ನೀಡಿದ್ದ ಲಂಚದ ವಿವರಗಳ ಮೇಲ್ವಿಚಾರಣೆ ನಡೆಸಲು ಸಾಗರ್ ಅದಾನಿ ಅವರು ತಮ್ಮ ಮೊಬೈಲ್ ಅನ್ನು ಬಳಸಿದ್ದರು
- 2023ರ ಮಾರ್ಚ್‌ನಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಗರ್ ಅದಾನಿ ಅವರ ಮೊಬೈಲ್ ಅನ್ನು ಎಫ್‌ಬಿಐ ಅಧಿಕಾರಿಗಳು ಜಪ್ತಿ ಮಾಡಿದ್ದರು. ವಿನೀತ್ ಜೈನ್ ಅವರು ಲಂಚದ ವಿವರಗಳುಳ್ಳ ದಾಖಲೆಯ ಫೋಟೊ ತೆಗೆಯಲು ತಮ್ಮ ಮೊಬೈಲ್ ಬಳಸಿದ್ದರು. ಲಂಚದ ವಿವರಗಳನ್ನು ವಿಶ್ಲೇಷಣೆಗೆ ಒಳಪಡಿಸಲು ರೂಪೇಶ್ ಅಗರ್ವಾಲ್ ಅವರು ಪವರ್‌ಪಾಯಿಂಟ್, ಎಕ್ಸೆಲ್ ದಾಖಲೆ ಸಿದ್ಧಪಡಿಸಿ ಹಂಚಿದ್ದರು
- ತನಿಖೆ ಆರಂಭವಾಗಿರುವುದು ತಿಳಿಯುತ್ತಿದ್ದಂತೆಯೇ ಸಿರಿಲ್ ಕ್ಯಾಬೆನ್ಸ್, ಸೌರಭ್ ಅಗರ್ವಾಲ್, ದೀಪಕ್ ಮಲ್ಹೋತ್ರಾ, ರೂಪೇಶ್ ಅಗರ್ವಾಲ್ ಅವರು ತನಿಖೆಗೆ ಅಡ್ಡಿಪಡಿಸಿದ್ದರು

ವಾರಂಟ್: ಮುಂದೇನು?

ಇಂಧನದಿಂದ ಬಂದರಿನವರೆಗೆ 20ಕ್ಕೂ ಹೆಚ್ಚು ಉದ್ದಿಮೆಗಳನ್ನು ನಡೆಸುತ್ತಿರುವ 62 ವರ್ಷದ ಗೌತಮ್ ಅದಾನಿ, ತಮ್ಮ ಜೀವನದಲ್ಲಿ ಹಲವು ಬಾರಿ ಸಂಕಷ್ಟ ಎದುರಿಸಿದ್ದಾರೆ. 1998ರ ಜನವರಿಯಲ್ಲಿ ಅವರನ್ನು ಹಣಕ್ಕಾಗಿ ಅಪಹರಿಸಲಾಗಿತ್ತು. 2008ರ ನವೆಂಬರ್ 26ರಂದು ಮುಂಬೈನ ತಾಜ್ ಹೋಟೆಲ್ ಮೇಲೆ ಭಯೋತ್ಪಾದಕರು ದಾಳಿ ಮಾಡಿದಾಗ, ಹೋಟೆಲ್ ಒಳಗೆ ಅದಾನಿಯೂ ಇದ್ದರು. ಎರಡೂ ಸಂದರ್ಭಗಳಲ್ಲಿ ಅದಾನಿ ಸುರಕ್ಷಿತವಾಗಿ ಪಾರಾಗಿದ್ದರು.

ಆದರೆ, ಈ ಬಾರಿ ಅವರ ವಿರುದ್ಧ ಕೇಳಿಬಂದಿರುವ ಆರೋಪ ಸಣ್ಣದೇನಲ್ಲ. ವಿದೇಶಿ ನ್ಯಾಯಾಲಯದಿಂದ ಭಾರತದ ದೊಡ್ಡ ಉದ್ಯಮಿಯೊಬ್ಬರ ವಿರುದ್ಧ ಗಂಭೀರ ಆರೋಪ ಕೇಳಿಬಂದಿರುವುದು ಇದೇ ಮೊದಲು. ಜಾಗತಿಕ ಮಟ್ಟದಲ್ಲಿ ಉದ್ಯಮ ವಿಸ್ತರಣೆಯ ಅವರ ಕನಸಿಗೆ ಇದರಿಂದ ತಕ್ಷಣಕ್ಕಂತೂ ಪೆಟ್ಟು ಬೀಳುವ ಸಾಧ್ಯತೆ ಇದೆ. ವಿಚಾರಣೆಯ ಭಯದಿಂದ ಅವರು ಅಮೆರಿಕ ಸೇರಿದಂತೆ ಹಲವು ದೇಶಗಳಿಗೆ ಪ್ರಯಾಣ ಬೆಳೆಸುವುದು ಕಷ್ಟವಾಗಬಹುದು. ವ್ಯಾವಹಾರಿಕ ಲಾಭ–ನಷ್ಟ ಒಂದೆಡೆ ಇದ್ದರೆ, ಮೂರೂವರೆ ದಶಕದಲ್ಲಿ ಅವರು ಗಳಿಸಿದ್ದ ಹೆಸರಿಗೆ, ವಿಶ್ವಾಸಾರ್ಹತೆಗೆ ಕಂಟಕ ಎದುರಾಗಿದೆ. ತಾವು ಈ ಪ್ರಕರಣದಲ್ಲಿ ತಪ್ಪಿತಸ್ಥರಲ್ಲ ಎಂದು ಸಾಬೀತುಪಡಿಸುವ ಸವಾಲು ಅವರ ಮುಂದಿದೆ. ಈ ದಿಸೆಯಲ್ಲಿ ಸಾಧ್ಯವಿರುವ ಎಲ್ಲ ಕಾನೂನು ಕ್ರಮಗಳನ್ನು ಪರಿಶೀಲಿಸುತ್ತಿರುವುದಾಗಿ ಅದಾನಿ ಸಮೂಹ ತಿಳಿಸಿದೆ.

ಅದಾನಿ ವಿರುದ್ಧ ಅಮೆರಿಕದ ನ್ಯಾಯಾಲಯದಿಂದ ಅಧಿಕೃತ ಲಿಖಿತ ಆರೋಪ ಪ್ರಕಟವಾಗಿದೆ. ಅದಾನಿ ಮತ್ತಿತರರ ಬಂಧನಕ್ಕೆ ಅಮೆರಿಕ ನ್ಯಾಯಾಲಯ ವಾರಂಟ್ ಹೊರಡಿಸಿರುವುದರಿಂದ, ಅದರ ಜಾರಿಗಾಗಿ ಭಾರತೀಯ ರಾಯಭಾರ ಕಚೇರಿಯ ಮೂಲಕ ಕೇಂದ್ರ ಸರ್ಕಾರವನ್ನು ಸಂಪರ್ಕಿಸಬೇಕಾಗುತ್ತದೆ. ಆರೋಪಗಳನ್ನು ರದ್ದುಪಡಿಸಲು ಅದಾನಿ ಸಮೂಹ ಮನವಿ ಮಾಡಬಹುದಾಗಿದೆ. ಒಂದು ವೇಳೆ ಪ್ರಕರಣ ಮುಂದುವರಿದರೆ, ಅಮೆರಿಕದ ಪೊಲೀಸರು ಈ ಬಗ್ಗೆ ತನಿಖೆ ನಡೆಸಿ, ಸಾಕ್ಷ್ಯಾಧಾರ ಸಹಿತ ಗ್ರ್ಯಾಂಡ್ ಜ್ಯೂರಿಗೆ (ನ್ಯಾಯಾಧೀಶರ ಸಮಿತಿ) ವರದಿ ಸಲ್ಲಿಸುತ್ತಾರೆ. ನ್ಯಾಯಾಧೀಶರು ಆರೋಪ ನಿಗದಿಪಡಿಸುವುದಲ್ಲದೇ, ಆರೋಪಿಗಳಿಗೆ ಜಾಮೀನು ನೀಡಬೇಕೋ ಬೇಡವೋ ಎನ್ನುವುದನ್ನು ತೀರ್ಮಾನಿಸುತ್ತಾರೆ. ಆರೋಪಿಗಳ ತಪ್ಪೊಪ್ಪಿಗೆ ಅಥವಾ ತಪ್ಪು ನಿರಾಕರಣೆ ಆಧಾರದ ಮೇಲೆ ನ್ಯಾಯಾಲಯವು ವಿಚಾರಣಾ ಪ್ರಕ್ರಿಯೆ ನಡೆಸುತ್ತದೆ.

ಆರೋಪಕ್ಕೆ ಆಂಧ್ರದ ನಂಟು

ಅದಾನಿ ಸಮೂಹದ ವಿರುದ್ಧ ಅಮೆರಿಕದಲ್ಲಿ ಮಾಡಿರುವ ಆರೋಪಗಳಿಗೆ ಸಂಬಂಧಿಸಿದ ವಿವಾದದ ಕೇಂದ್ರಬಿಂದುವಿನಂತೆ ಇರುವುದು ಆಂಧ್ರಪ್ರದೇಶ ಸರ್ಕಾರವು ಭಾರತೀಯ ಸೌರಶಕ್ತಿ ನಿಗಮದಿಂದ (ಎಸ್‌ಇಸಿಐ) ಮಾಡಿದ ವಿದ್ಯುತ್ ಖರೀದಿ.

ಆಂಧ್ರಪ್ರದೇಶದ ವಿದ್ಯುತ್ ಸರಬರಾಜು ಕಂಪನಿಗಳು (ಡಿಸ್ಕಾಂ) 2021ರ ನವೆಂಬರ್‌ನಲ್ಲಿ, 7000 ಮೆಗಾ ವಾಟ್ ಸೌರವಿದ್ಯುತ್ ಖರೀದಿಗೆ ಎಸ್‌ಇಸಿಐ ಜೊತೆ ಒಪ್ಪಂದ ಮಾಡಿಕೊಂಡವು. ಆಗ ವೈಎಸ್‌ಆರ್‌ಸಿಪಿ ನೇತೃತ್ವದ ಸರ್ಕಾರ ಆಂಧ್ರಪ್ರದೇಶದಲ್ಲಿತ್ತು.

ಉದ್ಯಮಿ ಗೌತಮ್ ಅದಾನಿ ಅವರು ಆಂಧ್ರಪ್ರದೇಶದ ಹಿರಿಯ ಅಧಿಕಾರಿಯೊಬ್ಬರನ್ನು ಭೇಟಿ ಮಾಡಿ, ಡಿಸ್ಕಾಂಗಳು ಎಸ್‌ಇಸಿಐನಿಂದ ವಿದ್ಯುತ್ ಖರೀದಿಗೆ ನೆರವಾಗಲು ಅವರಿಗೆ ₹1,750 ಕೋಟಿ ಲಂಚದ ಆಮಿಷ ಒಡ್ಡಿದ್ದರು ಎಂದು ಆರೋಪಿಸಲಾಗಿದೆ.

'ಈ ಅಧಿಕಾರಿಯು ಭಾರತದ ಪ್ರಜೆ. ಸರಿಸುಮಾರು 2019ರ ಮೇ ತಿಂಗಳಿನಿಂದ 2024ರ ಜೂನ್‌ವರೆಗೆ ಇವರು ಆಂಧ್ರಪ್ರದೇಶದಲ್ಲಿ ಹಿರಿಯ ಅಧಿಕಾರಿಯಾಗಿ ಕೆಲಸ ಮಾಡಿದ್ದಾರೆ. ಅದಾನಿ ಅವರು ಇವರನ್ನು ವೈಯಕ್ತಿಕವಾಗಿ ಭೇಟಿ ಮಾಡಿದ್ದರು' ಎಂದು ಅಮೆರಿಕದ ಕೋರ್ಟ್‌ನಲ್ಲಿ ಸಲ್ಲಿಸಿರುವ ಆರೋಪದಲ್ಲಿ ಹೇಳಲಾಗಿದೆ.

ಯಾರು ಈ ಸಾಗರ್ ಅದಾನಿ?

ಅಮೆರಿಕದ ಬ್ರೌನ್ ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರದಲ್ಲಿ ಪದವಿ ಪಡೆದು 2015ರಲ್ಲಿ ಅದಾನಿ ಸಮೂಹ ಸೇರಿದವರು ಸಾಗರ್ ಅದಾನಿ. ಅವರು ಮೊದಲು ಯೋಜನಾ ವಿಭಾಗದಲ್ಲಿ ಕೆಲಸ ಮಾಡಿದರು. ಅದಾನಿ ಗ್ರೀನ್ ಎನರ್ಜಿಯ ಭಾಗವಾಗಿ ಸೌರ ಮತ್ತು ಪವನ ಶಕ್ತಿ ವಿಭಾಗವನ್ನು ಕಟ್ಟಿದ್ದೇ ಸಾಗರ್ ಅದಾನಿ. ವಿಭಾಗವನ್ನು ಕಟ್ಟುವ ಕೆಲಸದ ಜತೆಗೆ ಅದರ ಕಾರ್ಯನಿರ್ವಹಣೆ ಮತ್ತು ಹಣಕಾಸು ವ್ಯವಹಾರಗಳ ಉಸ್ತುವಾರಿಯನ್ನೂ ಹೊತ್ತಿದ್ದಾರೆ. ಸಾಗರ್, ಅದಾನಿ ಗ್ರೀನ್‌ನ ಕಾರ್ಯನಿರ್ವಾಹಕ ನಿರ್ದೇಶಕರಾಗಿದ್ದಾರೆ.

ಆಧಾರ: ಪಿಟಿಐ, ರಾಯಿಟರ್ಸ್, ಅಮೆರಿಕ ನ್ಯಾಯಾಲಯದ ಆರೋಪ ಪಟ್ಟಿ

₹25 ಸಾವಿರ ಕೋಟಿಗೂ ಹೆಚ್ಚು ಬಂಡವಾಳ ಸಂಗ್ರಹ

ವಿವಿಧ ರಾಜ್ಯಗಳಿಗೆ ಸೌರವಿದ್ಯುತ್ ಪೂರೈಸುವುದಕ್ಕಾಗಿ ದೇಶದ ವಿವಿಧ ಕಡೆಗಳಲ್ಲಿ ಸೌರ ಘಟಕಗಳನ್ನು ನಿರ್ಮಾಣ ಮಾಡುವುದಕ್ಕಾಗಿ ಅದಾನಿ ಗ್ರೀನ್ ಎನರ್ಜಿಯು ಅಮೆರಿಕದಲ್ಲಿ ಬಂಡವಾಳ ಸಂಗ್ರಹ ಮಾಡಲು ಮುಂದಾಗಿತ್ತು.

2020ರಿಂದ 2024ರ ಅವಧಿಯಲ್ಲಿ ಒಟ್ಟಾರೆಯಾಗಿ ₹25 ಸಾವಿರ ಕೋಟಿಗೂ ಹೆಚ್ಚು (300 ಕೋಟಿ ಡಾಲರ್) ಬಂಡವಾಳವನ್ನು ಗುಂಪು ಸಾಲವಾಗಿ (ಸಿಂಡಿಕೇಟ್ ಲೋನ್), 144ಎ ಬಾಂಡ್ ವಿತರಣೆಯ ಮೂಲಕ ಅದು ಸಂಗ್ರಹಿಸಿದೆ ಎಂದು ಆರೋಪ ಪಟ್ಟಿಯಲ್ಲಿ ಹೇಳಲಾಗಿದೆ.



2021ರಲ್ಲಿ ಅಮೆರಿಕದ ವಿವಿಧ ಕಂಪನಿಗಳು ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳಿಂದ ₹11,340 ಕೋಟಿಯನ್ನು (135 ಕೋಟಿ ಡಾಲರ್) ಸಾಲದ ರೂಪದಲ್ಲಿ ಸಂಗ್ರಹಿಸಿತ್ತು. ಅದೇ ವರ್ಷ 144ಎ ಬಾಂಡ್ ಮೂಲಕ 75 ಕೋಟಿ ಡಾಲರ್ ಸಂಗ್ರಹಿಸುವ ಗುರಿ ಹೊಂದಿತ್ತು. ಅಂತಿಮವಾಗಿ ನಾಲ್ಕನೇ ಒಂದರಷ್ಟು ₹1,571 ಕೋಟಿ (18.7 ಕೋಟಿ ಡಾಲರ್) ಸಂಗ್ರಹಿಸಲು ಯಶಸ್ವಿಯಾಗಿತ್ತು.

2023ರ ವರ್ಷಾಂತ್ಯದಲ್ಲಿ ಗುಂಪು ಸಾಲವಾಗಿ ಮತ್ತೆ ₹11,424 ಕೋಟಿ (136 ಕೋಟಿ ಡಾಲರ್) ಸಂಗ್ರಹಿಸಿತ್ತು. ಅದೇ ವರ್ಷ ಬಾಂಡ್ ಮೂಲಕ 75 ಕೋಟಿ ಡಾಲರ್ ಸಂಗ್ರಹಿಸುವ ಗುರಿ ಹೊಂದಿತ್ತಾದರೂ, ಆಗಲೂ ₹1,571 ಕೋಟಿ (18.7 ಕೋಟಿ ಡಾಲರ್) ಸಂಗ್ರಹವಾಗಿತ್ತಷ್ಟೆ ಎಂದು ಹೇಳಿದೆ.

ಹಿಂಡನ್‌ಬರ್ಗ್ ಸಂಚಲನ

ಗೌತಮ್ ಅದಾನಿ ಸಮೂಹದ ಬಗ್ಗೆ ವಿದೇಶಿ ಸಂಸ್ಥೆಯಿಂದ ಈ ಹಿಂದೆಯೂ ಆರೋಪಗಳು ಕೇಳಿಬಂದಿದ್ದವು. ಅಮೆರಿಕದ ಶಾರ್ಟ್ ಸೆಲ್ಲಿಂಗ್, ಹೂಡಿಕೆ ಮತ್ತು ಸಂಶೋಧನಾ ಸಂಸ್ಥೆ 'ಹಿಂಡನ್‌ಬರ್ಗ್ ರಿಸರ್ಚ್' 2023ರ ಜನವರಿಯಲ್ಲಿ ಆರೋಪ ಮಾಡಿತ್ತು. ಷೇರುಪೇಟೆಯ ವಾಸ್ತವಿಕ ಬೆಲೆಗಿಂತ ಕೃತಕವಾಗಿ ಏರಿಸಲಾದ ಬೆಲೆಯಲ್ಲಿ ಅದಾನಿ ಷೇರುಗಳು ಮಾರಾಟವಾಗುತ್ತಿದೆ ಎಂದು ಅದು ಆರೋಪಿಸಿತ್ತು. ಜತೆಗೆ, ಅದಾನಿ ಸಮೂಹಕ್ಕೆ ಸೇರಿದ, ನೋಂದಾಯಿತ ಷೇರು ಕಂಪನಿಗಳ ಸಾಲದ ಪ್ರಮಾಣವು ಗಣನೀಯ ಪ್ರಮಾಣದಲ್ಲಿದ್ದು, ಸಮೂಹದ ಹಣಕಾಸು ಸ್ಥಿತಿ ಅಪಾಯಕಾರಿ ಮಟ್ಟದಲ್ಲಿದೆ ಎಂದೂ ಹೇಳಿತ್ತು.

ಹಿಂಡನ್‌ಬರ್ಗ್ ಸಂಸ್ಥೆಯು ಅದಾನಿ ಸಮೂಹದ ಮೇಲೆ ಮಾಡಿದ್ದ ಆರೋಪ ಮತ್ತು ಅದು ದೇಶದ ಷೇರುಪೇಟೆಯ ಮೇಲೆ ಬೀರುವ ಪರಿಣಾಮಗಳ ಬಗ್ಗೆ ತನಿಖೆ ನಡೆಸಲು ಸುಪ್ರೀಂ ಕೋರ್ಟ್, ನಿವೃತ್ತ ನ್ಯಾಯಮೂರ್ತಿ ಎ.ಎಂ. ಸಪ್ರೆ ನೇತೃತ್ವದ ಆರು ಸದಸ್ಯರ ಸಮಿತಿಯೊಂದನ್ನು ರಚಿಸಿತ್ತು. ಸಮಿತಿ ಮುಚ್ಚಿದ ಲಕೋಟೆಯಲ್ಲಿ ಕೋರ್ಟ್‌ಗೆ ವರದಿ ಸಲ್ಲಿಸಿತ್ತು. 'ಅದಾನಿ ಸಮೂಹವು ಷೇರುಗಳ ಮೌಲ್ಯವನ್ನು ಕೃತಕವಾಗಿ ಏರಿಳಿತ ಮಾಡಿಲ್ಲ. ಈ ವಿದ್ಯಮಾನಕ್ಕೆ ಸಂಬಂಧಿಸಿ ಸೆಬಿಯಿಂದ ಲೋಪವಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿಲ್ಲ' ಎಂದು ಸಮಿತಿ ವರದಿ ನೀಡಿತ್ತು.

2024ರ ಆಗಸ್ಟ್‌ನಲ್ಲಿ ಹಿಂಡನ್‌ಬರ್ಗ್ ರಿಸರ್ಚ್ ಅದಾನಿ ಸಮೂಹವನ್ನು ಮತ್ತೊಮ್ಮೆ ಕಟಕಟೆಯಲ್ಲಿ ನಿಲ್ಲಿಸಿತ್ತು. 'ಅದಾನಿ ಸಮೂಹದ ಸಾಗರೋತ್ತರ ಹೂಡಿಕೆಯಲ್ಲಿ ಸೆಬಿ ಅಧ್ಯಕ್ಷೆ ಮಾಧವಿ ಬುಚ್ ಮತ್ತು ಅವರ ಗಂಡ ಧವಲ್ ಬುಚ್ ಪಾಲುದಾರಿಕೆ ಇದೆ. ಅದಾನಿ ಅವರು ಮಾರಿಷಸ್ ಮತ್ತು ಇತರ ದೇಶಗಳಲ್ಲಿ ಹೊಂದಿರುವ ಶೆಲ್ ಕಂಪನಿಗಳ ಬಗ್ಗೆ ತನಿಖೆ ನಡೆಸಲು ಸೆಬಿ ಆಸಕ್ತಿ ತೋರದಿರುವುದು ಆಶ್ಚರ್ಯಕರವಾಗಿದೆ' ಎಂದು ಹಿಂಡನ್‌ಬರ್ಗ್ ಆರೋಪಿಸಿತ್ತು.

ಗುಂಡಣ್ಣ



ನಿಸರ್ಗವೇ ಗುರು!

ನುಡಿ ಬೆಳಗು

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

72

ಕಲ್ಯಾಣದಲ್ಲಿ ಮೌಂಟ್ ಎವರೆಸ್ಟ್ ಇರಲಿಲ್ಲ. ಬಂದ ಶರಣದಲ್ಲಿ ಸೇಂಟ್ ಎವರೆಸ್ಟ್‌ಗಳನ್ನು ನಿರ್ಮಾಣ ಮಾಡಿದ್ದರು. ಅಲ್ಲಿ ಗಂಗಾ ನದಿ ಹರಿತಿತ್ತೇನು? ಹೋಗಿ ಅದರೊಳಗೆ ಬಿದ್ದು ಪವಿತ್ರ ಆಗೋದಕ್ಕ. ಯಾವ ಗಂಗೆಯೂ ಹರಿತಿರಲಿಲ್ಲ. 'ಮಿಂದು ದೇವರ ಪೂಜಿಸಿಹೆನೆಂಬ ಸಂದೇಹಿ ಮಾನವ ನೀ ಕೇಳ ಮೀಯದದೇ ಮೀನು? ಮೀಯದದೇ ಮೊಸಳೆ? ತಾ ಮಿಂದು ತನ್ನ ಮೀಯದನ್ನಕ್ಕರ ಈ ಬೆಡಗಿನ ಮಾತ ಮೆಚ್ಚುವನೆ ನಮ್ಮ ಗುಹೇಶ್ವರ' ಎಂದರು ಶರಣರು.

ಗಂಗೆಯಲ್ಲಿ ಮೀಯಲು ಯಾವ ಶರಣರೂ ಬರಲಿಲ್ಲ. ಯಾಕೆಂದರೆ ಗಂಗೆಯಲ್ಲಿ ಮಿಂದರೆ ಮನುಷ್ಯನ ಮೈಗೆ ಹತ್ತಿದ ಮೈಲಿಗೆ ಹೋಗಬಹುದೇ ಹೊರತು ಮನುಷ್ಯನ ಮನಸ್ಸಿಗೆ ಹತ್ತಿದ ಮೈಲಿಗೆ ಹೋಗೋದಿಲ್ಲ. ಮನುಷ್ಯನ ಮನಸ್ಸಿಗೆ ಹತ್ತಿದ ಮೈಲಿಗೆ ಹೋಗಬೇಕು ಅಂದರ ಗಂಗೆಯಲ್ಲಿ ಅಲ್ಲ; ವಚನ ಗಂಗೆಯಲ್ಲಿ ಮೀಯಬೇಕು ಮನುಷ್ಯ. ಉತ್ತರದಲ್ಲಿ ಗಂಗೆ, ದಕ್ಷಿಣದಲ್ಲಿ ವಚನ ಗಂಗೆ. ಇದು ಶರಣರ ಜೀವನ ದೃಷ್ಟಿ. ಆವಾಗೇನು ಗೂಗಲ್ ಇತ್ತಾ, ಇಂಟರ್ ನೆಟ್ ಇತ್ತಾ, ಟ್ವಿಟರ್ ಇತ್ತಾ, ಫೇಸ್ ಬುಕ್ ಇತ್ತಾ? ಏನೂ ಇರಲಿಲ್ಲ. ಎಲ್ಲೆಲ್ಲಿಂದಲೋ ಜನ ಬಂದರು. ಫೇಸ್ ಬುಕ್ ಇರಲಿಲ್ಲ. ಆದರೆ ಬಸವಣ್ಣನಿಗೆ ಫೇಸ್ ವ್ಯಾಲ್ಯೂ ಇತ್ತು. ಅದಕ್ಕೆ ಬಂದರು. ನಮಗೆ ಫೇಸ್ ಬುಕ್ ಐತಿ. ಆದರೆ ಫೇಸ್ ವ್ಯಾಲ್ಯೂನೇ ಕಳಕಂಡುಬಿಟ್ಟೀವಿ. ಜ್ಞಾನದಿಂದ ಕಲ್ಯಾಣ ಕಟ್ಟಿದರು. ಜ್ಞಾನಕ್ಕಾಗಿ ಜನರು ಹಾತೊರೆಯುತ್ತಿದ್ದರು.

ಒಮ್ಮೆ ನ್ಯೂಟನ್‌ಗೆ ಸನ್ಮಾನ ನಡೀತು.'ಇವರು ಬಹಳ ದೊಡ್ಡ ಜ್ಞಾನಿ, ದೊಡ್ಡ ವಿಜ್ಞಾನಿ' ಅಂತೆಲ್ಲಾ ಬಹಳ ಹೊಗಳಿದರು. ನಂತರ ನ್ಯೂಟನ್ ಮಾತನಾಡುತ್ತಾ, 'ನಾನೇನು ಜ್ಞಾನಿ ಅಲ್ಲ. ಜ್ಞಾನ ಸಮುದ್ರದ ದಂಡೆಯಲ್ಲಿ ಬೆಣಚುಕಲ್ಲುಗಳನ್ನು ಆಯುವ ಶಿಶು ನಾನು' ಎಂದರು. ಅಂದರ, ಜ್ಞಾನಕ್ಕೆ ಅಷ್ಟು ಬೆಲೆ ಜಗತ್ತಿನಲ್ಲಿ. ಮನೆಯಲ್ಲಿ ಪುಸ್ತಕ ಇಡಬೇಕು. ಗದುಗಿನ ತೋಂಟದಾರ್ಯ ಸ್ವಾಮೀಜಿ ಪುಸ್ತಕಗಳ ಮಹತ್ವದ ಬಗ್ಗೆ ಹೇಳುತ್ತಿದ್ದರು. ಸಂಸಾರಿಗಳಿಗೆ ಪುತ್ರೋತ್ಸವ ಎಷ್ಟು ಸಂತೋಷ ಕೊಡತ್ತೈತೋ ಅಷ್ಟೇ ಸಂತೋಷ ಸನ್ಯಾಸಿಗಳಿಗೆ ಪುಸ್ತಕೋತ್ಸವದಿಂದ ಸಿಗತ್ತೈತಿ.

ಪುಸ್ತಕಗಳಿಂದ ಜ್ಞಾನ ಬರ್ತದ. ಜ್ಞಾನ ಯಾವ ಮೂಲೆಗಳಿಂದ ಬಂದರೂ ಅದನ್ನು ಸ್ವೀಕಾರ ಮಾಡಬೇಕು. ದಶ ದಿಕ್ಕುಗಳಿಂದ ಅರಿವು ಎನ್ನ ಹೃದಯದ ಆಳಕ್ಕೆ ಹರಿದು ಬರಲಿ ಎಂತಿರಬೇಕು. 'ಕೆಲವಂ ಬಲ್ಲವರಿಂದ ಕಲ್ತು, ಕೆಲವಂ ಶಾಸ್ತ್ರಗಳಿಂದ ಕೇಳುತಂ, ಕೆಲವಂ ಮಾಳ್ಪವರಿಂದ ಕಂಡು, ಕೆಲವಂ ಸುಜ್ಞಾನದಿಂ ನೋಡುತಂ ಕೆಲವಂ ಸಜ್ಜನ ಸಂಗದಿಂದರಿಯಲ್ ಸರ್ವಜ್ಞನಪ್ಪಂ ನರಂ ಪಲವುಂ ಪಳ್ಳ ಸಮುದ್ರವೈ ಹರಹರಾ ಶ್ರೀ ಚೆನ್ನ ಸೋಮೇಶ್ವರ' ಎಂದ ಹಾಗೆ, ಒಳ್ಳೆಯದು ಎಲ್ಲಿ ಸಿಗತ್ತೈತೋ ಅಲ್ಲಿ ಕಲಿಯುವ ಮನಸ್ಸು ಬೇಕು.

ಕೋಗಿಲೆ ಹಾಡೋದನ್ನು ಎಲ್ಲಿ ಕಲತ್ತೈತಿ? ಮೀನಿಗೆ ಈಜೋದನ್ನು ಯಾರು ಕಲಿಸಿದರು? ನವಿಲಿಗೆ ನರ್ತನ ಮಾಡೋದನ್ನು ಕಲಿಸಿದವರು ಯಾರು? ಅದು ಯಾವುದೇ ನೃತ್ಯ ಶಾಲೆಗೆ ಹೋಗಿ ಕಲಿತಿಲ್ಲ. ನಿಸರ್ಗ ಕಲಸತ್ತೈತಿ. ಮನುಷ್ಯನಿಗೆ ಕಲಿಯುವ ಮನಸ್ಸಿದ್ದರೆ ನಿಸರ್ಗ ಎಲ್ಲವನ್ನೂ ಕಲಿಸುತ್ತದೆ. ಕಲಿಯುವ ಮನಸ್ಸಿದ್ದರೆ ವಿಶ್ವವೇ ಗುರು. ಕಲಿಯುವ ಮನಸ್ಸಿದ್ದರೆ ಏನ್ ನೋಡ್ತಾನೆ ಅದನ್ನೇ ಕಲಿಯಾಕೆ ಶುರು ಮಾಡುತ್ತಾನೆ. ಏನು ಕೇಳ್ತಾನೆ ಅದರಿಂದ ತಿಳಕೊಳ್ಳೋಕೆ ಆರಂಭಿಸುತ್ತಾನೆ. ಕಲಿಯುವ ಮನಸ್ಸು ಬೇಕು ಅಷ್ಟೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಶುಕ್ರವಾರ ನವೆಂಬರ್ 22, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ಸಪ್ತಮಿ ಗಂ. 18-08 ನಕ್ಷತ್ರ: ಆಶ್ಲೇಷ ಗಂ. 17-10 ಯೋಗ: ಬ್ರಹ್ಮ ಗಂ. 11-34 ಕರಣ: ಬವ ಗಂ. 18-08, ವೃಶ್ಚಿಕ ಮಾಸದ 06 ನೇ ದಿನ, ಮಳೆನಕ್ಷತ್ರ: ಅನುರಾಧ 1.
ರಾಹುಕಾಲ : ಬೆಳಗ್ಗೆ 10-30 – 12-00
ಸೂರ್ಯೋದಯ : 06-37 ಸೂರ್ಯಾಸ್ತ : 05-57
ಮುಸ್ಲಿಂ ದಿನಾಂಕ : 19 ಜುಮಾದುಲ್ಲಾವಲ್
ಅದೃಷ್ಟ ಸಂಖ್ಯೆ : 7, 9

ಮೇಷ: ಕ್ರೀಡಾಪಟುಗಳು ಮತ್ತು ಕಲಾವಿದರಿಗೆ ತಮ್ಮ ಪ್ರತಿಭಾ ಪ್ರದರ್ಶನಕ್ಕೆ ಪೂರ್ವ ತಯಾರಿ ಅನಿವಾರ್ಯ. ಉದ್ಯೋಗದಲ್ಲಿ ಸ್ಥಾನ ಬದಲಾವಣೆಯಾಗಿ ಮನಸ್ಸಿಗೆ ಆಘಾತವಾಗಲಿದೆ.

ವೃಷಭ: ನಿಧಾನಗತಿಯಲ್ಲಿ ನಡೆಯುತ್ತಿದ್ದ ಕಾರ್ಯಗಳು ಮಹಾಗಣಪತಿಯ ಆಶೀರ್ವಾದದಿಂದ ಶೀಘ್ರಗತಿ ಹೊಂದಿ ಪ್ರಗತಿಯನ್ನು ಹೊಂದುತ್ತವೆ. ಕೃಷಿಯ ಕೆಲಸಗಳು ಸಮರ್ಪಕವಾಗಿ ನಡೆದು ಮನಸ್ಸಿಗೆ ನೆಮ್ಮದಿ ಉಂಟಾಗುವುದು.

ಮಿಥುನ: ಅವಿವಾಹಿತರಿಗೆ ವೈವಾಹಿಕ ಸಂಬಂಧಗಳು ಕಂಕಣಬಲಕ್ಕೆ ಪೂರಕ ವಾತಾವರಣವನ್ನು ಸೃಷ್ಟಿಸಲಿದೆ. ಮನೆಯಲ್ಲಿ ಆನಂದದ ವಾತಾವರಣ ಉದಯವಾಗುತ್ತದೆ. ವಾದವಿವಾದಗಳಿಗೆ ತೆರೆ ಎಳೆಯುವ ಪ್ರಯತ್ನ ಮಾಡಿ.

ಕರ್ಕಾಟಕ: ಎಲ್ಲವನ್ನೂ ಸ್ವಂತವಾಗಿ ಮಾಡಬಲ್ಲೆನೆಂಬ ಹುಮ್ಮಸ್ಸು ನಷ್ಟಕ್ಕೆ ಕಾರಣವಾಗುತ್ತದೆ. ರೈತರಿಗೆ ತರಕಾರಿ ಬೆಳೆಯ ಬಗ್ಗೆ ಇರುವ ನಿರೀಕ್ಷೆ ಫಲಿಸಿ, ಸಂತೋಷಕ್ಕೆ ಕಾರಣವಾಗುವುದು. ಧನ ಸಂಪಾದನೆಯಾಗುವುದು.

ಸಿಂಹ: ಬುದ್ಧಿವಂತಿಕೆಯನ್ನು ಹೊಂದಿದ ಜನರಲ್ಲಿ ವ್ಯವಹಾರ ನಡೆಸಬೇಕಾಗುವುದರಿಂದ ಜಾಗ್ರತೆ ಇರಲಿ. ಇಷ್ಟ ವಸ್ತುಗಳ ಖರೀದಿಯಿಂದ ಹಣ ವ್ಯಯವಾಗುವುದು. ಕುಟುಂಬದಲ್ಲಿ ಎಲ್ಲರ ಆರೋಗ್ಯ ಉತ್ತಮವಾಗಿರುವುದು.

ಕನ್ಯಾ: ಕಾರ್ಯಕ್ಷೇತ್ರದಲ್ಲಿ ದೂರ ಸಂಚಾರ ಹೆಚ್ಚಾಗಿದ್ದರೂ ಎಣಿಕೆಗೆ ಮೀರಿದ ಧನಾಗಮವಿದೆ. ಎಲ್ಲಾ ಕಾರ್ಯಗಳು ಸಿದ್ಧಿಸಲಿವೆ. ಉದ್ಯೋಗಕ್ಕೆ ಅನುಕೂಲವಾಗುವ ಜನರ ಪರಿಚಯವಾಗಲಿದೆ.

ತುಲಾ: ಪಾಲುದಾರಿಕೆ ವ್ಯವಹಾರದಲ್ಲಿ ಬುದ್ಧಿಶಕ್ತಿಯಿಂದ ಸಮಸ್ಯೆಗಳನ್ನು ಎದುರಿಸುವ ಸಾಮರ್ಥ್ಯ ಇದ್ದಲ್ಲಿ ಲಾಭವಾಗುವುದು. ಪ್ರವಾಸ ಹೋಗುವ ವಿಷಯದಲ್ಲಿ ಕುಟುಂಬದ ಸದಸ್ಯರು ನಿರ್ಧಾರಗಳನ್ನು ಒಪ್ಪಿಕೊಳ್ಳುವರು.

ವೃಶ್ಚಿಕ: ಎಲ್ಲಾ ರೀತಿಯ ದವಸ ಧಾನ್ಯ ಹಾಗೂ ಮಸಾಲೆ ಪದಾರ್ಥಗಳ ಸಗಟು ಹಾಗೂ ರಫ್ತು ವ್ಯಾಪಾರಿಗಳಿಗೆ ಅಧಿಕ ಮಟ್ಟದ ವ್ಯಾಪಾರ ಇರಲಿದೆ. ಸಂಶೋಧನಾ ಕ್ಷೇತ್ರದಲ್ಲಿನ ಕಾರ್ಯಗಳಲ್ಲಿ ಪ್ರಗತಿ ಸಾಧಿಸುವಿರಿ.

ಧನು: ಹೊಸ ಕಾರ್ಯದ ಸಂಪೂರ್ಣ ಜವಾಬ್ದಾರಿ ಯಶಸ್ವಿಯಾಗಿ ನಿರ್ವಹಿಸಿದ ಹೆಗ್ಗಳಿಕೆ ನಿಮ್ಮದಾಗಲಿದೆ. ಪ್ರವೃತ್ತಿಯಲ್ಲಿ ಅಪಾದನೆಗಳು ಎದುರಾಗಿ ಮಾನಸಿಕವಾಗಿ ಕಿರಿಕಿರಿ ಎನಿಸಲಿವೆ. ಅಡೆ ತಡೆಗಳು ಇರದು.

ಮಕರ: ಕಾಡುವ ಸಮಸ್ಯೆಯಿಂದಾಗಿ ಮತ್ತು ಅಸಹಾಯಕ ಸ್ಥಿತಿಯಿಂದಾಗಿ ಯಾರಲ್ಲೂ ನಂಬಿಕೆ ಇಡದಂಥ ಪರಿಸ್ಥಿತಿ ತೋರಿಬರುವುದು. ಪ್ರೀತಿಯ ವಿಚಾರದಲ್ಲಿ ಗುಣಾತ್ಮಕ ಬೆಳವಣಿಗೆ ಅನುಭವಕ್ಕೆ ಬಂದೀತು.

ಕುಂಭ: ಕಚೇರಿಯ ಹಣದ ವಿಚಾರದಲ್ಲಿ ಖರ್ಚು-ವೆಚ್ಚಗಳ ವಿಷಯದಲ್ಲಿ ಜಾಗ್ರತೆ ಇರಲಿ. ಶ್ವಾಸಕೋಶಕ್ಕೆ ಸಂಬಂಧಪಟ್ಟ ಕಾಯಿಲೆಗಳ ಬಗ್ಗೆ ನಿಗಾ ಇರಲಿ. ವಿದೇಶಿ ವಸ್ತುಗಳ ಮೇಲೆ ಹೆಚ್ಚಿನ ಹಣ ವ್ಯಯ ಆಗುತ್ತದೆ.

ಮೀನ: ದೇವತಾನುಗ್ರಹ ಸಂಪೂರ್ಣವಾಗಿ ಇರಲಿದೆ. ತೊಂದರೆಗಳನ್ನು ನಿವಾರಿಸಿ, ವೃತ್ತಿರಂಗದಲ್ಲಿ ಉತ್ತಮ ರೀತಿಯಲ್ಲಿ ಮುಂದುವರಿಯಲು ಪೂರಕವಾಗಿರುತ್ತದೆ. ಇಂದಿನಿಂದ ಕ್ರೀಡಾ ಚಟುವಟಿಕೆಗಳು ಹೆಚ್ಚುವುದು.

ಪದಬಂಧ 5869

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ತನ್ನನ್ನು ತಾನೇ ಹೊಗಳಿಕೊಳ್ಳುವಿಕೆ (5)
6.ಅಂತಃಕರಣ ಹೊಂದಿರುವ ಪಚನಾಂಗ (3)
7.ಈತ ಕೇಡನ್ನುಂಟುಮಾಡುವವನು (3)
8.ಸಂವಹನದ ನಂತರ ನಡೆಸಿರುವ ಯಜ್ಞ (3)
10.ರಕ್ತಸಿಕ್ತನಾದವನು ತೋರಿಸಿರುವ ಖಾಲಿ ಕೈ! (4)
11.ಶೌರ್ಯವನ್ನು ಕುರಿತ ಹಾಡು (4)
12.ಶಾಪಗೊಂಡಿರುವನು ಅಧೀನದಲ್ಲಿದ್ದಾನೆ (4)
13.ಪುಸ್ತಕದ ಮೇಲುಹೊದಿಕೆ (4)
14.ವಲಯದ ಹತ್ತಿರ ಖರೀದಿಸಿದ ಉಪ್ಪು (3)
16.ಬಯಲ ಕಡೆ ಸಾಗುತ್ತಿರುವ ಆನೆಮರಿ (3)
18.ದಾಸನು ಶೇಖರಿಸಿರುವ ಸಾಮಾನು (3)
20.ಪ್ರವಾಸದಲ್ಲಿ ಸತಿಯು ಉಳಿದುಕೊಂಡಿರುವ ಮನೆ! (5)

ಮೇಲಿಂದ ಕೆಳಕ್ಕೆ
1.ಕಂಬಿ ತಿರುಗಿಸಿ ತೋರಿದ ಡೌಲು! (2)
2.ಆಕಳು ಮೇಯಿಸುತ್ತಿರುವ ಚಾರ (2)
3.ಭಾವ ಬೀರಿರುವ ವರ್ಚಸ್ಸು (3)
4.ಬೇಸರಿಕೆಯಾಗುವಷ್ಟು ಹೆಚ್ಚಾದ ಧಗೆ! (2)
5.ನಿರ್ದಿಷ್ಟವಾದಕಾಲದಿಂದ ಆರಂಭಿಸುವ ಕಾಲಗಣನೆ (2)
8.ಸಮಸ್ತರಿಗೂ ಕಾಣಿಸುತ್ತಿರುವ ಕೈಚಳಕ (5)
9.ಹಳೆಯದನ್ನು ಪುನಃ ಹೊಸತು ಮಾಡುವಿಕೆ (5)
15.ಗತಿಸಿದ ಮಹಾತ್ಮರ ಹುಟ್ಟುಹಬ್ಬ (3)
16. ಸೂಕ್ಷ್ಮವಾದ ಅಂಶ (2)
17.ಭವನದಲ್ಲಿರುವ ಸಂಸಾರ (2)
18.ದಾಸೋಹದಲ್ಲಿ ಆದ ಬಾಯಾರಿಕೆ! (2)
19.ಇದು ಪುಡಿಮಾಡಿರುವ ಧಾನ್ಯ (2)



5868ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರಲೋಭನೆ 2.ಆಕ್ಷೇಪಣೆ
4.ಪರಿಪಾಕ 7.ಜಗತಿ
8.ಮೌನ 9.ವಲ್ಲಭ
10.ಪಂಕ್ತಿ 11.ಹಾವಸೆ
12.ತರತಮ 14.ಹಗೆತನ
15.ಅಡಾವುಡಿ

ಮೇಲಿಂದ ಕೆಳಕ್ಕೆ:
1.ಪ್ರತಾಪ 3.ಪದಾತಿ
5.ರಿಸನ 6.ಕತ್ತಿವರಸೆ
7.ಜಡಭರತ 10.ಪಂಡಿತ
11.ಹಾವುಗೆ 13.ಮಹಡಿ

ಸುಡೊಕು 6254

2	5			7			3	
7			2		3	6		8
		6		4			2	
4		3		1		8		6
	1		9		4		7	
9		8		3		4		1
1		9	3		5		8	7
	6			9			1	
5		7	4		1	9		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6253 ಸುಡೊಕು

2	4	1	6	8	3	9	7	5
9	8	5	2	4	7	6	1	3
7	6	3	1	9	5	8	4	2
4	5	9	8	2	1	7	3	6
6	1	7	3	5	4	2	9	8
8	3	2	9	7	6	4	5	1
3	2	4	7	1	8	5	6	9
5	9	6	4	3	2	1	8	7
1	7	8	5	6	9	3	2	4

ಕಾರ್ಡ್ ಅಮಾನತು ತೆರವು: ಅರ್ಹ ಕುಟುಂಬಗಳಿಗೆ ಮುಂದಿನ ವಾರವೇ ಪಡಿತರ – ಮುನಿಯಪ್ಪ

ಬಿಪಿಎಲ್ ಪಡಿತರ ಚೀಟಿ ಪರಿಷ್ಕರಣೆ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಪಿಎಲ್ ಪಡಿತರ ಚೀಟಿಗಳ ಪರಿಷ್ಕರಣೆಗೆ ತೀವ್ರ ವಿರೋಧ ವ್ಯಕ್ತವಾಗುತ್ತಿದ್ದಂತೆಯೇ ಎಚ್ಚೆತ್ತುಕೊಂಡಿರುವ ರಾಜ್ಯ ಸರ್ಕಾರ, ಇಡೀ ಪ್ರಕ್ರಿಯೆಯನ್ನೇ ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ.

ಸುದ್ದಿಗೋಷ್ಠಿಯಲ್ಲಿ ಗುರುವಾರ ಈ ಮಾಹಿತಿ ನೀಡಿದ ಆಹಾರ ಸಚಿವ ಕೆ.ಎಚ್. ಮುನಿಯಪ್ಪ, 'ಸರ್ಕಾರಿ ನೌಕರರು ಮತ್ತು ಆದಾಯ ತೆರಿಗೆ ಪಾವತಿದಾರರು ಹೊಂದಿರುವ ಬಿಪಿಎಲ್ ಪಡಿತರ ಚೀಟಿಗಳನ್ನು ಹೊರತುಪಡಿಸಿ, ಉಳಿದೆಲ್ಲ ಪಡಿತರ ಚೀಟಿಗಳು ಎರಡು ತಿಂಗಳ ಮೊದಲಿದ್ದಂತೆಯೇ ಮುಂದುವರಿಯಲಿವೆ. ಮುಂದಿನ ದಿನಗಳಲ್ಲಿ ಪರಿಷ್ಕರಣೆಗೆ ಒಳಪಡಿಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳುವವರೆಗೂ ಯಾವುದೇ ಬದಲಾವಣೆ ಇರುವುದಿಲ್ಲ' ಎಂದು ಹೇಳಿದರು.

'ಈಗಾಗಲೇ ಪರಿಷ್ಕರಣೆಗೊಂಡು, ತಾತ್ಕಾಲಿಕವಾಗಿ ಅಮಾನತುಗೊಳಿಸಿರುವ ಪಡಿತರ ಚೀಟಿಗಳನ್ನು ಒಂದು ವಾರದ ಒಳಗೆ ಮತ್ತೆ ಅರ್ಹರಿಗೆ ಒದಗಿಸಲಾಗುವುದು. ಮುಂದಿನ ವಾರದಿಂದ ಪಡಿತರ ಪಡೆದುಕೊಳ್ಳಲು ಅವಕಾಶ ಕಲ್ಪಿಸಲಾಗುವುದು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸೂಚನೆಯಂತೆ, ಬಡವರಿಗೆ ಅನ್ಯಾಯ ಆಗದಂತೆ ಎಚ್ಚರಿಕೆ ವಹಿಸಲಾಗುವುದು' ಎಂದರು.

ಪಾನ್‌ನಿಂದ ಬಯಲು: 'ಪಾನ್ ಕಾರ್ಡ್ ಆಧಾರಿತ ಪರಿಶೀಲನೆ ವೇಳೆ ಕೆಲವರು ಆದಾಯ ತೆರಿಗೆ ಪಾವತಿ ಕುರಿತ ದಾಖಲೆ ಸಲ್ಲಿಸಲು ವಿಳಂಬ ಮಾಡಿ ದಂಡ ವಿಧಿಸಿಕೊಂಡಿದ್ದಾರೆ. ಅಂಥವರು ಆದಾಯ ತೆರಿಗೆ ಪಾವತಿದಾರರು ಎಂಬುದು ಖಚಿತವಾಗಿದೆ. ಇನ್ನೂ ಕೆಲವರು ಸರ್ಕಾರಿ ನೌಕರರಿದ್ದಾರೆ. ಕೇಂದ್ರ ಸರ್ಕಾರದ ಮಾನದಂಡಗಳ ಅನುಸಾರವೇ ಬಿಪಿಎಲ್ ಪಡಿತರ ಚೀಟಿಗಳ ಪರಿಶೀಲನೆ ನಡೆದಿದೆ' ಎಂದರು.

'ಈವರೆಗೆ ಕಾರ್ಡ್‌ಗಳ ಅಮಾನತು, ರದ್ದು ಹಾಗೂ ಎಪಿಎಲ್ ಪಡಿತರ ಚೀಟಿಗಳ ಪರಿವರ್ತನೆ ಸೇರಿ 3,81,983 ಪಡಿತರ ಚೀಟಿಗಳನ್ನು ಪರಿಶೀಲಿಸಿ ಕ್ರಮ ಜರುಗಿಸಲಾಗಿದೆ. ಅದರಲ್ಲಿ 64,589 ಪಡಿತರ ಚೀಟಿದಾರರು ಆದಾಯ ತೆರಿಗೆ ಪಾವತಿದಾರರು, 3,355 ಸರ್ಕಾರಿ ನೌಕರರು, 39,159 ಪಡಿತರ ಚೀಟಿದಾರರ ಕುಟುಂಬದ ವಾರ್ಷಿಕ ಆದಾಯ ₹1.20 ಲಕ್ಷಕ್ಕಿಂತ ಹೆಚ್ಚು ಇರುವಂತಹವರಾಗಿದ್ದಾರೆ' ಎಂದು ಅವರು ವಿವರಿಸಿದರು.

ಅತಿ ಹೆಚ್ಚು ತೆರಿಗೆ ಕಟ್ಟುವ ರಾಜ್ಯ ಕರ್ನಾಟಕ: 'ಮಹಾರಾಷ್ಟ್ರ ಹೊರತುಪಡಿಸಿದರೆ ಅತಿ ಹೆಚ್ಚು ಆದಾಯ ತೆರಿಗೆ ಪಾವತಿ ಮಾಡುವ ಎರಡನೇ ರಾಜ್ಯ ಕರ್ನಾಟಕ. ಆದರೂ, ಇಲ್ಲಿ ಬಿಪಿಎಲ್ ಪಡಿತರ ಚೀಟಿಗಳ ಪ್ರಮಾಣ ಶೇ69.6ರಷ್ಟಿದೆ. ರಾಜ್ಯದ ತಲಾ ಆದಾಯ ಹೆಚ್ಚಿದ್ದರೂ ಬಿಪಿಎಲ್ ಕುಟುಂಬಗಳ ಸಂಖ್ಯೆ ಜಾಸ್ತಿ ಇದ್ದ ಕಾರಣ ಕೇಂದ್ರ ಸರ್ಕಾರದ ನಿರ್ದೇಶನದಂತೆ ಎರಡು ತಿಂಗಳ ಹಿಂದೆಯೇ ಪಡಿತರ ಚೀಟಿಗಳ ಪರಿಷ್ಕರಣೆಗೆ ಚಾಲನೆ ನೀಡಲಾಗಿತ್ತು' ಎಂದರು.

ಮತ್ತಷ್ಟು ಅರ್ಜಿ: 'ಪಡಿತರ ಚೀಟಿಗಾಗಿ ಎರಡು ವರ್ಷಗಳಿಂದ ಸಲ್ಲಿಕೆಯಾಗಿದ್ದ 2.95 ಲಕ್ಷ ಅರ್ಜಿಗಳು ಬಾಕಿ ಉಳಿದಿದ್ದವು. ಅವುಗಳನ್ನು ಪರಿಷ್ಕರಿಸಿ 2,69,536 ಕುಟುಂಬಗಳಿಗೆ ಪಡಿತರ ಚೀಟಿ ನೀಡಲಾಗಿದೆ. ಅವರೆಲ್ಲರಿಗೂ ಅಕ್ಕಿ ವಿತರಿಸಲಾಗುತ್ತಿದೆ. ಸದ್ಯಕ್ಕೆ ಸ್ಥಗಿತಗೊಳಿಸಿರುವ ಪರಿಷ್ಕರಣೆ ಕಾರ್ಯವನ್ನು ಮತ್ತೆ ಆರಂಭಿಸಿ, ಎಲ್ಲವನ್ನೂ ಸರಿಪಡಿಸಿದ ಬಳಿಕ ಹೊಸ ಪಡಿತರ ಚೀಟಿಗಳ ವಿತರಣೆಗೆ ಕ್ರಮ ಕೈಗೊಳ್ಳಲಾಗುವುದು' ಎಂದು ಮುನಿಯಪ್ಪ ತಿಳಿಸಿದರು.

'ಯಾರ ಅನ್ನವನ್ನೂ ಕಸಿದುಕೊಳ್ಳುತ್ತಿಲ್ಲ': 'ಪಡಿತರ ಚೀಟಿ ಪರಿಷ್ಕರಣೆ ವಿಚಾರದಲ್ಲಿ ಬಿಜೆಪಿಯವರು ರಾಜೀನಾಮೆ ಕೇಳುವುದು ಅವರ ಕರ್ತವ್ಯ. ಆದರೆ, ಅದರ ಅಗತ್ಯವಿಲ್ಲ. ನಾವು ಯಾರ ಅನ್ನವನ್ನೂ ಕಸಿದುಕೊಳ್ಳುತ್ತಿಲ್ಲ. ರಾಜಕೀಯ ಮಾಡುವುದನ್ನು ಬಿಟ್ಟು ಬಿಜೆಪಿಗೆ ಬೇರೇನೂ ಕೆಲಸವಿಲ್ಲ. ಹಲವು ಕ್ಷೇತ್ರಗಳಲ್ಲಿ ಶೇ 90ರಷ್ಟು ಬಿಪಿಎಲ್ ಪಡಿತರ ಚೀಟಿದಾರರಿದ್ದಾರೆ. ದೇವನಹಳ್ಳಿ ಕ್ಷೇತ್ರದಲ್ಲಿ ಶೇ90, ಹೊಳೆನರಸೀಪುರದಲ್ಲಿ ಶೇ 92ರಷ್ಟು ಬಿಪಿಎಲ್ ಕಾರ್ಡ್ ಕುಟುಂಬಗಳಿವೆ. ಮಾನದಂಡಗಳ ಆಧಾರದಲ್ಲಿ ಪಡಿತರ ಚೀಟಿಗಳನ್ನು ಪರಿಶೀಲಿಸಬೇಕಿದೆ' ಎಂದರು.

ಅನರ್ಹರ ಚೀಟಿ ರದ್ದತಿಗೆ ಆಹಾರ ಇಲಾಖೆ ತೆಗೆದುಕೊಂಡ ಕ್ರಮ

ವರ್ಗ	ಅನರ್ಹ	ಅನರ್ಹ ಸದಸ್ಯರ ಸಂಖ್ಯೆ	ಅಮಾನತು/ರದ್ದು/ಎಪಿಎಲ್‌ಗೆ ಬದಲಾವಣೆ	ತೆಗೆದುಹಾಕಲಾದ ಸದಸ್ಯರ ಸಂಖ್ಯೆ
ಆದಾಯ ತೆರಿಗೆ ಪಾವತಿದಾರರು	98,473	-	64,589	-
ಸರ್ಕಾರಿ ನೌಕರರು	4,036	-	3355	-
₹1.20 ಲಕ್ಷಕ್ಕಿಂತ ಹೆಚ್ಚು ವಾರ್ಷಿಕ ಆದಾಯ	10,09,476	-	39,159	-
ಮೃತಪಟ್ಟ ಸದಸ್ಯರು	-	1,59,319	-	1,58,355
ಪಡಿತರ ಪಡೆಯದ ಕಾರಣಕ್ಕೆ ಅಮಾನತು	2,75,667	-	2,74,880	-
ಒಟ್ಟು	13,87,652	1,59,319	3,81,983	1,58,355

ರಾಜ್ಯದಲ್ಲಿರುವ ಪಡಿತರ ಚೀಟಿಗಳು

ಪಡಿತರಚೀಟಿ	ಸಂಖ್ಯೆ	ಸದಸ್ಯರು
ಅಂತ್ಯೋದಯ	10,68,042	43,33,693
ಬಿಪಿಎಲ್	1,14,60,137	3,92,47,089
ಎಪಿಎಲ್	25,62,355	87,87,753
ಒಟ್ಟು	1,50,90,534	5,23,68,525

ಕೇಂದ್ರದ ಮಾನದಂಡದ ವಿಚಾರವನ್ನು ಈಗ ಪ್ರಸ್ತಾಪಿಸುತ್ತಿರುವವರು ಇಷ್ಟು ದಿನ ಏಕೆ ಸುಮ್ಮನಿದ್ದರು. ಕಳೆದ ಒಂದು ವಾರ ಏಕೆ ಹೇಳಲಿಲ್ಲ? ರಾಜ್ಯ ಸರ್ಕಾರ ಗೊಂದಲ ಮಾಡುತ್ತಿರುವುದು ಏಕೆ?
ಎಚ್.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ

'ಕೇಂದ್ರದ ನಿರ್ದೇಶನದಂತೆ ಅನರ್ಹ ಚೀಟಿ ಪತ್ತೆ'

'ಕೇಂದ್ರ ಸರ್ಕಾರದ ನಿರ್ದೇಶನದಂತೆ ಅನರ್ಹ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಲು ಕ್ರಮ ತೆಗೆದುಕೊಳ್ಳಲಾಗಿದೆ' ಎಂದು ಮುನಿಯಪ್ಪ ತಿಳಿಸಿದರು.

ಕೇಂದ್ರ ಆಹಾರ ಮತ್ತು ಸಾರ್ವಜನಿಕ ವಿತರಣೆ ಇಲಾಖೆಯ ಕಾರ್ಯದರ್ಶಿ ಸಂಜೀವ್ ಚೋಪ್ರಾ ಅವರು ಎಲ್ಲ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳಿಗೆ ಅ. 22ರಂದು ಪತ್ರ ಬರೆದಿದ್ದರು. 'ಈ ಹಿಂದೆ ಹಲವು ಬಾರಿ ಮತ್ತು ಆಗಸ್ಟ್ 29ರಂದು ನಡೆದ ಎಲ್ಲ ರಾಜ್ಯಗಳ ಆಹಾರ ಇಲಾಖೆಯ ಕಾರ್ಯದರ್ಶಿಗಳ ಸಮಾವೇಶದಲ್ಲಿ, ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಫಲಾನುಭವಿಗಳನ್ನು ಗುರುತಿಸಲು ಕ್ರಮ ತೆಗೆದುಕೊಳ್ಳುವಂತೆ ಸಲಹೆ ನೀಡಲಾಗಿತ್ತು. ಅನರ್ಹ ಪಡಿತರ ಚೀಟಿಗಳನ್ನು ಗುರುತಿಸಲು ಪರಿಷ್ಕರಣೆ ಕಾರ್ಯ ಕೈಗೊಳ್ಳಬೇಕು. ಈ ಕ್ರಮ ತೆಗೆದುಕೊಳ್ಳದೇ ಇದ್ದರೆ ಅರ್ಹ ಫಲಾನುಭವಿಗಳಿಗೆ ಪಡಿತರ ವಿತರಣೆಯಲ್ಲಿ ಸಮಸ್ಯೆ ಆಗಬಹುದು' ಎಂದು ಪತ್ರದಲ್ಲಿ ಅವರು ಎಚ್ಚರಿಕೆ ನೀಡಿದ್ದರು.

ಈ ಪತ್ರವನ್ನು ಪ್ರದರ್ಶಿಸಿದ ಮುನಿಯಪ್ಪ, 'ಕೇಂದ್ರ ಸರ್ಕಾರದ ನಿಯಮಗಳ ಅನ್ವಯವೇ ಕ್ರಮ ತೆಗೆದುಕೊಳ್ಳಲಾಗಿದೆ' ಎಂದು ವಿವರಿಸಿದರು.

ಕೇಂದ್ರದ ಮೋದಿ ಸರ್ಕಾರ ಡಿಜಿಟಲೀಕರಣದ ಹೆಸರಿನಲ್ಲಿ 5.80 ಕೋಟಿ ಪಡಿತರ ಚೀಟಿಗಳನ್ನು ರದ್ದುಪಡಿಸಿದೆ. ಬಿಜೆಪಿ ನಾಯಕರೇಕೆ ಈಗ ಗಪ್-ಚುಪ್ ಆಗಿದ್ದಾರೆ
ಎಂ.ಬಿ. ಪಾಟೀಲ, ಕೈಗಾರಿಕಾ ಸಚಿವ

ಪಡಿತರ ಚೀಟಿ ಪರಿಷ್ಕರಣೆ ವೇಳೆ ಶೇ 1 ಅಥವಾ 2ರಷ್ಟು ಗೊಂದಲಗಳಾಗಿವೆ. ಲೋಪ ಇದ್ದರೆ ಸರಿಪಡಿಸಲಾಗುವುದು. ಈ ಗೊಂದಲದ ಸಂಪೂರ್ಣ ಹೊಣೆ ನಾನೇ ಹೊತ್ತುಕೊಳ್ಳುತ್ತೇನೆ
ಕೆ.ಎಚ್. ಮುನಿಯಪ್ಪ, ಆಹಾರ ಸಚಿವ

ಸುದ್ದಿ 2 ನಿಮಿಷ

ಸಿದ್ದರಾಮಯ್ಯಗೆ ಇದು ಕೊನೇ ಅಧಿವೇಶನ: ವಿಜಯೇಂದ್ರ

ಬೆಳಗಾವಿ: 'ಸುವರ್ಣ ವಿಧಾನಸೌಧದಲ್ಲಿ ಡಿಸೆಂಬರ್ 9ರಿಂದ ಆರಂಭವಾಗಲಿರುವ ವಿಧಾನ ಮಂಡಲ ಚಳಿಗಾಲದ ಅಧಿವೇಶನವು ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಪಾಲ್ಗೊಳ್ಳುವ ಕೊನೆಯ ಅಧಿವೇಶನವಾಗಲಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

'ಇಷ್ಟು ದಿನ ತಾವು ಭ್ರಷ್ಟರಲ್ಲ ಎಂದು ಸಿದ್ದರಾಮಯ್ಯ ಹೇಳಿಕೊಳ್ಳುತ್ತಿದ್ದರು. ಆದರೆ, ಈಗ ಅವರ ಇಡೀ ಕುಟುಂಬವೇ ಮುಡಾ ನಿವೇಶನ ಹಂಚಿಕೆ ಹಗರಣದಲ್ಲಿ ಮುಳುಗಿದೆ' ಎಂದು ಅವರು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

'ಕಾಂಗ್ರೆಸ್ ಶಾಸಕರಿಂದ ಮುಖ್ಯಮಂತ್ರಿಗೆ ಬ್ಲ್ಯಾಕ್‌ಮೇಲ್ ನಡೆದಿದೆ. ಆದರೆ, ನಾವು 'ಆಪರೇಷನ್ ಕಮಲ' ಮಾಡುತ್ತೇವೆ ಎಂದು ಸಿದ್ದರಾಮಯ್ಯ ವಾಗ್ದಾಳಿ ನಡೆಸಿದ್ದಾರೆ. ಭ್ರಷ್ಟಾಚಾರದಿಂದ ರಾಜ್ಯ ಸಂಕಷ್ಟಕ್ಕೆ ಸಿಲುಕಿದೆ' ಎಂದರು. 'ವಕ್ಫ್ ಮಂಡಳಿಗೆ ರೈತರು ಮತ್ತು ಮಠ-ಮಾನ್ಯಗಳು ಗುರಿಯಾಗಿವೆ. ಬಿಪಿಎಲ್ ಪಡಿತರ ಚೀಟಿ ಹಿಂಪಡೆಯುತ್ತಿರುವುದು ಬಡವರ ಮೇಲೆ ಪರಿಣಾಮ ಬೀರಿದೆ. ವಿಧಾನಮಂಡಲ ಚಳಿಗಾಲದ ಅಧಿವೇಶನದಲ್ಲಿ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳಲು ಬಿಜೆಪಿ ಮತ್ತು ಜೆಡಿಎಸ್ ನಾಯಕರು ಸಭೆ ನಡೆಸುತ್ತೇವೆ' ಎಂದರು.

'ಬಡವರ ಜೀವನ ನರಕ ಮಾಡಿದ ಸಿಎಂ'

ಬೆಂಗಳೂರು: 'ಅನ್ನಭಾಗ್ಯ' ಎಂದು ಜನರ ಅನ್ನ ಕಸಿದುಕೊಳ್ಳುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಕರ್ನಾಟಕದ ಜನರ ಜೀವನ ನರಕ ಮಾಡಲು ಹೊರಟಿದ್ದಾರೆ ಎಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ವಾಗ್ದಾಳಿ ನಡೆಸಿದರು.

ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಅವರ ಜತೆ ಜಯನಗರದ ಅರಸು ಕಾಲೊನಿಯಲ್ಲಿ ಬಿಪಿಎಲ್ ಪಡಿತರ ಚೀಟಿ ರದ್ದಾಗಿರುವ ಕುಟುಂಬದವರನ್ನು ಭೇಟಿ ಮಾಡಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದರು. 'ಕೊಳೆಗೇರಿಗಳಲ್ಲಿ ವಾಸಿಸಲು ಆಗದ ಜಾಗದಲ್ಲಿ ಏಳು ಜನ ವಾಸವಾಗಿದ್ದಾರೆ. ಅಂತಹವರ ಬಿಪಿಎಲ್ ಪಡಿತರ ಚೀಟಿ ರದ್ದಾಗಿದೆ. ಅವರು ತೆರಿಗೆ ಕಟ್ಟುವವರು ಅಂತ ಹೇಳುತ್ತಾರೆ. ಅವರೆಲ್ಲ ತೆರಿಗೆ ಕಟ್ಟುತ್ತಾರಾ' ಎಂದು ಪ್ರಶ್ನಿಸಿದರು.

'ವಿಧಾನಸೌಧಕ್ಕೇ ಬೀಗ ಹಾಕುತ್ತವೆ:' 'ಬೆಳಗಾವಿಯಲ್ಲಿ ವಿಧಾನ ಮಂಡಲದ ಅಧಿವೇಶನ ಆರಂಭವಾಗುವ ಮೊದಲೇ ಜನರಿಗೆ ಬಿಪಿಎಲ್ ಪಡಿತರ ಚೀಟಿ ವಾಪಸ್ ಮಾಡಬೇಕು. ಇಲ್ಲವಾದರೆ ವಿಧಾನಸೌಧಕ್ಕೆ ಬೀಗ ಹಾಕುತ್ತೇವೆ' ಎಂದು ವಿರೋಧಪಕ್ಷದ ನಾಯಕ ಆರ್.ಅಶೋಕ ಎಚ್ಚರಿಕೆ ನೀಡಿದರು.'ಮುಖ್ಯಮಂತ್ರಿ ಸಿದ್ದರಾಮಯ್ಯ ಅನ್ನಭಾಗ್ಯವನ್ನು ಕನ್ನಭಾಗ್ಯ ಮಾಡಿದ್ದಾರೆ. ಅನ್ನವನ್ನು ಕದ್ದು ಲಕ್ಷಾಂತರ ಜನರಿಗೆ ಅನ್ಯಾಯ ಮಾಡಿದ್ದಾರೆ. ಅರಸು ಕಾಲೊನಿಯಲ್ಲಿ 45 ವರ್ಷಗಳಿಂದ ಪಡಿತರ ಕಾರ್ಡ್ ಹೊಂದಿದ ವೃದ್ಧೆ ಈಗ ಅರ್ಹತೆ ಕಳೆದುಕೊಂಡಿದ್ದಾರೆ. ಈಗಲೂ ಸರ್ಕಾರಿ ನೌಕರರ ಬಳಿ ಬಿಪಿಎಲ್ ಪಡಿತರ ಚೀಟಿ ಇದೆ. ಒಂದು ಕಡೆ ಮುಖ್ಯಮಂತ್ರಿ ಭಯ ಬೇಡ ಎಂದರೆ, ಆಹಾರ ಸಚಿವರು ಹೊಸದಾಗಿ ಅರ್ಜಿ ಹಾಕಲಿ ಎನ್ನುತ್ತಿದ್ದಾರೆ. ಯಾರ ಮಾತು ನಂಬಬೇಕು' ಎಂದರು.

ವೈದ್ಯಕೀಯ ಸೀಟು ಸಿಗದವರ ಶುಲ್ಕ ವಾಪಸ್

ಬೆಂಗಳೂರು: ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳ ಸೀಟು ಸಿಗದ 4,897 ವಿದ್ಯಾರ್ಥಿಗಳು ಪಾವತಿಸಿದ್ದ ಶುಲ್ಕ ಹಾಗೂ ಮುಂಗಡ ಠೇವಣಿ ಹಣವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹಿಂದಿರುಗಿಸಿದೆ.

'ಸ್ಟ್ರೇ ವೇಕೆನ್ಸಿ ಸುತ್ತಿನ ಸೀಟು ಹಂಚಿಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವುದಕ್ಕೂ ಮೊದಲು ಆಸಕ್ತ ಅಭ್ಯರ್ಥಿಗಳಿಂದ ವೈದ್ಯಕೀಯ, ದಂತ ವೈದ್ಯಕೀಯ ಕೋರ್ಸ್ ಶುಲ್ಕವನ್ನು ಮುಂಗಡವಾಗಿ ಪಡೆಯಲಾಗಿತ್ತು. ನಂತರ ಆಪ್ಷನ್ ದಾಖಲಿಸಲು ಅವಕಾಶ ನೀಡಲಾಗಿತ್ತು. ಸೀಟು ಸಿಗದವರ ಶುಲ್ಕ ಹಿಂದಿರುಗಿಸಲಾಗಿದೆ. ಇನ್ನೂ 160 ವಿದ್ಯಾರ್ಥಿಗಳು ಬ್ಯಾಂಕ್‌ನ ಐಎಫ್‌ಎಸ್‌ಸಿ ಕೋಡ್ ತಪ್ಪಾಗಿ ನಮೂದಿಸಿದ್ದಾರೆ. ಅಂತಹವರಿಗೆ ಹಣ ಹಿಂದಿರುಗಿಸಲಾಗಿಲ್ಲ' ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ. ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳ ವಿಶೇಷ ಸ್ಟ್ರೇ ವೇಕೆನ್ಸಿ ಸುತ್ತಿನ ಸೀಟು ಹಂಚಿಕೆ ಪ್ರಕ್ರಿಯೆಗೆ ಆಪ್ಷನ್ ದಾಖಲಿಸಲು ನ. 22 ಕೊನೆಯ ದಿನವಾಗಿದೆ.

ಪಿ.ಜಿ ಆಯುಷ್ 2ನೇ ಸುತ್ತು: ಪಿ.ಜಿ ಆಯುಷ್ ಎರಡನೇ ಸುತ್ತಿನ ಸೀಟು ಹಂಚಿಕೆಯ ಫಲಿತಾಂಶವನ್ನು ಪ್ರಕಟಿಸಿದ್ದು, ಸೀಟು ಹಂಚಿಕೆ ಯಾದ ಅಭ್ಯರ್ಥಿಗಳು ನ. 23ರ ಒಳಗೆ ಶುಲ್ಕ ಪಾವತಿಸಿ, ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಂಡು ಕಾಲೇಜುಗಳಿಗೆ ಪ್ರವೇಶ ಪಡೆಯಬೇಕು ಎಂದು ಪ್ರಸನ್ನ ಹೇಳಿದ್ದಾರೆ.

ಲೋಕಾಯುಕ್ತ ದಾಳಿಯಲ್ಲಿ ಪತ್ತೆಯಾದ ಆಸ್ತಿಗಳ ವಿವರ

ಹತ್ತಾರು ಎಕರೆ ಜಮೀನು, ಕೋಟಿ ಮೌಲ್ಯದ ಚಿನ್ನಾಭರಣ

ಬೆಂಗಳೂರು: ಆದಾಯ ಮೀರಿದ ಆಸ್ತಿ ಸಂಪಾದಿಸಿದ ಆರೋಪದ ಮೇಲೆ, ನಾಲ್ವರು ಅಧಿಕಾರಿಗಳಿಗೆ ಸೇರಿದ ವಿವಿಧ ಕಟ್ಟಡ, ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆ ನಡೆಸಿದ ಲೋಕಾಯುಕ್ತ ಪೊಲೀಸರು ಅಪಾರ ಪ್ರಮಾಣದ ಆಸ್ತಿ ಪತ್ತೆ ಮಾಡಿದ್ದಾರೆ. ಅದರ ವಿವರ ಇಲ್ಲಿದೆ...

ಕೃಷ್ಣವೇಣಿ ಅವರ ಚಿಕ್ಕಬಳ್ಳಾಪುರ ಮನೆಯಲ್ಲಿ ಪತ್ತೆಯಾದ ಚಿನ್ನಾಭರಣಗಳು ಮತ್ತು ಬೆಳ್ಳಿಯ ವಸ್ತುಗಳು

₹11.93 ಕೋಟಿ ಆಸ್ತಿಯ ಭೂವಿಜ್ಞಾನಿ

₹11.93 ಕೋಟಿ ಆಸ್ತಿಯ ಒಟ್ಟು ಮೌಲ್ಯ

ಎಂ.ಸಿ. ಕೃಷ್ಣವೇಣಿ, ಹಿರಿಯ ಭೂವಿಜ್ಞಾನಿ, ಮಂಗಳೂರು

- 26 ಎಕರೆ ಕಾಫಿ ಪ್ಲಾಂಟೇಷನ್, ಬೆಂಗಳೂರಿನ ಯಲಹಂಕದಲ್ಲಿ ಒಂದು ಫ್ಲಾಟ್ ಹಾಗೂ ನಿರ್ಮಾಣ ಹಂತದ ಒಂದು ವಾಣಿಜ್ಯ ಸಂಕೀರ್ಣ. ₹10.41 ಕೋಟಿ ಮೌಲ್ಯದ ಸ್ಥಿರಾಸ್ತಿ
- ₹66 ಲಕ್ಷದ ಚಿನ್ನಾಭರಣ, ₹60 ಲಕ್ಷ ಮೌಲ್ಯದ ವಾಹನಗಳು, ₹24.40 ಲಕ್ಷ ಮೌಲ್ಯದ ಗೃಹೋಪಯೋಗಿ ವಸ್ತುಗಳು, ₹56,450 ನಗದು

ಅಪಾರ ಪ್ರಮಾಣದ ಚಿನ್ನ

ಎನ್.ಕೆ.ತಿಪ್ಪೇಸ್ವಾಮಿ, ನಿರ್ದೇಶಕ, ನಗರ ಯೋಜನೆ, ಬೆಂಗಳೂರು

₹3.46 ಕೋಟಿ ಆಸ್ತಿಯ ಒಟ್ಟು ಮೌಲ್ಯ

- ₹2.50 ಕೋಟಿ ಮೌಲ್ಯದ 2 ಬಂಗಲೆ, 1 ನಿವೇಶನ ಮತ್ತು 7 ಎಕರೆ 20 ಗುಂಟೆ ಕೃಷಿ ಜಮೀನು
- ₹58.73 ಲಕ್ಷ ಮೌಲ್ಯದ ಚಿನ್ನಾಭರಣ ಮತ್ತು ಬೆಳ್ಳಿಯ ವಸ್ತುಗಳು, ದುಬಾರಿ ಕೈಗಡಿಯಾರಗಳು. ಎಂಟು ಉಂಗುರಗಳು, 10 ಚಿನ್ನದ ಸರಗಳು
- ₹29 ಲಕ್ಷ ಮೌಲ್ಯದ ವಾಹನಗಳು, ₹8 ಲಕ್ಷ ನಗದು, ₹15,000 ಮೌಲ್ಯದ ಇತರ ವಸ್ತುಗಳು

ನೀರಾವರಿ ಅಧಿಕಾರಿ ಬಳಿ 25 ಎಕರೆ

ಮಹೇಶ್, ವ್ಯವಸ್ಥಾಪಕ ನಿರ್ದೇಶಕ, ಕಾವೇರಿ ನೀರಾವರಿ ನಿಗಮ, ಮಂಡ್ಯ

ಮಹೇಶ್ ಅವರ ಬಂಗಲೆ

₹6.89 ಕೋಟಿ ಆಸ್ತಿಯ ಒಟ್ಟು ಮೌಲ್ಯ

- 25 ಎಕರೆ ಕೃಷಿ ಭೂಮಿ, 25 ನಿವೇಶನಗಳು, ಒಂದು ಬಂಗಲೆ ಸೇರಿ ಒಟ್ಟು ಸ್ಥಿರಾಸ್ತಿ ಮೌಲ್ಯ ₹4.76 ಕೋಟಿ
- ₹1.82 ಲಕ್ಷ ನಗದು, ₹15 ಲಕ್ಷದ ಚಿನ್ನಾಭರಣ, ₹25 ಲಕ್ಷ ಮೌಲ್ಯದ ವಾಹನಗಳು
- ಐಷಾರಾಮಿ ಗೃಹೋಪಯೋಗಿ ವಸ್ತುಗಳ ಮೌಲ್ಯ ಬರೋಬ್ಬರಿ ₹1.71 ಕೋಟಿ

ಅಬಕಾರಿ ಅಧಿಕಾರಿಯ ಬಹುಹೂಡಿಕೆ

ಮೋಹನ್ ಕೆ. ಅಬಕಾರಿ ಸೂಪರಿಂಟೆಂಡೆಂಟ್, ಜಂಟಿ ಆಯುಕ್ತರ ಕಚೇರಿ, ಬೆಂಗಳೂರು ದಕ್ಷಿಣ

₹4.37 ಕೋಟಿ ಆಸ್ತಿಯ ಒಟ್ಟು ಮೌಲ್ಯ

- ₹3.22 ಕೋಟಿ ಮೌಲ್ಯದ 2 ವಾಸದ ಮನೆಗಳು, 3 ನಿವೇಶನಗಳು, 2 ಎಕರೆ 25 ಗುಂಟೆ ಕೃಷಿ ಜಮೀನು
- ₹44.58 ಲಕ್ಷದ ಚಿನ್ನಾಭರಣ, ₹35 ಲಕ್ಷದ ವಾಹನಗಳು, ₹35 ಲಕ್ಷದ ನಿಶ್ಚಿತ ಠೇವಣಿ

ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆ ನೇತೃತ್ವದಲ್ಲಿ ಪ್ರತಿಭಟನೆ

ಕಸ್ತೂರಿರಂಗನ್ ವರದಿ ತಿರಸ್ಕರಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಸ್ತೂರಿರಂಗನ್ ವರದಿಯನ್ನು ಸಂಪೂರ್ಣವಾಗಿ ತಿರಸ್ಕರಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ರಾಜ್ಯ ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

'ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಸಾವಿರಾರು ಅರಣ್ಯವಾಸಿಗಳು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಕಸ್ತೂರಿರಂಗನ್ ವರದಿಯನ್ನು ತಿರಸ್ಕರಿಸುವಂತೆ ರಾಜ್ಯ ಸರ್ಕಾರ ಈಗಾಗಲೇ ಶಿಫಾರಸು ಮಾಡಿದೆ. ಅವೈಜ್ಞಾನಿಕವಾಗಿರುವ ಈ ವರದಿ ಜನಜೀವನಕ್ಕೆ ಮಾರಕವಾಗಿದ್ದು, ವಾಸ್ತವಕ್ಕೆ ವಿರುದ್ಧವಾಗಿದೆ. ಆದ್ದರಿಂದ ಈ ವರದಿಯನ್ನು ಕೇಂದ್ರ ಸರ್ಕಾರವೂ ತಿರಸ್ಕರಿಸಬೇಕು. ಇಲ್ಲದಿದ್ದರೆ, ಡಿಸೆಂಬರ್‌ನಲ್ಲಿ ದೆಹಲಿ ಚಲೋ ಹಮ್ಮಿಕೊಳ್ಳಲಾಗುವುದು' ಎಂದು ಪ್ರತಿಭಟನಕಾರರು ಹೇಳಿದರು.

ವೇದಿಕೆಯ ಅಧ್ಯಕ್ಷ ರವೀಂದ್ರ ನಾಯ್ಕ ಮಾತನಾಡಿ, 'ರಾಜ್ಯ ಸರ್ಕಾರ ಅರಣ್ಯ ಹಕ್ಕು ಕಾಯ್ದೆ ಅನುಷ್ಠಾನ ಮಾಡುವಲ್ಲಿ ಸಂಪೂರ್ಣವಾಗಿ ವಿಫಲಗೊಂಡಿದೆ. ಕಾನೂನುಗಳನ್ನು ಅನುಸರಿಸದೇ ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಅರಣ್ಯ ಹಕ್ಕು ಕಾಯ್ದೆ ಅಡಿಯಲ್ಲಿ ರಾಜ್ಯದ ಬುಡಕಟ್ಟು ಪಂಗಡದವರಿಗೆ 12,481, ಪಾರಂಪರಿಕ ಅರಣ್ಯವಾಸಿಗಳಿಗೆ 1,976, ಸಮೂಹ ಉದ್ದೇಶಕ್ಕೆ 1,341 ಸೇರಿದಂತೆ ಒಟ್ಟು 15,798 ಅರ್ಜಿಗಳನ್ನು ಮಾತ್ರ ಮಾನ್ಯ ಮಾಡಲಾಗಿದೆ' ಎಂದರು.

'ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವಾಲಯ ಹಾಗೂ ಗುಜರಾತ್ ಹೈಕೋರ್ಟ್‌ನ ಆದೇಶದಂತೆ ಅರಣ್ಯ ಹಕ್ಕು ಕಾಯ್ದೆ ಅಡಿಯಲ್ಲಿ ಮೂರು ತಲೆಮಾರಿನಿಂದ ಜಮೀನಿನಲ್ಲಿ ನೆಲಸಿರುವುದನ್ನು ದೃಢಪಡಿಸುವ ದಾಖಲೆಗಳನ್ನು ನೀಡುವ ಅಗತ್ಯವಿಲ್ಲ' ಎಂದರು.

'1996ರ ಅರಣ್ಯ ಸಂರಕ್ಷಣಾ ಕಾಯ್ದೆ ಕಲಂ 2ರಂತೆ ಕರ್ನಾಟಕ ರಾಜ್ಯದಲ್ಲಿ 14,848.83 ಹೆಕ್ಟೇರ್ ಪ್ರದೇಶವನ್ನು 19,348 ಅರಣ್ಯವಾಸಿ ಗಳ ಕುಟುಂಬಕ್ಕೆ ಷರತ್ತುಬದ್ಧವಾಗಿ ಮಂಜೂರು ಮಾಡಲಾಗಿತ್ತು. ಆದರೆ, ಇದುವರೆಗೂ ಹಕ್ಕು ಪತ್ರಗಳನ್ನು ವಿತರಿಸಿಲ್ಲ. ಅರಣ್ಯ ಪ್ರದೇಶದಲ್ಲಿನ ಸಾಗುವಳಿ ಜಮೀನಿನಲ್ಲಿ ಅಸಮರ್ಪಕ ಜಿಪಿಎಸ್ ಸರ್ವೆ ಮಾಡಲಾಗಿದೆ. ಇದರಿಂದ ಉತ್ತರ ಕನ್ನಡ ಜಿಲ್ಲೆಯೊಂದರಲ್ಲೇ ಸುಮಾರು 32 ಸಾವಿರ ಅರಣ್ಯವಾಸಿಗಳು ಪುನರ್ ಜಿಪಿಎಸ್ ಸರ್ವೆ ಮಾಡುವಂತೆ ಮೇಲ್ಮನವಿ ಸಲ್ಲಿಸಿದ್ದಾರೆ' ಎಂದು ಹೇಳಿದರು. 'ಅರಣ್ಯ ಹಕ್ಕು ಕಾಯ್ದೆ ಅಡಿಯಲ್ಲಿ ಅರ್ಜಿ ಸಲ್ಲಿಸಲು ವಂಚಿತರಾದ ಎಲ್ಲ ಅರಣ್ಯವಾಸಿಗಳಿಗೆ ಪುನಃ ಅರ್ಜಿ ಸಲ್ಲಿಸಲು ಅವಕಾಶ ನೀಡಬೇಕು. ನಮ್ಮನ್ನು ಕಾನೂನುಬಾಹಿರವಾಗಿ ಒಕ್ಕಲೆಬ್ಬಿಸುವುದನ್ನು ತಡೆಯಬೇಕು. ಅರಣ್ಯ ಸಿಬ್ಬಂದಿ ನೀಡುತ್ತಿರುವ ಕಿರುಕುಳ ತಪ್ಪಿಸಬೇಕು' ಎಂದು ಆಗ್ರಹಿಸಿದರು.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್, ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಉಪಸ್ಥಿತರಿದ್ದರು.

ರಾಜ್ಯ ಅರಣ್ಯ ಭೂಮಿ ಹಕ್ಕುಗಳ ಹೋರಾಟಗಾರರ ವೇದಿಕೆ ಸದಸ್ಯರು ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ/ ಎಂ.ಎಸ್. ಮಂಜುನಾಥ್

'ಅರಣ್ಯವಾಸಿಗಳ ಜತೆ ಸರ್ಕಾರ'

'ಕೇಂದ್ರ ಸರ್ಕಾರ ಕಸ್ತೂರಿ ರಂಗನ್ ವರದಿಯನ್ನು ತಿರಸ್ಕರಿಸುವವರೆಗೂ ನಿಮ್ಮ ಹೋರಾಟದ ಜೊತೆ ರಾಜ್ಯ ಸರ್ಕಾರ ಇರಲಿದೆ' ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ ಭರವಸೆ ನೀಡಿದರು.

ಅರಣ್ಯ ಜಮೀನಿನಲ್ಲಿ ಸಾಗುವಳಿ ಮಾಡುತ್ತಿರುವವರಿಗೆ ಹಕ್ಕುಪತ್ರ ನೀಡುವ ಕುರಿತು ಒಂದೇ ಬಾರಿ ಎಲ್ಲ ಪ್ರಕರಣಗಳ ವಿಚಾರಣೆಗೆ ಕೋರ್ಟ್‌ಗೆ ಕೋರುವ ಬಗ್ಗೆ ಕಾನೂನು ತಜ್ಞರೊಂದಿಗೆ ಚರ್ಚಿಸಲಾಗುವುದು' ಎಂದು ತಿಳಿಸಿದರು. 'ಅರಣ್ಯ ಹಕ್ಕು ಕಾಯ್ದೆಯಡಿ ಗದಗ ತಾಲ್ಲೂಕಿನಲ್ಲಿ 1,080 ಅರ್ಜಿಗಳಲ್ಲಿ 1,028 ಪ್ರಕರಣಗಳಲ್ಲಿ ಹಕ್ಕುಪತ್ರ ನೀಡಲಾಗಿದೆ' ಎಂದು ತಿಳಿಸಿದರು.

'ಅಧಿಕಾರಿಗಳಿಗೆ ಭೂಕಬಳಿಕೆ ಮತ್ತು ಅನಧಿಕೃತ ಸಾಗುವಳಿ ವ್ಯತ್ಯಾಸ ಗೊತ್ತಿಲ್ಲ. ಪ್ರಕರಣಗಳ ವಾಪಸ್‌ಗೆ ಸರ್ಕಾರ ಚಿಂತನೆ ನಡೆಸಿದೆ. ನಿಮಗೆ ನ್ಯಾಯ ಕೊಡಿಸಲು ನಾನು, ಸಮಾಜ ಕಲ್ಯಾಣ, ಅರಣ್ಯ ಸಚಿವರು ಸಭೆ ನಡೆಸಿ, ಚರ್ಚಿಸುತ್ತೇವೆ' ಎಂದರು.

'ಪರಿಸ್ಥಿತಿ ಏನಾಗುತ್ತದೆಯೋ ಹೇಳಲಾಗದು'

ಪ್ರಜಾವಾಣಿ ವಾರ್ತೆ

ಮೈಸೂರು: 'ಇವತ್ತಿನ ರಾಜಕೀಯ ಬೆಳವಣಿಗೆಗಳನ್ನು ನೋಡಿದರೆ ಮುಂದೇನಾಗುತ್ತದೆಯೋ ಹೇಳಲಾಗದು' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಇಲ್ಲಿನ ಕಾಂಗ್ರೆಸ್ ಭವನದಲ್ಲಿ ಗುರುವಾರ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿ, 'ಮೈಸೂರಿನಲ್ಲಿ ಪಕ್ಷಕ್ಕೆ ಸರಿಯಾದ ಕಟ್ಟಡವೇ ಇಲ್ಲ, ನೀವ್ಯಾವ ಸೀಮೆ ಮುಖ್ಯಮಂತ್ರಿ ರೀ?' ಎಂದು ಸಿದ್ದರಾಮಯ್ಯ ಅವರಿಗೆ ಮೊದಲ ಅವಧಿಯಲ್ಲಿ ಕೋಪದಿಂದಲೇ ಕೇಳಿದ್ದೆ. ಅವರಿಗೆ ಅದು 2ನೇ ಅವಧಿಯಲ್ಲಿ ಮನಸ್ಸಿಗೆ ಬಂದಿದೆ. ₹15 ಕೋಟಿ ವೆಚ್ಚದಲ್ಲಿ ನಿರ್ಮಿಸಲು ನಿರ್ಧರಿಸಿರುವುದು ಒಳ್ಳೆಯ ಬೆಳವಣಿಗೆ. ರಾಜಕೀಯದ ಪರಿಸ್ಥಿತಿ ಏನೇನಾಗುತ್ತದೆಯೋ ಏನೋ ಹೇಳಲಾಗದು. ತ್ವರಿತವಾಗಿ ಶಂಕುಸ್ಥಾಪನೆ ನೆರವೇರಿಸಿರಿ. ನಮ್ಮ ಸರ್ಕಾರ ಇರುವಾಗಲೇ ಕಾಮಗಾರಿಯನ್ನೂ ಮುಗಿಸಿಬಿಡಿ' ಎಂದು ಪರಮೇಶ್ವರ ಪದಾಧಿಕಾರಿಗಳಿಗೆ ಸೂಚಿಸಿದರು.

'ಬಿಜೆಪಿ- ಜೆಡಿಎಸ್‌ನವರು ಯಾವುದೇ ಕಾರಣಕ್ಕೂ ನಮ್ಮ ಸರ್ಕಾರವನ್ನು ಅಸ್ಥಿರಗೊಳಿಸಲಾಗದು. ಅವರು ಶಾಸಕರಿಗೆ ₹ 50 ಕೋಟಿಯೋ, ₹100 ಕೋಟಿಯೋ ಕೊಡಬಹುದು. ಆದರೆ, ನಮ್ಮವರಾರೂ ಹೋಗುವುದಿಲ್ಲ. ಎಷ್ಟೇ ಆಪಾದನೆ ಮಾಡಿದರೂ ಸಿದ್ದರಾಮಯ್ಯ ಗಟ್ಟಿಗೊಳ್ಳುತ್ತಾರೆಯೇ ಹೊರತು ಮೆತ್ತಗಾಗುವುದಿಲ್ಲ. ನಮ್ಮ ಸರ್ಕಾರವನ್ನು ಬೀಳಿಸುವುದು ವಿರೋಧ ಪಕ್ಷದವರ ಕನಸಷ್ಟೆ' ಎಂದರು.

'ನಿಗಮ–ಮಂಡಳಿ: ಶೀಘ್ರದಲ್ಲೇ ಪಟ್ಟಿ ಪ್ರಕಟ'

'ನಿಗಮ–ಮಂಡಳಿಗಳಿಗೆ ಸದಸ್ಯರು ಹಾಗೂ ನಿರ್ದೇಶಕರ ನೇಮಕದ ಪಟ್ಟಿ ಎರಡು ತಿಂಗಳ ಹಿಂದೆಯೇ ಸಿದ್ಧವಾಗಿದ್ದು, ಶೀಘ್ರದಲ್ಲೇ ಬಿಡುಗಡೆ ಮಾಡಲಾಗುವುದು' ಎಂದು ಆಯ್ಕೆ ಸಮಿತಿಯ ಅಧ್ಯಕ್ಷರೂ ಆಗಿರುವ ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಡಾ. ಜಿ. ಪರಮೇಶ್ವರ್

'ಉಪ ಚುನಾವಣೆ ಬಳಿಕ ಪಟ್ಟಿ ಪ್ರಕಟಿಸೋಣ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದರು. ಕಾರ್ಯಕರ್ತರಿಗೆ ವಿಸಿಟಿಂಗ್ ಕಾರ್ಡ್ ಪಡೆದುಕೊಳ್ಳಲು ಹಾಗೂ ಇಂಥದೊಂದು ಸ್ಥಾನ ಸಿಕ್ಕಿದೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳಲು ಅವಕಾಶವಾಗಲಿದೆ' ಎಂದರು.

'ನಿಗಮ–ಮಂಡಳಿಗಳಿಗೆ ಈಗಾಗಲೇ ಅಧ್ಯಕ್ಷರನ್ನು ಮುಖ್ಯಮಂತ್ರಿ ನೇಮಿಸಿದ್ದಾರೆ. ಸದಸ್ಯರು, ನಿರ್ದೇಶಕರ ಸ್ಥಾನಕ್ಕೆ ಶಾಸಕರಿಂದ ಕಡ್ಡಾಯವಾಗಿ ಒಬ್ಬ ಮಹಿಳೆ ಸೇರಿದಂತೆ ಮೂರು ಹೆಸರನ್ನು ಪಡೆದಿದ್ದೇವೆ. ಚುನಾವಣೆಯಲ್ಲಿ ಸ್ಪರ್ಧಿಸಿ ಸೋತವರಿಂದ ಶಿಫಾರಸಾದ ಎರಡು ಹೆಸರು, ಜಿಲ್ಲಾ ಕಾಂಗ್ರೆಸ್ ಸಮಿತಿಗಳ ಶಿಫಾರಸನ್ನೂ ಪರಿಗಣಿಸಲಾಗಿದೆ. ಮುಖ್ಯಮಂತ್ರಿಯಿಂದಲೂ ಒಂದಷ್ಟು ಹೆಸರುಗಳು ಬಂದಿವೆ. ಎರಡು ಹಂತದಲ್ಲಿ ಪಟ್ಟಿ ಬಿಡುಗಡೆ ಮಾಡಲಾಗುವುದು. ಪಕ್ಷಕ್ಕಾಗಿ ದುಡಿದ ಕಾರ್ಯಕರ್ತರಿಗೆ ಆದ್ಯತೆ ದೊರೆತಿದೆ' ಎಂದು ಹೇಳಿದರು.

'ಪ್ರತ್ಯೇಕ ಪ್ರವಾಸಿ ಸ್ನೇಹಿ ಪೊಲೀಸ್ ಘಟಕ ತೆರೆಯಲು ಚಿಂತನೆ'

ಮೈಸೂರು: 'ಮೈಸೂರು–ಹಂಪಿ ಸೇರಿದಂತೆ ರಾಜ್ಯದ ಪ್ರಮುಖ ತಾಣಗಳಲ್ಲಿ ಪ್ರವಾಸಿಗರೊಡನೆ ವ್ಯವಹರಿಸಲು ಅನುಕೂಲವಾಗುವಂತೆ ಪ್ರತ್ಯೇಕ ಪ್ರವಾಸಿ ಸ್ನೇಹಿ ಪೊಲೀಸ್ ಘಟಕ ತೆರೆಯಲು ಚಿಂತನೆ ನಡೆದಿದೆ' ಎಂದು ಗೃಹ ಸಚಿವ ಜಿ. ಪರಮೇಶ್ವರ್ ತಿಳಿಸಿದರು.

ನಗರದಲ್ಲಿ ಗುರುವಾರ ಹೋಟೆಲ್ ಉದ್ಯಮಿಗಳ ಜೊತೆ ಆಯೋಜಿಸಿದ್ದ ಸಂವಾದದಲ್ಲಿ ಮಾತನಾಡಿ, 'ರಾಜ್ಯದ ಪ್ರವಾಸಿ ತಾಣಗಳಿಗೆ ದೇಶ–ವಿದೇಶಗಳಿಂದ ಪ್ರವಾಸಿಗರು ಬರುತ್ತಾರೆ. ಹೀಗೆ ಬಂದವರೊಂದಿಗೆ ಪೊಲೀಸರು ಕೆಟ್ಟದಾಗಿ ವರ್ತಿಸಿದರೆ ಇಡೀ ರಾಜ್ಯಕ್ಕೆ ಕೆಟ್ಟ ಹೆಸರು. ಹೀಗಾಗಿ ಪ್ರವಾಸಿ ಸ್ನೇಹಿ ಘಟಕ ತೆರೆಯಲಾಗುವುದು ' ಎಂದರು. 'ಪ್ರವಾಸಿ ಗರೊಡನೆ ಸೌಜನ್ಯದಿಂದ ವರ್ತಿಸುವ, ಹಿಂದಿ–ಇಂಗ್ಲಿಷ್ ಸೇರಿದಂತೆ ವಿವಿಧ ಭಾಷೆಗಳನ್ನು ಮಾತನಾಡುವ ತರಬೇತಿಯನ್ನೂ ನೀಡಲಾಗುವುದು' ಎಂದು ಮಾಹಿತಿ ನೀಡಿದರು.

ಜಗತ್ತಿನಲ್ಲಿ ಕಾಳಿಂಗ ಸರ್ಪದ ನಾಲ್ಕು ಪ್ರಭೇದ ಪತ್ತೆ ಮಾಡಿದ ಡಾ.ಗೌರಿಶಂಕರ್ ತಂಡ

ದಕ್ಷಿಣ ಭಾರತದ ಪ್ರಭೇದಕ್ಕೆ 'ಕಾಳಿಂಗ' ಹೆಸರು

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಜಗತ್ತಿನಾದ್ಯಂತ ಕಾಳಿಂಗ ಸರ್ಪದ ಒಂದೇ ಪ್ರಭೇದ ಇಲ್ಲ. ಬದಲಿಗೆ ನಾಲ್ಕು ಪ್ರಭೇದಗಳಿವೆ ಎಂಬುದನ್ನು ಇಲ್ಲಿನ ಆಗುಂಬೆಯ ವನ್ಯಜೀವಿ, ಉರಗ ತಜ್ಞರ ತಂಡ ಪತ್ತೆ ಮಾಡಿದೆ. ಅದರಲ್ಲಿ ದಕ್ಷಿಣ ಭಾರತದಲ್ಲಿ ಕಾಣಸಿಗುವ ಪ್ರಭೇದಕ್ಕೆ ಈ ಭಾಗದಲ್ಲಿ ಬಳಕೆಯಲ್ಲಿರುವ 'ಕಾಳಿಂಗ' ಎಂಬ ಹೆಸರನ್ನೇ ವೈಜ್ಞಾನಿಕವಾಗಿ ನಾಮಕರಣ ಮಾಡಿದೆ.

'ದಕ್ಷಿಣ ಭಾರತದ ಪಶ್ಚಿಮ ಹಾಗೂ ಪೂರ್ವ ಘಟ್ಟ ಶ್ರೇಣಿಗಳಲ್ಲಿ ಕಾಣಸಿಗುವ ಕಾಳಿಂಗ ಸರ್ಪದ ಪ್ರಭೇದಕ್ಕೆ ಇನ್ನು ಮುಂದೆ ಅಂತರರಾಷ್ಟ್ರೀಯ ಮಟ್ಟದಲ್ಲಿ 'ಒಪಿಫಿಗಸ್ ಕಾಳಿಂಗ' ಎಂದೇ ಸಂಬೋಧಿಸಲಾಗುತ್ತದೆ' ಎಂದು ಉರಗ ತಜ್ಞ ಡಾ.ಪಿ.ಗೌರಿಶಂಕರ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಉರಗ ತಜ್ಞ ಕ್ಯಾಂಟರ್ 1836ರಲ್ಲಿ ಈ ಉರಗ ದೈತ್ಯನ ಪ್ರಭೇದವನ್ನು ಮೊದಲ ಬಾರಿಗೆ ಗುರುತಿಸಿದ್ದರು. ಆಗಿನಿಂದ ಅದಕ್ಕೆ ಒಪಿಫಿಗಸ್ ಅನ್ನಾ (Ophiophagus hannah) ಎಂಬ ವೈಜ್ಞಾನಿಕ ಹೆಸರು ಇದೆ. ಜಗತ್ತಿನಲ್ಲಿ ಒಂದೇ ಪ್ರಭೇದದ ಕಾಳಿಂಗ ಸರ್ಪ ಮಾತ್ರ ಇದೆ ಎಂದೇ ಆಗಿನಿಂದಲೂ ನಂಬಲಾಗಿತ್ತು' ಎಂದು ಹೇಳಿದರು.

'185 ವರ್ಷಗಳ ನಂತರ ಕಾಳಿಂಗ ಸರ್ಪಗಳ ನಾಲ್ಕು ಪ್ರಭೇದ ಇರುವುದು ಪತ್ತೆಯಾಗಿದೆ. ಇದಕ್ಕಾಗಿ 10 ವರ್ಷಗಳ ಕಾಲ ಕ್ಷೇತ್ರ ಅಧ್ಯಯನ ನಡೆಸಿದ್ದೇವೆ. ಡಿಎನ್‌ಎ ಪರೀಕ್ಷೆ ಹಾಗೂ ಅವುಗಳ ದೇಹದ ಮೇಲಿನ ಪಟ್ಟೆಗಳ ನೆರವು ಪಡೆದಿದ್ದೇವೆ' ಎಂದು ಅವರು ತಿಳಿಸಿದರು.

ದಕ್ಷಿಣ ಭಾರತದ ಪಶ್ಚಿಮ ಹಾಗೂ ಪೂರ್ವ ಘಟ್ಟಶ್ರೇಣಿ, ಅಂಡಮಾನ್ ದ್ವೀಪ ಸಮೂಹದಲ್ಲಿ ಕಾಳಿಂಗದ ಒಂದು ಪ್ರಭೇದ ಕಾಣಸಿಕ್ಕಿದೆ. ಉತ್ತರ ಭಾರತದ ಹಿಮಾಲಯ ಪರ್ವತ ಶ್ರೇಣಿಯ ತಪ್ಪಲಿನಲ್ಲಿ ಮತ್ತೊಂದು, ಈಶಾನ್ಯ ಭಾರತ ಹಾಗೂ ದಕ್ಷಿಣ ಚೀನಾ ಭಾಗದಲ್ಲಿ ಮೂರನೇ ಪ್ರಭೇದ ಹಾಗೂ ಮ್ಯಾನ್ಮಾರ್, ಥಾಯ್ಲೆಂಡ್, ವಿಯಟ್ನಾಂ, ಮಲೇಷ್ಯಾ, ಸುಮಾತ್ರಾ, ಬೊರ್ನಿಯೊ, ಜಾವಾ, ಬಾಲಿ ದ್ವೀಪ ಸಮೂಹ, ಫಿಲಿಪ್ಪೀನ್ಸ್ ಭಾಗದಲ್ಲಿ ಕಾಳಿಂಗದ ನಾಲ್ಕನೇ ಪ್ರಭೇದ ಕಾಣಸಿಕ್ಕಿದೆ ಎಂದು ವಿವರಿಸಿದರು.

ತೀರ್ಥಹಳ್ಳಿ ತಾಲ್ಲೂಕಿನ ಆಗುಂಬೆಯಲ್ಲಿ ಕಾಳಿಂಗ ಮನೆ (ಕೆಸಿಆರ್‌ಇ–ಕಾಳಿಂಗ ಸೆಂಟರ್ ಫಾರ್ ರೇನ್ ಫಾರೆಸ್ಟ್ ಇಕಾಲಜಿ) ಸ್ಥಾಪಿಸಿರುವ ಗೌರಿಶಂಕರ್ ಕಾಳಿಂಗ ಸರ್ಪಗಳ ರಕ್ಷಣೆ ಹಾಗೂ ಸಂಶೋಧನೆಯಲ್ಲಿ ತೊಡಗಿದ್ದಾರೆ.

ಡಾ.ಗೌರಿಶಂಕರ್ ನೇತೃತ್ವದ ಸಂಶೋಧನಾ ತಂಡದಲ್ಲಿ ಪ್ರಿಯಾಂಕಾ ಸ್ವಾಮಿ, ಡಾ.ಎಸ್. ಆರ್.ಗಣೇಶ್, ಡಾ. ಎಸ್. ಪಿ. ವಿಜಯಕುಮಾರ್, ರಿನೋನ್ ವಿಲಿಯಮ್ಸ್ ಹಾಗೂ ಪಿ.ಪ್ರಶಾಂತ್ ಕೆಲಸ ಮಾಡಿದ್ದಾರೆ.

ಪಶ್ಚಿಮ ಘಟ್ಟ ಶ್ರೇಣಿಯಲ್ಲಿ ಕಾಣಸಿಕ್ಕುವ ಕಾಳಿಂಗ ಸರ್ಪ

ಈ ಹಿಂದೆ ಕಾಳಿಂಗಕ್ಕೆ ಲ್ಯಾಟಿನ್, ಗ್ರೀಕ್ ಭಾಷೆಯ ಹೆಸರು ಕೊಡಲಾಗಿತ್ತು. ನಮ್ಮ ತಂಡ ಇಲ್ಲಿನ ಪ್ರಭೇದಕ್ಕೆ 'ಕಾಳಿಂಗ' ಹೆಸರು ಕೊಟ್ಟಿದೆ. ಇದಕ್ಕೆ ಜಾಗತಿಕ ಮನ್ನಣೆ ದೊರೆತಿದ್ದು ಕನ್ನಡಿಗರ ಹೆಮ್ಮೆ
ಡಾ.ಪಿ.ಗೌರಿಶಂಕರ್, ವನ್ಯಜೀವಿ ತಜ್ಞ

‘ಬೂಟಾಟಿಕೆ, ಸರ್ಕಾರಿ ಪ್ರಾಯೋಜಕತ್ವದ ದ್ವೇಷ ಭಾವನೆಯ ಪ್ರತೀಕ’ ಎಂದು ಟೀಕಿಸಿ ಪತ್ರ

‘ಜೆಸಿಬಿ ಸಾಹಿತ್ಯ ಪ್ರಶಸ್ತಿ’ಗೆ ಲೇಖಕರ ವಿರೋಧ

ನವದೆಹಲಿ (ಪಿಟಿಐ): ‘ಬ್ರಿಟನ್‌ನ ಬುಲ್ಡೋಜರ್ ತಯಾರಿಕಾ ಕಂಪನಿಯು ಲೇಖಕರಿಗೆ ಉತ್ತೇಜನ ನೀಡಲು ಸ್ಥಾಪಿಸಿರುವ ‘ಜೆಸಿಬಿ ಸಾಹಿತ್ಯ ಪ್ರಶಸ್ತಿ’ಯು ಬೂಟಾಟಿಕೆಯ ಕ್ರಮ’ ಎಂದು ನೂರಕ್ಕೂ ಹೆಚ್ಚು ಸಾಹಿತಿಗಳು, ಅನುವಾದಕರು, ಪ್ರಕಾಶಕರು ಟೀಕಿಸಿದ್ದಾರೆ.

ಭಾರತ, ಪ್ಯಾಲೆಸ್ಟೀನ್‌ನಲ್ಲಿ ಮನೆಗಳ ನೆಲಸಮ ಕಾರ್ಯಾಚರಣೆಯಲ್ಲಿ ಈ ಪ್ರಶಸ್ತಿಯನ್ನು ಸ್ಥಾಪಿಸಿರುವ ಕಂಪನಿಯ ಪಾತ್ರವು ಪ್ರಮುಖವಾಗಿದೆ ಎಂದೂ ಉಲ್ಲೇಖಿಸಿದ್ದಾರೆ.

‘ಭಾರತದ ವಿವಿಧ ರಾಜ್ಯಗಳಲ್ಲಿ ಮುಸಲ್ಮಾನರ ಮನೆಗಳು, ಅಂಗಡಿಗಳು, ಪ್ರಾರ್ಥನಾ ಸ್ಥಳಗಳ ನೆಲಸಮದ ವ್ಯವಸ್ಥಿತ ಅಭಿಯಾನಕ್ಕೆ ಬಿಜೆಪಿ ಸರ್ಕಾರವು ಜೆಸಿಬಿ ಬುಲ್ಡೋಜರ್‌ಗಳನ್ನೇ ಬಳಸುತ್ತಿದೆ. ಸದ್ಯ ಚಾಲ್ತಿಯಲ್ಲಿರುವ ಈ ನೆಲಸಮ ಕಾರ್ಯವನ್ನು ‘ಬುಲ್ಡೋಜರ್ ನ್ಯಾಯ’ ಎಂದೇ ಬಣ್ಣಿಸಲಾಗುತ್ತಿದೆ’ ಎಂದೂ ಬಹಿರಂಗ ಪತ್ರದಲ್ಲಿ ಖಂಡಿಸಿದ್ದಾರೆ.

ಮುಖ್ಯಾಂಶಗಳು

- ‘ಬುಲ್ಡೋಜರ್ ನ್ಯಾಯ’ ಎನ್ನುವುದರಲ್ಲೂ ಈ ಯಂತ್ರ ಸೇರಿದೆ
- ಪ್ರಶಸ್ತಿ ಕೊಟ್ಟರೆ ಜೆಸಿಬಿಗೆ ಮೆತ್ತಿಕೊಂಡ ರಕ್ತ ಹೋಗದು
- ಜೆಸಿಬಿ ಏಜೆಂಟರು ಇಸ್ರೇಲ್ ಸೇನೆ ನಡುವೆ ಒಪ್ಪಂದವಿದೆ

ಉಲ್ಲೇಖಿತ ಜೆಸಿಬಿ ಸಾಹಿತ್ಯ ಪ್ರಶಸ್ತಿ ಪುರಸ್ಕೃತರ ಹೆಸರನ್ನು ನವೆಂಬರ್ 23ಕ್ಕೆ ಪ್ರಕಟಿಸಲಿದ್ದು, ಅದಕ್ಕೆ ಎರಡು ದಿನ ಮೊದಲು ಈ ಹೇಳಿಕೆ ಬಿಡುಗಡೆಯಾಗಿದೆ.

ಕವಿ, ವಿಮರ್ಶಕ ಕೆ.ಸಚ್ಚಿದಾನಂದನ್, ಕವಿ ಮತ್ತು ಪ್ರಕಾಶಕ ಅಸದ್ ಜೈದಿ, ಕವಯಿತ್ರಿ ಜಸಿಂತಾ ಕೆರ್ಕೆಟ್ಟಾ, ಕವಯಿತ್ರಿ ಮತ್ತು ಕಾದಂಬರಿಕಾರ್ತಿ ಮೀನಾ ಕಂದಸ್ವಾಮಿ, ಕವಯಿತ್ರಿ ಮತ್ತು ಹೋರಾಟಗಾರ್ತಿ ಸಿಂಥಿಯಾ ಸ್ಟೀಫನ್, ಪ್ಯಾಲೆಸ್ಟೀನ್‌ನ ಕಾದಂಬರಿಕಾರ್ತಿ ಇಸಬೆಲ್ಲಾ ಹಮ್ಮಾದ್ ಹಾಗೂ ಕವಯಿತ್ರಿ ರಫೀಫ್ ಜಿಯಾದಾ, ಈಜಿಪ್ಟ್ ಕಾದಂಬರಿಕಾರ್ತಿ ಅಹದಾಫ್ ಸೌಯೀಫ್, ಇರಾಕ್‌ನ ಕವಿ–ಕಾದಂಬರಿಕಾರ ಸಿನನ್ ಆಂತೂನ್ ಮತ್ತು ಇತರೆ ಬರಹಗಾರರು ಸಹಿ ಹಾಕಿದ್ದಾರೆ.

ಜೆಸಿಬಿ (ಇಂಡಿಯಾ) ಸಂಸ್ಥೆಯು ಬ್ರಿಟನ್‌ನ ನಿರ್ಮಾಣ ಯಂತ್ರಗಳ ತಯಾರಿಕಾ ಸಂಸ್ಥೆ ಆಗಿರುವ ಜೆ.ಸಿ. ಬ್ಯಾಂಫೋರ್ಡ್ ಎಸ್ಕವೇಟರ್ಸ್ ಲಿಮಿಟೆಡ್‌ನ (ಜೆಸಿಬಿ) ಅಂಗ ಸಂಸ್ಥೆಯಾಗಿದೆ. ಬ್ರಿಟನ್‌ನ ಕನ್ಸರ್ವೇಟಿವ್ ಪಕ್ಷಕ್ಕೆ ನೆರವು ನೀಡುವ ಪ್ರಮುಖ ಸಂಸ್ಥೆಯಾಗಿದೆ ಎಂದು ಸಾಹಿತಿಗಳು, ಪ್ರಕಾಶಕರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

‘ಹಿಂದುತ್ವ ಪ್ರತಿಪಾದಿಸುವ ಸಂಸ್ಥೆಗಳು ಭಾರತದಲ್ಲಿ ಜೆಸಿಬಿ ಯಂತ್ರವನ್ನು ಬಳಸುವುದು ಆಶ್ಚರ್ಯದ ಸಂಗತಿಯಾಗಿ ಏನೂ ಉಳಿದಿಲ್ಲ. ಪ್ರಶಸ್ತಿ ಕೊಡುವ ಮೂಲಕ ಜೆಸಿಬಿಗೆ ಮೆತ್ತಿಕೊಂಡ ರಕ್ತವನ್ನು ತೊಳೆಯಲು ಸಾಧ್ಯವಿಲ್ಲ’ ಎಂದು ಟೀಕಿಸಿದ್ದಾರೆ.

ಜೆಸಿಬಿ ಏಜೆಂಟರು ಮತ್ತು ಇಸ್ರೇಲ್ ಸೇನೆ ನಡುವಣ ಒಪ್ಪಂದದ ಕಾರಣ ಪ್ಯಾಲೆಸ್ಟೀನ್‌ನಲ್ಲಿ ಜೆಸಿಬಿ ಬುಲ್ಡೋಜರ್‌ಗಳನ್ನು ನೆಲಸಮ ಕಾರ್ಯಾಚರಣೆಗೆ ಬಳಕೆ ಮಾಡಲಾಗುತ್ತಿದೆ ಎಂದಿದ್ದಾರೆ.

ಲೇಖಕರು, ಸಾಹಿತಿಗಳಾಗಿ ಇಂತಹ ಅಪಾಯಕಾರಿ ನಿಲುವು ಇರುವ ಸಂಸ್ಥೆಯನ್ನು ಬೆಂಬಲಿಸಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆ.

ಲೇಖಕ, ಪತ್ರಕರ್ತ ಜಿಯಾ ಉಸ್ ಸಲಾಂ ಅವರು, ‘ಜೆಸಿಬಿ ಎಂಬುದು ಸರ್ಕಾರಿ ಪ್ರಾಯೋಜಕತ್ವದ ದ್ವೇಷ ಭಾವನೆಯ ಪ್ರತೀಕವಾಗಿದೆ. ಇದು, ಮಾನವ ಹಕ್ಕುಗಳ ಉಲ್ಲಂಘನೆಯ ವಿರುದ್ಧದ ಧ್ವನಿಯಾಗಿದೆ’ ಎಂದು ಈ ವಿರೋಧವನ್ನು ಬಣ್ಣಿಸಿದ್ದಾರೆ.

ಪಂಡಿತರ ಅಂಗಡಿಗಳು ಧ್ವಂಸ ಪ್ರತಿಭಟನೆ, ಆಕ್ರೋಶ

ಜಮ್ಮು (ಪಿಟಿಐ): ಜಮ್ಮು ನಗರದಲ್ಲಿ ನಿರ್ವಸಿತ ಕಾಶ್ಮೀರಿ ಪಂಡಿತರು ನಿರ್ಮಿಸಿಕೊಂಡಿದ್ದ ಒಂದು ಡಜನ್ ಅಂಗಡಿಗಳನ್ನು ಜಮ್ಮು ಅಭಿವೃದ್ಧಿ ಪ್ರಾಧಿಕಾರವು (ಜೆಡಿಎ) ನೋಟಿಸ್ ನೀಡದೆಯೇ ಬುಧವಾರ ನೆಲಸಮಗೊಳಿಸಿದ್ದಾಗಿ ಆರೋಪಿಸಿದ್ದು, ಪ್ರತಿಭಟನೆ ನಡೆಸಿದರು. ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಒತ್ತಾಯಿಸಿದರು.

‘ಬುಧವಾರದಿಂದಲೇ ನೆಲಸಮಗೊಳಿಸುವ ಕೆಲಸ ಆರಂಭಗೊಂಡಿತು. ಮೂರು ದಶಕಗಳ ಹಿಂದೆ ಜೆಡಿಎಗೆ ಸೇರಿದ ಮೂತಿ ಕ್ಯಾಂಪ್ ಪ್ರದೇಶದಲ್ಲಿ ಕಾಶ್ಮೀರದ ಪಂಡಿತರು ನಿರ್ಮಿಸಿಕೊಂಡಿದ್ದ ಅಂಗಡಿಗಳನ್ನೇ ನೆಲಸಮ ಮಾಡಲಾಗಿದೆ’ ಎಂದು ಅಧಿಕಾರಿಗಳು ಸಮರ್ಥಿಸಿಕೊಂಡರು.

ಸ್ಥಳಕ್ಕೆ ಭೇಟಿ ನೀಡಿದ ಪರಿಹಾರ ವಿಭಾಗದ ಆಯುಕ್ತ ಅರವಿಂದ್ ಕರ್ವಾನಿ, ಪರಿಸ್ಥಿತಿಯ ಪರಾಮರ್ಶೆ ನಡೆಸಿದರು.

‘ಅಂಗಡಿಗಳು ಇದ್ದ ಜಾಗವು ಜೆಡಿಎಗೆ ಸೇರಿದ್ದಾಗಿದೆ. ಮುಥಿ–2ನೇ ಹಂತದಲ್ಲಿ ಹೊಸತಾಗಿ ಅಂಗಡಿಗಳನ್ನು ನಿರ್ಮಿಸಲಾಗುತ್ತಿದ್ದು, ಆ ಜಾಗದಲ್ಲೇ ಅಂಗಡಿ ಕಳೆದುಕೊಂಡವರಿಗೆ ಮಳಿಗೆಗಳನ್ನು ಹಂಚಿಕೆ ಮಾಡಲಾಗುವುದು’ ಎಂದು ಭರವಸೆ ನೀಡಿದರು.

ಜೆಡಿಎ ನಿರ್ಧಾರಕ್ಕೆ ಬಿಜೆಪಿ, ಪಿಡಿಪಿ, ಅಪ್ನಿ ಪಕ್ಷ ಹಾಗೂ ಕಾಶ್ಮೀರ ಪಂಡಿತರ ಹಲವು ಸಂಘಟನೆಗಳು ವಿರೋಧ ವ್ಯಕ್ತಪಡಿಸಿವೆ.

ಸಂತ್ರಸ್ತರಿಗೆ ಕೂಡಲೇ ಹೊಸ ಮಳಿಗೆಗಳನ್ನು ಸ್ಥಾಪಿಸಿಕೊಡಬೇಕು ಎಂದು ಆಗ್ರಹಿಸಿವೆ.

ಅಣಕು ಕಾರ್ಯಾಚರಣೆ...

ಭಯೋತ್ಪಾದನೆ ನಿಗ್ರಹ ದಳದ ವಿಶೇಷ ಕಮಾಂಡೊಗಳು, ಕೋಲ್ಕತ್ತದ ವಿಕ್ಟೋರಿಯಾ ಸ್ಮಾರಕದ ಬಳಿ ಗುರುವಾರ ಭಯೋತ್ಪಾದಕ ದಾಳಿಯನ್ನು ಎದುರಿಸುವ ಅಣಕು ಕಾರ್ಯಾಚರಣೆಯಲ್ಲಿ ಪಾಲ್ಗೊಂಡರು

ಎಎಫ್‌ಪಿ ಚಿತ್ರ

ಜೀತದಾಳು ಕಳ್ಳಸಾಗಣೆ ತಡೆಗೆ ಸೂಚನೆ

ರಾಜ್ಯಗಳ ಜತೆ ಚರ್ಚಿಸಿ ಪ್ರಸ್ತಾವನೆ ಸಿದ್ಧಪಡಿಸುವಂತೆ ಕೇಂದ್ರಕ್ಕೆ ಸುಪ್ರೀಂ ಕೋರ್ಟ್ ನಿರ್ದೇಶನ

ನವದೆಹಲಿ (ಪಿಟಿಐ): ಬಾಲಕರನ್ನೂ ಒಳಗೊಂಡಂತೆ ಜೀತದಾಳುಗಳ ಅಂತರರಾಜ್ಯ ಕಳ್ಳಸಾಗಣೆ ಸಮಸ್ಯೆ ಪರಿಹರಿಸಲು ಕೇಂದ್ರ ಸರ್ಕಾರವು ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಜತೆ ಸಭೆ ನಡೆಸಿ, ಪ್ರಸ್ತಾವನೆ ಸಿದ್ಧಪಡಿಸುವಂತೆ ಸುಪ್ರೀಂ ಕೋರ್ಟ್ ಗುರುವಾರ ನಿರ್ದೇಶನ ನೀಡಿದೆ.

ಜೀತದಾಳುಗಳ ಕಳ್ಳಸಾಗಣೆ ತಪ್ಪಿಸಲು ಮತ್ತು ಅವರ ಮೂಲಭೂತ ಹಕ್ಕುಗಳನ್ನು ರಕ್ಷಿಸಲು ಕೋರಿ ಸಲ್ಲಿಕೆಯಾಗಿರುವ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಮತ್ತು ಕೆ.ವಿ. ವಿಶ್ವನಾಥನ್ ಅವರ ಪೀಠ ನಡೆಸಿತು.

ಉತ್ತರ ಪ್ರದೇಶದಲ್ಲಿ ಬಿಡುಗಡೆಯಾದ 5,264 ಜೀತದಾಳುಗಳ ಪೈಕಿ, 1,101 ಜನರಿಗೆ ಮಾತ್ರ ತಕ್ಷಣವೇ ಆರ್ಥಿಕ ನೆರವು ದೊರೆತಿದ್ದು, ಉಳಿದವರು ನೆರವಿನ ನಿರೀಕ್ಷೆಯಲ್ಲಿದ್ದಾರೆ ಎಂಬ ಮಾಹಿತಿಯನ್ನು ಗಮನಿಸಿದ ಪೀಠ ಅಸಮಾಧಾನ ವ್ಯಕ್ತಪಡಿಸಿತು.

ಪ್ರಕರಣದ ಗಂಭೀರತೆಯನ್ನು ಉಲ್ಲೇಖಿಸಿದ ಪೀಠವು, ಪ್ರಕರಣಕ್ಕೆ ಸಂಬಂಧಿಸಿದಂತೆ ಅಟಾರ್ನಿ ಜನರಲ್ ಅವರ ನೆರವನ್ನೂ ಪಡೆಯುವುದಾಗಿ ತಿಳಿಸಿತು. ಬಿಡುಗಡೆಯಾದ ಜೀತದಾಳುಗಳಲ್ಲಿ ಮಕ್ಕಳೂ ಇರುವುದರಿಂದ ಅವರಿಗೆ ಹಣಕಾಸಿನ ನೆರವು ಅಗತ್ಯ ಇರುವುದನ್ನು ಉಲ್ಲೇಖಿಸಿತು.

ಪರಿಹಾರದ ಕುರಿತು ನಿರ್ಧರಿಸುವಾಗ ರಾಷ್ಟ್ರೀಯ ಮಾವನ ಹಕ್ಕುಗಳ ಆಯೋಗದ (ಎನ್‌ಎಚ್‌ಆರ್‌ಸಿ) ಸಲಹೆಯನ್ನೂ ಪಡೆಯುವಂತೆ ಕೇಂದ್ರ ಸರ್ಕಾರಕ್ಕೆ ಸೂಚಿಸಿತು.

ಮಕ್ಕಳ ಅಂತರರಾಜ್ಯ ಕಳ್ಳಸಾಗಣೆ ಸಮಸ್ಯೆಯನ್ನು ಪರಿಹರಿಸಲು, ಕೇಂದ್ರ ಸರ್ಕಾರ ಮತ್ತು ಎಲ್ಲ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಏಕೀಕೃತ ರೀತಿಯಲ್ಲಿ ಸಾಗಬೇಕಿದೆ ಎಂದು ಹೇಳಿದ ಪೀಠ, ವಿಚಾರಣೆಯನ್ನು ಆರು ವಾರಗಳವರೆಗೆ ಮುಂದೂಡಿತು.

ಸಂಸದ ರಶೀದ್ ಜಾಮೀನು ಅರ್ಜಿ ಜನಪ್ರತಿನಿಧಿಗಳ ಕೋರ್ಟ್‌ಗೆ ಶಿಫಾರಸು

ನವದೆಹಲಿ (ಪಿಟಿಐ): ಉಗ್ರರಿಗೆ ಹಣ ಒದಗಿಸಿದ ಆರೋಪ ಎದುರಿಸುತ್ತಿರುವ ಎಂಜಿನಿಯರ್ ರಶೀದ್, ಸದ್ಯ ಸಂಸದ ಆಗಿರುವ ಕಾರಣ ಅವರ ವಿರುದ್ಧದ ಪ್ರಕರಣವನ್ನು ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ವರ್ಗಾಯಿಸಲು ದೆಹಲಿ ನ್ಯಾಯಾಲಯವು ಶಿಫಾರಸು ಮಾಡಿದೆ.

ಜಾಮೀನು ಕೋರಿ ರಶೀದ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಛಂದರ್ ಜೀತ್ ಸಿಂಗ್ ಅವರು ಜಿಲ್ಲಾ ನ್ಯಾಯಾಲಯಕ್ಕೆ ಈ ಪ್ರಕರಣ ವರ್ಗಾಯಿಸಿದರು. ನ. 25ರಂದು ಈ ಅರ್ಜಿ ವಿಚಾರಣೆ ನಡೆಯುವ ಸಾಧ್ಯತೆಯಿದೆ. ಇದಲ್ಲದೇ, ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದಂತೆ ಎನ್‌ಐಎ ದಾಖಲಿಸಿರುವ ಪ್ರಕರಣ ಸಂಬಂಧ ರಶೀದ್ ಸಲ್ಲಿಸಿದ ಜಾಮೀನು ಅರ್ಜಿ ವಿಚಾರಣೆಯನ್ನು ವಿಶೇಷ ನ್ಯಾಯಾಲಯಕ್ಕೆ ವರ್ಗಾಯಿಸಲಾಗಿದೆ.

ಎಂಜಿನಿಯರ್ ರಶೀದ್ ಅವರು ಬಾರಾಮುಲ್ಲಾ ಲೋಕಸಭಾ ಕ್ಷೇತ್ರದ ಸಂಸದರಾಗಿದ್ದು, ಭಯೋತ್ಪಾದಕರಿಗೆ ಹಣಕಾಸಿನ ನೆರವು ನೀಡಿದ ಆರೋಪದಡಿ 2019ರಿಂದ ತಿಹಾರ್ ಜೈಲಿನಲ್ಲಿದ್ದಾರೆ.

ಕೇಜ್ರಿವಾಲ್ ವಿರುದ್ಧದ ವಿಚಾರಣೆ ತಡೆಗೆ ಹೈಕೋರ್ಟ್ ನಿರಾಕರಣೆ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿಗೆ ಸಂಬಂಧಿಸಿದಂತೆ ಅಕ್ರಮ ಹಣ ವರ್ಗಾವಣೆ ಪ್ರಕರಣದ ಆರೋಪ ಹೊತ್ತ ದೆಹಲಿ ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ವಿರುದ್ಧದ ವಿಚಾರಣೆ ತಡೆಗೆ ದೆಹಲಿ ಹೈಕೋರ್ಟ್ ನಿರಾಕರಿಸಿದೆ.

ಪ್ರಕರಣದಲ್ಲಿನ ಚಾರ್ಜ್‌ಶೀಟ್ ಆಧರಿಸಿ ವಿಚಾರಣೆ ಕೈಗೊಳ್ಳುವ ವಿಚಾರಣಾ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿದ ಕೇಜ್ರಿವಾಲ್ ಅವರ ಮನವಿಯ ಕುರಿತು ನ್ಯಾಯಮೂರ್ತಿ ಮನೋಜ್ ಕುಮಾರ್ ಓಹ್ರಿ ಅವರು ಜಾರಿ ನಿರ್ದೇಶನಾಲಯದ ಪ್ರತಿಕ್ರಿಯೆ ಕೋರಿದ್ದಾರೆ. ವಿಚಾರಣೆಯನ್ನು ಡಿ.20ಕ್ಕೆ ಮುಂದೂಡಿದ್ದಾರೆ.

ಮಗು ಅಪಹರಿಸಿದ್ದ ಸಲಿಂಗಿ ಜೋಡಿಗೆ ಜಾಮೀನು

ಮುಂಬೈ (ಪಿಟಿಐ): ಮಗುವನ್ನು ಅಪಹರಿಸಿದ ಆರೋಪದ ಮೇಲೆ ಬಂಧನದಲ್ಲಿದ್ದ ಸ್ತ್ರೀ ಸಲಿಂಗಿ ಜೋಡಿಗೆ ಬಾಂಬೆ ಹೈಕೋರ್ಟ್ ಜಾಮೀನು ನೀಡಿದೆ.

ಮಗುವನ್ನು ಹೊಂದಬೇಕು ಎಂಬ ತಮ್ಮ ಆಸೆ ಪೂರೈಸಿಕೊಳ್ಳಲು ಕಾನೂನುಬಾಹಿರ ವಿಧಾನವನ್ನು ಈ ಜೋಡಿ ಅನುಸರಿಸಿದೆ ಎಂದು ಕೋರ್ಟ್ ಇದೇ ವೇಳೆ ಅಭಿಪ್ರಾಯಪಟ್ಟಿದೆ.

ನ್ಯಾಯಮೂರ್ತಿ ಮನೀಶ್ ಪಿತಾಲೆ ಅವರ ಏಕ ಸದಸ್ಯ ಪೀಠವು ಜಾಮೀನು ನೀಡಿದ್ದು, ಸಲಿಂಗಿ ಮಹಿಳೆಯರು ಈಗಾಗಲೇ ಸುಮಾರು ಎಂಟು ತಿಂಗಳು ಸೆರೆವಾಸ ಅನುಭವಿಸಿದ್ದಾರೆ ಎಂದು ತಿಳಿಸಿದೆ.

‘ಮಗುವನ್ನು ಹೊಂದುವ ತಮ್ಮ ಆಸೆಯನ್ನು ಪೂರೈಸಿಕೊಳ್ಳಲು ಅರ್ಜಿದಾರರು ಹೆಣ್ಣುಮಗುವನ್ನು ಆಕೆಯ ಪೋಷಕರಿಂದ ದೂರ ಮಾಡಿ, ಸಹ ಆರೋಪಿಗಳ ಜೊತೆ ಸೇರಿಕೊಂಡು ಕಾನೂನುಬಾಹಿರ ಕೃತ್ಯ ಎಸಗಿದ್ದಾರೆ’ ಎಂದು ನ್ಯಾಯಾಲಯ ಹೇಳಿದೆ.

‘ಅಂತಹ ವ್ಯಕ್ತಿಗಳು ದುರದೃಷ್ಟವಶಾತ್ ಸಮಾಜದಲ್ಲಿ ಮತ್ತು ವಿಶೇಷವಾಗಿ ಜೈಲಿನ ಮಿತಿಯಲ್ಲಿ ಅಪಹಾಸ್ಯಕ್ಕೆ ಒಳಗಾಗುತ್ತಾರೆ. ಮೇಲ್ನೋಟಕ್ಕೆ ಗಂಭೀರ ಪ್ರಕರಣವಾದ ಇದು ಜಾಮೀನು ನೀಡುವಂತಹುದೇ ಆಗಿದೆ’ ಎಂದು ಕೋರ್ಟ್ ತನ್ನ ಆದೇಶದಲ್ಲಿ ತಿಳಿಸಿದೆ.

‘ಅರ್ಜಿದಾರರ (ಜೋಡಿ) ವಿರುದ್ಧ ಪ್ರಬಲ ಆರೋಪವಿದ್ದು, ಇತರೆ ಆರೋಪಿಗಳಿಂದ ಅವರು ಬಾಲಕಿಯನ್ನು ಪಡೆದಿದ್ದಾರೆ ಎಂಬ ಆರೋಪವಿದೆ. ಆದರೂ ಬಾಲಕಿಯನ್ನು ಶೋಷಣೆ ಮಾಡಿರುವುದು ಕಂಡುಬಂದಿಲ್ಲ. ಸಲಿಂಗಿಗಳಾದ ಮಹಿಳೆಯರು ಮಗುವನ್ನು ಪಡೆಯುವ ಬಯಕೆ ಹೊಂದಿದ್ದರು. ಆದರೆ, ಜೈವಿಕವಾಗಿ ಅದು ಸಾಧ್ಯವಿಲ್ಲ. ‘ಸದ್ಯದ ಪರಿಸ್ಥಿತಿಯಲ್ಲಿ ಅವರು ಮಗುವನ್ನು ದತ್ತು ಪಡೆಯುವುದೂ ಸಾಧ್ಯವಿಲ್ಲ’ ಎಂದು ಕೋರ್ಟ್ ಹೇಳಿದೆ.

ಈ ಪ್ರಕರಣದಲ್ಲಿ ಸಲಿಂಗಿ ಜೋಡಿಯಲ್ಲದೆ ಇತರೆ ಮೂವರು ಆರೋಪಿಗಳೂ ಇದ್ದಾರೆ. ಐದು ವರ್ಷದ ಈ ಮಗುವಿನ ಪೋಷಕರು 2024ರ ಮಾ.24ರಂದು ಮಗು ನಾಪತ್ತೆಯಾಗಿದೆ ಎಂದು ದೂರು ನೀಡಿದ್ದರು. ಮರುದಿನವೇ ಸಲಿಂಗಿಗಳ ಮನೆಯಲ್ಲಿ ಪೊಲೀಸರು ಮಗುವನ್ನು ಪತ್ತೆಹಚ್ಚಿದ್ದರು.

‘ಮಣಿಪುರ: ಉತ್ತಮ ನಾಯಕರ ಅಗತ್ಯವಿದೆ’

ನವದೆಹಲಿ/ಇಂಫಾಲ್/ಗುವಾಹಟಿ (ಪಿಟಿಐ): ಗಲಭೆ ಪೀಡಿತ ಮಣಿಪುರವು ಅರೆಕಾಲಿಕ ರಾಜ್ಯಪಾಲ, ವಿಫಲ ಮುಖ್ಯಮಂತ್ರಿ ಮತ್ತು ಅತಿ ವಿಫಲ ಕೇಂದ್ರ ಗೃಹ ಸಚಿವರಿಂದ ನಲುಗುತ್ತಿದ್ದು, ಅಲ್ಲಿನ ಜನರು ಇವರಿಗಿಂತ ಉತ್ತಮ ನಾಯಕರನ್ನು ಹೊಂದಲು ಅರ್ಹರಿದ್ದಾರೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಹೇಳಿದ್ದಾರೆ.

ಮಾಜಿ ರಾಜ್ಯಪಾಲ ಅನುಸೂಯಾ ಉಯಿಕೆ ಅವರ ಅಧಿಕಾರಾವಧಿಯನ್ನು 18 ತಿಂಗಳಿಗಿಂತ ಮುನ್ನವೇ ಮೊಟಕುಗೊಳಿಸಲಾಗಿದೆ ಎಂದು ದೂರಿರುವ ಅವರು, ಹಲವು ಬಾರಿ ಮನವಿ ಮಾಡಿದ ಬಳಿಕವೂ ಪ್ರಧಾನಿ ನರೇಂದ್ರ ಮೋದಿ ಅವರು ಮಣಿಪುರಕ್ಕೆ ಏಕೆ ಭೇಟಿ ನೀಡಲಿಲ್ಲ ಎಂದು ಪ್ರಶ್ನಿಸಿದ್ದಾರೆ.

ಜೈರಾಮ್ ರಮೇಶ್

2024ರ ಜುಲೈ 31ರಿಂದ ಮಣಿಪುರಕ್ಕೆ ಪೂರ್ಣಕಾಲಿಕ ರಾಜ್ಯಪಾಲರಿಲ್ಲ. ಈಗಿನ ಉಸ್ತುವಾರಿ ರಾಜ್ಯಪಾಲರು ಹೆಚ್ಚಿನ ಸಮಯವನ್ನು ಅಸ್ಸಾಂನಲ್ಲಿ ಕಳೆಯುತ್ತಾರೆ ಎಂದು ಅವರು ‘ಎಕ್ಸ್’ನಲ್ಲಿ ಹೇಳಿದ್ದಾರೆ.

ಎಎಫ್‌ಎಸ್‌ಪಿಎ ವಿಸ್ತರಣೆಗೆ ಮನವಿ: ಮಣಿಪುರದ ಆಡಳಿತಾರೂಢ ಬಿಜೆಪಿ ನೇತೃತ್ವದ ಮೈತ್ರಿಯ ಏಳು ಶಾಸಕರೂ ಸೇರಿದಂತೆ ಒಟ್ಟು 10 ಕುಕಿ ಶಾಸಕರು ‘ಸಶಸ್ತ್ರ ಪಡೆಗಳ ವಿಶೇಷ ಅಧಿಕಾರ ಕಾಯ್ದೆ’ಯನ್ನು (ಎಎಫ್‌ಎಸ್‌ಪಿಎ) ರಾಜ್ಯದಾದ್ಯಂತ ವಿಸ್ತರಿಸುವಂತೆ ಆಗ್ರಹಿಸಿದ್ದಾರೆ. ಲೂಟಿಯಾಗಿರುವ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲು ಈ ಕಾಯ್ದೆಯ ವಿಸ್ತರಣೆ ಅಗತ್ಯ ಎಂದು ಅವರು ಪ್ರತಿಪಾದಿಸಿದ್ದಾರೆ.

ಹಿಂಸಾಚಾರ ಪೀಡಿತ ಜಿರೀಬಾಮ್ ಸೇರಿದಂತೆ ಮಣಿಪುರದ ಆರು ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಕೇಂದ್ರ ಸರ್ಕಾರ ನವೆಂಬರ್ 14ರಂದು ಎಎಫ್‌ಎಸ್‌ಪಿಎ ಅನ್ನು ಪುನಃ ಜಾರಿಗೊಳಿಸಿತ್ತು. ಪ್ರಸ್ತುತ 13 ಪೊಲೀಸ್ ಠಾಣೆಗಳ ವ್ಯಾಪ್ತಿಯನ್ನು ಹೊರತುಪಡಿಸಿ ಇಡೀ ರಾಜ್ಯ ಎಎಫ್‌ಎಸ್‌ಪಿಎ ಅಡಿಯಲ್ಲಿದೆ.

ಮತದಾನ: ಮುಂಬೈ, ಕೊಲಾಬಾದಲ್ಲಿ ಉತ್ತಮ ಸಾಧನೆ

ಮುಂಬೈ (ಪಿಟಿಐ): 2019ರ ವಿಧಾನ ಸಭಾ ಚುನಾವಣೆಯ ಮತದಾನಕ್ಕೆ ಹೋಲಿಸಿದರೆ ಈ ಬಾರಿಯ ಚುನಾವಣೆಯಲ್ಲಿ ಮುಂಬೈ ಮತ್ತು ಕೊಲಾಬಾದಲ್ಲಿ ಮತದಾನದ ಪ್ರಮಾಣದಲ್ಲಿ ಏರಿಕೆಯಾಗಿದೆ. ಹಾಗೆಯೇ ಉಪನಗರಗಳ ವಿಧಾನಸಭಾ ಕ್ಷೇತ್ರಗಳಲ್ಲಿ ಕಳೆದ ಬಾರಿಗಿಂತ ಈ ಸಲ ಮತದಾನ ಪ್ರಮಾಣ ಕೊಂಚ ಕುಸಿದಿದೆ.

ಕೇಂದ್ರ ಚುನಾವಣಾ ಆಯೋಗ ಗುರುವಾರ ಬಿಡುಗಡೆ ಮಾಡಿರುವ ಅಂಕಿಅಂಶದ ಪ್ರಕಾರ, 2019ರಲ್ಲಿ ಮುಂಬೈನಲ್ಲಿ ಶೇ 52.79ರಷ್ಟು ಮತದಾನವಾಗಿದ್ದರೆ, ಈ ಬಾರಿ ಶೇ 54.52 ರಷ್ಟು ಮತದಾನವಾಗಿದೆ. ದ್ವೀಪ ನಗರದಲ್ಲಿ 2019ರಲ್ಲಿ ಶೇ 48.40ರಷ್ಟು ಮತದಾನವಾಗಿತ್ತು. ಈ ಬಾರಿ ಶೇ 52.65ರಷ್ಟು ಆಗಿದೆ. ಆದರೆ ಉಪನಗರ ಜಿಲ್ಲೆಯಲ್ಲಿ ಶೇ 57.19ರಿಂದ ಶೇ 56.39ಕ್ಕೆ ಕುಸಿದಿದೆ.

ದ್ವೀಪ ನಗರದ ಕೊಲಾಬಾ ಮತ್ತು ಮುಂಬಾದೇವಿಯಲ್ಲಿ ಶೇ 50ರಷ್ಟು ಮತದಾನವಾಗಿಲ್ಲ. ಕೊಲಾಬಾದಲ್ಲಿ ಶೇ 44.44 ಮತ್ತು ಮುಂಬಾದೇವಿಯಲ್ಲಿ ಶೇ 48.76 ಮತದಾನವಾಗಿದೆ. 2019ರ ಚುನಾವಣೆಯಲ್ಲಿ ಕೊಲಾಬಾದಲ್ಲಿ ಶೇ 40.13ರಷ್ಟು ಮತದಾನವಾಗಿತ್ತು.

ಅದೇ ರೀತಿ, ಮುಂಬೈನ ಉಪನಗರಗಳಲ್ಲಿನ 26 ಕ್ಷೇತ್ರಗಳ ಪೈಕಿ ಎಂಟು ಕ್ಷೇತ್ರಗಳು ಶೇ 50ಕ್ಕಿಂತ ಕಡಿಮೆ ಮತದಾನ ದಾಖಲಿಸಿವೆ.

ದೆಹಲಿಯಲ್ಲಿ ಕನಿಷ್ಠ ತಾಪಮಾನ

ನವದೆಹಲಿ (ಪಿಟಿಐ): ನವದೆಹಲಿಯಲ್ಲಿ ತಾಪಮಾನ ಕುಸಿತ ಮುಂದುವರಿದಿದೆ. ಗುರುವಾರ ಕೇವಲ 10.2 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ. ಇದು ಈ ಋತುವಿನಲ್ಲಿ ದೆಹಲಿಯಲ್ಲಿ ದಾಖಲಾದ ಅತ್ಯಂತ ಕನಿಷ್ಠ ತಾಪಮಾನವಾಗಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.

ಬುಧವಾರ ರಾತ್ರಿ ತಾಪಮಾನವು 11.2 ಡಿಗ್ರಿ ಸೆಲ್ಸಿಯಸ್ ದಾಖಲಾಗಿದ್ದರೆ, ಮಂಗಳವಾರ 12.3ರಷ್ಟಿತ್ತು. ಇವು ಈ ಋತುವಿನಲ್ಲಿ ದಾಖಲಾಗಿರುವ ಎರಡು ಮತ್ತು ಮೂರನೇ ಕನಿಷ್ಠ ತಾಪಮಾನ ಎಂದು ಇಲಾಖೆ ಮಾಹಿತಿ ನೀಡಿದೆ.

ನಗರವು ಮಂಜಿನ ಹೊದಿಕೆಯಿಂದ ಆವೃತವಾದಂತಿದ್ದು, ಕೊರೆಯುವ ಚಳಿಗೆ ಜನರು ತತ್ತರಿಸಿದ್ದಾರೆ. ಗರಿಷ್ಠ ತಾಪಮಾನವು 27 ಡಿಗ್ರಿ ಸೆಲ್ಸಿಯಸ್ ಇದ್ದು, ಇದು ಸಾಮಾನ್ಯಕ್ಕಿಂತ 0.8ರಷ್ಟು ಕಡಿಮೆಯಾಗಿದೆ. ಹಗಲಿನಲ್ಲಿ ಆರ್ದ್ರತೆಯ ಮಟ್ಟವು ಶೇ 80ರಿಂದ 64ರಷ್ಟು ಏರಿಳಿತವಾಗಿದೆ. ಶುಕ್ರವಾರ ತಾಪಮಾನವು ಗರಿಷ್ಠ 27 ಡಿಗ್ರಿ ಸೆಲ್ಸಿಯಸ್‌ನಿಂದ ಕನಿಷ್ಠ 10ರಷ್ಟು ದಾಖಲಾಗಲಿದೆ ಎಂದು ಇಲಾಖೆ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ದಾಂದಲೆ: 40 ಮಂದಿ ವಿರುದ್ಧ ಪ್ರಕರಣ

ಛತ್ರಪತಿ ಸಂಭಾಜೀನಗರ (ಪಿಟಿಐ): ಮಹಾರಾಷ್ಟ್ರದ ಬೀಡ್ ಜಿಲ್ಲೆಯ ಘಾಟ್‌ನಂದೂರ್‌ನ ಮೂರು ಮತಗಟ್ಟೆಗಳಲ್ಲಿ ದಾಂದಲೆ ನಡೆಸಿದ ಮತ್ತು ಇವಿಎಂಗಳನ್ನು ಹಾನಿಗೊಳಿಸಿದ ಆರೋಪದ ಮೇಲೆ ಪೊಲೀಸರು ಸುಮಾರು 40 ಜನರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಪರ್ಲಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ನಡೆದ ಘಟನೆಗೆ ಸಂಬಂಧಿಸಿ ಅಂಬಾಜೋಗಾಯ್ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮಹಾರಾಷ್ಟ್ರ ವಿಧಾನಸಭೆಯ 288 ಸ್ಥಾನಗಳಿಗೆ ಬುಧವಾರ ಮತದಾನ ನಡೆದಿದೆ.

‘ಎಂವಿಎ ಮೈತ್ರಿಕೂಟದ ಸ್ಥಳೀಯ ಮುಖಂಡ ಮಾಧವ್ ಜಾಧವ್ ಅವರನ್ನು ಪರ್ಲಿ ವಿಧಾನಸಭಾ ವ್ಯಾಪ್ತಿಯ ಕನೇರ್ವಾಡಿ ಗ್ರಾಮದಲ್ಲಿ ಕೆಲವರು ಥಳಿಸಿದ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ. ಅದರ ಬೆನ್ನಲ್ಲೇ 50ರಿಂದ 60 ಮಂದಿಯ ಗುಂಪು ದೊಣ್ಣೆ ಹಾಗೂ ಹರಿತವಾದ ಆಯುಧಗಳೊಂದಿಗೆ ಮೂರು ಮತಗಟ್ಟೆಗಳಿಗೆ ನುಗ್ಗಿ ದಾಂದಲೆ ನಡೆಸಿದೆ. ಕೆಲವು ಪೊಲೀಸರು ಗಾಯಗೊಂಡಿದ್ದಾರೆ. ಈ ಮತಗಟ್ಟೆಗಳ ಇವಿಎಂಗಳನ್ನೂ ಹಾನಿಗೊಳಿಸಿದ್ದಾರೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಕೇಜ್ರಿವಾಲ್ ವಿರುದ್ಧ ಬಿಜೆಪಿ ಪ್ರತಿಭಟನೆ

ನವದೆಹಲಿ (ಪಿಟಿಐ): ಎಎಪಿ ಪಕ್ಷದ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ವಿರುದ್ಧ ಬಿಜೆಪಿ ನಾಯಕರು ಮತ್ತು ಕಾರ್ಯಕರ್ತರು ಗುರುವಾರ ಪ್ರತಿಭಟನೆ ನಡೆಸಿದ್ದಾರೆ.

ಕೇಜ್ರಿವಾಲ್ ದೆಹಲಿ ಮುಖ್ಯಮಂತ್ರಿಯಾಗಿದ್ದಾಗ ಅಧಿಕೃತ ಬಂಗಲೆ ನವೀಕರಿಸಲು ದುಬಾರಿ ಬೆಲೆಯ ಗೃಹೋಪಯೋಗಿ ವಸ್ತುಗಳನ್ನು ಬಳಸಿದ್ದಾರೆ ಎಂದು ಆರೋಪಿಸಿ ಪ್ರತಿಭಟನೆ ನಡೆಸಿದ್ದಾರೆ. ಪ್ರತಿಭಟನೆಯಲ್ಲಿ ತೊಡಗಿದ್ದ ಕೆಲ ಬಿಜೆಪಿ ನಾಯಕರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಕಾನೂನು ಸುವ್ಯವಸ್ಥೆಯನ್ನು ಹಾಳು ಮಾಡಲು ಯಾರಿಗೂ ಅವಕಾಶವಿಲ್ಲ’ ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಪ್ರತಿಭಟನೆಯಲ್ಲಿ ತೊಡಗಿದ್ದ ದೆಹಲಿ ಬಿಜೆಪಿ ಅಧ್ಯಕ್ಷ ವೀರೇಂದ್ರ ಸಚದೇವ ಅವರನ್ನು ಬಂಧಿಸಲಾಗಿದೆ ಎಂದು ಬಿಜೆಪಿ ಮೂಲಗಳು ಆರೋಪಿಸಿವೆ.

ವಿರೋಧ ಪಕ್ಷದ ವಿಜೇಂದ್ರ ಗುಪ್ತಾ ಮತ್ತು ಬಿಜೆಪಿ ಶಾಸಕರು ಫಿರೋಜ್ ಶಾ ರಸ್ತೆಯಲ್ಲಿರುವ ಕೇಜ್ರಿವಾಲ್ ಮನೆ ಮುಂದೆ ಪ್ರತಿಭಟನೆ ನಡೆಸಿದರು.

ಎಎಪಿ: 11 ಅಭ್ಯರ್ಥಿಗಳ ಹೆಸರು ಘೋಷಣೆ

ನವದೆಹಲಿ (ಪಿಟಿಐ): 2025ಕ್ಕೆ ನಡೆಯಲಿರುವ ದೆಹಲಿ ವಿಧಾನಸಭಾ ಚುನಾವಣೆಗೆ ಆಮ್ ಆದ್ಮಿ ಪಕ್ಷ (ಎಎಪಿ) ತನ್ನ 11 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಗುರುವಾರ ಪ್ರಕಟಿಸಿದೆ.

ಅರವಿಂದ ಕೇಜ್ರಿವಾಲ್ ನೇತೃತ್ವದಲ್ಲಿ ನಡೆದ ಪಕ್ಷದ ರಾಜಕೀಯ ವ್ಯವಹಾರಗಳ ಸಮಿತಿ (ಪಿಎಸಿ) ಸಭೆಯ ನಂತರ ಅಭ್ಯರ್ಥಿ ಹೆಸರನ್ನು ಘೋಷಿಸಲಾಗಿದೆ. ಬಿಜೆಪಿ ಮತ್ತು ಕಾಂಗ್ರೆಸ್ ತೊರೆದು ಎಎಪಿ ಸೇರಿದ ಆರು ನಾಯಕರ ಹೆಸರು ಪಟ್ಟಿಯಲ್ಲಿದೆ.

ಬಿಜೆಪಿಯಿಂದ ಬಂದ ಬ್ರಹ್ಮ್ ಸಿಂಗ್ ತಂವರ್ (ಛತ್ತರ್‌ಪುರ), ಅನಿಲ್ ಝಾ (ಕಿರಾರಿ), ಬಿ.ಬಿ. ತ್ಯಾಗಿ (ಲಕ್ಷ್ಮೀನಗರ) ಮತ್ತು ಕಾಂಗ್ರೆಸ್‌ನಿಂದ ಎಎಪಿ ಸೇರಿದ ಜುಬೈರ್ ಚೌಧರಿ (ಸಲೀಂಪುರ), ವೀರ್ ಸಿಂಗ್ ಧಿಂಗಾನ್ (ಸೀಮಾಪುರಿ) ಮತ್ತು ಸುಮೇಶ್ ಶೌಕೀನ್ (ಮಟಿಯಾಲ) ಅವರಿಗೆ ಸ್ಪರ್ಧಿಸಲು ಅವಕಾಶ ನೀಡಲಾಗಿದೆ.

ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಕಂಪನಿ ನಿಯಮಿತ

ಉಪ ಪ್ರಧಾನ ವ್ಯವಸ್ಥಾಪಕರು–2 ರವರ ಕಛೇರಿ, ಬಿಎಸ್‌ಡಬ್ಲ್ಯೂಎಂಎಲ್, 1ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು–560 052.

ಸಂಖ್ಯೆ: ಉಪ್ರವ್ಯ–2/(ಬಿಎಸ್‌ಡಬ್ಲ್ಯೂಎಂಎಲ್/ತಿದ್ದುಪಡಿ–01/2024–25 ದಿನಾಂಕ: 21.11.2024

ತಿದ್ದುಪಡಿ–01

ವಿಷಯ: ಟೆಂಡರ್ ಪ್ರಕಟಣೆಯ ವೇಳಾ ಪಟ್ಟಿ ವಿಸ್ತರಣೆ

ಉಲ್ಲೇಖ: ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ: ಉಪ್ರವ್ಯ–2/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/08/24–25 ದಿನಾಂಕ: 30.10.2024

******

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಮೇಲಿನ ಟೆಂಡರ್ ಪ್ರಕಟಣೆಯ ವೇಳಾ ಪಟ್ಟಿಯನ್ನು ಆಡಳಿತ ಹಾಗೂ ತಾಂತ್ರಿಕ ಕಾರಣಗಳಿಂದಾಗಿ ವಿಸ್ತರಿಸಲಾಗಿದೆ

ನಿಗಧಿತ ಅವಧಿ / ವೇಳಾ ಪಟ್ಟಿ

ಕ್ರಮ ಸಂಖ್ಯೆ		ಟೆಂಡರ್ ಪ್ರಕಟಣೆ ಪ್ರಕಾರ	ವಿಸ್ತರಿಸಲಾದ ದಿನಾಂಕಗಳನ್ನು ಓದಿಕೊಳ್ಳುವುದು
1	ಅರ್ಹತಾ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	29.11.2024 ರಂದು 16:00 ಗಂಟೆಯವರೆಗೆ	12.12.2024 ರಂದು 16:00 ಗಂಟೆಯವರೆಗೆ
2	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	30.11.2024 ರಂದು 16:30 ಗಂಟೆಗೆ	13.12.2024 ರಂದು 16:30 ಗಂಟೆಗೆ

ಹೆಚ್ಚಿನ ವಿವರಗಳಿಗಾಗಿ ಜಿಓಕೆ ಕೆಪಿಪಿ ಪೋರ್ಟಲ್ ವೆಬ್‌ಸೈಟ್ **www.kppp.karnataka.gov.in** ಗೆ ಭೇಟಿ ನೀಡಿ

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–2,
ಬಿಎಸ್‌ಡಬ್ಲ್ಯೂಎಂಎಲ್

ವಾಸಾಸಂಇ/ವಾಪ್ರ/3360/ಆಕಾರ್/2024–25

ಷೇರುಪೇಟೆ ವಹಿವಾಟು 422

77,578 ಹಿಂದಿನ ಅಂತ್ಯ; ಇಂದಿನ ಅಂತ್ಯ 77,155 (77,600 / 77,400 / 77,200 / 77,000 / 76,800; 10:00, 12:00, 14:00, 16:00)

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,518
ಇಂದಿನ ಅಂತ್ಯ	23,349
▼	168
ದಿನದ ಕನಿಷ್ಠ	23,263

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹590
12 ಕ್ಕೆ	₹76
ಮೈಸೂರು	
100ಕ್ಕೆ	₹592

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹400-596
ದ್ವಿತಳಿ (ಬಿ.ವಿ)	₹458-760

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹181
ಆರ್‌ಎಸ್‌ಎಸ್-5	₹175
ಗುಡ್ ಲಾಟ್	₹170

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹19400
ಎಸಿ	₹11070
ಆರ್‌ಪಿ	₹19000
ಆರ್‌ಸಿ	₹10900

ಬಿಎಸ್‌ಎನ್‌ಎಲ್ ಚಂದಾದಾರರು ಹೆಚ್ಚಳ

ನವದೆಹಲಿ (ಪಿಟಿಐ): ಸೆಪ್ಟೆಂಬರ್‌ನಲ್ಲಿ ರಿಲಯನ್ಸ್ ಜಿಯೊ, ಭಾರ್ತಿ ಏರ್‌ಟೆಲ್ ಮತ್ತು ವೊಡಾಫೋನ್ ಐಡಿಯಾ ಕಂಪನಿ, ಒಂದು ಕೋಟಿಗೂ ಹೆಚ್ಚು ಚಂದಾದಾರರನ್ನು ಕಳೆದುಕೊಂಡಿವೆ.

ಇದೇ ವೇಳೆ ಭಾರತ ಸಂಚಾರ ನಿಗಮಕ್ಕೆ (ಬಿಎಸ್‌ಎನ್‌ಎಲ್) ಹೊಸದಾಗಿ 8.5 ಲಕ್ಷ ಚಂದಾದಾರರು ಸೇರ್ಪಡೆಯಾಗಿದ್ದಾರೆ. ಒಟ್ಟು ಚಂದಾದಾರರ ಸಂಖ್ಯೆ 9.18 ಕೋಟಿ ಆಗಿದೆ ಎಂದು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ (ಟ್ರಾಯ್) ಗುರುವಾರ ತಿಳಿಸಿದೆ.

ರಿಲಯನ್ಸ್ ಜಿಯೊ 79.69 ಲಕ್ಷ, ಭಾರ್ತಿ ಏರ್‌ಟೆಲ್ 14.34 ಲಕ್ಷ ಮತ್ತು ವೊಡಾಫೋನ್ ಐಡಿಯಾ (ವಿಐಎಲ್) 15.53 ಲಕ್ಷ ಚಂದಾದಾರರನ್ನು ಕಳೆದುಕೊಂಡಿದೆ.

ಜಿಯೊ 47.7 ಕೋಟಿ, ಭಾರ್ತಿ ಏರ್‌ಟೆಲ್ 28.5 ಕೋಟಿ, ವಿಐಎಲ್ 12.6 ಕೋಟಿ ಹಾಗೂ ಬಿಎಸ್‌ಎನ್‌ಎಲ್ 3.7 ಕೋಟಿ ಬ್ರಾಡ್‌ಬ್ಯಾಂಡ್ ಚಂದಾದಾರರನ್ನು ಹೊಂದಿದೆ.

ಕಂಪನಿಗಳ ಷೇರಿನ ಮೌಲ್ಯ ಶೇ 20ರಷ್ಟು ಇಳಿಕೆ • ಬಾಂಡ್ ಮಾರಾಟ ರದ್ದು

ಅದಾನಿ: ₹2.19 ಲಕ್ಷ ಕೋಟಿ ನಷ್ಟ

ನವದೆಹಲಿ (ಪಿಟಿಐ): ಉದ್ಯಮಿ ಗೌತಮ್ ಅದಾನಿ ವಿರುದ್ಧ ಅಮೆರಿಕದ ನ್ಯಾಯಾಂಗ ಇಲಾಖೆ ಮತ್ತು ಸೆಕ್ಯುರಿಟೀಸ್ ಎಕ್ಸ್‌ಚೇಂಜ್ ಕಮಿಷನ್ (ಎಸ್‌ಇಸಿ) ಲಂಚದ ಆರೋಪ ಮಾಡಿರುವ ಬೆನ್ನಲ್ಲೇ, ಗುರುವಾರ ನಡೆದ ದೇಶದ ಷೇರುಪೇಟೆ ವಹಿವಾಟಿನಲ್ಲಿ ಅದಾನಿ ಸಮೂಹದ ಕಂಪನಿಗಳ ಷೇರಿನ ಮೌಲ್ಯ ಶೇ 20ರಷ್ಟು ಕುಸಿದಿದೆ.

ಒಂದೇ ದಿನ ಮಾರುಕಟ್ಟೆ ಬಂಡವಾಳ ಮೌಲ್ಯ (ಎಂ–ಕ್ಯಾಪ್) ₹2.19 ಲಕ್ಷ ಕೋಟಿ ಕರಗಿದೆ. ಅದಾನಿ ಎಂಟರ್‌ಪ್ರೈಸಸ್ ಶೇ 22.61, ಅದಾನಿ ಎನರ್ಜಿ ಸಲ್ಯೂಷನ್ಸ್ ಶೇ 20, ಅದಾನಿ ಗ್ರೀನ್ ಎನರ್ಜಿ ಶೇ 18.80, ಅದಾನಿ ಪೋರ್ಟ್ಸ್ ಶೇ 13.53, ಅಂಬುಜಾ ಸಿಮೆಂಟ್ಸ್ ಶೇ 11.98, ಅದಾನಿ ಟೋಟಲ್ ಗ್ಯಾಸ್ ಷೇರಿನ ಮೌಲ್ಯದಲ್ಲಿ ಶೇ 10.40ರಷ್ಟು ಇಳಿಕೆಯಾಗಿದೆ.

ಅದಾನಿ ವಿಲ್ಮರ್ ಶೇ 9.98, ಅದಾನಿ ಪವರ್ ಶೇ 9.15, ಎಸಿಸಿ ಶೇ 7.29 ಹಾಗೂ ಎನ್‌ಡಿಟಿವಿ ಷೇರಿನ ಮೌಲ್ಯದಲ್ಲಿ ಶೇ 0.06ರಷ್ಟು ಇಳಿಕೆಯಾಗಿದೆ.

ಕಳೆದ ವರ್ಷದ ಜನವರಿಯಲ್ಲಿ ಅಮೆರಿಕದ ಶಾರ್ಟ್ ಸೆಲ್ಲರ್ ಕಂಪನಿ ಹಿಂಡನ್‌ಬರ್ಗ್ ರಿಸರ್ಚ್ ಅದಾನಿ ಸಮೂಹದ ವಿರುದ್ಧ ವರದಿ ಬಿಡುಗಡೆಗೊಂಡಿದ್ದ ವೇಳೆ ಆಗಿದ್ದ ನಷ್ಟಕ್ಕಿಂತ ಎರಡು ಪಟ್ಟು ಹೆಚ್ಚು ನಷ್ಟವಾಗಿದೆ ಎಂದು ಹೇಳಲಾಗಿದೆ.

ಬಾಂಡ್ ಮಾರಾಟ ರದ್ದು: ಲಂಚದ ಆರೋಪ ಕೇಳಿ ಬಂದಿರುವುದರಿಂದ ಅದಾನಿ ಗ್ರೀನ್ ಎನರ್ಜಿ ಕಂಪನಿಯು 60 ಕೋಟಿ ಅಮೆರಿಕನ್ ಡಾಲರ್ (₹5,070 ಕೋಟಿ) ಮೌಲ್ಯದ ಹಸಿರು ಬಾಂಡ್‌ಗಳ ಮಾರಾಟ ಪ್ರಕ್ರಿಯೆಯನ್ನು ರದ್ದುಪಡಿಸಿದೆ.

ಅಮೆರಿಕದ ಹೂಡಿಕೆ ಮಾರುಕಟ್ಟೆಯಲ್ಲಿ ಕಂಪನಿಯು 20 ವರ್ಷಗಳ ಅವಧಿಯ ಈ ಬಾಂಡ್‌ಗಳನ್ನು ಮಾರಾಟ ಮಾಡಿತ್ತು. ಬಾಂಡ್‌ಗಳಿಗೆ ಒಟ್ಟಾರೆ 3 ಪಟ್ಟು ಬೇಡಿಕೆ ಕಂಡುಬಂದಿತ್ತು.

'ಕಂಪನಿಯ ನಿರ್ದೇಶಕರ ವಿರುದ್ಧ ಲಂಚದ ಆರೋಪ ಕೇಳಿಬಂದಿದೆ. ಹಾಗಾಗಿ, ಬಾಂಡ್‌ಗಳ ಮಾರಾಟ ಸ್ಥಗಿತಗೊಳಿಸಲು ಅದಾನಿ ಸಮೂಹದ ಅಂಗಸಂಸ್ಥೆಗಳು ತೀರ್ಮಾನಿಸಿವೆ' ಎಂದು ಗ್ರೀನ್ ಎನರ್ಜಿ ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಕಳೆದ ವರ್ಷ ಅದಾನಿ ಎಂಟರ್‌ಪ್ರೈಸಸ್ ಕಂಪನಿಯು ಷೇರು ಮಾರಾಟ ಪ್ರಕ್ರಿಯೆ (ಎಫ್‌ಪಿಒ) ಮೂಲಕ ₹20 ಸಾವಿರ ಕೋಟಿ ಬಂಡವಾಳ ಸಂಗ್ರಹಕ್ಕೆ ಮುಂದಾಗಿತ್ತು. ಇದೇ ವೇಳೆ ವಾಸ್ತವಿಕ ಬೆಲೆಗಿಂತ ಶೇ 80ರಷ್ಟು ಹೆಚ್ಚು ಕೃತಕ ಬೆಲೆಯಲ್ಲಿ ಅದಾನಿ ಸಮೂಹದ ಷೇರುಗಳು ಮಾರಾಟವಾಗುತ್ತಿವೆ ಎಂದು ಹಿಂಡನ್‌ಬರ್ಗ್ ಆರೋಪಿಸಿತ್ತು. ಹಾಗಾಗಿ, ಎಫ್‌ಪಿಒ ಪ್ರಕ್ರಿಯೆಯನ್ನು ರದ್ದುಪಡಿಸಿತ್ತು.

ಸುದ್ದಿ 2 ನಿಮಿಷ

ಸೆನ್ಸೆಕ್ಸ್, ನಿಫ್ಟಿ ಕುಸಿತ

ಮುಂಬೈ (ಪಿಟಿಐ): ಗೌತಮ್ ಅದಾನಿ ಪ್ರಕರಣವು ದೇಶದ ಷೇರುಪೇಟೆ ಮೇಲೂ ಪರಿಣಾಮ ಬೀರಿದ್ದು, ಗುರುವಾರದ ವಹಿವಾಟಿನಲ್ಲಿ ಸೂಚ್ಯಂಕಗಳು ಕುಸಿತ ಕಂಡಿವೆ.

ವಿದೇಶಿ ಬಂಡವಾಳದ ಹೊರಹರಿವು ಹೆಚ್ಚಳ ಕೂಡ ಮಾರುಕಟ್ಟೆಯಲ್ಲಿ ನಕಾರಾತ್ಮಕ ವಹಿವಾಟಿಗೆ ಕಾರಣವಾಯಿತು. ಹೂಡಿಕೆದಾರರ ಸಂಪತ್ತು ₹5.27 ಲಕ್ಷ ಕೋಟಿ ಕರಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 422 ಅಂಶ ಕುಸಿತ ಕಂಡು 77,155 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು. ವಹಿವಾಟಿನ ಒಂದು ಸಂದರ್ಭದಲ್ಲಿ 775 ಅಂಶ ಇಳಿಕೆ ಕಂಡಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 168 ಅಂಶ ಇಳಿಕೆ ಕಂಡು, 23,349 ಅಂಶಗಳಲ್ಲಿ ಸ್ಥಿರಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಎನ್‌ಟಿಪಿಸಿ, ಐಟಿಸಿ, ಏಷ್ಯನ್ ಪೇಂಟ್ಸ್, ಬಜಾಜ್ ಫೈನಾನ್ಸ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ. ಪವರ್ ಗ್ರಿಡ್, ಅಲ್ಟ್ರಾ ಟೆಕ್ ಸಿಮೆಂಟ್, ಎಚ್‌ಸಿಎಲ್ ಟೆಕ್ನಾಲಜೀಸ್, ಎಕ್ಸಿಸ್ ಬ್ಯಾಂಕ್ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಮಂಗಳವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹3,411 ಕೋಟಿ ಬಂಡವಾಳವನ್ನು ಹಿಂಪಡೆದಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 1.13ರಷ್ಟು ಏರಿಕೆಯಾಗಿದ್ದು, ಪ್ರತಿ ಬ್ಯಾರೆಲ್‌ಗೆ 73.71 ಡಾಲರ್ ಆಗಿದೆ.

ಮೀನು ಉತ್ಪಾದನೆ ಏರಿಕೆ: ಕೇಂದ್ರ

ನವದೆಹಲಿ (ಪಿಟಿಐ): 'ಅಸಂಘಟಿತ ವಲಯದಲ್ಲಿರುವ ಮೀನು ಕೃಷಿಕರನ್ನು ಸಂಘಟಿತ ವಲಯಕ್ಕೆ ತರುವ ಮೂಲಕ ಸರ್ಕಾರದ ವಿವಿಧ ಯೋಜನೆಯಡಿ ಸೌಲಭ್ಯ ಕಲ್ಪಿಸಬೇಕಿದೆ' ಎಂದು ಕೇಂದ್ರ ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವ ರಾಜೀವ್ ರಂಜನ್ ಸಿಂಗ್ ಹೇಳಿದ್ದಾರೆ.

ಗುರುವಾರ ನಡೆದ ವಿಶ್ವ ಮೀನುಗಾರಿಕೆ ದಿನಾಚರಣೆಯಲ್ಲಿ ಮಾತನಾಡಿದ ಅವರು, ಜಗತ್ತಿನಲ್ಲಿ ಭಾರತವು ಎರಡನೇ ಅತಿದೊಡ್ಡ ಮೀನು ಉತ್ಪಾದಕ ರಾಷ್ಟ್ರವಾಗಿದೆ. ಶೀಘ್ರದಲ್ಲಿ ಮೊದಲ ಸ್ಥಾನಕ್ಕೇರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

2013–14ರಲ್ಲಿ ದೇಶದ ಮೀನು ಉತ್ಪಾದನೆಯು 95.79 ಲಕ್ಷ ಟನ್ ಇತ್ತು. 2022–23ರಲ್ಲಿ 175.45 ಲಕ್ಷ ಟನ್ ಆಗಿದ್ದು, ಶೇ 82ರಷ್ಟು ಏರಿಕೆಯಾಗಿದೆ. 3 ಕೋಟಿ ಜನರು ಮೀನುಗಾರಿಕೆ ವಲಯವನ್ನು ಅವಲಂಬಿಸಿದ್ದಾರೆ. ಅವರಿಗೆ ಕಿಸಾನ್ ಕ್ರೆಡಿಟ್ ಕಾರ್ಡ್ ಹಾಗೂ ವಿಮಾ ಸೌಲಭ್ಯವನ್ನು ಒದಗಿಸಬೇಕಿದೆ ಎಂದರು.

ಸಮುದ್ರದಿಂದ ಪ್ಲಾಸ್ಟಿಕ್ ಅನ್ನು ಹೊರತೆಗೆಯಬೇಕಿದೆ. ಅಕ್ರಮ ಮೀನುಗಾರಿಕೆಯನ್ನು ನಿಯಂತ್ರಿಸಬೇಕಿದೆ. ಸರ್ಕಾರವು ಈ ಸವಾಲುಗಳನ್ನು ಎದುರಿಸಲು ಮತ್ತು ಮೀನುಗಾರಿಕೆ ವಲಯವನ್ನು ಸದೃಢಗೊಳಿಸಲು ಕ್ರಮ ಕೈಗೊಳ್ಳುತ್ತಿದೆ ಎಂದು ಹೇಳಿದರು.

ಕೇರಳ ಅತ್ಯುತ್ತಮ ಕರಾವಳಿ ತೀರ ಹೊಂದಿರುವ ರಾಜ್ಯ ಎಂಬ ಪ್ರಶಸ್ತಿ ಪಡೆದರೆ, ತೆಲಂಗಾಣ ಅತ್ಯುತ್ತಮ ಒಳನಾಡು ಪ್ರದೇಶ ಹೊಂದಿರುವ ರಾಜ್ಯ ಪ್ರಶಸ್ತಿಗೆ ಭಾಜನವಾಯಿತು.

ವಿನಿಮಯ ದರ

$ ಡಾಲರ್	84.50
£ ಪೌಂಡ್	106.74
€ ಯುರೊ	88.43
¥ ಯೆನ್ (100ಕ್ಕೆ)	55

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ನೆನ್ನೆಯ ದರ)

ಶೇಂಗಾ (ರಿಫೈನ್ಡ್)	₹1480 (1510)
ಸೋಯಾ (ರಿಫೈನ್ಡ್)	₹1330 (1345)
ಸೂರ್ಯಕಾಂತಿ (ರಿಫೈನ್ಡ್)	₹1400 (1405)
ಪಾಮೋಲಿನ್	₹1370 (1380)

ಸಂಕ್ಷಿಪ್ತ ಸುದ್ದಿ

ರೂಪಾಯಿ ಮೌಲ್ಯ 8 ಪೈಸೆ ಕುಸಿತ

ಮುಂಬೈ (ಪಿಟಿಐ): ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಗುರುವಾರ ಸಾರ್ವಕಾಲಿಕ ಕನಿಷ್ಠ ಮಟ್ಟಕ್ಕೆ ಕುಸಿದಿದೆ.

8 ಪೈಸೆ ಇಳಿಕೆಯಾಗಿದ್ದು, ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ವಹಿವಾಟಿನ ಅಂತ್ಯಕ್ಕೆ ₹84.50ಕ್ಕೆ ಆಗಿದೆ.

ರಷ್ಯಾ–ಉಕ್ರೇನ್ ನಡುವೆ ನಡೆಯುತ್ತಿರುವ ಯುದ್ಧದಿಂದಾಗಿ ಹೂಡಿಕೆದಾರರಲ್ಲಿ ಡಾಲರ್ ಸುರಕ್ಷಿತವೆಂಬ ಭಾವನೆ ಮೂಡಿದೆ. ಇದರಿಂದ ಡಾಲರ್ ಮೌಲ್ಯ ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಚಿನ್ನದ ದರ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ನಡೆದ ವಹಿವಾಟಿನಲ್ಲಿ ಚಿನ್ನದ ದರ ಏರಿಕೆಯಾಗಿದ್ದರೆ, ಬೆಳ್ಳಿ ಧಾರಣೆಯು ಸ್ಥಿರವಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹1,400 ಏರಿಕೆಯಾಗಿದ್ದು, ₹79,300 ಆಗಿದೆ. ಸ್ಟ್ಯಾಂಡರ್ಡ್ ಚಿನ್ನದ (ಶೇ 99.5 ಶುದ್ಧತೆ) ದರವು 10 ಗ್ರಾಂಗೆ ಇಷ್ಟೇ ಪ್ರಮಾಣದಲ್ಲಿ ಹೆಚ್ಚಳವಾಗಿ, ₹78,900 ಆಗಿದೆ.

ಬೆಳ್ಳಿ ಬೆಲೆಯು ಕೆ.ಜಿಗೆ ₹93 ಸಾವಿರ ಇದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಸಂಜಯ್ ಮೂರ್ತಿ ನೂತನ ಸಿಎಜಿ

ನವದೆಹಲಿ (ಪಿಟಿಐ): ನೂತನ ಮಹಾ ಲೆಕ್ಕ ಪರಿಶೋಧಕ ಮತ್ತು ಮಹಾ ಲೇಖಪಾಲರಾಗಿ (ಸಿಎಜಿ) ಕೆ. ಸಂಜಯ್ ಮೂರ್ತಿ ಅವರು ಗುರುವಾರ ಅಧಿಕಾರ ಸ್ವೀಕರಿಸಿದ್ದಾರೆ.

ರಾಷ್ಟ್ರಪತಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ದ್ರೌಪದಿ ಮುರ್ಮು ಅವರು ಪ್ರಮಾಣ ವಚನ ಬೋಧಿಸಿದ್ದಾರೆ ಎಂದು ರಾಷ್ಟ್ರಪತಿ ಕಚೇರಿ ತಿಳಿಸಿದೆ.

1989ರ ಬ್ಯಾಚ್‌ನ ಐಎಎಸ್ ಅಧಿಕಾರಿಯಾಗಿರುವ ಅವರು, ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು.

ಸಿಎಜಿ ಗಿರೀಶ್ ಚಂದ್ರ ಮುರ್ಮು ಅವರ ಅಧಿಕಾರಾವಧಿ ಬುಧವಾರ ಮುಕ್ತಾಯಗೊಂಡಿದೆ. ಹಾಗಾಗಿ, ಕೇಂದ್ರ ಸರ್ಕಾರವು ನೂತನ ಸಿಎಜಿ ಆಗಿ ಸಂಜಯ್ ಅವರ ಹೆಸರನ್ನು ಸೂಚಿಸಿತ್ತು.

ಸ್ಥಳೀಯ ಕರೆನ್ಸಿಗೆ ಉತ್ತೇಜನ: ಭಾರತ–ಮಾಲ್ದೀವ್ಸ್ ಸಹಿ

ಮುಂಬೈ (ಪಿಟಿಐ): ಭಾರತ ಹಾಗೂ ಮಾಲ್ದೀವ್ಸ್, ಉಭಯ ರಾಷ್ಟ್ರಗಳ ವ್ಯಾಪಾರ ವಹಿವಾಟಿನಲ್ಲಿ ಸ್ಥಳೀಯ ಕರೆನ್ಸಿಗಳ ಬಳಕೆಗೆ ಉತ್ತೇಜನ ನೀಡಲು ಮುಂದಾಗಿವೆ.

ಈ ಕುರಿತು ಗುರುವಾರ ಭಾರತೀಯ ರಿಸರ್ವ್ ಬ್ಯಾಂಕ್‌ನ ಗವರ್ನರ್ ಶಕ್ತಿಕಾಂತ ದಾಸ್ ಹಾಗೂ ಮಾಲ್ದೀವ್ಸ್ ಹಣಕಾಸು ಪ್ರಾಧಿಕಾರದ ಗವರ್ನರ್ ಅಹಮದ್ ಮುನಾವರ್ ಒಡಂಬಡಿಕೆಗೆ ಸಹಿ ಹಾಕಿದ್ದಾರೆ.

ಚಾಲ್ತಿ ಖಾತೆ ವಹಿವಾಟು ಸೇರಿ ಇತರೆ ಹಣಕಾಸು ವಹಿವಾಟುಗಳನ್ನು ಭಾರತೀಯ ರೂಪಾಯಿ ಮತ್ತು ಮಾಲ್ದೀವ್ಸ್ ಕರೆನ್ಸಿ ಮಾಲ್ದೀವಿಯನ್ ರುಪಿಯಾ (ಎಂವಿಆರ್) ಮೂಲಕ ನಡೆಸಲು ಈ ಒಪ್ಪಂದದಿಂದ ನೆರವಾಗಲಿದೆ ಎಂದು ಆರ್‌ಬಿಐ ತಿಳಿಸಿದೆ.

ಮೋದಿಗೆ ಗಯಾನಾ, ಡೊಮಿನಿಕಾ ದೇಶದ ಅತ್ಯುನ್ನತ ನಾಗರಿಕ ಗೌರವ

ಜಾರ್ಜ್‌ಟೌನ್ (ಗಯಾನಾ): ಕೋವಿಡ್–19 ಸಾಂಕ್ರಾಮಿಕದ ಅವಧಿಯಲ್ಲಿ ಅಗತ್ಯ ನೆರವು ಮತ್ತು ಲಸಿಕೆ ಪೂರೈಸಿದ್ದನ್ನು ಪರಿಗಣಿಸಿ, ಗಯಾನಾ ಹಾಗೂ ಡೊಮಿನಿಕಾ ರಾಷ್ಟ್ರಗಳು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅತ್ಯುನ್ನತ ನಾಗರಿಕ ಪ್ರಶಸ್ತಿ ನೀಡಿ ಗೌರವಿಸಿವೆ.

ಮೂರು ರಾಷ್ಟ್ರಗಳ ಪ್ರವಾಸ ಕೈಗೊಂಡಿರುವ ಪ್ರಧಾನಿ ನರೇಂದ್ರ ಮೋದಿ ಕೊನೆಯ ಭೇಟಿಯಾಗಿ ಗಯಾನಾಕ್ಕೆ ಭೇಟಿ ನೀಡಿದರು. ಈ ವೇಳೆ ನಡೆದ ಕಾರ್ಯಕ್ರಮದಲ್ಲಿ ಅಧ್ಯಕ್ಷ ಡಾ. ಮೊಹಮ್ಮದ್ ಇರ್ಫಾನ್ ಅಲಿ ಅವರು ಮೋದಿ ಅವರಿಗೆ 'ದಿ ಆರ್ಡರ್ ಆಫ್ ಎಕ್ಸಲೆನ್ಸ್' ನೀಡಿ ಗೌರವಿಸಿದರು.

ಈ ಗೌರವಕ್ಕೆ ಪಾತ್ರವಾದ ನಾಲ್ಕನೇ ವಿದೇಶಿ ವ್ಯಕ್ತಿಯಾಗಿದ್ದಾರೆ.

ಡೊಮಿನಿಕಾ ದೇಶವು ತನ್ನ ಅತ್ಯುನ್ನತ ನಾಗರಿಕ ಗೌರವ 'ಡೊಮಿನಿಕಾ ಅವಾರ್ಡ್ ಆಫ್ ಆನರ್' ನೀಡಿ ಪ್ರಧಾನಿ ಮೋದಿ ಅವರನ್ನು ಗೌರವಿಸಿದೆ. ಡೊಮಿನಿಕಾ ದ್ವೀಪರಾಷ್ಟ್ರದ ಅಧ್ಯಕ್ಷೆ ಸಿಲ್ವೆನಿ ಬರ್ಟನ್ ಅವರು ಪ್ರಶಸ್ತಿ ಪ್ರದಾನ ಮಾಡಿದರು.

ಕೋವಿಡ್–19 ಸಾಂಕ್ರಾಮಿಕದ ಅವಧಿಯಲ್ಲಿ ಮೋದಿ ಅವರು ಡೊಮಿನಿಕಾಗೆ ನೀಡಿದ ನೆರವು ಮತ್ತು ಉಭಯ ದೇಶಗಳ ಬಾಂಧವ್ಯವನ್ನು ಬಲಪಡಿಸುವಲ್ಲಿ ಅವರು ತೋರಿದ ಬದ್ಧತೆಯನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗಿದೆ.

ಜಾರ್ಜ್‌ಟೌನ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಧ್ಯಕ್ಷ ಮೊಹಮ್ಮದ್ ಇರ್ಫಾನ್ ಅಲಿ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ 'ಆರ್ಡರ್ ಆಫ್ ಎಕ್ಸಲೆನ್ಸ್' ನೀಡಿ ಗೌರವಿಸಿದರು–ಎಎಫ್‌ಪಿ ಚಿತ್ರ

ಪ್ರಶಸ್ತಿಯನ್ನು 140 ಕೋಟಿ ಭಾರತೀಯರಿಗೆ ಸಮರ್ಪಿಸುತ್ತೇನೆ. ಇದು ಉಭಯ ರಾಷ್ಟ್ರಗಳ ನಡುವೆ ಅನೋನ್ಯವಾದ ಬಾಂಧವ್ಯ ಇರುವುದರ ಸೂಚಕವಾಗಿದೆ

ನರೇಂದ್ರ ಮೋದಿ, ಪ್ರಧಾನಿ (ಡೊಮಿನಿಕಾ ಅವಾರ್ಡ್ ಆಫ್ ಆನರ್ ಸ್ವೀಕರಿಸಿ)

ಉಗ್ರರ ದಾಳಿ ಪಾಕ್‌ನಲ್ಲಿ 50 ಮಂದಿ ಸಾವು

ಪೆಶಾವರ (ಪಿಟಿಐ): ಪಾಕಿಸ್ತಾನದ ವಾಯವ್ಯ ಭಾಗದಲ್ಲಿ ನಾಗರಿಕರನ್ನು ಕರೆದೊಯ್ಯುತ್ತಿದ್ದ ಹಲವು ವಾಹನಗಳ ಮೇಲೆ ಭಯೋತ್ಪಾದಕರು ನಡೆಸಿದ ದಾಳಿಯಲ್ಲಿ ಕನಿಷ್ಠ 50 ಮಂದಿ ಮೃತಪಟ್ಟಿದ್ದು, 20 ಮಂದಿ ಗಾಯಗೊಂಡಿದ್ದಾರೆ.

ಅಫ್ಗಾನಿಸ್ತಾನದ ಜತೆ ಗಡಿ ಹೊಂದಿರುವ ಖೈಬರ್ ಪಖ್ತುಂಖ್ವಾ ಪ್ರದೇಶದ ಕುರ್ರಂ ಜಿಲ್ಲೆಯಲ್ಲಿ ಭಯೋತ್ಪಾದಕರು ವಾಹನಗಳ ಮೇಲೆ ದಾಳಿ ನಡೆಸಿದ್ದಾರೆ.

ಈ ವಾಹನಗಳು ಪರಾಚಿನಾರ್‌ನಿಂದ ಪೆಶಾವರ್ ಕಡೆ ಹೊರಟಿದ್ದಾಗ ಬಂದೂಕುಧಾರಿಗಳು ಮನಬಂದಂತೆ ಗುಂಡು ಹಾರಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಾವಿಗೀಡಾದವರಲ್ಲಿ ಎಂಟು ಮಹಿಳೆಯರು, ಐವರು ಮಕ್ಕಳು ಸೇರಿದ್ದಾರೆ.

ನವದೆಹಲಿಯಲ್ಲಿ ಗುರುವಾರ ಸಿದ್ದರಾಮಯ್ಯ ಅವರು ನಂದಿನಿ ಹಾಲಿನ ಉತ್ಪನ್ನವನ್ನು ಬಿಡುಗಡೆ ಮಾಡಿದರು. ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಎಂ.ಕೆ. ಜಗದೀಶ್, ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಕೃಷಿ ಸಚಿವ ಎನ್. ಚಲುವರಾಯ ಸ್ವಾಮಿ, ಪಶುಸಂಗೋಪನೆ ಸಚಿವ ಕೆ. ವೆಂಕಟೇಶ್, ಕೆಎಂಎಫ್ ಅಧ್ಯಕ್ಷ ಭೀಮಾ ನಾಯ್ಕ್, ಶಾಸಕ ರಮೇಶ್ ಬಂಡಿಸಿದ್ದೇಗೌಡ, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಪೊನ್ನಣ್ಣ, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಗೋವಿಂದರಾಜ್ ಉಪಸ್ಥಿತರಿದ್ದರು

ದೆಹಲಿಯಲ್ಲಿ 'ನಂದಿನಿ' ಸವಿರುಚಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ (ಕೆಎಂಎಫ್) ಹಾಗೂ ಮಂಡ್ಯ ಜಿಲ್ಲಾ ಸಹಕಾರ ಹಾಲು ಒಕ್ಕೂಟದಿಂದ 'ನಂದಿನಿ' ವಿವಿಧ ಶ್ರೇಣಿಯ ಹಾಲು ಹಾಗೂ ಇತರೆ ಉತ್ಪನ್ನಗಳ ಮಾರಾಟಕ್ಕೆ ದೆಹಲಿಯಲ್ಲಿ ಗುರುವಾರ ಚಾಲನೆ ನೀಡಲಾಯಿತು.

ಪ್ರಸ್ತುತ ದೆಹಲಿ ಮಾರುಕಟ್ಟೆಯಲ್ಲಿರುವ ಗುಜರಾತ್ ಸಹಕಾರಿ ಹಾಲು ಮಾರುಕಟ್ಟೆ ಒಕ್ಕೂಟದ (ಜಿಸಿಎಂಎಂಎಫ್‌ಎಲ್) ಅಮುಲ್ ಹಾಗೂ ಮದರ್ ಡೇರಿ ಹಾಲಿಗಿಂತ ನಂದಿನಿ ಹಾಲಿನ ಮಾರಾಟ ದರವನ್ನು ಕೆಎಂಎಫ್ ಸ್ವಲ್ಪ ಕಡಿಮೆ ಇರಿಸಿದೆ.

ರಾಷ್ಟ್ರ ರಾಜಧಾನಿಯಲ್ಲಿ ಆರಂಭಿಕ ಹಂತದಲ್ಲಿ ಪ್ರತಿದಿನ 2.5 ಲಕ್ಷ ಲೀಟರ್ ಹಾಲು ಮಾರಾಟ ಮಾಡಲಾಗುತ್ತದೆ.

ಹಾಲು ಹಾಗೂ ಹಾಲಿನ ಉತ್ಪನ್ನಗಳನ್ನು ಬಿಡುಗಡೆ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, 'ದೆಹಲಿ ಬಹುದೊಡ್ಡ ಮಾರುಕಟ್ಟೆ. ಇಲ್ಲಿ ನಂದಿನಿ ಹಾಲಿನ ಮಾರಾಟಕ್ಕೆ ವ್ಯಾಪಕ ಅವಕಾಶ ಇದೆ. ಕೆಲವೇ ತಿಂಗಳಲ್ಲಿ ಹಾಲಿನ ಮಾರಾಟವನ್ನು 5 ಲಕ್ಷ ಲೀಟರ್‌ಗೆ ಏರಿಸಬೇಕು' ಎಂದು ಸೂಚಿಸಿದರು.

ದೆಹಲಿಯಲ್ಲಿ ದರ ಎಷ್ಟು? (ಲೀಟರ್‌ಗೆ)

ಹಸುವಿನ ಹಾಲು	₹56
ಪೂರ್ಣ ಕೆನೆ ಹಾಲು	₹67
ಸ್ಟಾಂಡರ್ಡೈಸ್ಡ್ ಹಾಲು	₹61
ಟೋನ್ಡ್ ಹಾಲು	₹55
ಮೊಸರು(ಕೆ.ಜಿಗೆ)	₹74

'ದೇಶದ ಹಾಲು ಉತ್ಪಾದನೆಯಲ್ಲಿ ಗುಜರಾತ್ ಮೊದಲ ಸ್ಥಾನದಲ್ಲಿದ್ದರೆ, ಕರ್ನಾಟಕ ಎರಡನೇ ಸ್ಥಾನದಲ್ಲಿದೆ' ಎಂದರು.

'ಇಡೀ ದೇಶದಲ್ಲಿ ರೈತರ ಉಪಕಸುಬು ಪಶುಸಂಗೋಪನೆ. ಗುಜರಾತ್‌ನಲ್ಲಿ ಕುರಿಯನ್ ಅವರು ಹಾಲು ಉತ್ಪಾದಕರ ಸಂಘ ಪ್ರಾರಂಭಿಸಿದರು' ಎಂದರು.

'ಹಿಂದೆ ಪಶುಸಂಗೋಪನಾ ಸಚಿವನಾಗಿದ್ದು, ಒಂದು ವರ್ಷ ಹಾಲು ಮಹಾಮಂಡಳಿಯ ಅಧ್ಯಕ್ಷನೂ ಆಗಿದ್ದೆ' ಎಂದು ಸ್ಮರಿಸಿದ ಅವರು, ಪಶುಸಂಗೋಪನಾ ಸಚಿವನಾಗಿದ್ದಾಗಲೇ ಹಾಲು ಉತ್ಪಾದಕರಿಗೆ ಶಾಶ್ವತ ಮಾರುಕಟ್ಟೆ ಕಲ್ಪಿಸಲು ಹಾಲು ಉತ್ಪಾದಕರ ಸಂಘಗಳನ್ನು ರಚಿಸಲಾಯಿತು' ಎಂದರು.

'ರಾಜ್ಯದಲ್ಲಿ ಒಟ್ಟು 16 ಜಿಲ್ಲಾ ಹಾಲು ಒಕ್ಕೂಟಗಳಿವೆ. ರಾಜ್ಯದಲ್ಲಿ ಅಂದಾಜು 1 ಕೋಟಿ ಲೀಟರ್ ಹಾಲು ಉತ್ಪಾದನೆಯಾಗುತ್ತಿದ್ದು, ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರಕ್ಕೆ ನಿತ್ಯ ತಲಾ 2.5 ಲಕ್ಷ ಲೀಟರ್ ಹಾಲು ಪೂರೈಕೆಯಾಗುತ್ತಿದೆ' ಎಂದು ವಿವರಿಸಿದರು.

'ಕರ್ನಾಟಕದಿಂದ ದೆಹಲಿಗೆ ಸಾಗಣೆ ಮಾಡುವ ಸಮಯದಲ್ಲಿ ಹಾಲಿನ ಗುಣಮಟ್ಟವನ್ನು ಕಾಪಾಡಿಕೊಳ್ಳಲಾಗುವುದು' ಎಂದು ಕೆಎಂಎಫ್ ಅಧ್ಯಕ್ಷ ಭೀಮಾ ನಾಯ್ಕ್ ಭರವಸೆ ನೀಡಿದರು.

ಸಹಕಾರ ಇಲಾಖೆ ಪ್ರಧಾನ ಕಾರ್ಯದರ್ಶಿ ಅಜಯ್ ನಾಗಭೂಷಣ್ ಮಾತನಾಡಿ, 'ರಾಜಧಾನಿಯಲ್ಲಿ ಸುಮಾರು 20 ಸಾವಿರ ಕನ್ನಡಿಗರು ಇದ್ದಾರೆ. ತಮಿಳುನಾಡು ಹಾಗೂ ಕೇರಳದವರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ನಂದಿನಿ ಹಾಲಿನ ಬಗ್ಗೆ ಇಲ್ಲಿನ ಕನ್ನಡಿಗರು ಪ್ರಚಾರ ಮಾಡಬೇಕು. ಈ ಮೂಲಕ ಮಾರಾಟ ಹೆಚ್ಚಳಕ್ಕೆ ಸಹಕಾರ ನೀಡಬೇಕು' ಎಂದು ಕೋರಿದರು.

ನೆತನ್ಯಾಹು ಬಂಧನಕ್ಕೆ ಐಸಿಸಿ ವಾರಂಟ್

ಹೇಗ್/ಜೆರುಸಲೇಂ (ಎಎಫ್‌ಪಿ/ಎಪಿ): ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಮತ್ತು ಮಾಜಿ ರಕ್ಷಣಾ ಸಚಿವ ಯೋವ್ ಗ್ಯಾಲಂಟ್ ಹಾಗೂ ಹಮಾಸ್ ಮುಖ್ಯಸ್ಥ ಮೊಹಮ್ಮದ್ ಡೀಫ್ ವಿರುದ್ಧ ಅಂತರರಾಷ್ಟ್ರೀಯ ಅಪರಾಧ ನ್ಯಾಯಾಲಯ (ಐಸಿಸಿ) ಗುರುವಾರ ಬಂಧನದ ವಾರಂಟ್ ಜಾರಿಗೊಳಿಸಿದೆ.

ಬೆಂಜಮಿನ್ ನೆತನ್ಯಾಹು

ಐಸಿಸಿಯ ಈ ಕ್ರಮವು ನೆತನ್ಯಾಹು ಅವರ ಸಂಚಾರಕ್ಕೆ ನಿರ್ಬಂಧ ವಿಧಿಸುತ್ತದೆ. ನ್ಯಾಯಾಲಯದ 124 ಸದಸ್ಯ ರಾಷ್ಟ್ರಗಳು ತಮ್ಮ ವ್ಯಾಪ್ತಿಯಲ್ಲಿ ಅವರನ್ನು ಬಂಧಿಸಬಹುದಾಗಿದೆ.

ಮಾನವೀಯತೆಯ ವಿರುದ್ಧದ ಅಪರಾಧ ಮತ್ತು 2023ರ ಅಕ್ಟೋಬರ್ 8ರಿಂದ ಅವರು ನಡೆಸಿರುವ ಯುದ್ಧಾಪರಾಧಗಳಿಗಾಗಿ ನೆತನ್ಯಾಹು ಮತ್ತು ಗ್ಯಾಲಂಟ್ ಅವರನ್ನು ಬಂಧಿಸಲು ವಾರಂಟ್ ಜಾರಿಗೊಳಿಸಲಾಗಿದೆ ಎಂದು ಐಸಿಸಿ ಪ್ರಕಟಣೆ ತಿಳಿಸಿದೆ. ಡೀಫ್ ವಿರುದ್ಧವೂ ಐಸಿಸಿ ವಾರಂಟ್ ಜಾರಿ ಮಾಡಿದೆ.

ದಕ್ಷಿಣ ಗಾಜಾದಲ್ಲಿ ಜುಲೈನಲ್ಲಿ ತಾನು ನಡೆಸಿದ ವೈಮಾನಿಕ ದಾಳಿಯಲ್ಲಿ ಡೀಫ್ ಮೃತಪಟ್ಟಿದ್ದಾರೆ ಎಂದು ಇಸ್ರೇಲ್ ಆಗಸ್ಟ್‌ನಲ್ಲಿ ಹೇಳಿತ್ತು. ಆದರೆ ಹಮಾಸ್ ಅದನ್ನು ನಿರಾಕರಿಸಿತ್ತು.

ಬೆಂಜಮಿನ್ ಖಂಡನೆ: ಅಂತರರಾಷ್ಟ್ರೀಯ ಅಪರಾಧ ನ್ಯಾಯಾಲಯ (ಐಸಿಸಿ) ಹೊರಡಿಸಿರುವ ಬಂಧನದ ವಾರಂಟ್ ಅನ್ನು ಖಂಡಿಸಿರುವ ಬೆಂಜಮಿನ್ ನೆತನ್ಯಾಹು ಅವರು, 'ಈ ಅಸಂಬದ್ಧ ಮತ್ತು ಸುಳ್ಳು ಕ್ರಮಗಳನ್ನು ಇಸ್ರೇಲ್ ತಿರಸ್ಕರಿಸುತ್ತದೆ' ಎಂದಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

10ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಮರಿಲಿಂಗಯ್ಯ
ಜನನ: 08-02-1942 ಮರಣ: 22-11-2014
ಸದಾ ನಿಮ್ಮ ನೆನಪಿನಲ್ಲಿರುವ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ
General
✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000- 86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ 13,000-17,000. 8951315839, 9141634619

Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ವ್ಯಾಪಾರ
Business Offers
Agents Wanted
EVENT ORGANIZERS, Exhibition, Schools, Colleges, Factories, Flea Market, Rural Jatre,Offices, Religious Gatherings, Associations In Bangalore City and Rural 6366936485

ಭವಿಷ್ಯ
Astrology
★ಭಾರತದ★ ಪ್ರಖ್ಯಾತ ಬುಡಬುಡಕಿ ಜನಾಂಗದ ಲಕ್ಷಾಂತರ ಸಂತುಷ್ಟಗ್ರಾಹಕರ ಪರಮಶ್ರೇಷ್ಠ ಬಾಬಾ ಶ್ರೀ.ದೇವಾನಂದರವರಿಂದ ನಿಮ್ಮೆಲ್ಲಾ ಸಂಕಷ್ಟಗಳಿಗೆ ಮುಕ್ತಿ,ಮನ್ಮೋಹಿನಿ ಮೂಡಿ ವಶೀಕರಣಗಳಿಗೆ.9353143216

ಪ್ರವಾಸ
Travel
21.01.2025 ಕುಂಭಮೇಳ ಪ್ರಯುಕ್ತ ರಿಯಾಯಿತಿ ದರದಲ್ಲಿ 6 ದಿನ ವಿಮಾನದಲ್ಲಿ ಅಲಹಾಬಾದ್ ಕಾಶಿ ಗಯಾ ಅಯೋಧ್ಯಾ. ಪ್ರತಿ ತಿಂಗಳು ಅಂಡಮಾನ್ ಹವಳದ್ವೀಪ Royal Package "ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್" 9739847429/ 9845560219

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
@50/-* PER WORDS
www.dhclassifieds.com
ಬುಕ್ ಮಾಡಿ
ಹೆಸರು ಬದಲಾವಣೆ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424 | +91 9901641752
+91 9731810277 | +91 9900428036
*Conditions apply

ಸೆಬಿ ಅಧ್ಯಕ್ಷೆಯನ್ನು ಹುದ್ದೆಯಿಂದ ತೆಗೆಯಿರಿ– ರಾಹುಲ್

‘ಅದಾನಿ ಬಂಧಿಸಿ’

ನವದೆಹಲಿ (ಪಿಟಿಐ): ಉದ್ಯಮಿ ಗೌತಮ್ ಅದಾನಿ ಅವರನ್ನು ತಕ್ಷಣವೇ ಬಂಧಿಸಬೇಕು ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಒತ್ತಾಯಿಸಿದರು.

ರಾಹುಲ್ ಗಾಂಧಿ

ಗೌತಮ್ ಅದಾನಿ ಅವರ ವಿರುದ್ಧ ಅಮೆರಿಕದಲ್ಲಿ ಆರೋಪ ಹೊರಿಸಿದ ಕೆಲವು ತಾಸುಗಳ ನಂತರ ಸುದ್ದಿಗೋಷ್ಠಿ ನಡೆಸಿದ ರಾಹುಲ್ ಅವರು, ‘ಈ ಉದ್ಯಮಿಯು ಭಾರತದ ಹಾಗೂ ಅಮೆರಿಕದ ಕಾನೂನುಗಳನ್ನು ಉಲ್ಲಂಘನೆ ಮಾಡಿರುವುದು ಈಗ ಅಮೆರಿಕದಲ್ಲಿ ಸ್ಪಷ್ಟವಾಗಿದೆ. ಅದಾನಿ ಅವರು ಈಗಲೂ ಮುಕ್ತವಾಗಿ ಓಡಾಡಿಕೊಂಡಿರುವುದು ಹೇಗೆ ಎಂಬುದು ಗೊತ್ತಾಗುತ್ತಿಲ್ಲ’ ಎಂದರು.

‘ಒಂದಾಗಿದ್ದರೆ ಸುರಕ್ಷಿತ’ ಎಂದು ಪ್ರಧಾನಿ ನರೇಂದ್ರ ಮೋದಿ ನೀಡಿರುವ ಹೇಳಿಕೆ ಬಗ್ಗೆ ಮಾತಿನ ಚಾಟಿ ಬೀಸಿದ ರಾಹುಲ್, ಪ್ರಧಾನಿ ಮತ್ತು ಅದಾನಿ ಅವರು ಒಂದಾಗಿರುವವರೆಗೆ ಭಾರತದಲ್ಲಿ ‘ಅವರು ಸುರಕ್ಷಿತ’ ಎಂದರು.

ಅದಾನಿ ಅವರನ್ನು ‘ರಕ್ಷಿಸುತ್ತಿ-ರುವ’ ಸೆಬಿ ಅಧ್ಯಕ್ಷೆ ಮಾಧವಿ ಪುರಿ ಬುಚ್ ಅವರನ್ನು ಆ ಹುದ್ದೆಯಿಂದ ತೆಗೆಯಬೇಕು ಎಂದು ಕೂಡ ರಾಹುಲ್ ಒತ್ತಾಯಿಸಿದರು. ಅದಾನಿ ವಿಚಾರವನ್ನು ತಾವು ಸಂಸತ್ತಿನಲ್ಲಿ ಪ್ರಸ್ತಾಪಿಸುವುದಾಗಿ, ವಿರೋಧ ಪಕ್ಷಗಳು ಒಟ್ಟಾಗಿ ವಿಷಯ ಪ್ರಸ್ತಾಪ ಮಾಡುವುದಾಗಿ ರಾಹುಲ್ ಸ್ಪಷ್ಟಪಡಿಸಿದರು.

‘ಮೋದಿ ನೇತೃತ್ವದ ಸರ್ಕಾರವು ಅವರನ್ನು ರಕ್ಷಿಸುತ್ತಿರುವ ಕಾರಣ, ಅದಾನಿ ಅವರನ್ನು ಭಾರತದಲ್ಲಿ ಬಂಧಿಸುವುದಿಲ್ಲ ಮತ್ತು ಅವರ ವಿರುದ್ಧ ತನಿಖೆ ನಡೆಯುವುದಿಲ್ಲ ಎಂಬುದನ್ನು ನಾನು ನಿಮಗೆ ಖಚಿತವಾಗಿ ಹೇಳಬಲ್ಲೆ’ ಎಂದರು.

‘ಭಾರತವು ಅದಾನಿ ಹಿಡಿತದಲ್ಲಿದೆ. ಅದಾನಿ ಭಾರತವನ್ನು ನಿಯಂತ್ರಿಸುತ್ತಿ-ದ್ದಾರೆ. ನಾವು ಅವರನ್ನು ಬಿಡುವುದಿಲ್ಲ’ ಎಂದು ರಾಹುಲ್ ಎಚ್ಚರಿಕೆ ನೀಡಿದರು.

‘ಇದು ರಾಜಕೀಯ–ಹಣಕಾಸು–ಅಧಿಕಾರಶಾಹಿ ಜಾಲ. ಇದು ದೇಶದ ರಾಜಕೀಯ ವ್ಯವಸ್ಥೆಯನ್ನು ಹಣದಿಂದ ಹಿಡಿದಿಡುತ್ತದೆ, ಇನ್ನೊಂದೆಡೆ ಇದು ಲಾಭಕ್ಕಾಗಿ ಕೆಲಸ ಮಾಡುತ್ತದೆ. ಇದು ದೇಶಕ್ಕೆ ಕೆಡುಕನ್ನು ಉಂಟುಮಾಡುತ್ತದೆ’ ಎಂದು ರಾಹುಲ್ ದೂರಿದರು.

ಈ ಕಾರಣದಿಂದಾಗಿ ಸಣ್ಣ ಹೂಡಿಕೆದಾರರು ನಷ್ಟ ಅನುಭವಿ-ಸುತ್ತಾರೆ. ವಿರೋಧ ಪಕ್ಷದ ನಾಯಕ ಆಗಿ ಅವರನ್ನು ಎಚ್ಚರಿಸುವುದು ತಮ್ಮ ಜವಾಬ್ದಾರಿ ಎಂದು ರಾಹುಲ್ ಹೇಳಿದರು.

ಸಣ್ಣ ಮೊತ್ತದ ಆರೋಪಗಳಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿಗಳನ್ನು ಬಂಧಿಸಿರುವ ನಿದರ್ಶನ ಇರುವಾಗ, ₹2,000 ಕೋಟಿ ಮೌಲ್ಯದ ಹಗರಣದಲ್ಲಿ ಅದಾನಿ ಭಾಗಿಯಾಗಿದ್ದರೂ ಅವರ ಬಂಧನ ಆಗಿಲ್ಲ ಎಂದರು.

‘ಪ್ರಧಾನಿಯವರು ಅವರನ್ನು ರಕ್ಷಿಸು-ತ್ತಿರುವುದು ಸ್ಪಷ್ಟ. ಇದನ್ನು ಪ್ರಸ್ತಾಪಿಸು-ವುದು ನನ್ನ ಕೆಲಸ. ಅದಾನಿ ಅವರನ್ನು ತಕ್ಷಣವೇ ಬಂಧಿಸಬೇಕು’ ಎಂದು ಆಗ್ರಹಿಸಿದರು.

ಜೆಪಿಸಿ ತನಿಖೆಗೆ ಖರ್ಗೆ ಒತ್ತಾಯ



ಮಲ್ಲಿಕಾರ್ಜುನ್ ಖರ್ಗೆ

ನವದೆಹಲಿ (ಪಿಟಿಐ): ಅದಾನಿ ಸಮೂಹದ ಕಾರ್ಯಚಟು-ವಟಿಕೆ, ಅದು ವಿದೇಶಗಳಲ್ಲಿ ಮಾಡಿರುವ ಹೂಡಿಕೆಗಳ ಬಗ್ಗೆ ಜಂಟಿ ಸಂಸದೀಯ ಸಮಿತಿಯಿಂದ ತನಿಖೆ ಆಗಬೇಕು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಒತ್ತಾಯ ಮಾಡಿದ್ದಾರೆ.

ಭಾರತ ಮುಂಚೂಣಿ ಉದ್ಯಮಿಯೊಬ್ಬರು ವಿದೇಶದಲ್ಲಿ ದೋಷಿ ಎಂದು ಹೇಳಿಸಿಕೊಂಡಾಗ, ಜಾಗತಿಕ ವೇದಿಕೆಗಳಲ್ಲಿ ದೇಶದ ಪ್ರತಿಷ್ಠೆಗೆ ಕುಂದು ಬರುತ್ತದೆ ಎಂದು ಖರ್ಗೆ ಹೇಳಿದರು.

‘ಪ್ರಧಾನಿ ನರೇಂದ್ರ ಮೋದಿ ಸೃಷ್ಟಿಸಿರುವ, ಆಪ್ತ ಸ್ನೇಹಿತರು, ಹೊಂದಾಣಿಕೆ ಮಾಡಿಕೊಂಡ ಅಧಿಕಾರಿಗಳು ಮತ್ತು ಕೆಲವು ರಾಜಕಾರಣಿಗಳು ಇರುವ ವಿಷಕಾರಿ ಕೂಟವನ್ನು ಹಾಗೂ ಅದಾನಿ ಅವರನ್ನು ತನಿಖೆಗೆ ಗುರಿಪಡಿಸ-ಬೇಕಿದೆ’ ಎಂದು ಖರ್ಗೆ ಹೇಳಿದ್ದಾರೆ.

ಈ ಕೂಟವು ದೇಶದ ಬಡವರು ಮತ್ತು ಮಧ್ಯಮ ವರ್ಗದವರಿಗೆ, ಉದ್ಯಮಿ-ಗಳಾಗಬೇಕು ಎಂಬ ಬಯಕೆ ಇರುವವರಿಗೆ, ಎಂಎಸ್‌ಎಂಇ ವಲಯಕ್ಕೆ, ನವೋ-ದ್ಯಮಗಳಿಗೆ ಹಾಗೂ ಕೋಟ್ಯಂತರ ಮಂದಿ ಸಣ್ಣ ಮತ್ತು ಮಧ್ಯಮ ಪ್ರಮಾಣದ ಹೂಡಿಕೆದಾರರಿಗೆ ತೊಂದರೆ ಉಂಟುಮಾಡುತ್ತದೆ, ಇವರ ಉಳಿತಾಯವನ್ನು ಹಾಗೂ ಅವಕಾಶಗಳನ್ನು ಕಿತ್ತುಕೊಂಡು ಅಸಮಾನತೆಯನ್ನು ಹೆಚ್ಚುಮಾಡುತ್ತದೆ ಎಂದು ಖರ್ಗೆ ಹೇಳಿದ್ದಾರೆ.

ಸಿಬಿಐ ತನಿಖೆಗೆ ಸಿಪಿಎಂ ಒತ್ತಾಯ

ನವದೆಹಲಿ (ಪಿಟಿಐ): ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಇನ್ನು ಮುಂದೆ ಸತ್ಯವನ್ನು ಮರೆಮಾಚಲು ಸಾಧ್ಯವಿಲ್ಲ, ಉದ್ಯಮಿ ಗೌತಮ್ ಅದಾನಿ ವಿರುದ್ಧದ ಆರೋಪಗಳ ಬಗ್ಗೆ ಸಿಬಿಐ ತನಿಖೆ ಆಗಬೇಕು ಎಂದು ಸಿಪಿಎಂ ಪಕ್ಷವು ಗುರುವಾರ ಹೇಳಿದೆ.

ಸರ್ಕಾರಿ ನೌಕರರಿಗೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಲಂಚದ ಆಮಿಷ ಒಡ್ಡಲಾಗಿತ್ತು ಎಂಬುದನ್ನು ಅಮೆರಿಕದಲ್ಲಿ ಬಹಿರಂಗಪಡಿಸಲಾಗಿದೆ, ಭಾರತದಲ್ಲಿ ಅದು ಆಗಲಿಲ್ಲ ಎಂಬುದು ನಾಚಿಕೆಗೇಡಿನ ಸಂಗತಿ ಎಂದು ಸಿಪಿಎಂ ಹೇಳಿದೆ.

‘ಗೌತಮ್ ಅದಾನಿ ಮತ್ತು ಅವರ ಉದ್ಯಮ ಸಾಮ್ರಾಜ್ಯಕ್ಕೆ ಕಾನೂನುಬಾಹಿರ ಹಾಗೂ ಕ್ರಿಮಿನಲ್ ಚಟುವಟಿಕೆಗಳನ್ನು ನಡೆಸಲು ಮೋದಿ ನೇತೃತ್ವದ ಸರ್ಕಾರದಿಂದ ಪೂರ್ಣ ರಕ್ಷಣೆ ಇದೆ’ ಎಂದು ಸಿಪಿಎಂ ಆರೋಪಿಸಿದೆ.

ಅದಾನಿ ಬಂಧನಕ್ಕೆ ವಾರಂಟ್

ಮೊದಲ ಪುಟದಿಂದ....

ಈಗ ಮತ್ತೊಂದು ಆರೋಪದ ಸುಳಿಗೆ ಸಿಲುಕಿದೆ.

ಅಮೆರಿಕದ ನ್ಯಾಯಾಂಗ ಇಲಾಖೆ ಹಾಗೂ ಸೆಕ್ಯುರಿಟೀಸ್ ಎಕ್ಸ್‌ಚೇಂಜ್ ಕಮಿಷನ್ (ಎಸ್‌ಇಸಿ) ಈ ಆರೋಪಗಳನ್ನು ಮಾಡಿದ್ದು, ಈ ಸಂಬಂಧ ಗೌತಮ್ ಅದಾನಿ ಹಾಗೂ ಇತರ 7 ಜನರ ವಿರುದ್ಧ ಬ್ರೂಕ್‌ಲಿನ್ ಕೋರ್ಟ್‌ನಲ್ಲಿ ಎರಡು ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

ಗೌತಮ್ ಅದಾನಿ, ಸಾಗರ್ ಅದಾನಿ ಅಲ್ಲದೇ, 2020ರಿಂದ 2023ರವರೆಗೆ ಕಂಪನಿಯ ಮುಖ್ಯ ಕಾರ್ಯನಿರ್ವಾ-ಹಕ ಅಧಿಕಾರಿಯಾಗಿದ್ದ ವಿನೀತ್ ಜೈನ್, ಅಜ್ಯೂರ್ ಪವರ್ ಗ್ಲೋಬಲ್ ಲಿಮಿಟೆಡ್‌ನ ಸಿರಿಲ್ ಕ್ಯಾಬೆನ್ಸ್, ಮಾಜಿ ಸಿಇಒ ರಂಜಿತ್ ಗುಪ್ತಾ, ಮಾಜಿ ವಾಣಿಜ್ಯ ಅಧಿಕಾರಿ ರೂಪೇಶ್ ಅಗರವಾಲ್ ಸೇರಿದಂತೆ ಏಳು ಜನರನ್ನು ಆರೋಪಿಗ-ಳನ್ನಾಗಿ ಮಾಡಲಾಗಿದೆ.

ಅದಾನಿ ಸಮೂಹದ ವಿರುದ್ಧ ಕೇಳಿಬಂದಿರುವ ಆರೋಪಗಳ ಕುರಿತು ಭಾರತದ ಅಧಿಕಾರಿಗಳು ಹಾಗೂ ‘ಸೆಬಿ’ ಪ್ರತಿಕ್ರಿಯೆ ನೀಡಿಲ್ಲ. ಅಜ್ಯೂರ್ ಪವರ್ ಕಂಪನಿಯೂ ಪ್ರತಿಕ್ರಿಯೆ ನೀಡಿಲ್ಲ.

ಈ ಗುತ್ತಿಗೆಗಳನ್ನು ಪಡೆಯಲು, 2020 ಮತ್ತು 2024ರ ನಡುವೆ, ಭಾರತೀಯ ಅಧಿಕಾರಿಗಳಿಗೆ 250 ದಶಲಕ್ಷ ಡಾಲರ್‌ನಷ್ಟು (ಅಂದಾಜು ₹2,100 ಕೋಟಿ) ಲಂಚ ನೀಡಲಾಗಿತ್ತು ಇಲ್ಲವೇ ಲಂಚ ನೀಡುವ ಯೋಜನೆ ರೂಪಿಸಲಾಗಿತ್ತು. ಈ ಗುತ್ತಿಗೆಗಳಿಂದ ಮುಂದಿನ 20 ವರ್ಷಗಳಲ್ಲಿ ತೆರಿಗೆ ಪಾವತಿಸಿದ ನಂತರ, ಅಂದಾಜು 200 ಕೋಟಿ ಡಾಲರ್‌ನಷ್ಟು ಲಾಭ ಸಿಗಲಿದೆ ಎಂಬುದಾಗಿ ಬಿಂಬಿಸಿ, ಹೂಡಿಕೆದಾರರಿಗೆ ವಂಚಿಸಲಾಗಿದೆ ಎಂದು ಆರೋಪಿಸಲಾಗಿದೆ.

‘ಅದಾನಿ ಹಾಗೂ ಇತರ ಆರೋಪಿಗಳು ಭ್ರಷ್ಟಾಚಾರ ಮತ್ತು ವಂಚನೆ ಮಾರ್ಗದ ಮೂಲಕ ಭಾರತದ ವಿವಿಧ ರಾಜ್ಯಗಳಲ್ಲಿ ವಿದ್ಯುತ್ ಪೂರೈಕೆ ಗುತ್ತಿಗೆ ಪಡೆದು, ಆ ಮೂಲಕ ಅಮೆರಿಕದ ಹೂಡಿಕೆದಾರರಿಗೆ ನಷ್ಟ ಉಂಟು ಮಾಡಿದ್ದಾರೆ’ ಎಂದು ಅಮೆರಿಕದ ಡೆಪ್ಯುಟಿ ಅಸಿಸ್ಟೆಂಟ್ ಅಟಾರ್ನಿ ಜನರಲ್ ಲಿಸಾ ಮಿಲ್ಲರ್ ಹೇಳಿದ್ದಾರೆ.

‘ಅಮೆರಿಕದ ಷೇರು ಮಾರುಕಟ್ಟೆಗಳ ಸಮಗ್ರತೆಯನ್ನು ದುರುಪಯೋಗಪಡಿಸಿ ಕೊಳ್ಳುವ ಮೂಲಕ ತಾವು ಶ್ರೀಮಂತ ರಾಗಲು ಪ್ರತಿವಾದಿಗಳು ವ್ಯಾಪಕ ಯೋಜ ನೆಯನ್ನೇ ರೂಪಿಸಿದ್ದರು’ ಎಂದು ಅಮೆ ರಿಕದ ಅಟಾರ್ನಿ ಬ್ರೆಯಾನ್ ಪೀಸ್ ಹೇಳಿದ್ದಾರೆ. ಅದಾನಿ ಒಡೆತನದ ಅದಾನಿ ಗ್ರೀನ್ ಎನರ್ಜಿ ಲಿಮಿಟೆಡ್ ಹಾಗೂ ಮತ್ತೊಂದು ಕಂಪನಿಯು 12 ಗಿಗಾವಾಟ್ ಸೌರವಿದ್ಯುತ್ ಅನ್ನು ಭಾರತ ಸರ್ಕಾರಕ್ಕೆ ಮಾರಾಟ ಮಾಡಿವೆ. ಈ ಕಂಪನಿಗಳಲ್ಲಿ ಹೂಡಿಕೆ ಮಾಡಿರುವವರಿಗೆ ವಂಚಿಸಲಾಗಿದೆ ಎಂದು ಆರೋಪಿಸಲಾಗಿದೆ.

2020–21ರ ಕೃತ್ಯ: ‘ನಮ್ಮ ಕಂಪನಿಯು (ಅದಾನಿ ಗ್ರೀನ್ ಎನರ್ಜಿ ಲಿ.) ಲಂಚ ವಿರೋಧಿ ನೀತಿಯನ್ನು ಹೊಂದಿದೆ. ಕಂಪನಿಯ ಆಡಳಿತ ಮಂಡಳಿಯು ಯಾರಿಗೂ ಲಂಚ ನೀಡುವುದಿಲ್ಲ ಅಥವಾ ಲಂಚ ನೀಡುವ ಕುರಿತು ವಾಗ್ದಾನ ಮಾಡುವುದಿಲ್ಲ. ಕಂಪನಿಯ ಬಾಂಡ್‌ಗಳಲ್ಲಿ ಹಣ ತೊಡಗಿಸಿ’ ಎಂದು ಗೌತಮ್ ಅದಾನಿ ಹಾಗೂ ಸಾಗರ್ ಅದಾನಿ ಹೂಡಿಕೆದಾರರ ಮನವೊಲಿಸಿದ್ದರು’ ಎಂಬ ಆರೋಪಗಳಿವೆ. ಅಮೆರಿಕದ ಸೆಕ್ಯುರಿಟೀಸ್ ಎಕ್ಸ್‌ಚೇಂಜ್ ಕಮಿಷನ್‌ನ (ಎಸ್‌ಇಸಿ) ಜಾರಿ ವಿಭಾಗದ ಹಂಗಾಮಿ ನಿರ್ದೇಶಕ ಸಂಜಯ್ ವಾಧ್ವಾ ಈ ಕುರಿತು ಮಾಹಿತಿ ನೀಡಿದ್ದಾರೆ.

‘ಅದಾನಿ ಹಾಗೂ ಇತರ ಆರೋಪಿಗಳು ಲಂಚ ನೀಡುವ ಯೋಜನೆಯನ್ನು 2020 ಅಥವಾ 2021ರಲ್ಲಿ ಆರಂಭಿಸಿದ್ದರು. ದೇಶದಲ್ಲಿ ವಿದ್ಯುತ್ ಬೇಡಿಕೆ ಹೆಚ್ಚುತ್ತಿದೆ. ಬೇಡಿಕೆಗೆ ಅನುಗುಣವಾಗಿ ಭಾರತೀಯ ಸೌರ ವಿದ್ಯುತ್ ನಿಗಮಕ್ಕಾಗಿ ವಿದ್ಯುತ್ ಉತ್ಪಾದಿಸಿ ಕೊಡುವ ಭರವಸೆ ನೀಡುವ ಮೂಲಕ ಗುತ್ತಿಗೆ ಪಡೆದಿದ್ದರು’ ಎಂದು ಅಮೆರಿಕದ ಪ್ರಾಸಿಕ್ಯೂಟರ್ ಹೇಳಿದ್ದಾರೆ.

‘ಸರ್ಕಾರಿ ಅಧಿಕಾರಿಗಳಿಗೆ ಲಂಚ ನೀಡುವುದಾಗಿ ಆರೋಪಿಗಳು ಭರವಸೆ ನೀಡಿದ ನಂತರ, 2021 ಮತ್ತು 2022ರಲ್ಲಿ ಅದಾನಿ ಗ್ರೀನ್ ಮತ್ತು ಅಜ್ಯೂರ್ ಪವರ್ ಗ್ಲೋಬಲ್ ಕಂಪನಿಗಳು ಭಾರತದ ಐದು ರಾಜ್ಯಗಳು ಅಥವಾ ಪ್ರದೇಶಗಳ ವಿದ್ಯುತ್ ವಿತರಣಾ ಸಂಸ್ಥೆಗಳೊಂದಿಗೆ ವಿದ್ಯುತ್ ಖರೀದಿ ಸಂಬಂಧ ಒಪ್ಪಂದ ಮಾಡಿಕೊಂಡಿದ್ದವು’ ಎಂದೂ ಹೇಳಿದ್ದಾರೆ.

‘ಈ ಭರವಸೆಗಳೊಂದಿಗೆ ಅದಾನಿ ಗ್ರೀನ್ ಕಂಪನಿಯು ಅಮೆರಿಕದ ಹೂಡಿಕೆದಾರರಿಂದ 1750 ಲಕ್ಷ ಡಾಲರ್ ಸೇರಿದಂತೆ 7500 ಲಕ್ಷ ಡಾಲರ್ ಸಂಗ್ರಹಿಸಿದೆ. ಅಮೆರಿಕದಲ್ಲಿ ಈ ಬೃಹತ್ ಮೊತ್ತ ಸಂಗ್ರಹಕ್ಕೆ ನೆರವಾಗಿರುವ ಅಜ್ಯೂರ್ ಪವರ್ ಕಂಪನಿಯು ನ್ಯೂಯಾರ್ಕ್ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ನೋಂದಣಿಯಾಗಿದೆ’ ಎಂದು ಎಸ್‌ಇಸಿ ತಿಳಿಸಿದೆ.

ಸಿಖ್ ವಿರೋಧಿ ದಂಗೆ: ಬದುಕುಳಿದವರಿಗೆ ಉದ್ಯೋಗ ನೇಮಕಾತಿ ಪತ್ರ

ನವದೆಹಲಿ (ಪಿಟಿಐ): 1984ರ ಸಿಖ್ ವಿರೋಧಿ ದಂಗೆಯಲ್ಲಿ ಬದುಕುಳಿದ 47 ಮಂದಿಗೆ ದೆಹಲಿಯ ಲೆಫ್ಟಿನಂಟ್ ಗವರ್ನರ್ ವಿ.ಕೆ ಸಕ್ಸೇನಾ ಅವರು, ಉದ್ಯೋಗ ನೇಮಕಾತಿ ಪತ್ರಗಳನ್ನು ಗುರುವಾರ ವಿತರಿಸಿದರು.

ಪಶ್ಚಿಮ ದೆಹಲಿಯ ತಿಲಕ್ ವಿಹಾರ ಪ್ರದೇಶದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಸಕ್ಸೇನಾ ಅವರು, ಉದ್ಯೋಗಕ್ಕೆ ಬಂದ 437 ಬಾಕಿ ಅರ್ಜಿಗಳು ಪರಿಶೀಲನಾ ಹಂತದಲ್ಲಿವೆ ಎಂದು ಹೇಳಿದರು.

ಈ ಪ್ರದೇಶದಲ್ಲಿ ಹೆಚ್ಚಾಗಿ 1984ರ ದಂಗೆಯ ಸಂತ್ರಸ್ತರ ಮನೆಗಳಿವೆ. ಈ ಸಂತ್ರಸ್ತರಿಗೆ ಪರಿಹಾರ ವಿತರಣೆಯನ್ನು ತ್ವರಿತವಾಗಿ ಕೈಗೊಳ್ಳಲು ವಿಶೇಷ ಶಿಬಿರಗಳನ್ನು ಆಯೋಜಿಸುವಂತೆ ಕಂದಾಯ ಇಲಾಖೆಗೆ ಸಕ್ಸೇನಾ ಸೂಚಿಸಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕಸಬ್‌ಗೂ ನ್ಯಾಯಯುತ ವಿಚಾರಣೆ: ಸುಪ್ರೀಂಕೋರ್ಟ್

ಮುಖ್ಯಾಂಶಗಳು

- ಯಾಸಿನ್ ಮಲಿಕ್ ಪ್ರಕರಣದ ವಿಚಾರಣೆ ವೇಳೆ ಅಭಿಪ್ರಾಯ
- ಜೈಲಿನಲ್ಲೇ ವಿಶೇಷ ನ್ಯಾಯಾಲಯ ಸ್ಥಾಪಿಸುವ ಸೂಚನೆ

ನವದೆಹಲಿ (ಪಿಟಿಐ): ‘ನಮ್ಮ ದೇಶದಲ್ಲಿ ಅಜ್ಮಲ್ ಕಸಬ್‌ನಂತಹ ಉಗ್ರನಿಗೂ ನ್ಯಾಯಯುತ ವಿಚಾರಣೆ ಎದುರಿಸುವ ಅವಕಾಶ ನೀಡಲಾಗಿದೆ’ ಎಂದು ಸುಪ್ರೀಂ ಕೋರ್ಟ್ ಗುರುವಾರ ಅಭಿಪ್ರಾಯಪಟ್ಟಿದೆ.

ಮುಫ್ತಿ ಮಹಮ್ಮದ್ ಸಯೀದ್ ಅವರ ಪುತ್ರಿ ರುಬಿಯಾ ಸಯೀದ್ ಅಪಹರಣ ಪ್ರಕರಣದ ಆರೋಪಿ, ಜಮ್ಮು–ಕಾಶ್ಮೀರ ಲಿಬರೇಷನ್ ಫ್ರಂಟ್ ಮುಖ್ಯಸ್ಥ ಯಾಸಿನ್ ಮಲಿಕ್‌ನನ್ನು ತನ್ನ ಮುಂದೆ ಹಾಜರುಪಡಿಸುವಂತೆ ಜಮ್ಮು ಮತ್ತು ಕಾಶ್ಮೀರದ ವಿಚಾರಣಾ ನ್ಯಾಯಾಲಯ 2022ರ ಸೆಪ್ಟೆಂಬರ್ 20ರಂದು ಸಿಬಿಐಗೆ ನಿರ್ದೇಶಿಸಿತ್ತು.

ಇದನ್ನು ಪ್ರಶ್ನಿಸಿ ಸಿಬಿಐ ಸಲ್ಲಿಸಿರುವ ಅರ್ಜಿಯ ವಿಚಾರಣೆ ವೇಳೆ ನ್ಯಾಯ-ಮೂರ್ತಿಗಳಾದ ಅಭಯ್ ಎಸ್. ಓಕಾ ಮತ್ತು ಆಗಸ್ಟಿನ್ ಜಾರ್ಜ್ ಮಸಿಹ್ ಅವರ ಪೀಠ ಈ ಹೇಳಿಕೆ ನೀಡಿದೆ. ಯಾಸಿನ್ ಮಲಿಕ್‌ನ ವಿಚಾರಣೆಗೆ ತಿಹಾರ್ ಜೈಲಿನಲ್ಲಿ ವಿಶೇಷ ನ್ಯಾಯಾಲಯ ಸ್ಥಾಪಿಸುವ ಸೂಚನೆಯನ್ನೂ ಸುಪ್ರೀಂ ಕೋರ್ಟ್ ನೀಡಿದೆ.

ಸಿಬಿಐ ಪರ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, ಭದ್ರತೆಯ ಕಾರಣಗಳಿಂದ ಮಲಿಕ್ ಅವರನ್ನು ವಿಚಾರಣೆಗಾಗಿ ಜಮ್ಮುವಿಗೆ ಕರೆದೊಯ್ಯಲು ಸಾಧ್ಯವಿಲ್ಲ. ಪಾಟಿ ಸವಾಲು ಪ್ರಕ್ರಿಯೆಯನ್ನು ಆನ್‌ಲೈನ್ ಮೂಲಕ ನಡೆಸಬೇಕೆಂದು ಮನವಿ ಮಾಡಿದರು.

ಅದಕ್ಕೆ ಪೀಠ, ‘ಪಾಟಿ ಸವಾಲು ಪ್ರಕ್ರಿಯೆ ಆನ್‌ಲೈನ್‌ನಲ್ಲಿ ನಡೆಸುವುದಾದರೂ ಹೇಗೆ? ಅಜ್ಮಲ್ ಕಸಬ್ ಕೂಡಾ ನ್ಯಾಯಯುತ ವಿಚಾರಣೆ ಎದುರಿಸಿದ್ದ. ಹೈಕೋರ್ಟ್‌ನಲ್ಲಿ ವಿಚಾರಣೆ ಸಂದರ್ಭ ಕಾನೂನು ನೆರವು ನೀಡಲಾಗಿತ್ತು’ ಎಂದಿತು.

2008ರಲ್ಲಿ ಮುಂಬೈ ದಾಳಿ ವೇಳೆ ಸೆರೆಸಿಕ್ಕ ಪಾಕಿಸ್ತಾನದ ಭಯೋತ್ಪಾದಕ ಅಜ್ಮಲ್ ಕಸಬ್‌ನನ್ನು ಯರವಾಡ ಕೇಂದ್ರ ಕಾರಾಗೃಹದಲ್ಲಿ ಮರಣ ದಂಡನೆಗೆ ಗುರಿಪಡಿಸಲಾಗಿತ್ತು.

‘ಜೈಲಿನ ಆವರಣದಲ್ಲೇ ಮಲಿಕ್ ಅವರ ವಿಚಾರಣೆ ನಡೆಸಲು ನಾವು ಆದೇಶಿಸಬಹುದು ಮತ್ತು ಅದಕ್ಕಾಗಿ ನವದೆಹಲಿಗೆ ಬರುವಂತೆ ನ್ಯಾಯಾಧೀಶರಿಗೆ ಸೂಚಿಸಲೂಬಹುದು’ ಎಂದು ಪೀಠ ಹೇಳಿತು.

ಆದರೆ, ಅಂತಹ ಆದೇಶ ಹೊರಡಿಸುವ ಮುನ್ನ ಈ ಪ್ರಕರಣದ ಎಲ್ಲ ಆರೋಪಿಗಳ ವಿಚಾರಣೆ ನಡೆಸಬೇಕು ಎಂದಿತು. ಸುಪ್ರೀಂ ಕೋರ್ಟ್‌ನ ವಿಚಾರಣೆಯಲ್ಲಿ ಹಾಜರಾಗಲು ಮಲಿಕ್‌ಗೆ ಅವಕಾಶ ನೀಡಬಹುದು ಎಂದು ಪೀಠ, ಮುಂದಿನ ವಿಚಾರಣೆಯನ್ನು ನವೆಂಬರ್ 28ಕ್ಕೆ ನಿಗದಿಪಡಿಸಿದೆ.

‘ಮೋದಿ ಹೆಸರು ಹಾಳುಮಾಡಲು 2002ರಿಂದಲೂ ಯತ್ನ’

ನವದೆಹಲಿ (ಪಿಟಿಐ): ಗೌತಮ್ ಅದಾನಿ ಅವರ ವಿರುದ್ಧ ಅಮೆರಿಕದಲ್ಲಿ ಆರೋಪ ಹೊರಿಸಿರುವುದನ್ನು ಆಧಾರವಾಗಿ ಇಟ್ಟುಕೊಂಡು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ವಾಗ್ದಾಳಿ ನಡೆಸಿರುವುದು, ಮೋದಿ ಅವರನ್ನು ಗುರಿಯಾಗಿಸಲು ಬಹಳ ಹಿಂದಿನಿಂದಲೂ ಮಾಡಿಕೊಂಡು ಬಂದಿರುವ ಯತ್ನದ ಒಂದು ಭಾಗ ಎಂದು ಬಿಜೆಪಿ ಹೇಳಿದೆ.

ಅಲ್ಲದೆ, ಅಮೆರಿಕದ ಕೋರ್ಟ್‌ನಲ್ಲಿ ಅದಾನಿ ವಿರುದ್ಧದ ಆರೋಪದಲ್ಲಿ ಉಲ್ಲೇಖವಾಗಿರುವ ನಾಲ್ಕು ರಾಜ್ಯಗಳ ಪೈಕಿ ಯಾವ ರಾಜ್ಯದಲ್ಲಿಯೂ ಬಿಜೆಪಿ ಆಡಳಿತ ಇಲ್ಲ ಎಂದು ಕೂಡ ಪಕ್ಷ ಹೇಳಿದೆ.

ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಬಿಜೆಪಿ ವಕ್ತಾರ ಸಂಬಿತ್ ಪಾತ್ರಾ, ಅದಾನಿ ಸಮೂಹದ ವಿರುದ್ಧದ ಆರೋಪಗಳ ವಿಚಾರವಾಗಿ ಕಾನೂನು ತನ್ನ ಕ್ರಮ ಕೈಗೊಳ್ಳುತ್ತದೆ ಎಂದರು. ಆದರೆ, ರಾಹುಲ್ ಅವರು ಮೋದಿ ಅವರನ್ನು ಹಾಗೂ ಕೇಂದ್ರ ಸರ್ಕಾರವನ್ನು ಉದ್ದೇಶಿಸಿ ಮಾಡಿರುವ ಟೀಕೆಗಳಿಗೆ ತಿರುಗೇಟು ನೀಡುವ ಯತ್ನ ನಡೆಸಿದರು.

ರಾಹುಲ್, ಅವರ ತಾಯಿ ಸೋನಿಯಾ ಗಾಂಧಿ ಮತ್ತು ಕಾಂಗ್ರೆಸ್ ಪಕ್ಷದವರು ಮೋದಿ ಅವರ ಹೆಸರು ಹಾಳುಮಾಡಲು 2002ರಿಂದಲೂ ಯತ್ನಿಸುತ್ತಿದ್ದಾರೆ. ಆದರೆ ಅವರಿಗೆ ಯಶಸ್ಸು ಸಿಕ್ಕಿಲ್ಲ ಎಂದರು.

ಸಂಬಿತ್ ಪಾತ್ರಾ

ಗೌತಮ್ ಅದಾನಿ ಜೊತೆಗಿನ ನಿಕಟ ಸಂಬಂಧದ ವಿಚಾರವಾಗಿ ಮೋದಿ ಅವರ ವಿಶ್ವಾಸಾರ್ಹತೆಯನ್ನು ನಾಶ ಮಾಡುವಲ್ಲಿ ವಿರೋಧ ಪಕ್ಷಗಳು ಯಶಸ್ಸು ಕಂಡಿವೆ ಎಂದು ರಾಹುಲ್ ಅವರು ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದರು.

ಅದಾನಿ ಅವರು ಭ್ರಷ್ಟರಾಗಿದ್ದರೆ ಕಾಂಗ್ರೆಸ್ ನೇತೃತ್ವದ ಸರ್ಕಾರವು ಅವರ ಕಂಪನಿಯಿಂದ ಹೂಡಿಕೆ ಬಯಸುವುದು ಏಕೆ ಎಂದು ಪ್ರಶ್ನಿಸಿದರು.

ಮೋದಿ ಅವರು ಪ್ರಧಾನಿಯಾಗಿ ಇರುವಾಗ ದೇಶದ ಅರ್ಥ ವ್ಯವಸ್ಥೆಯು ಬಲ ಪಡೆದುಕೊಳ್ಳುತ್ತಿರುವುದನ್ನು ಸಹಿಸಿಕೊಳ್ಳಲು ಕಾಂಗ್ರೆಸ್ಸಿಗೆ ಆಗುತ್ತಿಲ್ಲ ಎಂದು ಪಾತ್ರಾ ದೂರಿದರು.

ಮಾಳವೀಯ ಟೀಕೆ: ಅದಾನಿ ವಿರುದ್ಧದ ಆರೋಪಗಳ ವಿಚಾರವಾಗಿ ಕಾಂಗ್ರೆಸ್ ಪಕ್ಷವು ಅನಗತ್ಯವಾಗಿ ಉತ್ಸಾಹ ತೋರಬೇಕಾಗಿಲ್ಲ ಎಂದು ಬಿಜೆಪಿ ಐ.ಟಿ. ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಹೇಳಿದ್ದಾರೆ.

‘ನೀವು (ಕಾಂಗ್ರೆಸ್ ಮುಖಂಡರು) ಉಲ್ಲೇಖಿಸಿರುವ ದಾಖಲೆಯು, ‘ಅಪರಾಧಿ ಎಂಬುದು ಸಾಬೀತಾಗುವ-ವರೆಗೂ ಅವರನ್ನು ದೋಷಿಗಳು ಎಂದು ಹೇಳಲಾಗುವುದಿಲ್ಲ’ ಎಂಬುದನ್ನು ಸ್ಪಷ್ಟಪಡಿಸಿದೆ’ ಎಂದು ಮಾಳವೀಯ ಅವರು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರಿಗೆ ಪ್ರತಿಕ್ರಿಯೆ-ಯಾಗಿ ಹೇಳಿದ್ದಾರೆ.

ಸಂಸತ್ತಿನ ಅಧಿವೇಶನ ಆರಂಭವಾಗುವ ಮೊದಲು ಹಾಗೂ ಡೊನಾಲ್ಡ್ ಟ್ರಂಪ್ ಅವರು ಅಮೆರಿಕದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳುವುದು ಹತ್ತಿರವಾಗುತ್ತಿರುವಾಗ ಈ ವರದಿ ಬಂದಿರುವುದು ಹಲವು ಪ್ರಶ್ನೆಗಳನ್ನು ಮೂಡಿಸುತ್ತದೆ ಎಂದು ಮಾಳವೀಯ ಹೇಳಿದ್ದಾರೆ. ಆದರೆ, ಈ ಮಾತಿಗೆ ಅವರು ಹೆಚ್ಚಿನ ವಿವರಣೆ ನೀಡಿಲ್ಲ.

ಉದ್ಯಾನನಗರಿಯಲ್ಲಿ ಭಾರತ–ವೆಸ್ಟ್ ಇಂಡೀಸ್ ಮುಖಾಮುಖಿಗೆ 50 ವರ್ಷ • ರಿಚರ್ಡ್ಸ್ ಪದಾರ್ಪಣೆಯ ಪಂದ್ಯ

ಬೆಂಗಳೂರು ಮೊದಲ ಟೆಸ್ಟ್‌ಗೆ ಚಿನ್ನದ ಹೊಳಪು

• ಗಿರೀಶ ದೊಡ್ಡಮನಿ

ವಿವಿಯನ್ ರಿಚರ್ಡ್ಸ್ ಕಾಟ್ ಪ್ರಸನ್ನ ಬೌಲ್ಡ್ ಚಂದ್ರಶೇಖರ್..

1974ರ ನವೆಂಬರ್ 22ರಂದು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆರಂಭವಾಗಿದ್ದ ಟೆಸ್ಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಈ ವಿಕೆಟ್ ಕಣ್ತುಂಬಿಕೊಂಡವರ ಸಂತಸ ಮುಗಿಲು ಮುಟ್ಟಿತ್ತು. ಅದಾಗಲೇ ವಿಶ್ವವಿಖ್ಯಾತ ಸ್ಪಿನ್ನರ್‌ಗಳಾಗಿ ಗುರುತಿಸಿಕೊಂಡಿದ್ದ ಎರಪಳ್ಳಿ ಪ್ರಸನ್ನ ಮತ್ತು ಬಿ.ಎಸ್. ಚಂದ್ರಶೇಖರ್ ಅವರು ಕರ್ನಾಟಕದ ಕ್ರಿಕೆಟ್ ಪ್ರೇಮಿಗಳ ಕಣ್ಮಣಿಯಾದವರು. ವಿವ್ ರಿಚರ್ಡ್ಸ್ ಅವರಿಗೆ ಅದು ಪದಾರ್ಪಣೆಯ ಪಂದ್ಯವಾಗಿತ್ತು. ಈ ನೆನಪಿಗೆ ಈಗ ಚಿನ್ನದ ಹೊಳಪು.

ಟೆಲಿವಿಷನ್ ಇಲ್ಲದ ಆ ಕಾಲದಲ್ಲಿ ಭಾರತದಲ್ಲಿ ಕ್ರಿಕೆಟ್ ಇನ್ನೂ ಪ್ರವರ್ಧಮಾನಕ್ಕೆ ಬರುತ್ತಿತ್ತು. ಆದರೆ ಕ್ಲೈವ್ ಲಾಯ್ಡ್ ನೇತೃತ್ವದ ವೆಸ್ಟ್ ಇಂಡೀಸ್ ಎಂದರೆ ಎದುರಾಳಿಗಳ ಮೈನಡುಗುತ್ತಿತ್ತು. ದೈತ್ಯ ಬೌಲರ್‌ಗಳು, ಬೀಸಾಟದ ಬ್ಯಾಟರ್‌ಗಳು ಇದ್ದ ಅಗ್ರಮಾನ್ಯ ತಂಡ ಅದಾಗಿತ್ತು. ಆದರೆ ಭಾರತದಲ್ಲಿ ಕ್ರಿಕೆಟ್ ಕ್ರೇಜ್ ಇನ್ನೂ ಹೆಚ್ಚಿರಲಿಲ್ಲ. ಅದರಿಂದಾಗಿ ವಿಂಡೀಸ್ ತಂಡವು ಗೆಲ್ಲುವ ಸಾಧ್ಯತೆಗಳೇ ಹೆಚ್ಚಿದ್ದ ಆ ಪಂದ್ಯದ ಪ್ರಮುಖ ಆಕರ್ಷಣೆಯೆಂದರೆ ಕನ್ನಡನಾಡಿನ ದಿಗ್ಗಜ ಆಟಗಾರರಾದ. ಪ್ರಸನ್ನ, ಚಂದ್ರಶೇಖರ್, ಜಿ.ಆರ್. ವಿಶ್ವನಾಥ್ ಮತ್ತು ಬ್ರಿಜೇಶ್ ಪಟೇಲ್ ಅವರು. ಮನ್ಸೂರ್ ಅಲಿ ಖಾನ್ ಪಟೌಡಿ ನಾಯಕತ್ವದ ಭಾರತ ತಂಡವು ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತ್ತು.

ಕ್ರಿಕೆಟ್ ಲೋಕದ ‘ಕಿಂಗ್’ ಆಗಿ ಬೆಳೆದ ವಿವಿಯನ್ ರಿಚರ್ಡ್ಸ್ ಮತ್ತು ಶ್ರೇಷ್ಠ ಆರಂಭಿಕ ಬ್ಯಾಟರ್‌ಗಳಲ್ಲಿ ಒಬ್ಬರಾದ ಗಾರ್ಡನ್ ಗ್ರೀನಿಜ್ ಅವರು ಪದಾರ್ಪಣೆ ಮಾಡಿದರು. ಭಾರತ ತಂಡದಲ್ಲಿ ಹೇಮಂತ್ ಕಾನಿಟ್ಕರ್ ಅವರು ತಮ್ಮ ಚೊಚ್ಚಲ ಟೆಸ್ಟ್ ಆಡಿದರು. 22 ರಿಂದ 27ರವರೆಗೆ (ಒಂದು ವಿಶ್ರಾಂತಿ ದಿನ ಸೇರಿ) ನಡೆದ ಪಂದ್ಯವನ್ನು ಪ್ರೇಕ್ಷಕರ ಗ್ಯಾಲರಿಯಲ್ಲಿದ್ದವರನ್ನು ಮಾತಿಗೆಳೆದರೆ ಅದೊಂದೇ ಪಂದ್ಯದ ಇಂತಹ ಹತ್ತು ಹಲವಾರು ನೆನಪುಗಳು ಸಾಲುಗಟ್ಟುತ್ತವೆ.

ವೇಗದ ಬೌಲರ್ ಇರಲಿಲ್ಲ: ‘ನಾನು ಆಗ ಕರ್ನಾಟಕ ರಣಜಿ ಬಳಗದಲ್ಲಿದ್ದೆ. ಪಂದ್ಯ ನೋಡಲು ಹೋಗಿದ್ದೆ. ಹಬ್ಬದ ವಾತಾವರಣ ಇತ್ತು. ಆಗ ಭಾರತದಲ್ಲಿ ಸ್ಪಿನ್ ಬೌಲರ್‌ಗಳದ್ದೇ ಪಾರಮ್ಯವಿದ್ದ ಕಾಲ. ವೇಗದ ಬೌಲಿಂಗ್ ಪರಿಕಲ್ಪನೆ ಇನ್ನೂ ಅಷ್ಟಾಗಿ ಇರಲಿಲ್ಲ. ನಮ್ಮ ಅದೃಷ್ಟಕ್ಕೆ ಚಂದ್ರಶೇಖರ್, ಪ್ರಸನ್ನ ಅವರಂತಹ ಅದ್ಭುತ ಬೌಲರ್‌ಗಳಿದ್ದರು. ಭಾರತ ತಂಡದಲ್ಲಿ ಪರಿಣತ ಮತ್ತು ಪರಿಪೂರ್ಣ ಬ್ಯಾಟರ್‌ಗಳೆಂದರೆ ಗಾವಸ್ಕರ್ ಮತ್ತು ವಿಶಿ (ವಿಶ್ವನಾಥ್) ಅವರಾಗಿದ್ದರು. ಅದರಲ್ಲಿ ವಿಶ್ವನಾಥ್ ಅವರ ಬ್ಯಾಟಿಂಗ್ ಎಂದರೆ ರಸದೌತಣ. ಅ ಪಂದ್ಯದಲ್ಲಿ ವಿಂಡೀಸ್‌ನ ಆಲ್ವಿನ್ ಕಾಳಿಚರಣ್ ಶತಕ ಹೊಡೆದರು. ಅವರು ಮತ್ತು ವಿಶಿ ಅವರಿಬ್ಬರ ಬ್ಯಾಟಿಂಗ್ ಒಂದೇ ತರಹ ಇತ್ತು. ಒಂದೇ ಒಂದು ವ್ಯತ್ಯಾಸವೆಂದರೆ ಕಾಳಿಚರಣ್ ಎಡಗೈ ಬ್ಯಾಟರ್ ಆಗಿದ್ದರು’ ಎಂದು ಮಾಜಿ ಕ್ರಿಕೆಟಿಗ ಸಂಜಯ್ ದೇಸಾಯಿ ನೆನಪಿಸಿಕೊಳ್ಳುತ್ತಾರೆ.

‘ಅ ಪಂದ್ಯದಲ್ಲಿ ಪ್ರಸನ್ನ ಅವರು ರಿಚರ್ಡ್ಸ್ ಕ್ಯಾಚ್ ಪಡೆದ ರೀತಿ ಅಮೋಘವಾಗಿತ್ತು. ಅದೂ ನನ್ನ ಅತ್ಯಂತ ಅಚ್ಚುಮೆಚ್ಚಿನ ಬೌಲರ್ ಚಂದ್ರಾ (ಚಂದ್ರಶೇಖರ್) ಅವರ ಎಸೆತದಲ್ಲಿ. ಆ ದೃಶ್ಯವನ್ನು ನಾನು ಮರೆಯಲು ಸಾಧ್ಯವೇ ಇಲ್ಲ. ಆಗ ಕ್ರೀಡಾಂಗಣದ ಪೆವಿಲಿಯನ್ ಮತ್ತಿತರ ಸೌಲಭ್ಯಗಳು ನಿರ್ಮಾಣವಾ-ಗುತ್ತಿದ್ದವು. ಎಂ. ಚಿನ್ನಸ್ವಾಮಿ ಅವರು ಈ ಕ್ರೀಡಾಂಗಣದ ಅಭಿವೃದ್ಧಿಗೆ ನೀಡಿದ ಕಾಣಿಕೆ ಅಗಾಧವಾದುದು’ ಎಂದು ದೇಸಾಯಿ ಹೇಳುತ್ತಾರೆ.

ಬಾಡಿಗೆ ಕುರ್ಚಿ..ಶಾಮಿಯಾನಾ..: ‘ಕೆಎಸ್‌ಸಿಎ ಮೈದಾನದಲ್ಲಿ ಅವತ್ತು 30 ಸಾವಿರಕ್ಕೂ ಹೆಚ್ಚು ಅಭಿಮಾನಿಗಳು ಸೇರಿದ್ದರು. ಪ್ರೇಕ್ಷಕರಿಗಾಗಿ ಬಾಡಿಗೆ ಕುರ್ಚಿ, ಶಾಮಿಯಾನಗಳನ್ನು ಹಾಕಿ ತಾತ್ಕಾಲಿಕ ಗ್ಯಾಲರಿ ನಿರ್ಮಾಣ ಮಾಡಲಾಗಿತ್ತು. ಅದರಲ್ಲಿಯೇ ಕೆಲವು ಕುರ್ಚಿಗಳನ್ನು ಗಣ್ಯ ಅತಿಥಿಗಳಿಗಾಗಿ ಮೀಸಲಿಡಲಾಗಿತ್ತು. ಪೆವಿಲಿಯನ್ ಇನ್ನೂ ಪೂರ್ಣಗೊಂಡಿರಲಿಲ್ಲ. ಡ್ರೆಸಿಂಗ್ ರೂಮ್ ಕೂಡ ಸುಸಜ್ಜಿತವಾಗಿರಲಿಲ್ಲ’ ಎಂದು ಮಾಜಿ ಕ್ರಿಕೆಟಿಗ ಸುಧಾಕರ್ ರಾವ್ ನೆನಪಿಸಿಕೊಳ್ಳುತ್ತಾರೆ.

‘ಟೆಸ್ಟ್ ಪಂದ್ಯ ಆಯೋಜಿಸುವುದು ಆಗ ಪ್ರತಿಷ್ಠೆಯ ವಿಷಯವಾಗಿತ್ತು. ಅದನ್ನು ನೋಡಲು ನಾವು ಉತ್ಸುಕರಾ-ಗಿದ್ದೆವು. ರಾಜ್ಯ ತಂಡದಲ್ಲಿದ್ದ ನಮಗೆಲ್ಲ ಪಾಸ್‌ಗಳನ್ನು ನೀಡಿದ್ದರು. ಪೆವಿಲಿಯನ್ ಪಕ್ಕದಲ್ಲಿ ಮುಂದಿನ ಸಾಲಿನಲ್ಲಿ ಕುಳಿತುಕೊಳ್ಳಲು ಅವಕಾಶ ಮಾಡಿಕೊ-ಟ್ಟಿದ್ದರು. ಭಾರತ ತಂಡದ ಆಟಗಾರರನ್ನು ಹತ್ತಿರದಿಂದ ನೋಡಿದೆವು’ ಎಂದರು.

ಅಂದು ನಡೆದ ಟೆಸ್ಟ್‌ನಲ್ಲಿ ಭಾರತ ತಂಡವು 267 ರನ್‌ಗಳಿಂದ ಸೋತಿತು. ಆದರೆ ಸೋಲು, ಗೆಲುವಿಗಿಂತ ಬೆಂಗಳೂರಿನ ಟೆಸ್ಟ್ ಪಂದ್ಯವು ಭಾರತದ ಕ್ರಿಕೆಟ್ ಶಕ್ತಿ ವೃದ್ಧಿಸಲು ಕಾರಣವಾಯಿತು. ಕೋಲ್ಕತ್ತ, ಚೆನ್ನೈ ಹಾಗೂ ಮುಂಬೈನಲ್ಲಿ ಮಾತ್ರ ಟೆಸ್ಟ್ ಪಂದ್ಯಗಳು ನಡೆಯು-ತ್ತಿದ್ದವು. ಅವುಗಳ ಸಾಲಿಗೆ ಸೇರಿದ ಬೆಂಗಳೂರಿನ ಕ್ರೀಡಾಂಗಣವೂ ಸೇರಿತು. ಪಂದ್ಯದ ಟಿಕೆಟ್‌ಗಳು ₹ 8ರಿಂದ ₹25ರವರೆಗೂ ನಿಗದಿಯಾಗಿದ್ದವಂತೆ.

ಕಳೆದ 50 ವರ್ಷಗಳಲ್ಲಿ ಇಲ್ಲಿ 25 ಟೆಸ್ಟ್ ಪಂದ್ಯಗಳು ನಡೆದಿವೆ. ಮಳೆ ಬಂದು ನಿಂತ ಅರ್ಧಗಂಟೆಯಷ್ಟರಲ್ಲಿ ಪಂದ್ಯವನ್ನು ನಡೆಸಲು ಮೈದಾನವನ್ನು ಸಿದ್ಧಗೊಳಿಸುವಂತಹ ಸಬ್ ಏರ್ ಸಿಸ್ಟಮ್ ಮತ್ತು ಪರಿಣತ ಸಿಬ್ಬಂದಿ ಇರುವ ದೇಶದ ಏಕೈಕ ಕ್ರೀಡಾಂಗಣ ಇದಾಗಿದೆ.

ಏಕದಿನ, ಟಿ20 ಮತ್ತು ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಗಳ ಪಂದ್ಯಗಳಿಗಷ್ಟೇ ಅಲ್ಲ. ಟೆಸ್ಟ್ ಪಂದ್ಯಗಳನ್ನು ನೋಡಲೂ 15 ರಿಂದ 20 ಸಾವಿರ ಜನರು ಸೇರುವ ಕ್ರೀಡಾಂಗಣವೆಂಬ ಹೆಗ್ಗಳಿಕೆ ಇದಕ್ಕಿದೆ. ಇತ್ತೀಚೆಗೆ ಇಲ್ಲಿ ನಡೆದ ಭಾರತ–ನ್ಯೂಜಿಲೆಂಡ್ ಪಂದ್ಯವನ್ನು ವೀಕ್ಷಿಸಲು ಪ್ರತಿದಿನ ಸರಾಸರಿ 15 ಸಾವಿರ ಜನರು ಬಂದಿದ್ದರು. ⌘



ಮೊದಲ ಟೆಸ್ಟ್ ಪಂದ್ಯ ವೀಕ್ಷಿಸಲು ಕಿಕ್ಕಿರಿದು ಸೇರಿದ್ದ ಜನಸ್ತೋಮ –ಪ್ರಜಾವಾಣಿ ಸಂಗ್ರಹದಿಂದ

ಜಿ.ಆರ್. ವಿಶ್ವನಾಥ್ ಮತ್ತು ಬಿ.ಎಸ್. ಚಂದ್ರಶೇಖರ್



ಬ್ರಿಜೇಶ್ ಪಟೇಲ್

ಎರಪಳ್ಳಿ ಪ್ರಸನ್ನ

ಕಾಮೆಂಟ್ರಿಯ ದಿನಗಳು

ನಾನು ಅ ಪಂದ್ಯದಲ್ಲಿ ಆಕಾಶವಾಣಿಯ ಸ್ಕೋರರ್ ಆಗಿದ್ದೆ. ಪಂದ್ಯದ ಮುನ್ನಾ ದಿನಗಳಲ್ಲಿ ಚಿನ್ನಸ್ವಾಮಿಯವರೊಂದಿಗೆ ಕಾರ್ಯನಿರ್ವಹಿಸಿದ ನೆನಪುಗಳು ಹಲವಾರಿವೆ. ಆದರೆ ಸ್ಕೋರರ್ ಆಗಿ ಆ ಪಂದ್ಯವನ್ನು ದಾಖಲಿಸಿದ್ದು ಅವಿಸ್ಮರಣೀಯ. ಆಗ ರೇಡಿಯೊ ಕಾಮೆಂಟ್ರಿ ಪ್ರಮುಖವಾಗಿತ್ತು. ಟಿ.ವಿ. ಇರದ ಕಾಲದಲ್ಲಿ ಎಲ್ಲರಿಗೂ ಕಾಮೆಂಟ್ರಿ ಅಚ್ಚುಮೆಚ್ಚು. ಆದ್ದರಿಂದ ನಿಖರ ಅಂಕಿ ಅಂಶ ನೀಡುವುದು ಅಗತ್ಯವಾಗಿತ್ತು. ವಿವ್ ರಿಚರ್ಡ್ಸ್, ಗ್ರಿನೀಜ್ ಪದಾರ್ಪಣೆ ಸೇರಿದಂತೆ ಹಲವು ವಿಶೇಷಗಳು ನಡೆದ ಪಂದ್ಯ ಅದು.

ಎಚ್.ಆರ್. ಗೋಪಾಲಕೃಷ್ಣ, ಕ್ರಿಕೆಟ್ ಅಂಕಿ ಸಂಖ್ಯೆ ಪರಿಣತರು

ಕರ್ನಾಟಕದ ಕ್ರಿಕೆಟ್‌ಗೆ ಆ ಪಂದ್ಯವು ಅತ್ಯಂತ ಮಹತ್ವದ ಮೈಲಿಗಲ್ಲು. ಸುವರ್ಣಮಹೋತ್ಸವದ ಸಮಾರಂಭಕ್ಕೆ ಈ ಮೊದಲು ಯೋಜಿಸಿದ್ದೆವು. ಕಾರಣಾಂತರಗಳಿಂದ ದಿನಾಂಕವನ್ನು ಮುಂದೂಡಲಾಗಿದೆ. ಇದನ್ನು ಅದ್ದೂರಿಯಾಗಿ ಆಯೋಜಿಸುತ್ತೇವೆ.

ರಘುರಾಮ್ ಭಟ್, ಅಧ್ಯಕ್ಷರು, ಕೆಎಸ್‌ಸಿಎ

ಕ್ರೀಡಾಂಗಣದಲ್ಲಿ ದಾಖಲಾದ ಪ್ರಮುಖ ಸಂಗತಿಗಳು

- ಭಾರತ ತಂಡವನ್ನು ಸತತ 30 ಪಂದ್ಯಗಳಲ್ಲಿ ಪ್ರತಿನಿಧಿಸಿದ್ದ ಬಿಷನ್ ಸಿಂಗ್ ಬೇಡಿ ಅವರು ಬೆಂಗಳೂರಿನಲ್ಲಿ ನಡೆದ ಮೊದಲ ಟೆಸ್ಟ್‌ನಲ್ಲಿ (1974–75) ಆಡಲಿಲ್ಲ. ಇಂಗ್ಲೆಂಡ್‌ನಲ್ಲಿ ಅವರು ಟಿ.ವಿ. ವಾಹಿನಿಗೆ ಸಂದರ್ಶನ ನೀಡಿದ್ದಕ್ಕಾಗಿ ಅವರ ಮೇಲೆ ಶಿಸ್ತು ಕ್ರಮ ಜರುಗಿಸಿ ಪಂದ್ಯದಲ್ಲಿ ಆಡದಂತೆ ನಿರ್ಬಂಧಿಸಲಾಗಿತ್ತು.
- 1979–80ರಲ್ಲಿ ಆಸ್ಟ್ರೇಲಿಯಾ ತಂಡವು ಮೊದಲ ಬಾರಿ ಇಲ್ಲಿ ಟೆಸ್ಟ್ ಆಡಿತು. ಆಸ್ಟ್ರೇಲಿಯಾದ ರಾಡ್ನಿ ಹಾಗ್ 6 ಓವರ್‌ಗಳಲ್ಲಿ 11 ನೋಬಾಲ್ ಹಾಕಿದರು. ಇದರಿಂದಾಗಿ ಹತಾಶರಾದ ಅವರು ಸ್ಟಂಪ್ ಕಿತ್ತು ಬೀಸಾಕಿದರು.
- 1983–84ರಲ್ಲಿ ಇಲ್ಲಿ ಭಾರತ–ಪಾಕ್ ಟೆಸ್ಟ್ ನಡೆಯಿತು. ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲಿ ಮೊದಲ ಸಲ ನೋಬಾಲ್ ಮತ್ತು ವೈಡ್‌ಗಳನ್ನು ಬೌಲರ್‌ಗಳ ಖಾತೆಗೆ ಸೇರ್ಪಡೆ ಮಾಡಲಾಯಿತು.
- 1986-87ರಲ್ಲಿ ನಡೆದ ಟೆಸ್ಟ್‌ನಲ್ಲಿ ಸುನಿಲ್ ಗಾವಸ್ಕರ್ ಕೊನೆಯ ಸಲ ಪಾಕಿಸ್ತಾನದ ಎದುರು ಆಡಿದರು. ಅದರಲ್ಲಿ ಅವರು ಗಳಿಸಿದ 96 ರನ್‌ಗಳ ಇನಿಂಗ್ಸ್ ಇವತ್ತಿಗೂ ಜನಜನಿತ.
- 1993–94ರಲ್ಲಿ ನಡೆದಿದ್ದ ಶ್ರೀಲಂಕಾ ವಿರುದ್ಧದ ಪಂದ್ಯದಲ್ಲಿ ಕಪಿಲ್ ದೇವ್ ಅವರು ರಿಚರ್ಡ್ ಹ್ಯಾಡ್ಲಿಯ 431 ವಿಕೆಟ್‌ಗಳ ದಾಖಲೆ ಸಮ ಮಾಡಿದರು.
- 1997–98ರಲ್ಲಿ ಆಸ್ಟ್ರೇಲಿಯಾ ಎದುರು ಆಡಿದ ಭಾರತ ತಂಡದ ಸಚಿನ್ ತೆಂಡೂಲ್ಕರ್ 11 ಸಾವಿರ ರನ್ ಮೈಲಿಗಲ್ಲು ತಲುಪಿದರು. ಅದು ಅವರ 139ನೇ ಪಂದ್ಯವಾಗಿತ್ತು.
- ಅನಿಲ್ ಕುಂಬ್ಳೆ ಅವರು 2007–08ರಲ್ಲಿ ತಮ್ಮ ತವರಿನಂಗಳದಲ್ಲಿ ಮೊದಲ ಬಾರಿ ನಾಯಕನಾಗಿ ಆಡಿದರು. ಪಾಕಿಸ್ತಾನ ಎದುರು ನಡೆದ ಪಂದ್ಯದಲ್ಲಿ ಅವರು ಐದು ವಿಕೆಟ್ ಗೊಂಚಲು ಗಳಿಸಿದರು.
- ಸಚಿನ್ ತೆಂಡೂಲ್ಕರ್ 2010–11ರಲ್ಲಿ ಆಸ್ಟ್ರೇಲಿಯಾ ಎದುರಿನ ಟೆಸ್ಟ್‌ನಲ್ಲಿ ದ್ವಿಶತಕ ಗಳಿಸಿದರು. ಅದು ಅವರ ಟೆಸ್ಟ್ ಕ್ರಿಕೆಟ್ ಜೀವನದ ಕೊನೆಯ ದ್ವಿಶತಕ. ಇದೇ ಪಂದ್ಯದಲ್ಲಿ ಚೇತೇಶ್ವರ್ ಪೂಜಾರ ಪದಾರ್ಪಣೆ ಮಾಡಿದರು.
- 2015–16ರಲ್ಲಿ ಭಾರತ- ದಕ್ಷಿಣ ಆಫ್ರಿಕಾ ಪಂದ್ಯವು ಮಳೆಗೆ ಕೊಚ್ಚಿಹೋಗಿತ್ತು.
- 2018ರಲ್ಲಿ ಅಫ್ಗಾನಿಸ್ತಾನ ತನ್ನ ಚೊಚ್ಚಲ ಟೆಸ್ಟ್ ಪಂದ್ಯವನ್ನು ಆಡಿದ ತಾಣ ಇದು
- 2019ರಲ್ಲಿ ಭಾರತ ಮತ್ತು ಶ್ರೀಲಂಕಾ ತಂಡಗಳ ನಡುವಣ ಇಲ್ಲಿ ಮೊದಲ ಸಲ ಹಗಲು–ರಾತ್ರಿ ಟೆಸ್ಟ್ ನಡೆಯಿತು. ಪಿಂಕ್ ಬಾಲ್ ಪ್ರಯೋಗವಾಯಿತು.

ಮಾಹಿತಿ: ಚನ್ನಗಿರಿ ಕೇಶವಮೂರ್ತಿ

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ವೆಸ್ಟ್ ಇಂಡೀಸ್: 95.2 ಓವರ್‌ಗಳಲ್ಲಿ 289 (ಗಾರ್ಡನ್ ಗ್ರಿನಿಜ್ 93, ಅಲ್ವಿನ್ ಕಾಳಿಚರಣ್ 124, ಕ್ಲೈವ್ ಲಾಯ್ಡ್ 30, ಬಿ.ಎಸ್. ಚಂದ್ರಶೇಖರ್ 112ಕ್ಕೆ4, ಎಸ್. ವೆಂಕಟರಾಘವನ್ 75ಕ್ಕೆ4) ಭಾರತ: 83.5 ಓವರ್‌ಗಳಲ್ಲಿ 260 (ಹೇಮಂತ್ ಕಾನಿಟ್ಕರ್ 65, ಗುಂಡಪ್ಪ ವಿಶ್ವನಾಥ್ 29, ಮನ್ಸೂರ್ ಅಲಿ ಖಾನ್ ಪಟೌಡಿ 22, ಸೈಯದ್ ಅಬೀದ್ ಅಲಿ ಔಟಾಗದೆ 49, ಎರಪಳ್ಳಿ ಪ್ರಸನ್ನ 23, ಆ್ಯಂಡಿ ರಾಬರ್ಟ್ಸ್ 65ಕ್ಕೆ3, ವ್ಯಾನ್‌ಬರ್ನ್ ಹೋಲ್ಡರ್ 37ಕ್ಕೆ3) ಎರಡನೇ ಇನಿಂಗ್ಸ್: ವೆಸ್ಟ್ ಇಂಡೀಸ್: 83 ಓವರ್‌ಗಳಲ್ಲಿ 6ಕ್ಕೆ356 ಡಿಕ್ಲೇರ್ಡ್ (ಗಾರ್ಡನ್ ಗ್ರಿನಿಜ್ 107, ಅಲ್ವಿನ್ ಕಾಳಿಚರಣ್ 29, ಕ್ಲೈವ್ ಲಾಯ್ಡ್ 163, ಬಿ.ಎಸ್. ಚಂದ್ರಶೇಖರ್ 102ಕ್ಕೆ2, ಎಸ್. ವೆಂಕಟರಾಘವನ್ 79ಕ್ಕೆ2) ಭಾರತ:42.5 ಓವರ್‌ಗಳಲ್ಲಿ 118 (ಗುಂಡಪ್ಪ ವಿಶ್ವನಾಥ್ 22, ಬ್ರಿಜೇಶ್ ಪಟೇಲ್ 22, ಆ್ಯಂಡಿ ರಾಬರ್ಟ್ಸ್ 24ಕ್ಕೆ3, ವ್ಯಾನ್‌ಬರ್ನ್ ಹೋಲ್ಡರ್ 18ಕ್ಕೆ2, ಕೀತ್ ಬೊಯ್ಸ್ 43ಕ್ಕೆ3)

ಫಲಿತಾಂಶ: ವೆಸ್ಟ್ ಇಂಡೀಸ್‌ಗೆ 267 ರನ್ ಜಯ.

ಡಿ.14ಕ್ಕೆ ಮಿಡ್‌ನೈಟ್ ಮ್ಯಾರಥಾನ್

ಬೆಂಗಳೂರು: ರೋಟರಿ ಬೆಂಗಳೂರು ಐಟಿ ಕಾರಿಡಾರ್ ಆಶ್ರಯದಲ್ಲಿ 17ನೇ ವರ್ಷದ ಬೆಂಗಳೂರು ಮಿಡ್‌ನೈಟ್ ಮ್ಯಾರಥಾನ್ (ಬಿಎಂಎಂ) ಡಿಸೆಂಬರ್ 14ರಂದು ನಡೆಯಲಿದೆ. ವಿಶ್ವದ ಮೊದಲ ಮಧ್ಯರಾತ್ರಿಯ ಮ್ಯಾರಥಾನ್ ಆಗಿರುವ ಈ ಓಟದಲ್ಲಿ 11,000ಕ್ಕೂ ಹೆಚ್ಚು ಮಂದಿ ಭಾಗಿಯಾಗುವ ನಿರೀಕ್ಷೆಯಿದೆ.

ಈ ವರ್ಷದ ಸ್ಪರ್ಧೆಯು ‘ಸುರಕ್ಷಿತ ನಗರಕ್ಕಾಗಿ ಓಟ’ ಎಂಬ ಘೋಷವಾಕ್ಯ ಹೊಂದಿದೆ. ಡಿ. 14ರಂದು ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿರುವ ಕೆಟಿಪಿಒದಲ್ಲಿ ಸಾವಿರಾರು ಅಥ್ಲೀಟುಗಳು, ಕಾರ್ಪೊರೇಟ್ ಸಂಸ್ಥೆ ಪ್ರತಿನಿಧಿಗಳು ಹಾಗೂ ಎನ್‌ಜಿಒ ಸದಸ್ಯರು ಒಂದೆಡೆ ಸೇರಿ ‘ಮಿಡ್‌ನೈಟ್ ಮ್ಯಾರಥಾನ್’ಗೆ ರಂಗು ತರಲಿದ್ದಾರೆ ಎಂದು ರೋಟರಿ ಬಿಐಟಿಸಿ ಅಧ್ಯಕ್ಷ ಜಗದೀಶ ಗೋಕವರಪು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಈ ಬಾರಿಯೂ ಫೋನ್ ಪೇ ಮುಖ್ಯ ಓಟದ ಪ್ರಾಯೋಜಕತ್ವ ಹೊಂದಿದೆ.

‘ಈ ಬಾರಿ ಬಿಎಂಎಂನಲ್ಲಿ ಅಂಗವಿಕಲ ಕ್ರೀಡಾಪಟುಗಳ ಸ್ಫೂರ್ತಿ ಹೆಚ್ಚಿಸಲು ಮತ್ತು ಪ್ಯಾರಾ ಅಥ್ಲೀಟ್‌ಗಳನ್ನು ಗೌರವಿಸಲು ಪ್ಯಾರಾ ಒಲಿಂಪಿಯನ್ ರಕ್ಷಿತಾ ರಾಜು ಅವರನ್ನು ರಾಯಭಾರಿ-ಯನ್ನಾಗಿ ಘೋಷಿಸಲಾಗಿದೆ.

ಹೊಸ ಸೇರ್ಪಡೆ: ಬಿಎಂಎಂ ರೇಸ್ ನಿರ್ದೇಶಕ ಗುಲ್ ಮೊಹಮ್ಮದ್ ಅಕ್ಬರ್ ಮಾತನಾಡಿ, ಈ ಬಾರಿಯ ಬಿಎಂಎಂ ನಲ್ಲಿ ಹೊಸತಾಗಿ 31.6ಕೆ ಓಟ ಸೇರ್ಪಡೆ ಮಾಡಲಾಗಿದೆ. ಹಾಫ್ ಮ್ಯಾರಥಾನ್‌ನಿಂದ ಫುಲ್ ಮ್ಯಾರಥಾನ್‌ಗೆ ಬಡ್ತಿ ಹೊಂದಲು ಬಯಸುವವರಿಗೆ ಇದು ಉತ್ತೇಜನ ನೀಡಲಿದೆ' ಎಂದು ತಿಳಿಸಿದರು.

ಫುಲ್ ಮ್ಯಾರಥಾನ್, ಹಾಫ್ ಮ್ಯಾರಥಾನ್, 10ಕೆ ಓಟ, 5ಕೆ ಫನ್ ರನ್, ಬಿಕೆ5ಕೆ ರನ್ ಹಾಗೂ ಹೊಸದಾಗಿ ಪರಿಚಯಿಸಲಾಗುತ್ತಿ-ರುವ 31.6ಕೆ ಓಟ ಸೇರಿದಂತೆ ಎಲ್ಲಾ ರೀತಿಯ ರೇಸ್‌ಗಳಿಗೆ ನೋಂದಣಿ ಆರಂಭಗೊಂಡಿದೆ. ಆನ್‌ಲೈನ್‌ನಲ್ಲಿ www.midnightmarathon.in ಮೂಲಕ ಡಿಸೆಂಬರ್ 8ರ ಒಳಗೆ ಹೆಸರು ನೋಂದಾಯಿಸಿಕೊಳ್ಳಬಹುದು.

ಮಾಂಜ್ರೇಕರ್‌ಗೆ ಶಮಿ ಮಾತಿನ ‘ತಿವಿತ’

ಶಮಿ

ನವದೆಹಲಿ (ಪಿಟಿಐ): ಐಪಿಎಲ್ ಮೆಗಾ ಹರಾಜಿನಲ್ಲಿ ಮೊಹಮ್ಮದ್ ಶಮಿ ಅವರ ಬಿಡ್ ಮೌಲ್ಯ ಕಡಿಮೆಯಾಗಬಹುದು ಎಂದು ಮಾಜಿ ಆಟಗಾರ– ವೀಕ್ಷಕ ವಿವರಣೆಗಾರ ಸಂಜಯ್ ಮಾಂಜ್ರೇಕರ್ ಭವಿಷ್ಯ ನುಡಿದಿರುವುದಕ್ಕೆ ಗರಂ ಆದ ವೇಗದ ಬೌಲರ್ ಜಾಲತಾಣದ ಮೂಲಕ ಜೋರಾಗಿಯೇ ತಿವಿದಿದ್ದಾರೆ.

‘ಬಾಬಾ ಕಿ ಜೈ ಹೋ. ಸಂಜಯ್ ಜಿ, ನಿಮ್ಮ ಭವಿಷ್ಯಕ್ಕಾಗಿಯಾದರೂ ಸ್ವಲ್ಪ ಜ್ಞಾನ ಉಳಿಸಿ. ಮುಂದೆ ಕೆಲಸಕ್ಕೆ ಬರಬಹುದು. ಯಾರಿಗಾದರೂ ತಮ್ಮ ಭವಿಷ್ಯ ತಿಳಿಯಲು ಆಸಕ್ತಿಯಿದ್ದಲ್ಲಿ ಸರ್ ಅವರನ್ನು ಭೇಟಿ ಮಾಡಿ’ ಎಂದು ಇನ್‌ಸ್ಟಾದಲ್ಲಿ ಲೇವಡಿ ಮಾಡಿದ್ದಾರೆ.

2022ರ ಆವೃತ್ತಿಯಲ್ಲಿ ಕೊನೆಯ ಬಾರಿ ಗುಜರಾತ್ ಟೈಟನ್ಸ್‌ಗೆ ಆಡಿದಾಗ ಶಮಿ 20 ವಿಕೆಟ್ ಪಡೆದಿದ್ದರು. 2023ರ ನವೆಂಬರ್‌ನಲ್ಲಿ ಏಕದಿನ ವಿಶ್ವಕಪ್ ವೇಳೆ ಶಮಿ ಪಾದದ ನೋವಿನಿಂದ ಬಳಲಿದ್ದರು. ಶಸ್ತ್ರಚಿಕಿತ್ಸೆ ಮಾಡಿಸಿಕೊಂಡ ಅವರು ಕ್ರಿಕೆಟ್‌ನಿಂದ ದೂರವಿದ್ದರು. ಇತ್ತೀಚೆಗೆ ಬಂಗಾಳ ಪರ ರಣಜಿ ಟ್ರೋಫಿ ಪಂದ್ಯದ ಮೂಲಕ ಪುನರಾಗಮನ ಮಾಡಿದ್ದಾರೆ. ಗುಜರಾತ್ ಟೈಟನ್ಸ್ ತಂಡದಲ್ಲಿದ್ದ ಶಮಿ ಅವರನ್ನು ಆ ಫ್ರಾಂಚೈಸಿ ಈ ಬಾರಿ ರೀಟೈನ್ ಮಾಡಿಲ್ಲ.

ಸೇನ್ ಮುನ್ನಡೆ: ಸಿಂಧುಗೆ ನಿರಾಸೆ

ಶೆನ್‌ಝೆನ್ (ಚೀನಾ), (ಪಿಟಿಐ): ಭಾರತದ ಯುವ ತಾರೆ ಲಕ್ಷ್ಯ ಸೇನ್ ಅವರು ಚೀನಾ ಮಾಸ್ಟರ್ಸ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಗುರುವಾರ ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಹಾಕಿದರು. ಆದರೆ, ಅನುಭವಿ ಆಟಗಾರ್ತಿ ಪಿ.ವಿ. ಸಿಂಧು ಎರಡನೇ ಸುತ್ತಿನಲ್ಲಿ ಹೊರಬಿದ್ದರು.

23 ವರ್ಷ ವಯಸ್ಸಿನ ಸೇನ್ ಪುರುಷರ ಸಿಂಗಲ್ಸ್‌ನ ಎರಡನೇ ಸುತ್ತಿನ ಪಂದ್ಯದಲ್ಲಿ 21-6, 21-18ರಿಂದ ಡೆನ್ಮಾರ್ಕ್‌ನ ರಾಸ್ಮಸ್ ಗೆಮ್ಕೆ ಅವರನ್ನು ಹಿಮ್ಮೆಟ್ಟಿಸಿದರು. ಸೇನ್ ಮುಂದಿನ ಸುತ್ತಿನಲ್ಲಿ ಮೂರನೇ ಶ್ರೇಯಾಂಕದ ಆಂಡರ್ಸ್ ಆಂಟೊನ್‌ಸೆನ್ (ಡೆನ್ಮಾರ್ಕ್) ಅವರನ್ನು ಎದುರಿಸಲಿದ್ದಾರೆ.

ಮಹಿಳೆಯರ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲಿ ತಮಗಿಂತ ಮೇಲಿನ ಕ್ರಮಾಂಕದ ಬುಸಾನನ್ ಒಂಗ್ಬಾ-ಮ್‌ರುಂಗ್‌ಫಾನ್ ಅವರನ್ನು ಸೋಲಿಸಿದ್ದ 29 ವರ್ಷದ ಸಿಂಧು, ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ 16-21, 21-17, 21-23ರಿಂದ ಸಿಂಗಪುರದ ಯೋ ಜಿಯಾ ಮಿನ್ ಅವರಿಗೆ ಶರಣಾದರು.

ಭಾರತದ ಯುವ ಆಟಗಾರ್ತಿ-ಯರಾದ ಅನುಪಮಾ ಉಪಾಧ್ಯಾಯ ಮತ್ತು ಮಾಳವಿಕಾ ಬನ್ಸೋಡ್ ಅವರೂ ಎರಡನೇ ಸುತ್ತಿನಲ್ಲಿ ನಿರ್ಗಮಿಸಿದರು.

ಹಾಲಿ ಚಾಂಪಿಯನ್ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಪುರುಷರ ಡಬಲ್ಸ್‌ನಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಪ್ಯಾರಿಸ್ ಒಲಿಂಪಿಕ್ಸ್ ಬಳಿಕ ಕಣಕ್ಕೆ ಇಳಿದಿರುವ ಅವರು ಎರಡನೇ ಸುತ್ತಿನಲ್ಲಿ 21–19, 21–15ರಿಂದ ಡೆನ್ಮಾರ್ಕ್‌ನ ರಾಸ್ಮಸ್ ಕ್ಜೇರ್ ಮತ್ತು ಫ್ರೆಡೆರಿಕ್ ಸೊಗಾರ್ಡ್ ಅವರನ್ನು ಮಣಿಸಿ ಮುನ್ನಡೆದರು.

ಆಸ್ಟ್ರೇಲಿಯಾ ವಿರುದ್ಧ ಮೊದಲ ಟೆಸ್ಟ್ ಇಂದಿನಿಂದ: ಲಯದ ವಿಶ್ವಾಸದಲ್ಲಿ ವಿರಾಟ್ ಕೊಹ್ಲಿ

ಬೂಮ್ರಾ ಪಡೆಗೆ ಕಠಿಣ ಸವಾಲು

• ಮಧು ಜವಳಿ

ಪರ್ತ್: ಈ ಹಿಂದೆ ಆಸ್ಟ್ರೇಲಿಯಾ ಪ್ರವಾಸಕ್ಕೆ ಬರುವ ತಂಡಗಳು ಬ್ರಿಸ್ಬೇನ್‌ನಲ್ಲಿ ಮೊದಲ ಟೆಸ್ಟ್ ಆಡುವುದು ಸಂಪ್ರದಾಯದಂತಿತ್ತು. ವೇಗ, ಬೌನ್ಸ್ ಮತ್ತು ಬಿರುಕು ಪಡೆಯುತ್ತಿದ್ದ ಗ್ಯಾಬಾದ ಪಿಚ್‌ನಲ್ಲಿ ಆಸ್ಟ್ರೇಲಿಯಾ ಎದುರಾಳಿಗಳ ಬೆವರಿಳಿಸುತಿತ್ತು. ಈ ವೇಗದ ದಾಳಿಯೆದುರು ಪ್ರವಾಸಿ ತಂಡದ ಆಟಗಾರರು ಮಾನಸಿಕವಾಗಿಯೂ ಅಳುಕುತ್ತಿದ್ದರು. ಈಗ ಆಸ್ಟ್ರೇಲಿಯಾ ಪಾಲಿಗೆ ಬ್ರಿಸ್ಬೇನ್‌ನ ಜಾಗವನ್ನು ಪರ್ತ್ ತುಂಬುತ್ತಿದೆಯೇ?

2019ರವರೆಗೆ ಬ್ರಿಸ್ಬೇನ್ ಆಸ್ಟ್ರೇಲಿಯಾದ ಭದ್ರಕೋಟೆಯಾಗಿತ್ತು. ಆದರೆ ಕೆಲವು ಯುವ ಆಟಗಾರರಿದ್ದ ಭಾರತ ತಂಡ ಇಲ್ಲಿ ಜಯಗಳಿಸಿತು. ದಕ್ಷಿಣ ಆಫ್ರಿಕಾ ಮತ್ತು ಇಂಗ್ಲೆಂಡ್ ವಿರುದ್ಧ ಗೆದ್ದಿತು. ಆದರೆ ನಂತರ ವೆಸ್ಟ್ ಇಂಡೀಸ್ ಇಲ್ಲಿ ಆತಿಥೇಯ ತಂಡವನ್ನು ಸದೆಬಡಿಯಿತು. ಹೀಗಾಗಿ ಪಶ್ಚಿಮ ಆಸ್ಟ್ರೇಲಿಯಾದ ಪರ್ತ್ ಮೊದಲ ಟೆಸ್ಟ್ ಆಡುವ ತಾಣವಾಗಿದೆ. ಹಳೆ ಕ್ರೀಡಾಂಗಣವಿರುವ ವಾಕಾ ಬದಲು ಆಪ್ಟಸ್ ಕ್ರೀಡಾಂಗಣ ಆತಿಥೇಯರಿಗೆ ಸುರಕ್ಷಿತವಾಗಿ ಕಾಣುತ್ತಿದೆ. ಇಲ್ಲಿ ಆಡಿರುವ ನಾಲ್ಕೂ ಟೆಸ್ಟ್‌ಗಳಲ್ಲಿ ಆಸ್ಟ್ರೇಲಿಯಾ ಜಯಗಳಿಸಿದೆ.

ಇದೇ ಕ್ರೀಡಾಂಗಣದಲ್ಲಿ ಭಾರತ–ಆಸ್ಟ್ರೇಲಿಯಾ ತಂಡಗಳ ನಡುವೆ ಬಾರ್ಡರ್– ಗಾವಸ್ಕರ್ ಟ್ರೋಫಿ ಸರಣಿಯ ಮೊದಲ ಟೆಸ್ಟ್ ಶುಕ್ರವಾರ ಆರಂಭವಾಗಲಿದೆ. ಈ ಹಿಂದೆ ಇಲ್ಲಿ ನಡೆದ ಟೆಸ್ಟ್ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಆಕರ್ಷಕ ಶತಕ ಪೋಣಿಸಿದ್ದರು. ಮೊಹಮ್ಮದ್ ಶಮಿ ಎರಡನೇ ಇನಿಂಗ್ಸ್‌ನಲ್ಲಿ ಅಮೋಘವಾಗಿ ಬೌಲ್ ಮಾಡಿದ್ದರು. ಆದರೂ ಆತಿಥೇಯರು 146 ರನ್‌ಗಳ ಜಯ ಸಾಧಿಸಿದ್ದರು.

ಈ ಬಾರಿ ತಂಡದಲ್ಲಿ ಶಮಿ ಇಲ್ಲ. ಕೊಹ್ಲಿ ಅವರು 'ವಿರಾಟ್ ಸ್ವರೂಪ' ಕಳೆದು-ಕೊಂಡಿದ್ದಾರೆ. ಜೊತೆಗೆ ತಂಡದ ಪರಿಸ್ಥಿತಿಯೂ ಭಿನ್ನವಾಗಿಲ್ಲ. ಹೊಸ ಸಂಯೋಜನೆ, ಹೊಸಮುಖ, ಲಯದಲ್ಲಿಲ್ಲದ ಅನುಭವಿಗಳೊಂದಿಗೆ ಭಾರತ ತಂಡ, ಪ್ರಬಲ ಆಸ್ಟ್ರೇಲಿಯಾವನ್ನು ಎದುರಿಸಲು ಹೊರಟಿದೆ.

ಈ ಪಂದ್ಯಕ್ಕೆ ಜಸ್‌ಪ್ರೀತ್ ಬೂಮ್ರಾ ನಾಯಕ. ರೋಹಿತ್ ಅವರ ಸ್ಥಾನದಲ್ಲಿ ಕೆ.ಎಲ್.ರಾಹುಲ್ ಆರಂಭ ಆಟಗಾರನಾಗಿ ಆಡಬೇಕಾಗಿದೆ. ಮೂರನೇ ಕ್ರಮಾಂಕದಲ್ಲಿ ಕನ್ನಡಿಗ ದೇವದತ್ತ ಪಡಿಕ್ಕಲ್ ತಮ್ಮ ಎರಡನೇ ಟೆಸ್ಟ್ ಆಡಲು ಸಿದ್ಧರಾಗಿದ್ದಾರೆ. ವೇಗದ ಬೌಲಿಂಗ್ ಆಲ್‌ರೌಂಡರ್ ನಿತೀಶ್ ಕುಮಾರ್ ರೆಡ್ಡಿ ಅವರಿಗೆ ದೀರ್ಘ ಮಾದರಿಯಲ್ಲಿ ಪರೀಕ್ಷೆ ಎದುರಾಗಿದೆ. ಮೂರನೇ ವೇಗಿಯಾಗಿ ಪ್ರಸಿದ್ಧ ಕೃಷ್ಣ (ಎರಡು ಟೆಸ್ಟ್ ಆಡಿದ್ದಾರೆ) ಮತ್ತು ಹರ್ಷಿತ್ ರಾಣಾ (ಇನ್ನೂ ಪದಾರ್ಪಣೆ ಮಾಡಿಲ್ಲ) ಇವರಲ್ಲಿ ಒಬ್ಬರು ಆಡಬಹುದು.

ಆಸ್ಟ್ರೇಲಿಯಾ ಅನುಭವಿ ಬ್ಯಾಟರ್‌ಗಳ ಜೊತೆಗೆ ವಿಶ್ವದಲ್ಲೇ ಪ್ರಬಲ ದಾಳಿ ಹೊಂದಿದೆ. ಈಗ ತಂಡದಲ್ಲಿರುವ ಪ್ರಮುಖ ವೇಗದ ಬೌಲರ್‌ಗಳು 900 ವಿಕೆಟ್‌ಗಳನ್ನು ಹಂಚಿಕೊಂಡಿದ್ದಾರೆ. ಸ್ಪಿನ್ ಸ್ನೇಹಿ ವಾತಾವರಣದಲ್ಲಿ ಆಡಿ ನ್ಯೂಜಿಲೆಂಡ್ ಎದುರು 3–0 ಮುಖಭಂಗ ಅನುಭವಿಸಿದ್ದ, ಭಾರತ ತಂಡದ ಮನೋಬಲ ಈಗ ಉತ್ತಮವಾಗಿಲ್ಲ.

ಇಂಥ ಪ್ರತಿಕೂಲ ಪರಿ-ಸ್ಥಿತಿಯಲ್ಲೂ ಅವಕಾಶದ ಬಾಗಿಲುಗಳಿರುತ್ತವೆ. ಈ ಹಿಂದೆ ಅಡಿಲೇಡ್‌ನಲ್ಲಿ ಅತ್ಯಂತ ಕಳಪೆಯಾಗಿ ಆಡಿದ ಭಾರತ 36 ರನ್ನಿಗೆ ಆಲೌಟ್ ಆಗಿತ್ತು. ಆದರೆ ಆ ಸರಣಿಯಲ್ಲಿ ಹೀನಾಯ ಸ್ಥಿತಿಯಿಂದ ಕೆಚ್ಚೆದೆಯ ಆಟವಾಡಿ ತಿರುಗಿಬಿದ್ದ ಪರಿಯನ್ನು ಕ್ರಿಕೆಟ್‌ಪ್ರಿಯರು ಮರೆತಿರಲಿಕ್ಕಿಲ್ಲ. ಅದು ಭಾರತದ ಶ್ರೇಷ್ಠ ಸರಣಿ ಜಯಗಳಲ್ಲಿ ಸ್ಮರಣೀಯವಾಯಿತು.

ಭಾರತ ಮೊದಲ ಟೆಸ್ಟ್‌ಗೆ, ನಿತೀಶ್ ಸೇರಿದಂತೆ ನಾಲ್ವರು ವೇಗದ ಬೌಲರ್‌ಗಳೊಂದಿಗೆ ಕಣಕ್ಕಿಳಿಯುವ ಸಾಧ್ಯತೆಯಿದೆ. ಬೂಮ್ರಾ, ಸಿರಾಜ್ ಜೊತೆ ಹರ್ಷಿತ್ ರಾಣಾ ಮೂರನೇ ವೇಗದ ಆಯ್ಕೆಯಾಗಬಹುದು.
ಆದರೆ ಭಾರತ 'ಎ' ತಂಡದ ಪರ ನೀಡಿದ ಪ್ರದರ್ಶನದಿಂದ ಪ್ರಸಿದ್ಧ ಅವರಿಗೂ ಈಗ ಅವಕಾಶ ಹೆಚ್ಚಿದೆ. ನಿತೀಶ್ ಆಡಿದಲ್ಲಿ ಅಶ್ವಿನ್ ತಂಡದಲ್ಲಿ ಏಕೈಕ ಸ್ಪಿನ್ನರ್ ಆಗಿ ಕಣಕ್ಕಿಳಿಯಲಿದ್ದಾರೆ. ಈ ಹಿಂದೆ ಬ್ಯಾಟಿಂಗ್ ಕಾರಣದಿಂದ ರವೀಂದ್ರ ಜಡೇಜ ಆ ಸ್ಥಾನ ತುಂಬುತ್ತಿದ್ದರು.

ಆಸ್ಟ್ರೇಲಿಯಾ ತಂಡದಲ್ಲಿ ಆರಂಭ ಆಟಗಾರ ನಥಾನ್ ಮೆಕ್‌ಸ್ವೀನಿ ಪದಾರ್ಪಣೆಗೆ ಸಜ್ಜಾಗಿದ್ದಾರೆ. ನಿವೃತ್ತ-ರಾಗಿರುವ ಡೇವಿಡ್ ವಾರ್ನರ್ ಸ್ಥಾನಕ್ಕೆ ಪರ್ಯಾಯ ಆಯ್ಕೆಯಾಗಿ ಅವರು ಕೆಲಸಮಯದಿಂದ ಗುರುತಿಸಿಕೊಂಡ-ವರು. ಪ್ರಬಲವಾಗಿರುವ ಆಸ್ಟ್ರೇಲಿಯಾದ ಬ್ಯಾಟಿಂಗ್ ಸರದಿ, ಬೂಮ್ರಾ ಪಡೆಗೆ ಸವಾಲಾಗಬಹುದು.

ಪಂದ್ಯ ಆರಂಭ: ಬೆಳಿಗ್ಗೆ 7.50.
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಬಾರ್ಡರ್–ಗಾವಸ್ಕರ್ ಟ್ರೋಫಿಯೊಂದಿಗೆ ಆಸ್ಟ್ರೇಲಿಯಾ ನಾಯಕ ಪ್ಯಾಟ್ ಕಮಿನ್ಸ್ ಮತ್ತು ಭಾರತ ತಂಡದ ನಾಯಕ ಜಸ್‌ಪ್ರೀತ್ ಬೂಮ್ರಾ –ಎಎಫ್‌ಪಿ ಚಿತ್ರಗಳು

ವಿರಾಟ್ ಕೊಹ್ಲಿ

ಬಾರ್ಡರ್–ಗಾವಸ್ಕರ್ ಟ್ರೋಫಿ ಸರಣಿ
ಕೊನೆಯ ಐದು ಸರಣಿಯ ಫಲಿತಾಂಶ

ವರ್ಷ	ವಿಜೇತರು	ಅಂತರ
2014-15	ಆಸ್ಟ್ರೇಲಿಯಾ	2-0
2016-17	ಭಾರತ	2-1
2018-19	ಭಾರತ	2-1
2020-21	ಭಾರತ	2-1
2022-23	ಭಾರತ	2-1

* ಎಲ್ಲ ಸರಣಿಯಲ್ಲೂ ನಾಲ್ಕು ಪಂದ್ಯಗಳಿದ್ದವು

2024ರಲ್ಲಿ ತಂಡಗಳ ಸಾಧನೆ

	ಭಾರತ	ಆಸ್ಟ್ರೇಲಿಯಾ
ಪಂದ್ಯ	11	5
ಗೆಲುವು	7	4
ಸೋಲು	4	1
ಸರಾಸರಿ	63.6%	80%

ಒಟ್ಟು ಬಲಾಬಲ

ಒಟ್ಟು ಪಂದ್ಯ	107
ಆಸ್ಟ್ರೇಲಿಯಾಕ್ಕೆ ಜಯ	45
ಭಾರತಕ್ಕೆ ಜಯ	32
ಡ್ರಾ/ಟೈ	30

ಆಸ್ಟ್ರೇಲಿಯಾ ನೆಲದಲ್ಲಿ ಬಲಾಬಲ

ಒಟ್ಟು ಪಂದ್ಯ	52
ಆಸ್ಟ್ರೇಲಿಯಾಕ್ಕೆ ಜಯ	30
ಭಾರತಕ್ಕೆ ಜಯ	9
ಡ್ರಾ	13

ಟೆಸ್ಟ್ ವೇಳಾಪಟ್ಟಿ

ಮೊದಲ ಟೆಸ್ಟ್	ನ.22ರಿಂದ 26 (ಪರ್ತ್)
ಎರಡನೇ ಟೆಸ್ಟ್	ಡಿ.6ರಿಂದ 10 (ಅಡಿಲೇಡ್)
ಮೂರನೇ ಟೆಸ್ಟ್	ಡಿ.14ರಿಂದ 18 (ಬ್ರಿಸ್ಟನ್)
ನಾಲ್ಕನೇ ಟೆಸ್ಟ್	ಡಿ.26ರಿಂದ 30 (ಮೆಲ್ಬರ್ನ್)
ಐದನೇ ಟೆಸ್ಟ್	ಜ.3ರಿಂದ 7 (ಸಿಡ್ನಿ)

ಕನ್ನಡಿಗ ದೇವದತ್ತ ಪಡಿಕ್ಕಲ್

24ರಂದು ಪರ್ತ್ ತಲುಪಲಿರುವ ರೋಹಿತ್



ಪರ್ತ್ (ಪಿಟಿಐ): ರೋಹಿತ್ ಶರ್ಮಾ ಅವರು ಆಸ್ಟ್ರೇಲಿಯಾ ವಿರುದ್ಧದ ಮೊದಲ ಟೆಸ್ಟ್ ಪಂದ್ಯದ ಮೂರನೇ ದಿನವಾದ ಭಾನುವಾರ ಪರ್ತ್‌ನ ಒಪ್ಟಸ್ ಕ್ರೀಡಾಂಗಣದಲ್ಲಿ ಭಾರತ ತಂಡವನ್ನು ಸೇರಿಕೊಳ್ಳಲಿದ್ದಾರೆ.

ನವೆಂಬರ್ 15ರಂದು ರೋಹಿತ್– ರೀತಿಕಾ ದಂಪತಿಗೆ ಎರಡನೇ ಮಗುವಾಗಿತ್ತು. ಈ ವೇಳೆ ಕುಟುಂಬದ ಜೊತೆ ಕಳೆದ ಕಾರಣ ಭಾರತ ತಂಡದ ನಾಯಕ ರೋಹಿತ್ ಅವರು ಇತರ ಆಟಗಾರರ ಜೊತೆ ಆಸ್ಟ್ರೇಲಿಯಾಕ್ಕೆ ಹೊರಟಿರಲಿಲ್ಲ. ಮೊದಲ ಟೆಸ್ಟ್‌ನಲ್ಲಿ ಅವರು ಆಡುವುದು ಅನುಮಾನ ಎಂದು ಈ ಮೊದಲೇ ಆಯ್ಕೆ ಸಮಿತಿ ಪ್ರಕಟಿಸಿತ್ತು.

37 ವರ್ಷ ವಯಸ್ಸಿನ ರೋಹಿತ್ ಅನುಪಸ್ಥಿತಿಯಲ್ಲಿ ಉಪನಾಯಕ ಜಸ್‌ಪ್ರೀತ್ ಬೂಮ್ರಾ ಮೊದಲ ಟೆಸ್ಟ್‌ನಲ್ಲಿ ತಂಡದ ನಾಯಕತ್ವ ವಹಿಸಿದ್ದಾರೆ.

ಕರಣ್ ಸಿಂಗ್‌ಗೆ ಚಾಪೆಲ್ ಸವಾಲು

• ಮಲ್ಲಪ್ಪ ಪಾರೇಗಾಂವ

ಕಲಬುರಗಿ: ನಾಲ್ಕನೇ ಶ್ರೇಯಾಂಕದ ಆಟಗಾರ, ಭಾರತದ ಕರಣ್ ಸಿಂಗ್, ಐಟಿಎಫ್ ಪುರುಷರ ಟೆನಿಸ್ ಟೂರ್ನಿಯಲ್ಲಿ ಗೆಲುವಿನ ಓಟ ಮುಂದುವರಿಸಿದ್ದು, ಗುರುವಾರ ಕ್ವಾರ್ಟರ್‌ಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ.

ಇಲ್ಲಿಯ ಚಂದ್ರಶೇಖರ ಪಾಟೀಲ ಜಿಲ್ಲಾ ಕ್ರೀಡಾಂಗಣ-ದಲ್ಲಿ ನಡೆಯುತ್ತಿರುವ ಟೂರ್ನಿಯ ಸಿಂಗಲ್ಸ್ ಪ್ರಿಕ್ವಾರ್ಟರ್‌ಫೈ-ನಲ್‌ನಲ್ಲಿ ಕರಣ್ ಸಿಂಗ್ 6-4, 6-3ರಿಂದ ಸ್ವದೇಶದ ನಿತಿನ್ ಕುಮಾರ್ ಸಿನ್ಹಾ ಅವರನ್ನು ಪರಾಭವಗೊಳಿಸಿದರು. ಎಂಟರ ಘಟ್ಟದಲ್ಲಿ ಅವರಿಗೆ ಆರನೇ ಶ್ರೇಯಾಂಕದ ನಿಕ್ ಚಾಪೆಲ್ (ಅಮೆರಿಕ) ಸವಾಲು ಎದುರಾಗಿದೆ. 16ರ ಘಟ್ಟದ ಇನ್ನೊಂದು ಹಣಾಹಣಿಯಲ್ಲಿ ಚಾಪೆಲ್ 6-3, 6-2ರಿಂದ ಇಂಡೋನೇಷ್ಯಾದ ಅಂಥೋನಿ ಸುಸಾಂತೊ ವಿರುದ್ಧ ಗೆಲುವು ಸಾಧಿಸಿದರು.

ಅಗ್ರ ಶ್ರೇಯಾಂಕದ ಖುಮೋಯುನ್ ಸುಲ್ತಾನೋವ್ 6-4, 6-0ರಿಂದ ಭಾರತದ ಧೀರಜ್ ಕೆ. ಶ್ರೀನಿವಾಸ್ ವಿರುದ್ಧ ಗೆಲುವು ಸಾಧಿಸಿದರು. ಧೀರಜ್, ಮೊದಲ ಸೆಟ್‌ನಲ್ಲಿ ಸ್ವಲ್ಪ ಪ್ರತಿರೋಧ ಒಡ್ಡಿದರು. ಆದರೆ, ಎರಡನೇ ಸೆಟ್‌ನಲ್ಲಿ ಒಂದೂ ಗೇಮ್ ಗಳಿಸಲು ಸಾಧ್ಯವಾಗಲಿಲ್ಲ. ಸುಲ್ತಾನೋವ್ ಕ್ವಾರ್ಟರ್‌ಫೈನಲ್‌ನ-ಲ್ಲಿ ಎಂಟನೇ ಶ್ರೇಯಾಂಕದ ಮ್ಯಾಕ್ಸಿಂಗ್ ಝುಕೋವ್ (ರಷ್ಯಾ) ಸವಾಲು ಎದುರಿಸಲಿದ್ದಾರೆ.

ಪ್ರಜ್ವಲ್ ನಿರ್ಗಮನ: ಕರ್ನಾಟಕದ ಎಸ್.ಡಿ. ಪ್ರಜ್ವಲ್ ದೇವ್ ಇನ್ನೊಂದು ಪಂದ್ಯದಲ್ಲಿ ಎರಡನೇ ಶ್ರೇಯಾಂಕದ ರಷ್ಯಾದ ಬಾಗ್ದಾನ್ ಬಾಬ್‌ರೋವ್ ಎದುರು 2-6, 3-6ರಿಂದ ಸೋಲೊಪ್ಪಿಕೊಂಡು ಟೂರ್ನಿಯಿಂದ ಹೊರಬಿದ್ದರು.

ಭಾರತದ ದೇವ್ ಜೇವಿಯಾ 5-7, 6-2, 6-2 ರಿಂದ ಇಂಡೋನೇಷ್ಯಾದ ಎಂ.ಆರ್. ಫಿತ್ರಿಯಾದಿ ವಿರುದ್ಧ ಗೆಲುವು ಸಾಧಿಸಿದರು. ಅಲ್ಲಿ ಅವರು ಸಿದ್ಧಾರ್ಥ್ ರಾವತ್ ಅವರನ್ನು ಎದುರಿಸಲಿದ್ದಾರೆ. ಸಿದ್ಧಾರ್ಥ್ ಹಿಂದಿನ ಪಂದ್ಯದಲ್ಲಿ ಅಮೆರಿಕದ ಆದಿತ್ಯ ಗಣೇಶನ್ ಅವರನ್ನು 6-3, 7-6ರಿಂದ ಮಣಿಸಿದ್ದರು.

ಭಾರತದ ಕರಣ್ ಸಿಂಗ್ ಆಟದ ವೈಖರಿ
ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಸಂಕ್ಷಿಪ್ತ ಸುದ್ದಿ

2ನೇ ಸ್ಥಾನಕ್ಕೇರಿದ ತೆಲುಗು ಟೈಟನ್ಸ್

ನೊಯ್ಡಾ (ಪಿಟಿಐ): ವಿಜಯ್ ಮಲಿಕ್ ಅವರ ಉತ್ತಮ ರೇಡಿಂಗ್ ನೆರವಿನಿಂದ ತೆಲುಗು ಟೈಟನ್ಸ್ ತಂಡ ಪ್ರೊ ಕಬಡ್ಡಿ ಲೀಗ್‌ನ ತೀವ್ರ ಹೋರಾಟದ ಪಂದ್ಯದಲ್ಲಿ ಗುರುವಾರ 31–29 ರಿಂದ ಬೆಂಗಾಲ್ ವಾರಿಯರ್ಸ್ ತಂಡವನ್ನು ಸೋಲಿಸಿತು. ಟೈಟನ್ಸ್ ತಂಡ ಪಾಯಿಂಟ್ಸ್ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿತು.

ಇದು ಟೈಟನ್ಸ್ ತಂಡಕ್ಕೆ 12 ಪಂದ್ಯಗಳಲ್ಲಿ ಎಂಟನೇ ಗೆಲುವು. ಗುರುವಾರದ ಗೆಲುವು ಸತತ ಮೂರನೆಯದ್ದು. ಟೈಟನ್ಸ್ 42 ಪಾಯಿಂಟ್ಸ್ ಕಲೆಹಾಕಿದೆ. ಸ್ಟೀಲರ್ಸ್ 11 ಪಂದ್ಯಗಳಿಂದ 41 ಪಾಯಿಂಟ್ಸ್ ಪಡೆದಿದೆ.

ಬುಲ್ಸ್‌ಗೆ 11ನೇ ಸೋಲು: ಬೆಂಗಳೂರು ಬುಲ್ಸ್ ದಿನದ ಎರಡನೇ ಪಂದ್ಯದಲ್ಲಿ ಹರಿಯಾಣ ಸ್ಟೀಲರ್ಸ್ ಎದುರು 26–32 ರಿಂದ ಸೋಲನುಭವಿಸಿತು.

ಕ್ರಿಕೆಟ್: ಕರ್ನಾಟಕ ಚೇತರಿಕೆಯ ಆಟ

ಬೆಂಗಳೂರು: ಮೊದಲ ಇನಿಂಗ್ಸ್‌ನಲ್ಲಿ ಫಾಲೊ ಆನ್‌ಗೆ ಒಳಗಾದ ಕರ್ನಾಟಕ ತಂಡವು ಕೂಚ್ ಬಿಹಾರ್ ಟ್ರೋಫಿ ಕ್ರಿಕೆಟ್ (19 ವರ್ಷದೊಳಗಿನವರ) ಟೂರ್ನಿಯ ಪಂದ್ಯದಲ್ಲಿ ಎರಡನೇ ಇನಿಂಗ್ಸ್‌ನಲ್ಲಿ ಚೇತರಿಕೆಯ ಆಟ ಪ್ರದರ್ಶಿಸಿದೆ.

ಆತಿಥೇಯ ಚಂಡೀಗಢ ಮೊದಲ ಇನಿಂಗ್ಸ್‌ನಲ್ಲಿ 272 ರನ್ ಗಳಿಸಿತ್ತು. ಇದಕ್ಕೆ ಉತ್ತರವಾಗಿ ಕರ್ನಾಟಕ ತಂಡವು 99 ರನ್‌ಗೆ ಕುಸಿದು ಫಾಲೊ ಆನ್‌ಗೆ ಒಳಗಾಯಿತು. ಮತ್ತೆ ಬ್ಯಾಟಿಂಗ್ ನಡೆಸಿದ ಧೀರಜ್ ಗೌಡ ನಾಯಕತ್ವದ ಕರ್ನಾಟಕ 70 ಓವರ್‌ಗಳಲ್ಲಿ ಎಂಟು ವಿಕೆಟ್‌ಗೆ 312 ರನ್ ಗಳಿಸಿ, 139 ರನ್‌ಗಳ ಮುನ್ನಡೆ ಪಡೆದಿದೆ. ಕರ್ನಾಟಕದ ಮಣಿಕಾಂತ್ ಶಿವಾನಂದ್ (65;104ಎ), ಧೀರಜ್ ಗೌಡ (75;79ಎ), ಕಾರ್ತೀಕೇಯ ಕೆ.ಪಿ. (41;67ಎ) ಮತ್ತು ಹಾರ್ದಿಕ್ ರಾಜ್ (ಔಟಾಗದೇ 43; 41ಎ) ಉಪಯುಕ್ತ ಕಾಣಿಕೆ ನೀಡಿದರು. ಚಂಡೀಗಢದ ಮಾರ್ಕಂಡೆ ಪಾಂಚಾಲ್ ನಾಲ್ಕು ವಿಕೆಟ್ ಪಡೆದು ಮಿಂಚಿದರು.

ದ್ವಿಶತಕ ಬಾರಿಸಿದ ಸೆಹ್ವಾಗ್ ಪುತ್ರ

ಶಿಲ್ಲಾಂಗ್ (ಪಿಟಿಐ): ಮಾಜಿ ಕ್ರಿಕೆಟಿಗ ವೀರೇಂದ್ರ ಸೆಹ್ವಾಗ್ ಅವರ ಪುತ್ರ ಆರ್ಯವೀರ್ ಅವರು ಕೂಚ್ ಬಿಹಾರ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಗುರುವಾರ ಅಜೇಯ ದ್ವಿಶತಕ ಸಿಡಿಸಿದರು.

ದೆಹಲಿ ತಂಡವನ್ನು ಪ್ರತಿನಿಧಿಸು-ತ್ತಿರುವ ಆರ್ಯವೀರ್ ಮೇಘಾಲಯ ವಿರುದ್ಧದ ಪಂದ್ಯದಲ್ಲಿ 229 ಎಸೆತಗಳಲ್ಲಿ ಔಟಾಗದೇ 200 ರನ್ ಗಳಿಸಿದರು. ಆರ್ಯವೀರ್ ಮತ್ತು ಅರ್ಣವ್ ಎಸ್. ಬಗ್ಗಾ (114;108) ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ 180 ರನ್ ಸೇರಿಸಿದರು. ಹೀಗಾಗಿ ದೆಹಲಿ ತಂಡವು ಎರಡೇ ದಿನದಾಟದ ಅಂತ್ಯಕ್ಕೆ 81 ಓವರ್‌ಗಳಲ್ಲಿ ಎರಡು ವಿಕೆಟ್‌ಗೆ 468 ರನ್ ಸೇರಿಸಿ 208 ರನ್‌ಗಳ ಮುನ್ನಡೆ ಪಡೆದಿದೆ. ಮೇಘಾಲಯ ಮೊದಲ ಇನಿಂಗ್ಸ್‌ನಲ್ಲಿ 260 ರನ್ ಗಳಿಸಿತ್ತು.

ಟ್ರ್ಯಾಕ್ ಸೈಕ್ಲಿಂಗ್: ಕರ್ನಾಟಕಕ್ಕೆ 7 ಪದಕ

ಬೆಂಗಳೂರು: ಕರ್ನಾಟಕದ ಸೈಕ್ಲಿಸ್ಟ್‌ಗಳು ಚೆನ್ನೈನಲ್ಲಿ ನಡೆದ ಸೀನಿಯರ್, ಜೂನಿಯರ್ ಮತ್ತು ಸಬ್ ಜೂನಿಯರ್ ರಾಷ್ಟ್ರೀಯ ಟ್ರ್ಯಾಕ್ ಸೈಕ್ಲಿಂಗ್‌ನಲ್ಲಿ 2 ಚಿನ್ನ, 4 ಬೆಳ್ಳಿ ಮತ್ತು 1 ಕಂಚಿನ ಪದಕ ಜಯಿಸಿದರು.

ಬೆಂಗಳೂರಿನ ಕೀರ್ತಿ ರಂಗಸ್ವಾಮಿ ಅವರು ಮಹಿಳೆಯರ 3 ಕಿ.ಮೀ ವೈಯಕ್ತಿಕ ಪರ್ಸ್ಯೂಟ್‌ನಲ್ಲಿ ಚಿನ್ನ ಗೆದ್ದರು. 10 ಕಿ.ಮೀ ಮಾಸ್ ಸ್ಟಾರ್ಟ್ ಮತ್ತು ಒಮ್ನಿಯಂ ರೇಸ್‌ನಲ್ಲಿ ಅವರು ತಲಾ ಒಂದು ಬೆಳ್ಳಿ ಪದಕ ಗೆದ್ದರು.

18 ವರ್ಷದೊಳಗಿನ ಬಾಲಕರ ವಿಭಾಗದ 10 ಕಿ.ಮೀ ಮಾಸ್ ಸ್ಟಾರ್ಟ್‌ನಲ್ಲಿ ಬಾಗಲಕೋಟೆಯ ಹಣಮಂತ ಹುಳ್ಳಕೇರಿ ಬೆಳ್ಳಿ ಜಯಿಸಿದರು. 18 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ 16 ಕಿ.ಮೀ ಪಾಯಿಂಟ್ ರೇಸ್‌ನಲ್ಲಿ ವಿಜಯಪುರದ ಪಾಯಲ್ ಚವ್ಹಾಣ್ ಬೆಳ್ಳಿ ಗಳಿಸಿದರು. 18 ವರ್ಷದೊಳಗಿನವರ ಬಾಲಕಿಯರ ವಿಭಾಗದಲ್ಲಿ ಪಾಯಲ್ ಚವ್ಹಾಣ, ಕೀರ್ತಿ ನಾಯಕ, ಛಾಯಾ ನಾಗಶೆಟ್ಟಿ ಮತ್ತು ಪ್ರಿತಿ ಹಳಬರ ಅವರಿದ್ದ ತಂಡವು 4 ಕಿ.ಮೀ ಟೀಮ್ ಪರ್ಸ್ಯೂಟ್‌ನಲ್ಲಿ ಕಂಚು ಜಯಿಸಿದರು.

72198 21111 | BAJAJ SECURE • AMC • ROAD SIDE ASSISTANCE | Flipkart ಮತ್ತು amazon.in ನಲ್ಲಿ ಹೆಚ್ಚುವರಿ ಕೊಡುಗೆಗಳು ಲಭ್ಯವಿದೆ

*ಷರತ್ತುಗಳು ಅನ್ವಯಿಸುತ್ತವೆ.*ಪಲ್ಸರ್ 125 ಸಿಎಫ್ ಸಿಂಗಲ್ ಸೀಟ್ ವೇರಿಯಂಟ್‌ನ ಎಕ್ಸ್–ಶೋರೂಮ್ ಬೆಲೆ. ಕೊಡುಗೆ ಕೇವಲ ಆಯ್ದ ವೇರಿಯಂಟ್‌ಗಳ ಮೇಲೆ ಮಾತ್ರ. ಕೊಡುಗೆ ಡಿಸೆಂಬರ್ 31, 2024 ತನಕ ಮಾನ್ಯ. ಬಜಾಜ್ ಆಟೋ ಯಾವುದೇ ಅಥವಾ ಎಲ್ಲ ಕೊಡುಗೆಗಳನ್ನು ಪೂರ್ವಸೂಚನೆ ಇಲ್ಲದೆ ಹಿಂಪಡೆಯುವ ಹಕ್ಕನ್ನು ಕಾಯ್ದಿರಿಸಿಕೊಂಡಿದೆ.ವೃತ್ತಿಪರ ಮೇಲ್ವಿಚಾರಣೆಯಲ್ಲಿ , ನಿಯಂತ್ರಿತ ಮತ್ತು ಸುತ್ತುವರಿದ ಪರಿಸರದಲ್ಲಿ ಸಾಮಾನ್ಯ ಸಾರ್ವಜನಿಕ ಅಥವಾ ಸಾರ್ವಜನಿಕ ರಸ್ತೆಗಳಿಂದ ಪ್ರತ್ಯೇಕವಾಗಿ ಸಾಹಸಗಳನ್ನು ಪರಿಣಿತರಿಂದ ನಿರ್ವಹಿಸಲ್ಪಟ್ಟಿದೆ. ಈ ಸಾಹಸಗಳನ್ನು ದಯವಿಟ್ಟು ಪ್ರಯತ್ನಿಸಬೇಡಿ. ಯಾವಾಗಲೂ ಸಂಚಾರ ಮತ್ತು ಸುರಕ್ಷತಾ ನಿಯಮಗಳನ್ನು ಅನುಸರಿಸಿ.ನಿರ್ದಿಷ್ಟ ಮೋಡೆಲ್‌ಗಳಲ್ಲಿ ಮತ್ತು ನಿರ್ದಿಷ್ಟ ರಾಜ್ಯಗಳಲ್ಲಿ ಎ ಎಂ ಸಿ ಲಭ್ಯವಿದೆ. ಹೆಚ್ಚಿನ ವಿವರಗಳಿಗಾಗಿ ಬಜಾಜ್ ಡೀಲರ್‌ರನ್ನು ಸಂಪರ್ಕಿಸಿ. ರೋಡ್ ಸೈಡ್ ಸೇವೆ ಥರ್ಡ್ ಪಾರ್ಟಿ, ಅವರ ನಿಯಮ ಮತ್ತು ಷರತ್ತುಗಳಡಿ ಒದಗಿಸುತ್ತಾರೆ. ಇ ಕಾಮರ್ಸ್ ಪ್ಲಾಟ್‌ಫಾರ್ಮ್‌ಗಳಲ್ಲಿನ ಕೊಡುಗೆಗಳು ಅವುಗಳ ನಿಯಮ ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತವೆ.

Authorised Dealers for Bajaj Auto Ltd.: Bangalore • Bommanahalli AMBA BAJAJ: 9535411100 • **HSR Layout** AMBA BAJAJ: 8884333732 • **Sarjapur** AMBA BAJAJ: 7406688884• **BTM Layout** AMBA BAJAJ: 9513926221• **Madiwala** AMBA BAJAJ: 9945000048• **Electronic City** AMBA BAJAJ: 8971711118• **Nayandahalli** RV BAJAJ: 6360308373 • **Moodalapalya** RV BAJAJ: 9740444545 • **Kengeri** RV BAJAJ: 7353763305 • **Giri Nagar** RV BAJAJ: 7353763302• **Vijaynagar** RV BAJAJ: 7353763307• **Banashankari** POPULAR BAJAJ: 9945111874 • **Rajajinagar** POPULAR BAJAJ : 6366554001 • **Koramangala** POPULAR BAJAJ: 9845589079 • **Konankunte** POPULAR BAJAJ: 7760967834 • **Ramnagara** POPULAR BAJAJ: 7760967832 • **Kanakpura** POPULAR BAJAJ: 9972533890 • POPULAR BAJAJ **Channapatna** 9901947666 • POPULAR BAJAJ **Uttarahalli** 9972095890 • POPULAR BAJAJ **Gottigere** 7760996891 • **Yelahanka** KALYANI BAJAJ: 9449849618 • **Mekhri circle** KALYANI BAJAJ 8884413593 **Mathikere** KALYANI BAJAJ: 8884430126 • **Chikkaballapura** KALYANI BAJAJ: 8884413594 • **Devanahalli** KALYANI BAJAJ: 9449849624 • **Marathahalli** KHIVRAJ BAJAJ: 9036091986 • **Kasturba Rd** KHIVRAJ BAJAJ: 9035060140 • **Indiranagar** KHIVRAJ BAJAJ: 9035060139 • **Hennur** KHIVRAJ BAJAJ: 9742155225 • **Banaswadi** KHIVRAJ BAJAJ: 9035060147 • **Yeshwanthpur :** KHIVRAJ BAJAJ: - 7760931921 • **Hesargatta** KHIVRAJ BAJAJ: 9035060148 • **Whitefield** KHIVRAJ BAJAJ: 8618840097 • **Hoskote** KHIVRAJ BAJAJ: 9035005075 • **Magadi Rd** ANANT BAJAJ: 9980009166 • **Laggere** ANANT BAJAJ: 7022984402 • **Hubli** CHANNAMMA BAJAJ: 9620614106 • **Arvind Nagar branch** 8884771881 **Gadag** CHANNAMMA BAJAJ: 7090665850 • **Sirsi** CHANNAMMA BAJAJ: 8884645609 • **Haveri** CHANNAMMA BAJAJ: 8151884422 • **Belgaum** JAGASHREE BAJAJ: 988690116, JAGASHREE BAJAJ: 9448634872. • **Chikodi** JAGASHREE BAJAJ: 9449736406 • **Gokak** JAGASHREE BAJAJ: 7022425616 • **Bellary AADI BAJAJ: 9606050246• Raichur SHREE BALAJI AUTOMOBILES: 9964626515• Koppal I A BAJAJ: 8123712938• Hospet AADI BAJAJ:9731361414 • Hagaribommanahalli AADI BAJAJ: 9900363010• SIRUGUPPA AADI BAJAJ: 9110217558 • Bijapur BIJJARGI BAJAJ (BLDE Road)**: 6362877793 •(Bus Stand Road) 8884000970 • **Bagalkot** BIJJARGI BIKES: 9148448324 • **Sindagi** BIJJARGI BAJAJ 8861946802• **Bidar** SINDOL BAJAJ 9513226555 • **Chitradurga** BTV BAJAJ: Ph: 8310553554 • **Hiriyur** BTV BAJAJ: Ph: 8310553554 • **Challakere** BTV BAJAJ 8310553554 • **Davangere** JAIN BAJAJ: Ph: 9343636805 • **Harihara** JAIN BAJAJ: Ph: 9632300444 • **Gulbarga** VKG BAJAJ: 9632018700 • **Yadgir** VKG BAJAJ: 8722182492 • **Humnabad** VKG BAJAJ 8050889160 • **Shimoga** SUPREME BAJAJ: 8105000999 • **Sagar** SUPREME BAJAJ: 9008339799 • **Bhadravathi** SUPREME BAJAJ: 9008352799 • **Chikkamagalur** SUPREME BAJAJ: 9008379799 • **Tarikere** SUPREME BAJAJ: 9008569799 • **Hosanagar** SUPREME BAJAJ 9731767799 • **Anandpura** SUPREME BAJAJ 9663501499 • **Hassan** ARPITA BAJAJ: 9902439255, **Arsikere** ARPITA BAJAJ: 9964094535 • **Kolar** KHIVRAJ 9611768292 • **KGF** KHIVRAJ BAJAJ: 7349507477• **Tumkur** AKSHAYA BAJAJ: 7259040212• **Tiptur** AKSHAYA BAJAJ: 7259040226 • **Sira** AKSHAYA BAJAJ: 7259040328 • **Kunigal** AKSHAYA BAJAJ: 7338662706 • **Madhugiri** AKSHAYA BAJAJ: 7259040340 • **BH Road:** 7338662687 • **Mysore Saraswathipuram** POPULAR BAJAJ: 9148101113 • **Chamarajapuram** POPULAR BAJAJ: 7259786271 • **Vontikoppal** STAR BAJAJ: 9886959722 • **Mandya** POPULAR BAJAJ: 7760967900 • **Chamarajanagara** PATEL BAJAJ: 9480494888 • **Hunsur** STAR BAJAJ: 8884374777 • **Kushalnagar** POPULAR BAJAJ: 7259786276 • **Nanjangud** STAR BAJAJ: 9742100252 • **NR Mohalla** STAR BAJAJ: 8095777706 • **Balmatta** SUPREME BAJAJ: 9606973192 • **Kuloor** SUPREME BAJAJ: 9606237547 • **Surathkal** SUPREME BAJAJ: 9606973193 • **Thokottu** 9606702429 • **B C Road** 7618715273 • **Bidar** SINDOL BAJAJ 9513226555 • **UDUPI** SAANVI BAJAJ 8861135225.